SATYANVESHANA TRUST
102, 2nd 'A' Cross,
Near N.E.T. School, Gavipuram Extn,
BANGALORE South - 560 019. Karnataka

ಶ್ರೀಯೈನಮಃ

ಶ್ರೀನಿವಾಸಾಯನಮಃ

ಶ್ರೀಮತೇ ರಾಮಾನುಜಾಯನಮಃ

ಶ್ರೀಮತೇ ನಿಗಮಾಂತ ಮಹಾದೇಶಿಕಾಯನಮಃ

ಶ್ರೀಮನ್ನಿಗಮಾಂತ ಮಹಾದೇಶಿಕ ವಿರಚಿತ

ಶ್ರೀಮದ್ರಹಸ್ಯತ್ರಯಸಾರ

ತತ್ವತ್ರಯಾಧಿಕಾರಃ

ಪ್ರಕೃತ್ಯಾತ್ಮ ಭ್ರಾಂತಿರ್ಗಳತಿ ಚಿದ ಚಿಲ್ಲಕ್ಷಣ ಧಿಯಾ।
ತಥಾಜೀವೇಶೈಕ್ಯ ಪ್ರಭೃತಿ ಕಲಹ ಸ್ತದ್ವಿಭಜನಾತ್ ॥

ಶ್ರೀಮತೇ ಶ್ರೀನಿವಾಸ ಮಹಾದೇಶಿಕಾಯನಮಃ

ಹಿಂದಿನ ಅಧಿಕಾರದಲ್ಲಿ ಸರ್ವಶಾಸ್ತ್ರಗಳೂ ಅರ್ಥಪಞ್ಚಕಗಳನ್ನು ಜ್ಞೋಥಿಸುತ್ತವೆ ಎಂದೂ, ಅವುಗಳಿಗೆ ಪ್ರಧಾನ ಪ್ರತಿತಂತ್ರಾಧಿಕಾರದಲ್ಲಿ ಉಪಪಾದಿಸಲ್ಪಟ್ಟ ಶರೀರಾತ್ಮಭಾವವೂ ಸೇರಿದರೆ ಷಡರ್ಥಗಳಾಗುತ್ತವೆಂದೂ ಹೇಳಿ, ಅವುಗಳೆಲ್ಲಾ ವಿಶದವಾಗಿ ವಿವರಿಸಲ್ಪಟ್ಟವು. ಈ ಅಧಿಕಾರದಲ್ಲಿ "ತತ್ವತ್ರಯ" ವೆಂದರೆ ಮೂರುತತ್ವಗಳ ವಿಷಯವೂ, ಅವುಗಳಿರುವ ಪರಸ್ಪರ ಸಂಬಂಧಗಳೂ, ಅವುಗಳ ಸ್ವರೂಪಾದಿಗಳೂ, ದೇಹಾತ್ಮಭ್ರಾಂತಿ, ಸ್ವತಂತ್ರಾತ್ಮಭ್ರಾಂತಿ ಮೊದಲಾದ ಅಜ್ಞಾನಗಳ ನಿವೃತ್ತಿಯೂ ಹೇಳಲ್ಪಡುತ್ತವೆ.

ಈ ತತ್ವತ್ರಯಾಭಿಪ್ರಾಯವು ಹಿಂದೆಯೇ ಉಪಪಾದಿಸಲ್ಪಟ್ಟ ಶರೀರಾರಭ್ಯವದಲ್ಲೇ ತೋರಿಬಂದರೂ, ಪರಮಾತ್ಮನೇ ಇಲ್ಲವೆಂದೂ, ಪರಮಾತ್ಮನೇ ಸತ್ಯವು ಮಿಕ್ಕಿದ್ದೆಲ್ಲವೂ ಮಿಥ್ಯೆಯೆಂದೂ, ಪ್ರಕೃತಿಯೇ ಕರ್ತೃವು ಎಂಬ ಮನೆ ಪಕ್ಷದಲ್ಲಿರುವದರಿಂದ ಕರ್ತೃತ್ವವನ್ನಾರೋಪಿಸಿಕೊಳ್ಳ

ಅತೋ ಭೋಕ್ತಾ ಭೋಗ್ಯಂ ತದುಭಯ ನಿಯಂತೇತಿ ನಿಗಮೈ
ರ್ವಿಭಕ್ತಂ ನಸ್ತತ್ವತ್ರಯ ಮುಪದಿಶಂತ್ಯಕ್ಷತಧಿಯಃ

ನೆಂದೂ, ಇವೇ ಮೊದಲಾದ ಅಪಸಿದ್ಧಾಂತಾಭಿಪ್ರಾಯಗಳೆಲ್ಲಾ ಮುಖ್ಯವಾಗಿ ತೊಲಗಬೇಕಾದ ಪ್ರಯುಕ್ತ ತತ್ವತ್ರಯಜ್ಞಾನವು ಅತ್ಯಾವಶ್ಯಕವು. ಭ್ರಮೆಗಳಲ್ಲಿ ಮುಖ್ಯವಾದ ದೇಹಾತ್ಮಭ್ರಾಂತಿ, ಸ್ವತಂತ್ರಾತ್ಮಭ್ರಾಂತಿ, ಜೀವಪರಮಾತ್ಮೈಕ್ಯಭ್ರಾಂತಿಗಳು, ನಿವೃತ್ತಿಸುವದಕ್ಕಾಗಿ ಈ ಅಧಿಕಾರವು ಅತ್ಯಾವಶ್ಯಕವು. ಇದು ಸ್ವಲ್ಪ ಕಠಿಣಭಾಗವಾದುದರಿಂದ ಸಾವಧಾನದಿಂದ ಪುನಃಪುನಃ ಪಠಿಸಿ, ನಿಷ್ಕರ್ಷಾಭಿಪ್ರಾಯಗಳನ್ನು ಸಂಗ್ರಹಿಸತಕ್ಕದ್ದಾಗಿರುತ್ತದೆ.

ಅರ್ಥ ತಾತ್ಪರ್ಯಗಳು:—"ಪ್ರಕೃತ್ಯಾತ್ಮಭ್ರಾಂತಿಃ" - ಪ್ರಕೃತಿ ಎಂದರೆ ಪ್ರಕೃತಿಯಿಂದುಂಟಾದ ದೇಹವು, ಅದೇ ಆತ್ಮಾ ಎಂಬ ಭ್ರಾಂತಿಯು, "ಚಿದಚಿಲ್ಲಕ್ಷಣಧಿಯಾ" - ಚಿತ್ತು, ಅಚಿತ್ತು, ಇವುಗಳ ಲಕ್ಷಣವೆಂದರೆ ಸ್ವರೂಪವು, ಅವುಗಳ ಸ್ವರೂಪಜ್ಞಾನದಿಂದ, "ಗಳತಿ" - ನಾಶವಾಗುತ್ತದೆ. ಚಿತ್ತು ಎಂಥಾದ್ದು, ಅಚಿತ್ತು ಎಂಥಾದ್ದು, ಅವುಗಳ ಸ್ವರೂಪವೆಂಥಾದ್ದು ಎಂದು ಚನ್ನಾಗಿ ತಿಳಿದಿದ್ದಾದರೆ, ಅಚಿತ್ತಾದ ದೇಹವೇ ಚಿತ್ತಾದ ಆತ್ಮಾ ಎಂಬ ಭ್ರಾಂತಿಯು ನಾಶವಾಗುತ್ತದೆಂಬ ಭಾವವು ಚಿತ್ತಿನ ಲಕ್ಷಣಗಳು ಯಾವುವೆಂದರೆ:—ಜ್ಞಾನಾಶ್ರಯತ್ವವೂ, ಸ್ಮೃಸ್ಮೃಭಾಸಮಾನತ್ವವೂ, ಎಂದರೆ ತನ್ನನ್ನು ತಾನೇ ತಿಳಿದುಕೊಳ್ಳುವದು. ಅಚಿಲ್ಲಕ್ಷಣಗಳು, ಯಾವುವೆಂದರೆ:—ಜ್ಞಾನವಿಲ್ಲದಿರುವಿಕೆ (ಜಡತ್ವವು) ಇತರರಿಂದ ಮಾತ್ರವೇ ತಿಳಿಯಲು ಯೋಗ್ಯವಾಗಿರುವಿಕೆ, ಇಂದ್ರಿಯಗಳಿಗೆ ಗೋಚರವಾಗಿರುವಿಕೆ, ಇವೇ ಮೊದಲಾದವು. ಚಿತ್ತಿಗೆ ಜ್ಞಾನವಿರುವದರಿಂದಲೂ, ಅಚಿತ್ತು ಜ್ಞಾನಶೂನ್ಯವಾದುದರಿಂದಲೂ, ಅಚಿತ್ತಾದ ದೇಹವು ಚಿತ್ತಾದ ಆತ್ಮಾ ಹೇಗಾಗೀತು ಎಂಬ ಭಾವವು. "ಶರೀರಾತ್ಮಭ್ರಾಂತಿ" ಎಂದು ಹೇಳದೆ "ಪ್ರಕೃತ್ಯಾತ್ಮಭ್ರಾಂತಿ" ಎಂದು ಪ್ರಯೋಗಿಸಿರುವದರಭಿಪ್ರಾಯವೇನೆಂದರೆ:—ಕೆಲವರು ಇಂದ್ರಿಯವಾದ ಮನಸ್ಸೂ, ಜ್ಞಾನ, ಪ್ರಾಣವಾಯು, ಇವುಗಳೇ ಆತ್ಮಾ ಎಂದು ಹೇಳುವರು, ಆ ಅಭಿಪ್ರಾಯವೂ ಭ್ರಮೆಯೇ ಎಂದೇ ತಿಳಿಸಲು ಪ್ರಕೃತಿಶಬ್ದವನ್ನು ಪ್ರಯೋಗಿಸಿರುತ್ತಾರೆ. ಅಂತಹ ತಪ್ಪು ಅಭಿಪ್ರಾಯಗಳೆಲ್ಲಾ ತೊಲಗುವವು ಎಂಬ ಭಾವವು.

"ತಥಾ" - ಹಾಗೆಯೇ, ತತ್ವತ್ರಯಜ್ಞಾನದಿಂದ ಇನ್ನೊಂದು ಭ್ರಮವೂ ತೊಲಗುತ್ತದೆಂದು ಅಪ್ಪಣೆ ಕೊಡಿಸುತ್ತಾರೆ. "ಜೀವೇಶೈಕ್ಯಪ್ರಭೃತಿ ಕಲಹಃ" ಜೀವಾತ್ಮನೂ ಈಶನಾದ ಪರಮಾತ್ಮನು ಒಬ್ಬನೇ ಎಂಬಿವೇ ಮೊದಲಾದ ಕುತರ್ಕವಾದವೂ, "ತದ್ವಿಭಜನಾತ್"- ಅವರಿಬ್ಬರು ಬೇರೆ ಬೇರೆಯೆಂದು ಶ್ರುತಿಗಳು ವಿಭಾಗಿಸಿ ಎಂದರೆ ಪ್ರತ್ಯೇಕಿಸಿ ಹೇಳುವದರಿಂದಲೂ, "ಗಳತಿ

ವಾಗುತ್ತದೆ. ಶ್ರುತಿಗಳು ಜೀವ ಪರಮಾತ್ಮ ಭೇದವನ್ನು ಸ್ಫುಟವಾಗಿ ಬೋಧಿಸುವದರಿಂದ ಜೀವ ಪರಮಾತ್ಮರಿಗೆ ಸ್ವರೂಪೈಕ್ಯ ಹೇಳುವ ವಾದವೂ ದೂರೀಕೃತವಾಗುತ್ತದೆಂಬ ಭಾವವು. ಇಲ್ಲಿ "ಪ್ರಭೃತಿ" ಶಬ್ದವನ್ನು ಪಯೋಗಿಸಿರುವದರಿಂದ "ಸ್ವತಂತ್ರಾತ್ಮಭ್ರಾಂತಿಯೂ" ಚಾರ್ವಾಕನ ನಿರೀಶ್ವರವಾದವೂ ತೊಲಗುತ್ತವೆಂಬ ತಾತ್ಪರ್ಯವು. ಸ್ವತಂತ್ರಾತ್ಮಭ್ರಾಂತಿಯು ಈ ಶ್ಲೋಕದಲ್ಲಿ ಹೇಳಲ್ಪಡದಿದ್ದರೂ, ಈ ಶ್ಲೋಕದ ಉಪಪಾದನವಾದ ಮುಂದಿನ ವಾಕ್ಯಗಳಲ್ಲಿ ಇದೂ ಹೇಳಲ್ಪಟ್ಟಿರುತ್ತದೆ.

ಶ್ರುತಿಗಳು ಜೀವ ಪರಮಾತ್ಮ ಭೇದವನ್ನು ಎಲ್ಲಿ ಹೇಳಿವೆ ಎಂದರೆ:—

(1) "**ದ್ವಾಸುಪರ್ಣಾ ಸಯುಜಾ ಸಖಾಯಾ ಸಮಾನವೃಕ್ಷಂ ಪರಿಷಸ್ವಜಾತೇ**" (ಮುಂ. 2. 3. 1.) ಜೀವಾತ್ಮ ಪರಮಾತ್ಮರೆಂಬ ಎರಡು ಪಕ್ಷಿಗಳು ಒಂದೇ ಮರವಾದ ಈ ಜೀವಾತ್ಮನ ದೇಹದಲ್ಲಿ ಒಟ್ಟಿಗೆ ಇರುತ್ತಾರೆ.

(2) "**ಜ್ಞಾಜ್ಞೌ ದ್ವಾವಜಾ ವೀಶ ನೀಶೌ**" (ಶ್ವೇ. 1. 9.) ಆತ್ಮರುಗಳು ಜಾತ್ಯಾ ಇಬ್ಬರು, ಇಬ್ಬರೂ ನಿತ್ಯರು, ಅದರಲ್ಲಿ ಒಬ್ಬನು ಸರ್ವೇಶ್ವರನು, ಇನ್ನೊಬ್ಬನು ದಾಸನು.

(3) ಹಾಗೆಯೇ ಗೀತೆಯಲ್ಲೂ "**ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ,**" ಈ ಕ್ಷರಾಕ್ಷರ ಶಬ್ದಗಳಿಂದ ಬೋಧಿತರಾದ ಬದ್ಧಾತ್ಮ ಮುಕ್ತಾತ್ಮರುಗಳಿಗಿಂತಲೂ ಬೇರೆಯಾಗಿರುವ ಪರಮಪುರುಷನುಂಟು. ಆತನನ್ನು ಪರಮಾತ್ಮನೆಂದು ಹೇಳುವರು.

"ಅತಃ" - ಆ ಕಾರಣಕ್ಕಾಗಿ ಎಂದರೆ ಇಂತಹ ಸಮಸ್ತ ಭ್ರಮನಿವಾರಣೆಗಾಗಿ, "ಭೋಕ್ತಾ" - ಕರ್ಮಫಲಾನುಭವಕ್ಕಾಗಿ, ಅಚಿದ್ವಸ್ತುಗಳೆಲ್ಲಾ ಭೋಗ್ಯವಾಗಿವೆ ಎಂದು ಅನುಭವಿಸುವ, ಜೀವಾತ್ಮನೆಂಬುವದಾಗಿಯೂ (ಜಾತ್ಯೇಕವಚನವು,) "ಭೋಗ್ಯಂ" - ಜೀವಾತ್ಮನಿಗೆ ಭೋಗ್ಯವಾದ ಅಚಿತ್ತಾಗಿಯೂ, "ತದುಭಯನಿಯಂತಾ" - ಆ ಎರಡಾದ ಚಿದಚಿತ್ತುಗಳಿಗೆ ನಿಯಾಮಕನಾಗಿಯೂ, ಹೀಗೆ ಮೂರುತತ್ವಗಳನ್ನು ಎಂಬ ಭಾವವು, "ನಿಗಮೈಃವಿಭಕ್ತಂ" - ಶ್ರುತಿಗಳಿಂದ ವಿಭಾಗಿಸಲ್ಪಟ್ಟಿರುವ, "ತತ್ವತ್ರಯಂ" - ಮೂರು ತತ್ವಗಳನ್ನು, "ಅಕ್ಷತಧಿಯಃ" - ಇಂತಹ ಬುದ್ಧಿಭ್ರಾಮಕವನ್ನುಂಟುಮಾಡುವ ಅಪಸಿದ್ಧಾಂತಗಳವಾದದಿಂದ ಕ್ಷೋಭೆಯನ್ನು ಹೊಂದದ ಸುಜ್ಞಾನನಿಧಿಗಳಾದ ನಮ್ಮ ಪೂರ್ವಾಚಾರ್ಯರು, "ನಃ" - ನಮಗೆ, "ಉಪದಿಶಂತಿ" - ಪರಮೋದಾರಭಾವದಿಂದ ಉಪದೇಶಿಸುತ್ತಾರೆ.

ಹೀಗೆ ಮೂರುತತ್ವಗಳುಂಟೆಂದು ಉಪದೇಶಿಸುವ ಶ್ರುತಿಗಳು ಯಾವುವೆಂದರೆ:—

(1) **ಭೋಕ್ತಾ ಭೋಗ್ಯಂ ಪ್ರೇರಿತಾರಂಚ ಮತ್ವಾ** (ಶ್ವೇ. 1. 12.) ಭೋಕ್ತಾವಾದ ಜೀವಾತ್ಮನನ್ನೂ (ಜಾತ್ಯೇಕವಚನ,) "ಭೋಗ್ಯಂ" - ಜೀವಾತ್ಮನಿಗೆ ಭೋಗ್ಯವಸ್ತುಗಳಾದ ಸರ್ವ ಅಚಿತ್ತುಗಳನ್ನೂ, ನಿಯಂತಾವಾದ ಲಕ್ಷ್ಮೀಪತಿಯನ್ನೂ ಹೀಗೆ ಮೂರುತತ್ವವನ್ನೂ ತಿಳಿಯತಕ್ಕದ್ದೆಂದು ಶ್ರುತಿಯು ಹೇಳುತ್ತದೆ.

(2) **ಪ್ರಧಾನ ಕ್ಷೇತ್ರಜ್ಞ ಪತಿರ್ಗುಣೇಶಃ** (ಶ್ವೇ. 6. 16.) ಪ್ರಕೃತಿ ಜೀವಾತ್ಮರಿಬ್ಬರಿಗೂ ಸ್ವಾಮಿಯಾದವನು ಮತ್ತು ಮೂರುಗುಣಗಳಿಗೂ ನಿಯಂತಾ ಎಂದರೆ ಆ ಮೂರುಗುಣಗಳೂ ಸಮವಾಗಿರುವತನಕ ಸೃಷ್ಟಿಯಿಲ್ಲವು. ಯಾವಾಗ ವ್ಯತ್ಯಸ್ತವಾಗಿ ಒಂದೊಂದರ ಆಧಿಕ್ಯವು ಹೆಚ್ಚುತ್ತದೋ, ಆಗ ಸೃಷ್ಟಿಯನ್ನುಂಟುಮಾಡುವವನು.

ಹೀಗೆಯೇ ಇನ್ನೂ ಇತರ ಶ್ರುತಿಪ್ರಮಾಣಗಳು ಶ್ರೀ ಭಾಷ್ಯಾದಿ ಗ್ರಂಥಗಳಲ್ಲಿ ಉಪಪಾದಿಸಲ್ಪಟ್ಟಿವೆ. ಹಾಗೆಯೇ ಗೀತೆಯಲ್ಲೂ "ಕ್ಷರಾಕ್ಷರ" ಶಬ್ದಗಳಿಂದ ಬೋಧಿತರಾದ ಬದ್ಧರೂ, ಮತ್ತು ಮುಕ್ತನಿತ್ಯರೂ, ಇವರುಗಳಿಗಿಂತಲೂ ವಿಲಕ್ಷಣನಾಗಿ ಬೇರೆಯಾಗಿರುವವನು "ಉತ್ತಮಃ ಪುರುಷಸ್ತ್ವನ್ಯಃ" ಎಂದು ಪರಮಾತ್ಮನನ್ನುದ್ದೇಶಿಸಿ ಭೇದವು ಸ್ಫುಟವಾಗಿ ಉಪದೇಶಿಸಲ್ಪಟ್ಟಿರುತ್ತದೆ.

ಹೀಗೆ ಮೂರುತತ್ವಗಳುಂಟೆಂದು ಶ್ರುತಿಗಳು ಉಪಪಾದಿಸುತ್ತವೆ. ನಮ್ಮ ಪೂರ್ವಾಚಾರ್ಯರುಗಳು ಇಂತಹ ಶಾಸ್ತ್ರಗಳನ್ನು ಚನ್ನಾಗಿ ಪರಿಶೀಲಿಸಿ, ಅವುಗಳ ಯಥಾರ್ಥಬೋಧವನ್ನು ಗ್ರಹಿಸಿದವರಾದ ಪ್ರಯುಕ್ತ ಅವರೂ ಹಾಗೆಯೇ ಮೂರು ತತ್ವಗಳುಂಟೆಂಬಭಿಪ್ರಾಯವನ್ನು ಉಪದೇಶಿಸಿರುತ್ತಾರೆ. ಹೀಗೆ ಯಥಾರ್ಥಾಭಿಪ್ರಾಯಗಳನ್ನು ಗ್ರಹಿಸಿ, ನಮಗೆ ಉಪದೇಶಿಸಿದುದರಿಂದ, ಅವರುಗಳು "ಆಕ್ಷತಧಿಯಃ," ಬುದ್ಧಿ ಭ್ರಾಮಕಗಳೊಂದೂ ಇಲ್ಲದವರು. ಕ್ಷತಧಿಯರಾದರೋ ಬುದ್ಧಿಭ್ರಮ ಉಂಟಾಗಿರುವವರು.

ಯೋನ್ಯಥಾಸಂತಮಾತ್ಮಾನ ಮನ್ಯಥಾ ಪ್ರತಿಪದ್ಯತೇ।
ಕಿಂತೇನನಕೃತಂ ಪಾಪಂ ಚೋರೇಣಾತ್ಮಾಪಹಾರಿಣಾ ॥
ವಿದ್ಯಾಚೋರೋ ಗುರುದ್ರೋಹೀ ವೇದೇಶ್ವರ ವಿದೂಷಕಃ।
ತ ಏತೇ ಬಹು ಪಾಪಾತ್ಮಾನಸ್ತದ್ಯೋ ದಂಡ್ಯಾ ಇತಿಶ್ರುತಿಃ ॥

(ಭಾರ. ಉದ್ಯೋಗ 42.35) ಯಥಾರ್ಥವಾಗಿರುವ ಆತ್ಮಸ್ವರೂಪಕ್ಕೆ ಬದಲಾಗಿ ಬೇರೆಯಾದ ಆತ್ಮಸ್ವರೂಪವನ್ನು ಹೇಳುವವನು ಚೋರನು, ಆತ್ಮಸ್ವರೂಪವನ್ನು ಮರಿಸುವದರಿಂದ ಆತ್ಮಾಪಹಾರಿಯು, ಅವನು ಮಾಡದ ಪಾಪವೇ ಇಲ್ಲವು, ವಿದ್ಯಾಚೋರನು, ಗುರುದ್ರೋಹಿಯು, ವೇದ ವಿರುದ್ಧಾರ್ಥ ಹೇಳುವದರಿಂದ ವೇದವನ್ನೂ ಈಶ್ವರನನ್ನೂ ದೂಷಿಸುವವನು; ಬಹು ಪಾಪಗಳನ್ನು

ಮಾಡಿದವನು ; ಶಿಕ್ಷಿಸಲ್ಪಡಲರ್ಹನು ಎಂದು ಹೇಳಿರುತ್ತದೆ. ಇಂಥಾವರು "ಕ್ಷತಧಿಯರು"

ಆದುದರಿಂದ ಇಂತಹ ಭ್ರಮೆಗಳೆಲ್ಲಾ ಮುಖ್ಯವಾಗಿ ತೊಲಗಬೇಕಾದುದು ಅತ್ಯಾವಶ್ಯಕವಾದುದರಿಂದ, ಪ್ರಧಾನಪ್ರತಿತನ್ತ್ರಾಧಿಕಾರ ಅರ್ಥಪಂಚಕಾಧಿಕಾರ ಗಳಲ್ಲಿ ಈ ಮೂರುತತ್ವಗಳ ವಿಷಯವು ಸ್ವಲ್ಪಮಟ್ಟಿಗೆ ಉಪದೇಶಿಸಲ್ಪಟ್ಟಿದ್ದರೂ, ಅವುಗಳ ವಿಷಯವು ಚನ್ನಾಗಿ ಮನಸ್ಸಿಗೆ ಅವಗಾಹನೆಗೆ ಬರುವದಕ್ಕಾಗಿ ಆ ತತ್ವ ತ್ರಯಗಳ ಸ್ವರೂಪ ಸ್ಥಿತಿ ಪ್ರವೃತ್ತಿಗಳನ್ನೆಲ್ಲಾ ಈ ಅಧಿಕಾರದಲ್ಲಿ ಸ್ಫುಟವಾಗಿ ಬೋಧಿಸುತ್ತಾರೆ. "**ಅನಾತ್ಮನ್ಯಾತ್ಮ ಬುದ್ಧಿರ್ಯಾ ಅಸ್ಪೇಸ್ವಮಿತಿಯಾ ಮತಿಃ**" (ವಿ. ಪು. 6.) ಆತ್ಮವಲ್ಲದ ದೇಹದಲ್ಲಿ ಆತ್ಮವೆಂಬ ಶರೀರಾತ್ಮಭ್ರಾಂ ತಿಯೂ, ತನ್ನದಲ್ಲದೇ ಇರುವವದರಲ್ಲಿ ತನ್ನದೆಂಬ ಸ್ವತಂತ್ರಾತ್ಮಭ್ರಾಂತಿಯೂ, ಎಂದು ಈ ಶ್ಲೋಕದಲ್ಲಿ ಎರಡು ಭ್ರಾಂತಿಗಳು ಹೇಳಲ್ಪಟ್ಟವು.

ನಿರಸನ ಮಾಡಲು ಯೋಗ್ಯವಾದ ಭ್ರಮೆಗಳಲ್ಲಿ "ಮೂರು" ಮುಖ್ಯ ವಾದವು:—

1. "**ದೇಹಾತ್ಮಭ್ರಾಂತಿಯು**":—ದೇಹವೇ ಆತ್ಮವೆಂಬ ಭ್ರಾಂತಿಯು. ಜಡವಾದ ಅಚಿತ್ತಾದ ದೇಹಕ್ಕಿಂತಲೂ, ಚಿದ್ರೂಪನಾದ ಆತ್ಮನು ಜ್ಞಾನತ್ವ ಮೊದಲಾದವುಗಳಿಂದ ಪರಿಶುದ್ಧನು ಎಂಬ ಜ್ಞಾನದಿಂದ ನಿವರ್ತಿಸುತ್ತದೆ.

2. "**ಸ್ವತಂತ್ರಾತ್ಮಭ್ರಾಂತಿಯು**":—ತಾನು ಸ್ವತಂತ್ರನೆಂಬ ಭ್ರಮೆ ಯು ಎರಡು ಕಾರಣಗಳಿಂದುಂಟಾಗಬಹುದು. ಜೀವ ಪರಮಾತ್ಮರ ಐಕ್ಯಭ್ರಮೆ ಯಿಂದಲಾಗಲಿ, ಚಾರ್ವಾಕನ ನಿರೀಶ್ವರಜ್ಞಾನದಿಂದಾಗಲಿ ಉಂಟಾಗಬಹುದು. ತಾನು ಸರ್ವೇಶ್ವರನಿಗೆ ದಾಸಭೂತನು, ಆತನ ನಿಯಾಮ್ಯವರ್ಗಕ್ಕೆ ಸೇರಿದವ ನಾಗಿ ಪರತಂತ್ರನು, ತನಗೆ ಸ್ವಾತಂತ್ರ್ಯಕರ್ತೃತ್ವವಿಲ್ಲವು ಇತ್ಯಾದಿ ಜ್ಞಾನಗಳಿಂ ದ ನಿವರ್ತಿಸುತ್ತದೆ.

3. "**ಜೀವಪರಮಾತ್ಮೈಕ್ಯಭ್ರಾಂತಿಯು**":-ಜೀವಾತ್ಮನೂ ಪರಮಾ ತ್ಮನೂ ಒಬ್ಬನೇ ಎಂಬ ಭ್ರಾಂತಿಯು ; ಜೀವನು ಪರಮಾತ್ಮನಾದರೂ, ಹೇಯ ಗುಣ ವಿಶಿಷ್ಟನಾಗಿರುವದು ಅವಿದ್ಯಾಮೂಲಕವಾಗಿ ಎಂದು ಹೇಳುವರು. ಪರ ಮಾತ್ಮನೊಬ್ಬನೇ ಸತ್ಯವಾದುದರಿಂದ ಮಿಕ್ಕಾದ ಸತ್ಯವಾದ ಜಗತ್ತು ಮುಂತಾ ದ್ದೆಲ್ಲಾ ಮಿಥ್ಯೆ ಎಂದು ಹೇಳುವರು. ಒಂದು ಅಸತ್ಯವಾಗಿರುವ ಭ್ರಮೆಯನ್ನು ಸಾಧಿಸಲು ಇತರ ಭ್ರಮೆಗಳ ಸಹಾಯವು ಅತ್ಯಾವಶ್ಯಕವು. ಇಂತಹ ಭ್ರಮೆ ಯನ್ನು ಹೊಂದಿರುವರೇ ಲೋಕದಲ್ಲಿ ಅನೇಕರು. ತಾನು ಪರಮಾತ್ಮನಿಗೆ ದಾಸನು ಎಂದು ಹೇಳಿಕೊಳ್ಳುವರು ತುಂಬಾ ಕಮ್ಮಿಯು. ಇಂತಹ ಜ್ಞಾನ ದಿಂದ ಈ ಭ್ರಮೆಗಳು ತೊಲಗುತ್ತವೆ.

ತತ್ವತ್ರಯಜ್ಞಾನ ಪ್ರಯೋಜನಂ.

1. ಸಂಬಂಧಮುಮ್ ಅರ್ಥಪಞ್ಚಕಮುಜ್ಞಾಡ ವಾರರ್ಥಮರಿಯವೇಣ್ಡಿಯಿರುಕ್ಕ, ವಿವ ಱ್ಱಿ ಲೇಕದೇಶಮಾನ ತತ್ವತ್ರಯತ್ತೈ ಮುಮುಕ್ಷುವುಕ್ಕು ವಿಶೇಷಿತ್ತರಿಯವೇಣುಮೆನ್ರು ಆಚಾರ್ಯರ್ಗಳುಪದೇಶಿತ್ತು ಪೋರುಕ್ಕೈಕ್ಕಡಿ ಎನ್ನೆನ್ನಿಲ್? ಅದುಕ್ಕಡಿ ಪ್ರಕೃತ್ಯಾತ್ಮಭ್ರಮುಮುಮ್, ಸ್ವತನ್ತ್ರಾತ್ಮಭ್ರ

ಆದುದರಿಂದ ತತ್ವತ್ರಯಜ್ಞಾನವು ಅತ್ಯಾವಶ್ಯಕವು. ಶ್ರೀಮದಾಚಾರ್ಯವರ್ಯರು ನಮ್ಮಗಳ ಭ್ರಮರೂಪ ಅಜ್ಞಾನವೆಲ್ಲಾ ತೊಲಗುವದಕ್ಕಾಗಿ ಬಹು ಉದಾರಭಾವದಿಂದ ಈ ಅಧಿಕಾರವನ್ನು ಅನುಗ್ರಹಿಸಿರುತ್ತಾರೆ. ಶಾಸ್ತ್ರಭಾಗವೆಲ್ಲಾ ಸ್ವಲ್ಪ ಅವಗಾಹನೆಗೆ ಕಷ್ಟವು, ಆದರೂ ಮಹಾನುಭಾವರು ಶ್ರಮಪಟ್ಟು ಸುಲಭವಾಗಿ ವೇದ್ಯವಾಗಲೆಂದು ಪ್ರಶ್ನೋತ್ತರರೂಪದಲ್ಲಿ ಉಪದೇಶಿಸಿರುತ್ತಾರೆ. ಅದನ್ನು ದಾಸನು ಭಾಷಾಂತರಮಾಡಿರುವದರ ಆಶಯವು, ಆ ಮಹಾನುಭಾವರ ಉದ್ದೇಶ್ಯವು ಸಫಲವಾಗಲೆಂದಾಗಿರುತ್ತದೆ. ಆದುದರಿಂದ ಪ್ರತಿಯೊಬ್ಬಜ್ಞಾನಿಯು ಇದನ್ನು ಪುನಃಪುನಃ ಪಠಿಸಿ, ಆಚಾರ್ಯೋಪದೇಶವನ್ನು ಗ್ರಹಿಸಲೆಂದು ಪ್ರಾರ್ಥಿಸಲ್ಪಟ್ಟಿದೆ.

ಮೇಲಿನ ಶ್ಲೋಕದಲ್ಲಡಗಿರುವ ಅಭಿಪ್ರಾಯವನ್ನೇ ಬಹು ವಿಶದವಾಗಿ ಉಪಪಾದಿಸುತ್ತಾರೆ.

ತತ್ವತ್ರಯ ಜ್ಞಾನದಿಂದುಂಟಾಗುವ ಪ್ರಯೋಜನವು.

1. "ಸಂಬಂಧಮುಮ್":— ಪ್ರಧಾನ ಪ್ರತಿತನ್ತ್ರಾಧಿಕಾರದಲ್ಲಿ ಹೇಳಲ್ಪಟ್ಟ ತನಗೂ ಸರ್ವೇಶ್ವರನಿಗೂ ಇರುವ ಶರೀರ ಶರೀರಿ ಭಾವದಿಂದ ತೋರಿರುವ ಶೇಷ ಶೇಷಿ ಸಂಬಂಧವೂ, "ಅರ್ಥಪಂಚಕಮುಜ್ಞಾಡ"- ಅರ್ಥಪಂಚಕಾಧಿಕಾರದಲ್ಲಿ ಹೇಳಲ್ಪಟ್ಟ ಐದು ಅರ್ಥಗಳೂ ಸೇರಿ, "ಆರರ್ಥಮರಿಯವೇಣ್ಡಿಯಿರುಕ್ಕ"- ಆರು ವಿಷಯಗಳು ಮೋಕ್ಷಾರ್ಥಿಯು ಅವಶ್ಯಕವಾಗಿ ತಿಳಿಯಬೇಕಾಗಿರುವಾಗ, "ಇವತ್ತಿಲೆ ಏಕದೇಶಮಾನ"- ಈ ಆರು ವಿಷಯಗಳಲ್ಲೇ ಅಲ್ಪಭಾಗವಾದ, "ತತ್ವತ್ರಯತ್ತೈ ಮುಮುಕ್ಷುವುಕ್ಕು ವಿಶೇಷಿತ್ತರಿಯವೇಣುಮೆನ್ರು"- ತತ್ವತ್ರಯವನ್ನು ಮೋಕ್ಷಾರ್ಥಿಯು ಮುಖ್ಯವಾಗಿ ತಿಳಿಯತಕ್ಕದ್ದೆಂಬದಾಗಿ, "ಆಚಾರ್ಯರ್ಗಳುಪದೇಶಿತ್ತುಪೋರುಕ್ಕೈಕ್ಕು" - ನಮ್ಮ ಪೂರ್ವಾಚಾರ್ಯರುಗಳಾದ ನಾಥ ಯಾಮುನ ರಾಮಾನುಜ ಮುನಿಗಳೇ ಮೊದಲಾದವರು ತಮ್ಮ ಗ್ರಂಥಗಳಲ್ಲೂ, ತಮ್ಮ ಶಿಷ್ಯರಿಗೂ ಸಹ, ಉಪದೇಶಿಸಲು ಪ್ರವರ್ತಿಸುವುದಕ್ಕೆ ಅಡಿ ಎನ್ನೆನ್ನಿಲ್"- ಮೂಲಕಾರಣವೇನೆಂದರೆ:—

ಮವುು, ಮಿದಕ್ಕು ನಿದಾನವಾನವನೀಶ್ವರವಾದ ರುಚಿಯು ಮ್, ಆಗಿರ ಮಹಾವಿರೋಧಿಗಳೈ ಮುರ್ಪಡಕ್ಕಳಿಕ್ಕಪ್ರಾಪ್ತ ವಾಕೈ. ಇತ್ತೈನಿನೈತ್ತು, ಭೋಕ್ತೃಭೋಗ್ಯನಿಯನ್ತೃರೂ ತ್ತಾಲೇ, ಶಾಸ್ತ್ರಜ್ಞಳಿಲೇ ತತ್ವವಿವೇಕಂ ಪಣ್ಣುಗಿರದು.

(ಅರ್ಥಪಂಚಕದಲ್ಲಿ ಏಕದೇಶಮುಖೇನ ಎಲ್ಲಿ ಹೇಳಿರುತ್ತದೆ ಎಂದರೆ:— ಪ್ರಾಪ್ಯನೆಂಬುವದರಿಂದ ನಿಯನ್ತಾವಾದ ಈಶ್ವರತತ್ವವೂ, ಪ್ರಾಪ್ತಾವೆಂಬುವದರಿಂದ ಚಿದ್ರೂಪನಾದ ಜೀವತತ್ವವೂ, ಪ್ರಾಪ್ತಿವಿರೋಧಿಯಲ್ಲಿ ಪ್ರಕೃತಿಸಂಬಂಧರೂಪವಾದ ಅಚಿತ್ತತ್ವವೂ ಬೋಧಿತವಾಗುವದರಿಂದ, ಈ ತತ್ವತ್ರಯವೂ ಹೇಳಲ್ಪಟ್ಟವು; ಆದುದರಿಂದ "ಇವತ್ತಿಲ್ ಏಕದೇಶ" ವೆಂದು ಪ್ರಯೋಗವು. ಮುಂದಿನವಾಕ್ಯದಿಂದ ಈ ಪ್ರಶ್ನೆಗೆ ಉತ್ತರವನ್ನನುಗ್ರಹಿಸುತ್ತಾರೆ.

"ಅದಕ್ಕಡಿ" ಅಂತಹ ಆಚಾರ್ಯೋಪದೇಶಕ್ಕೆ ಮೂಲಕಾರಣವು, "ಪ್ರಕೃತ್ಯಾತ್ಮಭ್ರಮಮುಮ್"-ಪ್ರಕೃತಿರೂಪವಾದ ದೇಹವೇ ಆತ್ಮಾ ಎಂಬ ಭ್ರಮೆಯೂ, **ಸ್ವತನ್ತ್ರಾತ್ಮಭ್ರಮವುಂ:**—ಆತ್ಮನಾದ ತಾನು ಸ್ವತನ್ತ್ರನು ಎಂಬ ಭ್ರಾಂತಿಯೂ, "ಇದಕ್ಕು"- ಇಂತಹ ದೇಹಾತ್ಮ, ಸ್ವತಂತ್ರಾತ್ಮಭ್ರಮೆಗೆ, "ನಿದಾನಮಾನ"-ಮೂಲಕಾರಣವಾದ, "ಅನೀಶ್ವರವಾದರುಚಿಯುಂ"- ತಾನಲ್ಲದೆ ಬೇರೆ ಈಶ್ವರನೇ ಇಲ್ಲವೆಂಬ ಶಾಂಕರಾದಿವಾದಗಳಲ್ಲಿ ಅಭಿರುಚಿಯೂ, ಅಥವಾ ದೇಹವಲ್ಲದೆ ಬೇರೆ ಈಶ್ವರನೇ ಇಲ್ಲವೆಂಬ ಚಾರ್ವಾಕಾದಿ ವಾದಗಳಲ್ಲಿ ಅಭಿರುಚಿಯೂ, "ಆಗಿರ ಮಹಾವಿರೋಧಿಗಳೈ"- ಆಗಿರುವ ಮಹಾವಿರೋಧಿಗಳನ್ನು, "ಮುರ್ಪಡ"- ಮೊದಲು, 'ಕಳಿಕ್ಕಪ್ರಾಪ್ತಮಾಕೈ"- ಕಳೆದುಕೊಳ್ಳುವದು ಎಂದರೆ ನಿರಸನಮಾಡುವದು ಉಚಿತವಾದುದು. ಆದುದರಿಂದ ಆ ಆರು ಅರ್ಥಗಳಲ್ಲೇ ಈ ತತ್ವತ್ರಯವು ಅಡಗಿದ್ದರೂ, ಅವುಗಳಲ್ಲಿ ಒಂದು ಭಾಗವಾದ ಈ ತತ್ವತ್ರಯವನ್ನುದ್ದೇಶಿಸಿ ಪೃಥಗುಪದೇಶವು, ಈ ಭ್ರಮೆಗಳನ್ನು ಕಳೆದುಕೊಳ್ಳುವದಕ್ಕಾಗೆಂದು ಭಾವಿಸತಕ್ಕದ್ದು. ಇಂತಹ ಭ್ರಮೆಗಳೆಲ್ಲಾ ಅಜ್ಞಾನಮೂಲಕ ಉಂಟಾಗತಕ್ಕವು. ಅಂತಹ ಅಜ್ಞಾನ ನಿವೃತ್ತಿಯಾಗದೆ ಮೋಕ್ಷಾರ್ಥಿಯು ಕೃತಕೃತ್ಯನಾಗನು, ಆದುದರಿಂದ ತತ್ವತ್ರಯ ವಿವೇಕಜ್ಞಾನವು ಅತ್ಯಾವಶ್ಯಕವು ಎಂಬಭಿಪ್ರಾಯವು. "ಇತ್ತೈನಿನೈತ್ತು"- ಈ ದೇಹಾತ್ಮಭ್ರಾಂತಿ, ಸ್ವತಂತ್ರಾತ್ಮಭ್ರಾಂತಿ, ಜೀವೇಶೈಕ್ಯಭ್ರಾನ್ತಿ ಮೊದಲಾದವುಗಳ ನಿವೃತ್ತಿಯು ತುಂಬಾ ಮುಖ್ಯವೆಂದು ಭಾವಿಸಿ, "ಭೋಕ್ತೃ"- ಅಚಿತ್ತನ್ನೆಲ್ಲಾ ಕರ್ಮಾನುಗುಣವಾಗಿ ಅನುಭವಿಸುವನಾದ ಚಿದ್ರೂಪನಾದ ಜೀವಾತ್ಮನೂ, "ಭೋಗ್ಯ"- ಅಂತಹ ಭೋಕ್ತೃಗಳಿಂದ ಅನುಭವಿಸಲು ಯೋಗ್ಯವಾದ ಅಚಿತ್ತು, "ನಿಯನ್ತಾ"- ಆ ಎರಡಕ್ಕೂ ನಿಯಾ

ತ್ರಿವಿಧವಾನ ಅಚೇತನ ಸ್ವರೂಪ ಸ್ವಭಾವಾದಿ ಕಥನಂ

ಇವತ್ತಿಲ್ ವೈತ್ತುಕೊಣ್ಡು (1) "ಅಚೇತನಾ ಪರಾರ್ಥಾಚ ನಿತ್ಯಾ ಸತತವಿಕ್ರಯಾ। ತ್ರಿಗುಣಾ ಕರ್ಮಿಣಾಂ ಕ್ಷೇತ್ರಂ ಪ್ರಕೃತೇ ರೂಪ ಮುಚ್ಯತೇ ॥"

ಮಕನಾದ ಸರ್ವೇಶ್ವರನೂ ಎಂಬ, "ರೂಪತ್ತಾಲೆ"- ಎಂಬ ತತ್ವತ್ರಯರೂಪ ದಲ್ಲಿ, ಶಾಸ್ತ್ರಗಳಲ್ಲಿ "ತತ್ವವಿವೇಕವು" ಎಂದರೆ ತತ್ವಗಳನ್ನು ವಿವೇಚನೆಮಾಡಿ ಹೇಳಲ್ಪಟ್ಟಿರುತ್ತದೆ.

ಚಿದಚಿದೀಶ್ವರರೆಂಬ ಈ ಮೂರುತತ್ವಗಳೂ ಅವುಗಳ ಸ್ವರೂಪಮೊದಲಾದ ವುಗಳು ಶಾಸ್ತ್ರಗಳಲ್ಲಿ ಎಲ್ಲಿ ಹೇಳಲ್ಪಟ್ಟಿವೆ ಎಂಬುವದನ್ನು ಸಪ್ರಮಾಣವಾಗಿ ಉಪಪಾದಿಸುತ್ತಾರೆ. ಮೊದಲು ಅಚೇತನ ಸ್ವರೂಪವನ್ನೂ, ಅದು ಮೂರು ವಿಧವೆಂದೂ ತಿಳಿಸುತ್ತಾರೆ.

ಮೂರುವಿಧವಾವ ಅಚೇತನ ದ್ರವ್ಯಗಳ ಸ್ವರೂಪಾದಿಗಳು.

"ಇವತ್ತಿಲ್ ವೈತ್ತುಕೊಣ್ಡು" - ಇವುಗಳ ಮಧ್ಯೆ ಎಂದರೆ ತತ್ವತ್ರಯಗ ಳಲ್ಲಿ, (1) ಪರಮಸಂಹಿತಾವಾಕ್ಯವು 2. "ಅಚೇತನಾ" - ಈ ಅಚಿತ್ತು ಜ್ಞಾನ ಶೂನ್ಯವಾದುದು, "ಪರಾರ್ಥಾಚ" - ಪರ ಪ್ರಯೋಜನವೇ ತನ್ನ ಪ್ರಯೋಜನ ವಾಗಿ ಉಳ್ಳದು, ಎಂದರೆ ಚೇತನವರ್ಗದ ಭೋಗಕ್ಕಾಗಿಯೇ ಎಂದು ಸರ್ವೇಶ್ವರ ನಿಂದ ಸಂಕಲ್ಪಿಸಲ್ಪಟ್ಟುದು, ಇದರಿಂದ ಸ್ವಸ್ಮೈಭಾಸಮಾನತ್ವವೆಂದರೆ ತನ ಗೇನೇ ಪ್ರಕಾಶಿಸುವ ಚೇತನಕ್ಕಿಂತಲೂ ಭಿನ್ನವಾದುದೆಂದು ಹೇಳಲ್ಪಟ್ಟಿತು; ಹಾಗೆಯೇ "ಅಚೇತನಾ" ಎಂದು ಹೇಳಿರುವದರಿಂದ ಜ್ಞಾನಸ್ವರೂಪವಾಗಿಯೂ ಜ್ಞಾನಾಶ್ರಯವಾಗಿಯೂ ಇರುವ ಚಿತ್ತಿಗಿಂತಲೂ ಭಿನ್ನವಾದುದೆಂದೂ ಹೇಳಲ್ಪ ಟ್ಟಿತು. "ಸತತವಿಕ್ರಿಯಾ"- ಯಾವಾಗಲೂ ಸ್ವರೂಪವಿಕಾರವನ್ನು ಹೊಂದತ ಕ್ಕದ್ದು, ಆದರೆ ಪ್ರಳಯದೆಶೆಯಲ್ಲೂ ವಿಕಾರ ಉಂಟೋ ಎಂದರೆ, ಆಗಲೂ ಉಂ ಟೆಂದು ಹೇಳಲು ಸತತವಿಕ್ರಿಯಾ ಎಂಬ ಪ್ರಯೋಗವು, ಅವರೆ, ಸೃಷ್ಟ್ಯನಂತರ ವ್ಯಕ್ತವಾಗುವಷ್ಟು ಪ್ರಳಯದಲ್ಲಿ ವಿಶದವಾಗಿ ತೋರುವದಿಲ್ಲವೆಂಬದಾಗಿ ತಿಳಿಯತ ಕ್ಕದ್ದು. ವಿಕಾರವು ಎರಡುವಿಧವು:—ಸಜಾತೀಯ ವಿಜಾತೀಯವೆಂಬದಾಗಿ; ಬಾಲ್ಯ, ಕೌಮಾರ, ಯೌವನ, ಜರಾ, ಮರಣಗಳು ಸಜಾತೀಯ ವಿಕಾರಗಳು; ಹಾಲು ಮೊಸರಾಗುವದು, ಕಂಬಳೀಹುಳ ಜಿಟ್ಟಿಯಾಗುವದು ವಿಜಾತೀಯ ವಿಕಾರಗಳು. ಚೇತನಿಗಾವರೋ ಇಂತಹ ಸ್ವರೂಪ ವಿಕಾರರೂಪ ಪರಿಣಾಮ ಗಳಿಲ್ಲವು, "ನಿತ್ಯಾ" - ನಿತ್ಯವಾದುದು, ಇದರಿಂದ ಬೌದ್ಧ ಶಾಂಕರಾದಿ ಸಿದ್ಧಾಂತ ರೀತ್ಯಾ ಜಗತ್ತು ಮಿಥ್ಯಾ ಎಂಬುವದು ಸರಿಯಲ್ಲವೆಂದು ವ್ಯಕ್ತಪಡುತ್ತದೆ;

ತ್ರಿಗುಣಾ - ಸತ್ವರಜಸ್ತಮೋಗುಣಗಳೆಂಬ ಮೂರುಗುಣಗಳುಳ್ಳದ್ದು, ಇದರಿಂದ ಇದು ಶುದ್ಧಸತ್ವವೆಂಬುವ ನಿತ್ಯವಿಭೂತಿಯ ಅಚೇತನದ್ರವ್ಯಕ್ಕಿಂತಲೂ, ಸತ್ವಶೂನ್ಯವಾದ ಕಾಲಕ್ಕಿಂತಲೂ, ಭಿನ್ನವಾದುದೆಂದು ಹೇಳಲ್ಪಟ್ಟಿತು; **ಕರ್ಮಿಣಾಂ** - ಕರ್ಮಬದ್ಧರಾದ ಜೀವಾತ್ಮರಿಗೆ, **ಕ್ಷೇತ್ರಂ** - ಶರೀರವಾಗಿರುವದು; ಇದರಿಂದ ಮುಕ್ತಾತ್ಮರಿಗೆ ಪ್ರಕೃತಿ ಸಂಬಂಧವಿಲ್ಲವೆಂಬ ಭಾವವು ಹೇಳಲ್ಪಟ್ಟಿತು. ವಿರಜಾನದಿಯನ್ನು ದಾಟುವತನಕ ಈ ಜೀವಾತ್ಮನಿಗೆ ಈ ಹೇಯವಾದ ಪ್ರಕೃತಿಯ ಸಂಬಂಧದೇಹವುಂಟು, ತದನಂತರ ಈತನಿಗೆ ಅಪ್ರಾಕೃತಶರೀರವುಂಟಾಗುತ್ತದೆ; ಈ ಮೇಲೆ ಹೇಳಿದ ಧರ್ಮಗಳೆಲ್ಲಾ, **ಪ್ರಕೃತೇಃರೂಪಂ** - ಪ್ರಕೃತಿಯ ಸ್ವರೂಪವೆಂಬದಾಗಿ, **ಉಚ್ಯತೇ** - ಹೇಳಲ್ಪಡುತ್ತದೆ.

ಇಲ್ಲಿ ಅಚೇತನಾವೆಂಬುವದರಿಂದ ಚಿತ್ತಿಗೂ ಅಚಿತ್ತಿಗೂ ಇರುವ ವ್ಯತ್ಯಾಸವೂ, **ತ್ರಿಗುಣಾ** ಎಂಬುವದರಿಂದ ಇದಕ್ಕೂ ತ್ರಿಗುಣಾತ್ಮಕವಲ್ಲದ ಕಾಲಕ್ಕೂ ಇರುವ ವ್ಯತ್ಯಾಸವೂ, **ಪರಾರ್ಥಾ** ಎನ್ನುವದರಿಂದ ಇದರ ಪ್ರಯೋಜನವೂ **ಸತತವಿಕ್ರಿಯಾ** ಎಂಬುವದರಿಂದ ಇದರ ವ್ಯಾಪಾರವೂ, "ಕರ್ಮಿಣಾಂಕ್ಷೇತ್ರಂ" ಎಂಬುವದರಿಂದ ಅದು ಹೇಗೆ ಚೇತನನಿಗೆ ಬಂಧಕವೆಂದೂ ಹೇಳಲ್ಪಟ್ಟವು. ಅಚೇತನವು (1) ತ್ರಿಗುಣ ಅಥವಾ ಪ್ರಕೃತಿ (2) ಕಾಲ (3) ಶುದ್ಧಸತ್ವವೆಂದು ಮೂರು ವಿಧವು. ಈ ಮೇಲಿನ ಪ್ರಮಾಣದಿಂದ ಪ್ರಕೃತಿಯ ಸ್ವರೂಪವನ್ನು ಬೋಧಿಸಿದವರಾಗಿ, ಮುಂಬೆ ಕಾಲಸ್ವರೂಪವನ್ನು ಸಪ್ರಮಾಣವಾಗಿ ತಿಳಿಸುತ್ತಾರೆ. ಪ್ರಕೃತಿಯು ೨೪ ವಿಧಗಳಾಗಿರುವಾಗ, ಅದರ ಪ್ರಭೇದಗಳಾದ ಆ ತತ್ವಗಳನ್ನೆಲ್ಲಾ ಇಲ್ಲಿ ಏಕೆ ನಿರೂಪಿಸಲಿಲ್ಲವೆಂದರೆ, ಅವುಗಳು ಮುಂದೆ ವಿವರಿಸಲ್ಪಡುವದರಿಂದಲೂ, ಮತ್ತು ಅವುಗಳೆಲ್ಲಾ ಪ್ರಕೃತಿಯ ವಿಕಾರಗಳಾದುದರಿಂದಲೂ, ಅವೆಲ್ಲಾ ಈ ಪ್ರಕೃತಿಯಲ್ಲೇ ಅಂತರ್ಗತಗಳು. ಅದರೆ ಜೀವಾತ್ಮರಲ್ಲೂ ನಿತ್ಯ ಮುಕ್ತಬದ್ಧರೆಂಬ ಭೇದಗಳಿರುವಾಗ, ಮೂವರನ್ನು ಜೀವಾತ್ಮನೆಂಬದಾಗಿ ಹೇಳುವದು ಹೇಗೆ ಎಂದರೆ ಇವರಿಗೆಲ್ಲಾ ಜ್ಞಾನೈಕಾಕಾರತೆ, ಪರಮಾತ್ಮನಿಗೆ ಶೇಷತ್ವ ಮೊದಲಾದ ಗುಣಗಳು ಸಮಾನವಾಗಿಯೂ ಸ್ವಾಭಾವಿಕವಾಗಿಯೂ ಇರುವದರಿಂದ, ಈ ಮೂರುವಿಧ ಜೀವಾತ್ಮರನ್ನೂ "ಚೇತನ" ಶಬ್ದದಿಂದ ಹೇಳುವದು ಯುಕ್ತವೇಸರಿ. ಅದರೆ ಪರಮಾತ್ಮನೂ ಚೇತನವಾದುದರಿಂದ ಚೇತನಾಚೇತನವೆಂಬ ತತ್ವದ್ವಯವೆಂಬ ಎರಡುವಿಧ ವಿಭಾಗವೇ ಸಾಲದೇ, ತತ್ವತ್ರಯವೆಂದು ಏಕೆ ನಿರೂಪಣೆ ಎಂದರೆ, ಮತ್ತು ಪರಮಾತ್ಮನೂ ಜೀವಾತ್ಮನಹಾಗೆಯೇ ಭೋಕ್ತಾವಾದುದರಿಂದ, ತತ್ವದ್ವಯವೆಂದೇ ಹೇಳತಕ್ಕದ್ದು ನ್ಯಾಯವಲ್ಲವೇ ಎಂದರೆ; ಜೀವಾತ್ಮ ಪರಮಾತ್ಮರಿಗೂ ತುಂಬಾ ವ್ಯತ್ಯಾಸವಿರುವದೇ ಕಾರಣವೆಂದು ಭಾವಿಸತಕ್ಕದ್ದು. ಈಶ್ವರನು ಸರ್ವಜಗ

(2) "**ಅನಾದಿರ್ಭಗವಾನ್ ಕಾಲೋ ನಾಂತೋಸ್ಯ ದ್ವಿಜವಿದ್ಯತೇ**",
(3) "**ಕಲಾಮುಹೂರ್ತಾದಿ ಮಯಶ್ಚ ಕಾಲೋ ನಯದ್ವಿಭೂತೇಃ ಪರಿಣಾಮ ಹೇತುಃ,**"

ದ್ವ್ಯಾಪಾರವುಳ್ಳವನು, ಆದುದರಿಂದ ಸರ್ವನಿಯನ್ತಾ, ಜೀವಾತ್ಮನು ಜಗದ್ವ್ಯಾಪಾರವರ್ಜವುಳ್ಳವನು, ಆದುದರಿಂದ ನಿಯಾಮ್ಯನು; ಈಶ್ವರನು ಸ್ವತಂತ್ರನು ಜೀವನು ಪರಾಧೀನನು; ಈಶ್ವರನು ಕರ್ಮವಶ್ಯನಲ್ಲದ ಭೋಕ್ತಾ, ಜೀವನು ಕರ್ಮವಶ್ಯತೆಯಿಂದ ಭೋಕ್ತಾ, ಈಶ್ವರನು ಕಲ್ಯಾಣಗುಣಾಕರನು, ಜೀವನು ಬದ್ಧದೆಶೆಯಲ್ಲಿ ಹೇಯಗುಣ ಪರಿಪೂರ್ಣನು, ಇವೇ ಮೊದಲಾದ ಅನೇಕ ವ್ಯತ್ಯಾಸಗಳಿರುವದರಿಂದ ತತ್ವತ್ರಯವಿಭಾಗವೇ ಶ್ರುತಿ ಪ್ರತಿಪಾದ್ಯವಾಗಿರುವದರಿಂದ ಉಚಿತವಾದುದು ಎಂಬ ಭಾವವು.

(2) ವಿ. ಪು. 1, 2. 26. **ಕಾಲಃ** - ಕಾಲಶರೀರಕ ಪರಮಾತ್ಮನು, ಆದುದರಿಂದ ಇದಕ್ಕೆ "**ಭಗವಾನ್**" ಎಂಬ ವಿಶೇಷಣವು ಕೊಡಲ್ಪಟ್ಟಿರುತ್ತದೆ. **ಅನಾದಿಃ** - ಅನಾದಿಯಾದುದು, ಇದು ಪ್ರಕೃತಿಯ ಪರಿಣಾಮಕ್ಕೂ ಜೀತನರ ಕರ್ಮಕ್ಕೂ ಭೋಗಕ್ಕೂ ಸಹ ಕಾರಣವಾದುದು, **ಹೇದ್ವಿಜ** - ಓ ಬ್ರಾಹ್ಮಣನಾದ ಮೈತ್ರೇಯನೇ, **ಅಸ್ಯ** - ಈ ಕಾಲಕ್ಕೆ, **ಅಂತಃನವಿದ್ಯತೇ** - ಆದಿ ಹೇಗೆ ಇಲ್ಲವೋ ಹಾಗೆಯೇ ಅಂತವೂ ಇಲ್ಲವು. ಸರ್ವೇಶ್ವರನು ಜಗತ್ತಿಗೆ ಕಾರಣನು, ಜಗತ್ತು ಕಾರ್ಯವು, ಕಾಲವೂ ಕೂಡ ಜಗತ್ಕಾರ್ಯಗಳಿಗೆ ಕಾರಣವು ಎಂದರೆ, ಇಬ್ಬರು ಜಗತ್ತಿಗೆ ಕಾರಣರೇ ಎಂಬ ಶಂಕಾ ನಿವಾರಣಾರ್ಥವಾಗಿ, ಕಾಲಶರೀರಕ ಪರಮಾತ್ಮನೇ ಜಗತ್ಕಾರಣವೆಂದು ಹೇಳುವದಕ್ಕಾಗಿ "ಅನಾದಿರ್ಭಗವಾನ್ ಕಾಲಃ ಎಂಬ ಪ್ರಯೋಗವು. ಕಾಲಸಹಾಯಕನಾಗಿ ಸರ್ವೇಶ್ವರನು ಇಲ್ಲಿನ ಪರಿಣಾಮಗಳಿಗೆಲ್ಲಾ ಕಾರಣಭೂತನು. ಸರ್ವೇಶ್ವರನಿಗೆ ಪ್ರಕೃತಿಯೂ ಕಾಲವೂ ಎರಡೂ ಲೀಲೋಪಕರಣಗಳಾಗಿ ಅತನಿಗೆ ಶರೀರವು. ಆದರೆ ಕಾಲವು ಇಂತಹ ಪರಿಣಾಮಗಳನ್ನು ನಿತ್ಯವಿಭೂತಿಯಲ್ಲಿ ಉಂಟುಮಾಡಲಾರನೆಂದೂ ಲೀಲಾವಿಭೂತಿಯಲ್ಲಿ ಮಾತ್ರವೇ ಪರಿಣಾಮ ಹೇತುವೆಂದೂ ಮುಂದಿನ ಪ್ರಮಾಣದಿಂದ ತಿಳಿಸುತ್ತಾರೆ.

(3) ವಿ. ಪು. 4. 1. 84. **ಕಲಾಮುಹೂರ್ತಾದಿಮಯಃ**—ಕಲಾ, ಮುಹೂರ್ತಾ ಆದಿ ಶಬ್ದದಿಂದ ಝಾಮ, ದಿನ, ಪಕ್ಷ, ಮಾಸ, ಋತು, ಸಂವತ್ಸರ, ಯುಗಾದಿಗಳು ಹೇಳಲ್ಪಟ್ಟವು, ಇವೇ ಮೊದಲಾದ ರೂಪದಲ್ಲಿರುವ, "**ಕಾಲಃ**" ಕಾಲವು, **ಯದ್ವಿಭೂತೇಃ** - ಯಾವ ಪ್ರಸಿದ್ಧವಾದ, ಪರಮಾತ್ಮನ ವಿಭೂತಿಯಾದ ನಿತ್ಯವಿಭೂತಿಗೆ, **ಪರಿಣಾಮಹೇತುಃ** - ಪರಿಣಾಮಕ್ಕೆ ಕಾರಣವು **ನ** - ಆಗಲಾರದು. ನಿತ್ಯವಿಭೂತಿಯಲ್ಲಿ ಕಾಲವು ಅಚಿತ್ತಿನ ಪರಿಣಾಮಗಳಿಗೆ

(4) "ಜ್ಞಾನಾನಂದ ಮಯಾ ಲೋಕಾಃ," (5) "ಕಾಲಂಸಪಚ ತೇ ತತ್ರ ನಕಾಲ ಸ್ತತ್ರನೈಪ್ರಭುಃ," ಇತ್ಯಾದಿಗಳಿಲೇ ತ್ರಿಗುಣ, ಕಾಲ, ಶುದ್ಧ ಸತ್ವರೂಪಜ್ಞಾನ ತ್ರಿವಿಧಾಚೇತನಜ್ಞಳುಡೈಯ ಸ್ವಭಾವಂ ತೊಲ್ಲಿತ್ತು.

ಕಾರಣವಲ್ಲವು ಎಂಬ ಭಾವವು. ಹೀಗೆ ಹೇಳಿದುದರಿಂದ ಇನ್ನೊಂದು ವಿಭೂತಿಯಾದ ಲೀಲಾ ವಿಭೂತಿಯಲ್ಲಿ ಪರಿಣಾಮಕ್ಕೆ ಕಾರಣವೆಂಬುವದು ಅರ್ಥಾತ್ ಸಿದ್ಧವು. ಕಾಷ್ಠಾ ಎಂದರೆ "ಅಷ್ಟಾದಶನಿಮೇಷ' ಕಾಲವು ಎಂದರೆ 18 ಸಲ ರೆಪ್ಪೆಯಾಡಿಸುವ ಕಾಲವು. ತ್ರಿಂಶತ್ಕಾಷ್ಠೆ ಎಂದರೆ 30 ಕಾಷ್ಠೆಗೆ 1 ಕಲಾ, 30 ಕಲೆಗಳಿಗೆ 1 ಕ್ಷಣವು, ಇವುಗಳು 12 ಆದರೆ, 1 ಮುಹೂರ್ತ ಅಥವಾ ಘಳಿಗೆ 60 ಮುಹೂರ್ತಗಳಿಗೆ 1 ದಿನ, ಹೀಗೆ ಕಾಲವಿಭಾಗಗಳು. ಆದುದರಿಂದ 1 ಕಲೆಗೆ 4 ಸೆಕೆಂಡುಗಳು, ಮುಹೂರ್ತಕ್ಕೆ 24 ಮಿನಿಟುಗಳು. ಈ ಪ್ರಮಾಣದಿಂದ ಸರ್ವೇಶ್ವರನ ವಿಭೂತಿಯು ಲೀಲಾವಿಭೂತಿ ನಿತ್ಯವಿಭೂತಿಯೆಂದು ಎರಡೆಂದು ತೋರಿಬರುತ್ತದೆ. ಮುಂದೆ ನಿತ್ಯವಿಭೂತಿಯು ವಿಲಕ್ಷಣವಾಗಿ ಶುದ್ಧ ಸತ್ವಮಯವಾದುದೆಂದು ತಿಳಿಸುವದಕ್ಕಾಗಿ "ಜ್ಞಾನಾನಂದಮಯಾ ಲೋಕಾಃ" ಎಂದು ಪ್ರಾರಂಭಿಸಿ ಹೇಳುತ್ತಾರೆ.

(4) ಶ್ರೀ ಪಾಂಚರಾತ್ರ ವಚನವು. ನಿತ್ಯವಿಭೂತಿಯು, **ಜ್ಞಾನಾನಂದಮಯಾಲೋಕಾಃ** - ಜ್ಞಾನಾನಂದಸ್ವರೂಪ ಉಳ್ಳವು. ಇದರಿಂದ ನಿತ್ಯವಿಭೂತಿಯಲ್ಲಿ ಕಾಲನಿರಪೇಕ್ಷವೂ, ಶುದ್ಧಸತ್ವವೂ ಕೂಡ ಜ್ಞಾನವೇ ಎಂಬುವದೂ ತೋರಿಬರುತ್ತದೆ. ಈ ಕಾಲನೈರಪೇಕ್ಷವನ್ನೇ ಮುಂದಿನವಾಕ್ಯದಲ್ಲಿ "ಕಾಲಂ ಸಪಚತೇ ತತ್ರ" ಎಂಬುವದರಿಂದ ವಿಶದೀಕರಿಸುತ್ತಾರೆ.

(5) ಭಾರ. ಶಾಂತಿ. 196. 9. "ತತ್ರ" ಆ ನಿತ್ಯವಿಭೂತಿಯಲ್ಲಿ, **ಸಃ** - ಆ ಪರಮಾತ್ಮನು, **ಕಾಲಂ** - ಕಾಲವನ್ನು, **ಪಚತೇ** - ಪರಿಪಕ್ವವಮಾಡುತ್ತಾನೆ ಎಂದರೆ ನಿಯಮಿಸುತ್ತಾನೆ, ಅಧೀನದಲ್ಲಿಟ್ಟಿರುತ್ತಾನೆ, ಲೀಲಾವಿಭೂತಿಯಲ್ಲಿ ಕೊಟ್ಟಿರುವ ಸಾಮರ್ಥ್ಯವನ್ನು ಅಲ್ಲಿ ಕೊಟ್ಟಿರುವದಿಲ್ಲವೆಂಬಭಿಪ್ರಾಯವು. "ತತ್ರ" ಆ ನಿತ್ಯವಿಭೂತಿಯಲ್ಲಿ, ಕಾಲಃ - ಕಾಲವು, **ನನೈಪ್ರಭುಃ** - ಸಾಮರ್ಥ್ಯವುಳ್ಳವನಲ್ಲವಷ್ಟೇ. ಶಾಂತಿಪರ್ವದಲ್ಲಿ **ಕಾಲಃಸಂಪಚ್ಯತೇ ತತ್ರಕಾಲ ಸ್ತತ್ರನೈಪ್ರಭುಃ। ಸಕಾಲಸ್ಯಪ್ರಭೂರಾಜ ನ್ಸರ್ವಸ್ಯಾಪಿ ತಥೇಶ್ವರಃ** ಎಂದಿರುತ್ತದೆ, ಕಾಲವು ಪರಮಾತ್ಮನಿಂದ ಸಂಪಚ್ಯತೇ ನಿಯಮಿಸಲ್ಪಡುತ್ತದೆ ಎಂಬರ್ಥವು. ಆ ಪರಮಾತ್ಮನು ಎಲ್ಲಾವಕ್ಕೂ ಹೇಗೆ ನಿಯಾಮಕನೋ ಹಾಗೆಯೇ ಕಾಲಕ್ಕೂ ಕೂಡ ನಿಯಾಮಕನು.

ತ್ರಿವಿಧ ಚೇತನ ಪ್ರಕಾರಃ

(1) "ಪ್ರಮಾನ್ನದೇವೋನನರಃ," (2) "ನಾಯಂದೇವೋ ನಮನುರ್ಯ್ಯೋವಾ," (3) "ಕ್ಷರಸ್ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ," (4) "ಯದ್ವೈಪಶ್ಯನ್ತಿ ಸೂರಯಃ," ಇತ್ಯಾದಿಗಳಾಲೇ ತ್ರಿವಿಧ ಜೀವರುಗಳುಡ್ಯೆಯ ಪ್ರಕಾರಂ ವಿವೇಕಕ್ಕಪ್ಪಟ್ಟಿದು.

ಇತ್ಯಾದಿಗಳಿಲೆ - ಇಂತಹ ಪ್ರಮಾಣಗಳಲ್ಲಿ, ತ್ರಿಗುಣ, ಕಾಲ, ಶುದ್ಧ ಸತ್ವರೂಪಗಳಲ್ಲಿರುವ, **ತ್ರಿವಿಧಾಚೇತನಜ್ಞಳುಡ್ಯೆಯ** - ಹೀಗೆ ಮೂರುವಿಧವಾದ ಅಚೇತನಗಳ, **ಸ್ವಭಾವಂಶೊಲ್ಲಿತ್ತು** - ಧರ್ಮಗಳು ಹೇಳಲ್ಪಟ್ಟವು.

ಹೀಗೆ ಮೂರುವಿಧವಾದ ಅಚೇತನಗಳಾದ ತ್ರಿಗುಣ, ಕಾಲ, ಶುದ್ಧಸತ್ವಗಳ ಧರ್ಮಗಳನ್ನು ಸಪ್ರಮಾಣವಾಗಿ ವಿಶದೀಕರಿಸಿ, ಮುಂದೆ ತ್ರಿವಿಧಚೇತನರ ಸ್ವರೂಪಗಳನ್ನು ತಿಳಿಸುತ್ತಾರೆ.

ತ್ರಿವಿಧ ಚೇತನರಿಗಿರುವ ವ್ಯತ್ಯಾಸವು.

(1) ವಿ. ಪು. 2. 13. 98 ಇದರರ್ಥವು 263-4. ನೇ ಪುಟಗಳಲ್ಲಿ ವಿಶದವಾಗಿ ಬರದಿರುತ್ತದೆ. "ಪುರ್ಮಾ" ಚೇತನನು ಆತನ ನೈಜಸ್ಥಿತಿಯಲ್ಲಿ ಪರಿಶುದ್ಧನಾದ ಪ್ರಯುಕ್ತ ಪುರ್ಮಾ ಎಂದು ಹೇಳಿಸಿಕೊಳ್ಳುವನು. **ನದೇವಃ** - ಆತನು ದೇವನೂ ಅಲ್ಲವು, **ನನರಃ** - ಮನುಷ್ಯನೂ ಅಲ್ಲವು. ಇದರಿಂದ ಜೀವಾತ್ಮನು ಪರಿಶುದ್ಧನೆಂದೂ, ದೇವಾದಿ ಶರೀರಗಳು ಆತನಿಗೆ ಕರ್ಮಕೃತವಾದುವೆಂದೂ ತಿಳಿಸಲ್ಪಟ್ಟಿತು.

(2) **ಅಯಂ**—ಈ ಜೀವಾತ್ಮನು, **ನದೇವಃ** - ದೇವತೆಯೂ ಅಲ್ಲವು, **ನಮನುರ್ಯ್ಯೋವಾ** - ಮನುಷ್ಯನೂ ಅಲ್ಲವು. 168 ನೇ ಪುಟದಲ್ಲಿ ಈ ಶ್ಲೋಕವು ಸಂಪೂರ್ಣವಾಗಿ ಉದಾಹರಿಸಲ್ಪಟ್ಟಿರುತ್ತದೆ.

(3) ಗೀ. 15. 16. **ಸರ್ವಾಣಿಭೂತಾನಿ**-ಸಮಸ್ತಬದ್ಧಚೇತನರೂ, **ಕ್ಷರಃ** - ಅಚಿತ್ತಿನೊಂದಿಗೆ ಸೇರಿರುವದರಿಂದ ಜ್ಞಾನಸಂಕೋಚ ವಿಕಾಸರೂಪಾವಸ್ಥೆಗಳಿಂದ ಕ್ಷರಣಭಾವವನ್ನು ಹೊಂದಿದವರು, ಆದರೆ **ಕೂಟಸ್ಥಃ** - ಅಚಿತ್ಸಂಸರ್ಗವುತೊಲಗಿ ಶಾಶ್ವತಪದವನ್ನು ಹೊಂದಿರುವ ಮುಕ್ತನು, **ಅಕ್ಷರ ಉಚ್ಯತೇ**-ವಿಕಾರರಹಿತನಾದುದರಿಂದ ಅಕ್ಷರನೆಂದು ಹೇಳಲ್ಪಡುವನು. ಇಲ್ಲಿ ಬದ್ಧರ ಮತ್ತು ಮುಕ್ತರ ಸ್ವರೂಪವು ತಿಳಿಸಲ್ಪಟ್ಟಿತು.

(4) **ಯತ್** - ಯಾವ ಶ್ರೇಷ್ಠವಾದ ಸ್ಥಾನವಾದ ದಿವ್ಯ ವೈಕುಂಠವನ್ನು **ಸೂರಯಃಪಶ್ಯಂತಿ**-ನಿತ್ಯಸೂರಿಗಳು ನೋಡುತ್ತಿದ್ದಾರೋ, ವಿ. ಪು. 1. 6. 39

ಈಶ್ವರ ತತ್ವಂ

(1) "ಸರ್ವಜ್ಞ ಸ್ಸರ್ವ (ಕೃತ್ಸ) ದೃಕ್ಸರ್ವ ಶಕ್ತಿಜ್ಞಾನ ಬಲರ್ದ್ಧಿವರ್ಜ್ಜಿತ
ಕ್ಲೇಮ ತಂದ್ರೀ ಭಯ ಕ್ರೋಧ ಕಾಮಾದಿಭಿರ ಸಂಯುತಃ॥"
ಇತ್ಯಾದಿಗಳಾಲೇ ಈಶ್ವರ ಸ್ವಭಾವ (ಸ್ವರೂಪ) ಮುಪದಿಷ್ಟವಾಯಿತ್ತು.

ಏಕಾನ್ತಿನಸ್ಸದಾ ಬ್ರಹ್ಮಧ್ಯಾಯಿನೋ ಯೋಗಿನೋಹಿಯೇ ।
ತೇಷಾಂತತ್ಪರಮಂಸ್ಥಾನಂ ಯದ್ವೈಷ್ಣವಪಶ್ಯನ್ತಿಸೂರಯಃ ॥

ಎಂಬುವದು ಪೂರಾಶ್ಲೋಕವು. ಚಿತ್ತೈಕಾಗ್ರತೆಯುಳ್ಳವರಾಗಿ ಪರಬ್ರಹ್ಮನನ್ನು ಉಪಾಸನೆ ಮಾಡುವ ಯೋಗಿಗಳು ಯಾರೋ, ಅವರು, ನಿತ್ಯಸೂರಿಗಳು ಯಾವಾಗಲೂ ಯಾವ ದಿವ್ಯ ವೈಕುಂಠಸ್ಥಾನವನ್ನು ಯಾವಾಗಲೂ ನೋಡುತ್ತಿರುವವರೋ, ಅಂತಹ ಸರ್ವೋತ್ಕೃಷ್ಟಸ್ಥಾನವನ್ನೇ ಹೊಂದುವರು, ಎಂಬುವದು ಈ ಶ್ಲೋಕತಾತ್ಪರ್ಯವು.

ಇತ್ಯಾದಿಗಳಾಲೆ - ಇವೇ ಮೊದಲಾದ ಮೇಲೆ ಉದಾಹರಿಸಿದ ಪ್ರಮಾಣಗಳಿಂದ, **ತ್ರಿವಿಧ ಜೀವರುಗಳುಡೈಯಪ್ರಕಾರಂ**- ಮೂರುವಿಧ ಚೇತನರುಗಳ ಲಕ್ಷಣವು, **ವಿವೇಕಿಕ್ಕಪಟ್ಟದು** - ವಿವೇಚನೆಮಾಡಿ ಹೇಳಲ್ಪಟ್ಟಿತು. ಈ ಲೀಲಾವಿಭೂತಿಯಲ್ಲಿ ಜೀವಾತ್ಮರು ಶರೀರೇಂದ್ರಿಯರೂಪದಲ್ಲಿ ಪ್ರಕೃತಿಯಿಂದ ಬಂಧಿಸಲ್ಪಟ್ಟಿರುವದರಿಂದ "ಬದ್ಧರೆನಿಸುವರು." ಇವರು ಕರ್ಮಾನುಸಾರವಾಗಿ ದೇವ ಮನುಷ್ಯಾದಿ ಅನೇಕವಿಧವಾದ ಜನ್ಮಗಳನ್ನೆತ್ತುವರು. ಬ್ರಹ್ಮರುದ್ರೇಂದ್ರಾದಿಗಳ ಮೊವಲುಗೊಂಡು ಕ್ರಿಮಿಕೀಟಾದಿ ಸ್ತಂಭಪರ್ಯಂತವಿರುವ ಸಕಲ ಚೇತನರೂ ಈ ಪಂಗಡಕ್ಕೆ ಸೇರಿದವರು. (2) ಇಂತಹ ಬಂಧರೂಪವಾದ ಪ್ರಕೃತಿ ಸಂಬಂಧವನ್ನು, ಸಿದ್ಧೋಪಾಯನಾದ ಸರ್ವೇಶ್ವರನ ಕೃಪೆಯಿಂದ, ಸಾಧ್ಯೋಪಾಯವನ್ನನುಷ್ಠಿಸಿ, ಕಳೆದುಕ್ಕೊಂಡು ತಮ್ಮ ನೈಜವಾದ ಜ್ಞಾನವಿಕಾಸವನ್ನು ಹೊಂದಿದವರಾಗಿ, ಪರಮಪದದಲ್ಲಿದ್ದುಕೊಂಡು ಪರಬ್ರಹ್ಮನನ್ನನುಭವಿಸುತ್ತಾ, ಆತನಿಗೆ ಕೈಙ್ಕರ್ಯಗಳನ್ನೆಸಗುತ್ತಿರುವ ಮುಕ್ತರು. (3) ಸರ್ವೇಶ್ವರಸಙ್ಕಲ್ಪದಿಂದ ಪ್ರಕೃತಿಸಂಬಂಧವನ್ನು ಯಾವಕಾಲದಲ್ಲೂ ಅನುಭವಿಸದವರಾಗಿ, ನಿತ್ಯವಿಭೂತಿಯಲ್ಲಿದ್ದುಕೊಂಡು, ಪರಿಶುದ್ಧಾತ್ಮರಾಗಿ, ಸರ್ವದಾಜ್ಞಾನವಿಕಾಸವುಳ್ಳವರಾಗಿ, ದಿವ್ಯ ವೈಕುಂಠಪತಿಯ ಕೈಙ್ಕರ್ಯದಲ್ಲೇ ನಿರತರಾಗಿರುವ ಅನಂತ ಗರುಡ ವಿಷ್ವಕ್ಸೇನಾದಿ "ನಿತ್ಯಸೂರಿಗಳು," ಹೀಗೆ ಜೀವಾತ್ಮರು ಮೂರುವಿಧವೆಂಬಭಿಪ್ರಾಯವು.

ಹೀಗೆ ಮೂರುವಿಧ ಅಚೇತನಗಳನ್ನೂ, ಮೂರುವಿಧ ಚೇತನರನ್ನೂ ಹೇಳಿ, ಮುಂದಿನವಾಕ್ಯದಿಂದ ಈಶ್ವರತತ್ವವನ್ನು ಕುರಿತು ಹೇಳುತ್ತಾರೆ.

ಈಶ್ವರತತ್ವ

(1) ವಿ. ಪು. 5. 1. 47-8. ಇವು ಎರಡು ಪಾದಗಳೂ ಎರಡುಶ್ಲೋ

ಕಗಳ ಉತ್ತರಾರ್ಧಗಳು. ಭೂಭಾರೋತ್ತಾರಣಾರ್ಥವಾಗಿ ವಿಷ್ಣುವನ್ನು ಕೃಷ್ಣಾವತಾರಕ್ಕಾಗಿ ಪ್ರಾರ್ಥಿಸುವ ಚತುರ್ಮುಖಸ್ತುತಿಯು. ಆ ಶ್ಲೋಕಗಳು ಯಾವುವೆಂದರೆ:—

"ವ್ಯಕ್ತಾ ವ್ಯಕ್ತ ಸ್ವರೂಪಸ್ತ್ವಂ ಸಮಷ್ಟಿ ವ್ಯಷ್ಟಿರೂಪವಾ ।
ಸರ್ವಜ್ಞಸ್ಸರ್ವದೃಕ್ಸರ್ವ ಶಕ್ತಿಜ್ಞಾನ ಬಲರ್ದ್ಧಿಮಾ ।
ಅನ್ಯೂನ ಶಾಶ್ವತೈಶ್ವರ್ಯ ಸ್ವಾಧೀನೋಽನಾದಿಮಾನ್ವಶೀ ।
ಕ್ಲಮತಂದ್ರೀ ಭಯ ಕ್ರೋಧ ಕಾಮಾದಿಭಿ ರಸಂಯುತಃ ॥"

ಸರ್ವಜ್ಞಃ - ಸರ್ವವನ್ನೂ ತಿಳಿದವನು ಅಥವಾ ಸರ್ವಶ್ಚಾಸೌಜ್ಞಶ್ಚ ಎಂಬ ವ್ಯುತ್ಪತ್ತಿಯಿಂದ ಸರ್ವ ಶರೀರಿಯಾಗಿ, **ಸರ್ವಜ್ಞಾನಸ್ವರೂಪನು**, "ಸರ್ವದೃಕ್" ಎಲ್ಲವನ್ನೂ ಪ್ರತ್ಯಕ್ಷವಾಗಿ ನೋಡುವವನು, "ಸರ್ವಕೃತ್" ಎಂದು ಪಾಠವಾದರೆ, ಸರ್ವಕಾರ್ಯಕ್ಕೂ ತಾನೇ ಕಾರಣನಾಗಿ ಉಂಟುಮಾಡುವವನು, "ಸರ್ವವಿತ್" ಎಂಬ ಪಾಠವೂ ಉಂಟು, ಹಿಂದೆ ಸರ್ವಜ್ಞನೆಂದಿರುವದರಿಂದ, ಸರ್ವವಿತ್ತೆಂಬ ಪಾಠವಿದ್ದರೂ ಪೌನರುಕ್ತ್ಯದೋಷ ವುಂಟಾಗುವದಿಲ್ಲವು, ಒಂದರಿಂದ ಸಮಸ್ತವಸ್ತುಗಳ ಸಾಮಾನ್ಯಜ್ಞಾನವೂ ಇನ್ನೊಂದರಿಂದ ವಿಶೇಷಜ್ಞಾನವೂ ಹೇಳಲ್ಪಟ್ಟಿತು. ಶ್ರೀ ಪರಾಶರರು ಇಲ್ಲಿ "ಯಸ್ಸರ್ವಜ್ಞಸ್ಸರ್ವವಿತ್" ಎಂಬ ಶ್ರುತ್ಯರ್ಥವನ್ನೇ ಮನಸ್ಸಿನಲ್ಲಿಟ್ಟವರಾಗಿ ಈ ಶ್ಲೋಕಗಳನ್ನನುಗ್ರಹಿಸಿರುವದರಿಂದ, ಸರ್ವವಿತ್ತೆಂಬ ಪಾಠವೇ ಮಿಕ್ಕೆರಡು ಪಾಠಕ್ಕಿಂತಲೂ ಉತ್ಕೃಷ್ಟವಾಗಿ ತೋರುತ್ತದೆ. **ಸರ್ವಶಕ್ತಿಜ್ಞಾನ ಬಲರ್ದ್ಧಿಮಾ** - ಸಮಸ್ತವಾದ ಶಕ್ತಿ ಜ್ಞಾನ ಬಲಗಳ, ಋದ್ಧಿಮಾ ಆಧಿಕ್ಯವನ್ನು ಹೊಂದಿರುವವನು; ಇದರಿಂದ ಕಲ್ಯಾಣಗುಣಾಕರತ್ವವು ಬೋಧಿತವಾಯಿತು; ಮತ್ತು, "ಕ್ಲಮ"-ಶ್ರಮ, "ತಂದ್ರೀ" - ತುಂಬಾ ಶ್ರಮದಿಂದ ಮೈಮರತಿರೋಣವು "ಭಯ"- ಭಯ, "ಕ್ರೋಧ"- ಕೋಪ, "ಕಾಮಾದಿಭಿಃ"-ಕಾಮ ಮೊದಲಾದವುಗಳಿಂದ, ಇಲ್ಲಿ ಆದಿ ಶಬ್ದದಿಂದ ಲೋಭ, ಮೋಹ, ಮದ, ಮಾತ್ಸರ್ಯ ಮೊದಲಾದವುಗಳು ಹೇಳಲ್ಪಟ್ಟವು, ಇಂತಹ ಸಮಸ್ತ ಹೇಯಗುಣಗಳಿಂದಲೂ, **ಅಸಂಯುತಃ**-ಸೇರದೇ ಇರುವವನು, ಇದರಿಂದ ಸರ್ವೇಶ್ವರನ ಹೇಯ ಪ್ರತ್ಯನೀಯಕತ್ವವು ಬೋಧಿತವಾಯಿತು. ಈ ಶ್ಲೋಕದಲ್ಲಿ "ಸರ್ವಜ್ಞ"ನೆಂದೂ, ಪುನಃ "ಜ್ಞಾನಬಲರ್ದ್ಧಿಮಾ ಎಂದೂ ಹೇಳಿರುವದರಿಂದ ಸರ್ವೇಶ್ವರನು ಜ್ಞಾನಸ್ವರೂಪನೆಂದೂ, ಜ್ಞಾನಗುಣವುಳ್ಳವನೆಂದೂ ಹೇಳಲ್ಪಟ್ಟಿತು; "ಶಕ್ತಿಜ್ಞಾನ ಬಲರ್ದ್ಧಿಮಾ" ಎಂದು ಹೇಳಿರುವುದರಿಂದ ಸಾಮ್ಯಾಪರಿಪೂರ್ಣನಾಗಿಯೂ, ಹೇಯ ಪ್ರತ್ಯನೀಕನಾಗಿಯೂ ಇರುವದರಿಂದ "ಭಗವಾನ್" ಎಂದು ಹೇಳಿಸಿಕೊಳ್ಳಲು ಅರ್ಹನೆಂದು ಹೇಳಲ್ಪಟ್ಟಿತು; "ಇತ್ಯಾದಿಗಳಾಲೇ" - ಇಂತಹ ಪ್ರಮಾಣಗಳಿಂದ, "ಈಶ್ವರ ಸ್ವರೂಪಮ್" - ಸರ್ವೇಶ್ವರನ ಸ್ವರೂಪವು, "ಉಪದಿಷ್ಟವಾಯಿತ್ತು"- ಉಪದೇಶಿಸಲ್ಪಟ್ಟಿತು.

ಇವ್ವೀಶೇಶಿತವ್ಯರೂಪವಾನ ತತ್ವತ್ರಯವುಂ ನಿರ್ಮುಂ ನಿಲ್ವೆಯ್ವೆ "ಸ್ವಾಧೀನ ತ್ರಿವಿಧ ಚೇತನಾ ಚೇತನ ಸ್ವರೂಪ ಸ್ಥಿತಿ ಪ್ರವೃತ್ತಿ ಭೇದಂ" ಎನ್ರು ಶುರಜ್ಞವರುಳಿಚ್ಚಿಯ್‌ದಾರ್

1. **ತ್ರಿವಿಧ ಚೇತನ ರೆನ್ನದು, ಬದ್ಧರೈಯುಮ್, ಮುಕ್ತರೈಯುಮ್ ನಿತ್ಯರೈಯುಮ್.**
2. **ತ್ರಿವಿಧಾ ಚೇತನ ಮೆನ್ರದು, ತ್ರಿಗುಣ ದ್ರವ್ಯತ್ತೈಯುಮ್, ಕಾಲತ್ತೈಯುಮ್, ಶುದ್ಧಸತ್ವ ಮಾನ ದ್ರವ್ಯತ್ತೈಯುಮ್.**

ಇವ್ವೀಶೇಶಿತವ್ಯರೂಪವಾನ, "ಇವ್ವೀಶ" - ಈ ನಿಯಾಮಕನಾಗಿರುವ ಈಶ್ವರನೆಂಬ ಮತ್ತು "ಈಶಿತವ್ಯ ರೂಪವಾನ" ಈ ನಿಯಾಮ್ಯವಾಗಿರುವ "ಚೇತನಾ ಚೇತನ ಸ್ವರೂಪ ಸ್ಥಿತಿ ಪ್ರವೃತ್ತಿ ಭೇದಂ," ತ್ರಿವಿಧರಾದ ಚೇತನರೇನು, ತ್ರಿವಿಧವಾದ ಅಚೇತನವೇನು, ಇವುಗಳ ಸ್ವರೂಪ ಸ್ಥಿತಿ ಪ್ರವೃತ್ತಿಗಳಲ್ಲಿ ತೋರುವ ಭೇದವೆಲ್ಲಾ ಯಾವ ಸರ್ವೇಶ್ವರನಿಗೆ ಸ್ವಾಧೀನವೋ, ಅಂಥಾವನನ್ನು "ಎನ್ರು" - ಎಂಬ ವಾಕ್ಯ ಮೂಲಕವಾಗಿ, **ಶುರಜ್ಞ** - ಸೂಕ್ಷ್ಮವಾಗಿ ಸಂಗ್ರಹವಾಗಿ "ಅರುಳಿಚ್ಚಿಯ್ದಾರ್" - ಕೃಪೆಮಾಡಿ ಉಪದೇಶಿಸಿರುತ್ತಾರೆ. ಯಾರು ಎಂದು ಕರ್ತೃಪದವನ್ನು ಹೇಳಲಿಲ್ಲವು. ಈ ವಾಕ್ಯವು ಯಾಮುನೇಯರ ಆತ್ಮಸಿದ್ಧಿಯಲ್ಲಿದೆ. ಅದನ್ನೇ ಶ್ರೀ ಭಾಷ್ಯಕಾರರವರು ಶ್ರೀ ವೈಕುಂಠಗದ್ಯದಲ್ಲಿ ಉಪಯೋಗಿಸಿರುತ್ತಾರೆ. "ಸ್ವಾಮಿತ್ವೇನ, ಸುಹೃತ್ತ್ವೇನ, ಗುರುತ್ವೇನ, ಪರಿಗೃಹ್ಯ" ಎಂದು ಮುಂದೆ ಇದೆ. ಇಲ್ಲಿ "ಅರುಳಿಚ್ಚಿಯ್ದಾರ್" ಎಂದು ಹೇಳಿ ಕರ್ತೃಪದವಿಲ್ಲದಿರುವುದು, ಈ ಇಬ್ಬರು ಮಹಾನುಭಾವರುಗಳ ಉಕ್ತಿಯಲ್ಲಿ ಯಾರಾದರೂ ಒಬ್ಬರ ಉಕ್ತಿಯೆಂದು ಭಾವಿಸಬಹುದೆಂಬಭಿಪ್ರಾಯದಿಂದಾಗಲಿ, ಅಥವಾ ಇಂತಹ ಪ್ರಸಿದ್ಧರಾದವರ ಉಕ್ತಿಯು ಎಲ್ಲರಿಗೂ ವಿದಿತವಾಗಿರುವುದರಿಂದ, ಕರ್ತೃಪದವನ್ನು ಪ್ರಯೋಗಿಸುವದು ಅನಾವಶ್ಯಕವಾದ ವಿಷಯದಿಂದಲಾಗಲಿ ಎಂದು ಭಾವಿಸಬಹುದು. ಇಲ್ಲಿ "ಶುರಜ್ಞ"ವೆಂದು ಹೇಳಿರುವುದು, ಈ ಮೂರುವಿಧ ಚೇತನರಿಗೂ ಮತ್ತು ಮೂರುವಿಧ ಅಚೇತನಕ್ಕೂ ಇರುವ ಪರಸ್ಪರ ವೈಲಕ್ಷಣ್ಯಗಳು ಅಲ್ಲಿ ಉಪಪಾದಿತವಾಗಲಿಲ್ಲವೆಂಬಭಿಪ್ರಾಯವನ್ನು ತೋರಿಸುತ್ತದೆ. ತಾವು ಅವುಗಳಿಗಿರುವ ಪರಸ್ಪರ ವ್ಯತ್ಯಾಸವನ್ನು ವಿಶದವಾಗಿ ತಿಳಿಸುತ್ತಾರೆಂಬ ಭಾವವೂ ತೋರಿಬರುತ್ತದೆ.

1 ತ್ರಿವಿಧ ಚೇತನರೆಂದು ಹೇಳಿದುದು :—(1) ಬದ್ಧರೂ (2) ಮುಕ್ತರೂ (3) ನಿತ್ಯರೂ ಇವರುಗಳನ್ನು ಕುರಿತು.

2 ತ್ರಿವಿಧಾ ಚೇತನವೆನ್ರದು - ಮೂರಾದ ಅಚೇತನವೆಂದು ಹೇಳಿದುದು :—(1) ತ್ರಿಗುಣವೆಂದರೆ ಸತ್ವರಜಸ್ತಮೋಗುಣಗಳಿಂದ

3. ಸ್ವರೂಪ ಮೆನ್ರದು, ಸ್ವಾಸಾಧಾರಣ ಧರ್ಮತ್ತಾಲೆ ನಿರೂಪಿತ ಮಾನ ಧರ್ಮಿಯ್ಯೈ.

4. ಸ್ಥಿತಿಯಾವದು :—ಇದಿನುಡ್ಯೈಯ ಕಾಲಾನ್ತರಾನು ವೃತ್ತಿ. ಇದು ತಾ೯ ನಿತ್ಯವಸ್ತುಗಳುಕ್ಕು ನಿತ್ಯೈಯಾಯಿರುಕ್ಕುಮ್ ಅನಿತ್ಯವಸ್ತುಗಳುಕ್ಕು ಈಶ್ವರ ಸಙ್ಕಲ್ಪಕಕ್ಕೀಡಾಕ ಏರಿಯುಮ್ ಕುರಙ್ಗಿಯು ಮಿರುಕ್ಕುಮ್.

ಯುಕ್ತವಾಗಿರುವ ಪ್ರಕೃತಿಯೂ (2) ಕಾಲ (3) ನಿತ್ಯವಿಭೂತಿಯಲ್ಲಿ ರಜಸ್ತಮೋಗುಣಗಳಿಲ್ಲವಾದುದರಿಂದ ಶುದ್ಧಸತ್ವವೆಂದೆನಿಸುತ್ತದೆ. ಹಿಂದೆ ಉದಾಹರಿಸಿದ ಆ ಭಾಷ್ಯಕಾರೋಕ್ತಿಯಲ್ಲಿ "ತ್ರಿವಿಧ ಚೇತನಾ ಚೇತನ" ಎಂಬಲ್ಲಿ "ತ್ರಿವಿಧ" ಶಬ್ದವು ಚೇತನಕ್ಕೂ, ಅಚೇತನಕ್ಕೂ ಸಹ ಅನ್ವಯಿಸುತ್ತದೆಂದು ತಿಳಿಯತಕ್ಕದ್ದು. ಇನ್ನು ಮುಂದೆ ಆ ವಾಕ್ಯದಲ್ಲೇ ಇರುವ "ಸ್ವರೂಪ ಸ್ಥಿತಿ ಪ್ರವೃತ್ತಿ" ಶಬ್ದಗಳಿಗೆ ವ್ಯಾಖ್ಯಾನವನ್ನು ಬರೆಯುತ್ತಾರೆ.

3 ಸ್ವರೂಪಮೆನ್ರದು-ಒಂದು ವಸ್ತುವಿನ ಸ್ವರೂಪವೆಂದು ಹೇಳುವದು, ಸ್ವಾಸಾಧಾರಣ ಧರ್ಮತ್ತಾಲೆ- ಆ ವಸ್ತುವಿಗೆ ಮಾತ್ರವೇ ಮುಖ್ಯವಾಗಿರುವ ಧರ್ಮದಿಂದ ಅಥವಾ ವಿಶೇಷಣದಿಂದ, ನಿರೂಪಿತಮಾನಧರ್ಮಿಯ್ಯೈ- ಬೋಧಿಸಲ್ಪಟ್ಟ ಧರ್ಮಿಯು, ವಿಶೇಷ್ಯವು. ಆ ಧರ್ಮಗಳು ಅನ್ಯತ್ರ ಸಾಧಾರಣವಾಗಿಯಿಲ್ಲದೆ ಆ ವಸ್ತುವಿಗೆ ಮಾತ್ರವೇ ಅಸಾಧಾರಣವಾಗಿರಬೇಕೆಂಬ ಭಾವವು. ಅಂತಹ ಧರ್ಮಗಳಿಗೆ "ಸ್ವರೂಪ ನಿರೂಪಕ ಧರ್ಮ"ಗಳೆಂದು ಹೆಸರು. ಈ ಧರ್ಮಗಳೂ ಅಲ್ಲದೆ ಒಂದು ಧರ್ಮಿಯಲ್ಲಿ ಇತರಗಳಾದ ಅನ್ಯತ್ರ ಸಾಧಾರಣಗಳಾದ ಧರ್ಮಗಳೂ ಇರಬಹುದು. ಅಂತಹ ಗುಣಗಳಿಗೆ "ನಿರೂಪಿತ ಸ್ವರೂಪವಿಶೇಷಣಗಳೆಂದು ಹೆಸರು. ಹೀಗೆ ಧರ್ಮಗಳು ಎರಡು ವಿಧವೆಂದು ಶ್ರೀಮದಾಚಾರ್ಯರವರೇ ಮುಂದೆ ತಿಳಿಸುತ್ತಾರೆ.

4 "ಸ್ಥಿತಿಯಾವದು":—ಸ್ಥಿತಿ ಎನ್ನುವದು, "ಇದಿನುಡ್ಯೈಯ - ಈ ಧರ್ಮಿಗಳ ಎಂದರೆ ಈ ಚೇತನಾ ಚೇತನಗಳ, "ಕಾಲಾನ್ತರಾನುವೃತ್ತಿ"- ಬೇರೇ ಕಾಲದಲ್ಲೂ ಇರುವಿಕೆಯು, "ಇದುತಾ೯" - ಈ ಸ್ಥಿತಿಯಾದರೋ, "ನಿತ್ಯವಸ್ತುಗಳುಕ್ಕು ನಿತ್ಯಮಾಯಿರುಕ್ಕುಮ್" - ನಿತ್ಯವಾದ ಎಂದರೆ ಎಂದಿಗೂ ನಾಶವಿಲ್ಲದ ವಸ್ತುಗಳಿಗೆ ನಿತ್ಯವಾಗಿರುತ್ತದೆ "ಅನಿತ್ಯವಸ್ತುಗಳುಕ್ಕು" - ಅನಿತ್ಯವಾದ ವಸ್ತುಗಳಿಗೆ ಅಂದರೆ ನಾಶ ಹೊಂದುವ ವಸ್ತುಗಳಿಗೆ, "ಈಶ್ವರ ಸಙ್ಕಲ್ಪಕ್ಕೀಡಾಗ"-

೫. ಇಜ್ಯುಃ ಪ್ರವೃತ್ತಿಯಾವದು:— ಪ್ರವೃತ್ತಿ ನಿವೃತ್ತಿ ರೂಪವಾಸ ವ್ಯಾಪಾರವು.

ಈಶ್ವರ ಸಙ್ಕಲ್ಪಕ್ಕನುಸಾರವಾಗಿ, **ಏರಿಯುಮ್ ಶುರಜ್ಞ್ಯು ಮಿರುಕ್ಕುಮ್** - ಅಧಿಕಕಾಲ ವಿರುವದಾಗಿಯೂ, ಕೊಂಚಕಾಲವಿ ರುವದಾಗಿಯೂ ಏದರೆ ಅನಿತ್ಯವಾದ ವಸ್ತುಗಳ ಸ್ಥಿತಿಯು ಬಹು ಕಾಲ ವೃದ್ಧಿಯನ್ನುಹೊಂದುವದಾಗಿಯೂ, ಅಥವಾ ಅಲ್ಪಕಾಲದಲ್ಲೇ ಸಙ್ಕೋಚವನ್ನು ಹೊಂದುವದಾಗಿಯೂ ಇರುತ್ತದೆ. ಕೆಲವು ಬಹುಕಾ ಲವೂ ಕೆಲವು ಕೊಂಚಕಾಲವೂ ಇರುವದಾಗಿ ಎಂದು ಹೇಳಿದುದರಿಂದ ಆ ಕಾಲ ಕಳೆದನಂತರ ಅವುಗಳು ಶೂನ್ಯವಾಗಿಯೇ ಹೋಗುತ್ತವೆ ಎಂಬಭಿಪ್ರಾಯವಲ್ಲವು. ಅವುಗಳು ಪರಿಣಾಮವನ್ನು ಹೊಂದಿ ಬೇರೆ ಅವಸ್ಥೆಯನ್ನು ಹೊಂದುತ್ತವೆ ಎಂಬ ಭಾವವು.

5. **ಇಜ್ಯುಃ**:— ಈ "ಸ್ಯಾದ್ಬೀಜತ್ರಿವಿಧ" ಇತ್ಯಾದಿ ವಾಕ್ಯದಲ್ಲಿರುವ, **ಪ್ರವೃತ್ತಿಯಾವದು**- ಪ್ರವೃತ್ತಿಯೆಂದು ಹೇಳಿರುವದು ಯಾವುದು? ಪ್ರವೃತ್ತಿನಿವೃತ್ತಿರೂಪವಾದ ವ್ಯಾಪಾರವು. **ಪ್ರವೃತ್ತಿ** ಎಂದರೆ ಒಂದು ಕಾರ್ಯದಲ್ಲಿ ಪ್ರವರ್ತಿಸುವಿಕೆಯು ; **ನಿವೃತ್ತಿ** ಎಂದರೆ ಒಂದು ಕೆಲಸ ದಲ್ಲಿದ್ದುದನ್ನು ಸ್ವಸಙ್ಕಲ್ಪದಿಂದ ಬಿಡತಕ್ಕ ವ್ಯಾಪಾರವು. ಆದುದ ರಿಂದ ನಿವೃತ್ತಿಯೂ ವ್ಯಾಪಾರವೇ. ಮಿತಗದ್ಯದ ವ್ಯಾಖ್ಯಾನದಲ್ಲಿ ಶ್ರೀಮದಾಚಾರ್ಯರವರು **"ಪ್ರವೃತ್ತಿರ್ವ್ಯಾಪಾರಃ, ನಿವೃತ್ತಿರಪ್ಯಕರಣ ಸಙ್ಕಲ್ಪರೂಪ ಪ್ರವೃತ್ತಿವಿಶೇಷಃ"** ನಿವೃತ್ತಿಯೂ ಕೂಡ ಮಾಡುವನಿಲ್ಲವೆಂಬ ಸಂಙ್ಕಲ್ಪರೂಪಪ್ರವೃತ್ತಿ ವಿಶೇಷವೆಂದು ಅಪ್ಪಣೆ ಕೊಡಿಸಿರುತ್ತಾರೆ. ಮಹರ್ಷಿಯು, "ನಿವೃತ್ತಿಲಕ್ಷಣಂ ಧರ್ಮಂ ಮುನಿರ್ಮಾರಾಯಣೋಬ್ರವೀತ್" ಎಂದು ಧರ್ಮಶಬ್ದ ಪ್ರಯೋಗದಿಂದ ಪ್ರವೃತ್ತಿಯೇ.

ಮುಂದೆ ಇರುವ ಭೇದ ಶಬ್ದವು ಎಲ್ಲಾ ಪದಗಳಾದ ಸ್ವರೂಪಸ್ಥಿತಿ ಪ್ರವೃತ್ತಿ ಗಳಿಗೂ ಅನ್ವಯಿಸಿ, ಸ್ವರೂಪಭೇದಗಳೂ ಎಂದೂ, ಸ್ಥಿತಿಭೇದಗಳೂ ಎಂದೂ, ಪ್ರವೃತ್ತಿಭೇದಗಳೂ ಎಂದೂ, ತಿಟ್ಟುಕೊಳ್ಳಬೇಕೆಂದೂ, ಇವುಗಳೆಲ್ಲಾ ಈ ತ್ರಿವಿಧಚೇತನ ತ್ರಿವಿಧಚೇತನಗಳಿಗೂ ಬೇರೆ ಬೇರೆಯಾಗಿವೆ ಎಂದೂ, ಮುಂದಿನ ಎರಡುವಾಕ್ಯಗಳಿಂದ ಉಪದೇಶಿಸುತ್ತಾರೆ.

ಇವ್ಯೆಯೆಲ್ಲಾವ್, ವಸ್ತುಕ್ಕಳ್ ಕೋರುವ್ ಪ್ರಮಾಣ ಪ್ರತಿನಿಯತ ಮಾಯಿರುಕ್ಕುವ್. ಇಪ್ರಮಾಣಙ್ಗಳ್ ವಸ್ತುಕ್ಕಳೈಕ್ಕಾಟ್ಟುವ್ ಪೋದವ್ವೋ ವಸ್ತುಕ್ಕಳಿನ್ ಸ್ವರೂಪತ್ತೈಯುವ್, ಸ್ವರೂಪನಿರೂಪಕ ಧರ್ಮಙ್ಗಳೈಯುವ್, ನಿರೂಪಿತಸ್ವರೂಪ ವಿಶೇಷಣಙ್ಗಳೈಯುವ್, ವ್ಯಾಪಾರಙ್ಗಳೈಯುವ್, ಕಾಟ್ಟುವ್.

ಅದಿಲ್ ಸ್ವರೂಪತ್ತೈ ಸ್ವರೂಪನಿರೂಪಕ ಧರ್ಮಙ್ಗಳಾಲೇ ವಿಶಿಷ್ಟ ಮಾಗವೇಕಾಟ್ಟುವ್. ಅನ್ದಸ್ವರೂಪತ್ತೈ ಜೊಲ್ಲುವ್ ಪೋದು

ಇವ್ಯೆ ಎಲ್ಲಾವ್:— ಈ ಮೇಲೆ ಹೇಳದ ಸ್ವರೂಪಸ್ಥಿತಿ ಪ್ರವೃತ್ತಿಗಳೆಲ್ಲವೂ, **ವಸ್ತುಕ್ಕಳ್ ಕೋರುವ್** - ಪ್ರತಿಯೊಂದು ವಸ್ತುವಿಗೂ, **ಪ್ರಮಾಣ ಪ್ರತಿನಿಯತಮಾಯಿರುಕ್ಕುವ್** - ಪ್ರತ್ಯಕ್ಷ, ಅನುಮಾನ, ಶಬ್ದಪ್ರಮಾಣಗಳಿಂದ ನಿಷ್ಕರ್ಷೆಯನ್ನು ಹೊಂದಿದವುಗಳಾಗಿ, ಸಿದ್ಧಿಸುವವು, ಎಂದರೆ **ಈ** ಪ್ರಮಾಣಗಳಿಂದ **ಈ** ತ್ರಿವಿಧ ಚೇತನಾಚೇತನಗಳ ಮತ್ತು ಅವುಗಳನ್ನು ಸ್ವಾಧೀನಪಡಿಸಿಕೊಂಡಿರುವ ಸರ್ವೇಶ್ವರನ, ಸ್ವರೂಪ ಸ್ಥಿತಿ ಪ್ರವೃತ್ತಿಗಳೆಲ್ಲಾ ಪರಸ್ಪರ ಭಿನ್ನವಾದವೆಂಬುವಾ ವ್ಯಕ್ತಪಡುತ್ತದೆಂಬ ತಾತ್ಪರ್ಯವು. **ಈ** ಅಭಿಪ್ರಾಯವನ್ನೇ ಮುಂದಿನವಾಕ್ಯದಿಂದ ವಿಶದೀಕರಿಸುತ್ತಾರೆ.

ಇಪ್ರಮಾಣಙ್ಗಳ್ ವಸ್ತುಕ್ಕಳೈಕ್ಕಾಟ್ಟುವ್ ಪೋದು - ಈ ಪ್ರತ್ಯಕ್ಷಾದಿ ಪ್ರಮಾಣಗಳು ವಸ್ತುಗಳನ್ನು ತೋರಿಸುವಾಗ, ಆ ವಸ್ತುಗಳ ಸ್ವರೂಪವನ್ನೂ ಅವುಗಳ ಸ್ವರೂಪನಿರೂಪಕ ಧರ್ಮಗಳನ್ನೂ, ನಿರೂಪಿತಸ್ವರೂಪ ವಿಶೇಷಣಗಳನ್ನೂ, ಆ ವಸ್ತುಗಳ ವ್ಯಾಪಾರಗಳನ್ನೂ, **ಕಾಟ್ಟುವ್** ತೋರಿಸುವವು. **ಈ** ವಾಕ್ಯದಲ್ಲಿ ಸ್ವರೂಪ, ವ್ಯಾಪಾರಗಳು ಹೇಳಲ್ಪಟ್ಟವು, ಸ್ಥಿತಿಯು ಹೇಳಲ್ಪಡಲಿಲ್ಲವು. ಏಕೆ ಹೇಳಲ್ಪಡಲಿಲ್ಲವೆಂದರೆ:— ಸ್ಥಿತಿಯಿಲ್ಲದೆ ಸ್ವರೂಪಾದಿಗಳು ತೋರುವದು ಅಶಕ್ಯವಾದುದರಿಂದ ಇವುಗಳೊಂದಿಗೆ ಸ್ಥಿತಿಯೂ ಹೇಳಲ್ಪಟ್ಟಿತೆಂದು ಭಾವಿಸತಕ್ಕದ್ದು. ಗೋವು ಪ್ರತ್ಯಕ್ಷದಲ್ಲಿ ತೋರುವಾಗ, ಅದರ ಸ್ವರೂಪವನ್ನು ನಿರ್ಧರಿಸುವ ಧರ್ಮವಾದ ಸಾಸ್ನಾದಿಮತ್ವವೂ (ಕುತ್ತಿಗೆ ಕೆಳಗಿರುವ ಜೋಲಾಡುವ ಚರ್ಮವನ್ನು ಹೊಂದಿರೋಣವೂ) ಅದರೊಂದಿಗೆ ಇತರ ನಿರೂಪಿತ ಸ್ವರೂಪ ವಿಶೇಷಣಗಳಾದ ಎರಡು ಕೊಂಬುಗಳನ್ನೂ, ಸೀಳದ ಗೊರಸುಗಳನ್ನೂ ಹೊಂದಿರೋಣವೂ, ಅದರ ವ್ಯಾಪಾರಗಳಾದ ಹುಲ್ಲನ್ನು ಮೇಯುವುದು, ನೆಲಕುಹಾಕುವದು ಮೊದಲಾದವುಗಳೆಲ್ಲಾ ತೋರಿಬರುತ್ತವೆ ಎಂಬ ತಾತ್ಪರ್ಯವು. **ಅದಿಲ್**- **ಈ** ಮೇಲೆ ಹೇಳಿದ ವಿಷಯದಲ್ಲಿ, **ಸ್ವರೂಪತ್ತೈ** ಎಂದರೆ ಧರ್ಮಿಯನ್ನು, **ಸ್ವರೂಪ ನಿರೂಪಕ ಧರ್ಮಙ್ಗಳಾಲೇ** — ಸ್ವರೂಪವನ್ನು ನಿರ್ಧರಿಸುವ ಧರ್ಮ

ಅವ್ಯೋಧರ್ಮಜ್ಞಳೈ ಯಿಟ್ಟಲ್ಲದು ಶೂಲ್ಲವೊಣ್ಣಾದು. ಅವತ್ತೈ

ಗಳೊಂದಿಗೆ, **ವಿಶಿಷ್ಟಮಾಗವೇಕಾಟ್ಟುವಂ** - ಸೇರಿಸುದಾಗಿಯೇ ತೋರಿಸುವುದು ಎಂದರೆ ಧರ್ಮಿಸ ರೂಪವನ್ನು ಅವರ ಸ್ವರೂಪವನ್ನು ನಿರ್ಧರಿಸುವ ಧರ್ಮಗಳೊಂದಿಗೇನೇ ಪ್ರಮಾಣವು ತೋರಿಸುತ್ತದೆ ಎಂಬ ಭಾವವು. ಶಾಬ್ದಪ್ರಮಾಣವೂ ಕೂಡ ಜಾತಿಗುಣ ಕ್ರಿಯಾರೂಪ ಧರ್ಮಗಳಿಂದ ಯುಕ್ತವಾದುದನ್ನೇ ಬೋಧಿಸುತ್ತದೆ; ಶಬ್ದಗಳಿಗೆ ಶಕ್ತಿಗ್ರಹಣವೇ ವಿಶಿಷ್ಟಾರ್ಥಯುಕ್ತವಾದುದರಿಂದ ಶಾಂಕರಾದಿಗಳ ನಿರ್ಗುಣವಾದವು ಅಸಮಂಜಸವಾದುದೆಂದು ಇದರಿಂದಲೇ ತೋರಿಬರುತ್ತದೆ. ಜೀವಾದಿ ವಾಚಕಗಳಾದ ಮಕಾರಾದಿಗಳು ಸ್ವರೂಪಮಾತ್ರ ಪರವೆಂದು ಹೇಳಿದ ಶಾಂಕರವಾದವು ಬಹು ಪ್ರಮಾಣ ವಿರುದ್ಧವೆಂದು ಮುಂದೆ ಮೂಲಮಂತ್ರಾಧಿಕಾರದಲ್ಲಿ ಉಪಪಾದಿಸಿರುತ್ತಾರೆ. **ಈ** ಅಭಿಪ್ರಾಯವನ್ನೇ ಸ್ಪಷ್ಟವಾಗಿ ಮುಂದಿನವಾಕ್ಯದಿಂದ ಉಪದೇಶಿಸುತ್ತಾರೆ. **ಅನ್ವಸ್ವರೂಪತ್ತೈ ಜ್ಞೊಲ್ಲುವಂ ಪೋದು** - ಅಂತಹ ವಸ್ತುಸ್ವರೂಪವನ್ನು ಹೇಳುವಾಗ, **ಅವ್ಯೋಧರ್ಮಜ್ಞಳೈಯಿಟ್ಟಲ್ಲದು** - ಅಂತಹ ಸ್ವರೂಪವನ್ನು ನಿರ್ಧರಿಸುವ ಧರ್ಮಗಳ ಗ್ರಹಣವಿಲ್ಲದೆ, **ಶೂಲ್ಲವೊಣ್ಣಾದು** - ಹೇಳಲಾಗುವದಿಲ್ಲವು. ಶಾಸ್ತ್ರಾದಿಪ್ರಮಾಣಗಳು ಸ್ವರೂಪವಸ್ತುವನ್ನು ಬೋಧಿಸುವಾಗ, ಆ ವಸ್ತುವಿನ ಸ್ವರೂಪ ನಿರೂಪಕ ಧರ್ಮಗಳ ಮೂಲಕವಾಗಿಯೇ ಬೋಧಿಸಲು ಸಾಧ್ಯವೇ ವಿನಾ ಅನ್ಯಥಾ ಸಾಧ್ಯವಿಲ್ಲವು. **ಅವತ್ತೈಕಳಿತ್ತು** - ಅಂತಹ ಸ್ವರೂಪ ನಿರೂಪಕ ಧರ್ಮಗಳಿಲ್ಲದೇನೇ, **ಪಾರ್ಕ್ಕಲ್** - ವಸ್ತುಸ್ವರೂಪಗ್ರಹಣವಾಡುವದು, **ಶಶವಿಷಾಣತುಲ್ಯಮಾಮ್** ಮೊಲದಕೊಂಬಿಗೆ ಸಮಾನವಾದುದಾಗುತ್ತದೆ. ಮೊಲಕ್ಕೆ ಕೊಂಬಿಲ್ಲವು. ಅಂತಹ ವಸ್ತುವೇ ಇಲ್ಲವು. ಇತಹ ಸಂದರ್ಭದಲ್ಲೀಗ ನಿರ್ಗುಣವಾದವು ಸಫಲವಾದಿತೇ ವಿನಾ, ವಸ್ತುವೆಂಬುವದು ಇದ್ದುದಾದರೆ, ಅದರ ಸ್ವರೂಪನಿರೂಪಕ ಧರ್ಮಗಳನ್ನು ಬಿಟ್ಟು ಅದರ ಗ್ರಹಣವು ಅಸಾಧ್ಯವು. ಆದುದರಿಂದ ಶ್ರೀಮಚ್ಛಂಕರಾಚಾರ್ಯರ ನಿರ್ಗುಣವಾದವು ಸರ್ವಶಾಸ್ತ್ರವಿರುದ್ಧವಾದುದು. ಆದರೆ ಶಾಸ್ತ್ರಗಳಲ್ಲಿ **ನಿರ್ಗುಣ** ನು ಪರಬ್ರಹ್ಮವು ಎಂದು ಹೇಳುತ್ತವೆಯಲ್ಲಾ ಎಂದರೆ, ನಿರ್ಗುಣಶಬ್ದಕ್ಕೆ ಹೇಯಗುಣರಾಹಿತ್ಯವೆಂಬರ್ಥವನ್ನು ಹೇಳತಕ್ಕದ್ದೆಂಬುವದು ಎಲ್ಲಾ ಮಹರ್ಷಿಗಳ ಅಭಿಪ್ರಾಯವು. ಪರಬ್ರಹ್ಮನು ಸಗುಣನು ಎಂದರೆ ಕಲ್ಯಾಣಗುಣಾಕರನೆಂದೂ, ನಿರ್ಗುಣನೆಂದರೆ ಹೇಯಪ್ರತ್ಯನೀಕನೆಂದೂ, ಹೀಗೆ ಉಭಯ ಲಿಙ್ಗಯುಕ್ತನೆಂದು, ಶ್ರೀ ಬಾದರಾಯಣರು **'ನಸ್ಥಾನತೋ ಪಿಪರಸ್ಯೋಭಯ ಲಿಙ್ಗಂ ಸರ್ವತ್ರಹಿ''** (ಬ್ರ. ಶಾ. ೧೧) ಎಂಬ ಸೂತ್ರದಲ್ಲಿ ಹೇಳಿರುತ್ತಾರೆ. ಆ ಅಭಿಪ್ರಾಯವನ್ನೇ ಇವರ ತಂದೆಗಳಾದ ಶ್ರೀ ಪರಾಶರರು ವಿಷ್ಣುಪುರಾಣದಲ್ಲಿ (೬. ೫. ೪೫) **ಶೇಜೋಬಲೈಶ್ವರ್ಯ ಮಹಾವಬೋಧ ಸುವೀರ್ಯತಕ್ತಾ,**

ಕಳಿತ್ತು ಪಾರ್ಶ್ವಲ್ ಶಶವಿಷಾಣ ತುಲ್ಯಮೂವ್.

ದಿ ಗುಣೈಕರಾಶಿಃ । ಪರಃಪರಾಣಾಂ ಸಕಲಾನಯತ್ರ ಕ್ಲೇಶಾದಯಸ್ಸನ್ತಿ ಪರಾವರೇಶೇ ॥ ಎಂಬ ಶ್ಲೋಕದಲ್ಲಿ ಉಪಪಾದಿಸಿರುತ್ತಾರೆ. ಆದುದರಿಂದ **ನಿರ್ಗುಣ** ವೆಂದರೆ ನಮ್ಮ **ಈ** ಲೀಲಾವಿಭೂತಿಯಲ್ಲಿ ತೋರುವ ಪ್ರಕೃತಿಯ ಗುಣಗಳಿಂದ ರಹಿತನಾದವನೆಂಬರ್ಥವು. ಇದನ್ನೇ ಶ್ರೀ ಪರಾಶರರು ಪ್ರಥಮಾಂಶದ ಚತುರ್ದಶೋಧ್ಯಾಯದ (೩-೮-೪೨) **"ಶುದ್ಧಸ್ಸಂಲಕ್ಷ್ಯತೇ ಭ್ರಾಂತ್ಯಾ ಗುಣವಾನಿವಯೋಽಗುಣಃ"** ಎಂದು ಪ್ರಾರಂಭಿಸಿ ಹೇಳಿರುತ್ತಾರೆ. ಇಲ್ಲಿ **ಶಶವಿಷಾಣತುಲ್ಯಮೂವ್** ಎಂದರೆ ಮೊಲದ ಕೊಂಬನ್ನು ನೋಡುವದು ಹೇಗೆ ಅಸಾಧ್ಯವೋ, ಹಾಗೆ ಸ್ವರೂಪ ನಿರೂಪಕಧರ್ಮಗಳಿಲ್ಲದ ವಸ್ತುವನ್ನು ಸಾಕ್ಷಾತ್ಕರಿಸುವದು ಅಸಾಧ್ಯವೆಂಬ ಭಾವವು. ಆದರೆ **ಶಶವಿಷಾಣ, ಗಗನಕುಸುಮ** (ಆಕಾಶದಲ್ಲಿರುವ ಕಮಲಪುಷ್ಪ) ಇತ್ಯಾದಿ ಶಬ್ದಗಳು ನಮ್ಮ ಸಿದ್ಧಾಂತಕ್ಕೆ ವಿರೋಧವಾಗಿರುವಾಗ ಅಂತಹ ಶಬ್ದಗಳ ಪ್ರಯೋಗತಾನೇ ಹೇಗೆ ಎಂದರೆ, ಸಮಸ್ತಪ್ರಮಾಣಗಳೂ, ವಸ್ತುವನ್ನು ಧರ್ಮಗಳ ಅಥವಾ ವಿಶೇಷಣಗಳ ಮೂಲಕವಾಗಿಯೇ ಬೋಧಿಸುತ್ತವೆ ವಿನಾ ನಿರ್ವಿಶೇಷವಾದವೆಂದರೆ ನಿರ್ಗುಣವಾದ ವಸ್ತುವನ್ನು ಬೋಧಿಸಲಾರವು. ಆಗ ಶಾಸ್ತ್ರವು ವ್ಯರ್ಥವಾದುದಾಗುತ್ತದೆ. ಏಕೆಂದರೆ ಪರಮಾತ್ಮನನ್ನು ಅದು ಬೋಧಿಸಲಾರದು. ಹಾಗೆ ನಿರ್ಗುಣವಾಗಿದ್ದರೂ ಬೋಧಿಸುತ್ತದೆ ಎಂದರೆ ಹಾಗೆ ಬೋಧಿಸಲ್ಪಟ್ಟ ವಸ್ತುವು ಶಶವಿಷಾಣ, ಗಗನಕುಸುಮಕ್ಕೆ ಸಮಾನವಾದುದೆಂದು ಹೇಳಲುಪಯುಕ್ತವಾದ ಪ್ರಯೋಗಗಳೆಂದು ಭಾವಿಸತಕ್ಕದ್ದು. ಆದರೆ ವಿಶೇಷಣವಿಲ್ಲದೆ ಶೌಕ್ಲ್ಯ, ಬಿಳುಪು ಎಂಬ ಪ್ರಯೋಗ ಉಂಟಲ್ಲಾ ಎಂದರೆ, ಪಟಮುಂತಾದರೊಂದಿಗೆ ಎಂದರೆ ಬಟ್ಟೆ ಮುಂತಾದೆಡೆ ಸೇರಿದ ಬಿಳುಪು ಬೋಧಿತವಾಗುವದರಿಂದ ಸ್ವರೂಪ ನಿರೂಪಕ ಧರ್ಮಗಳ ಬೋಧನಿಲ್ಲದೆ ವಸ್ತುಪ್ರತೀತಿ ಸಾಧ್ಯವಿಲ್ಲವು. ಆದುದರಿಂದ ಶಾಂಕರ ನಿರ್ಗುಣಬ್ರಹ್ಮವಾದವು ಶಾಸ್ತ್ರಸಮ್ಮತವಾದುದಲ್ಲವು.

ಆದರೆ **ಈ** ಮೇಲಿನ ಉಪದೇಶದ ಉದ್ದೇಶ್ಯವೇನೆಂಬುವದನ್ನು ತಿಳಿಯುತ್ತಾರೆ. ಜೀವಾತ್ಮ, ಅಚೇತನ, ಪರಮಾತ್ಮ, **ಈ** ತತ್ತ್ವತ್ರಯಗಳ ಸ್ವರೂಪ ತಿಳಿಯಬೇಕಾದರೆ, ಆ ತತ್ತ್ವತ್ರಯಗಳ ಸ್ವರೂಪ ನಿರೂಪಕ ಧರ್ಮಗಳ ಮೂಲಕವಾಗಿಯೇ ಯಾದುದರಿಂದ, ಅಂತಹ ಸ್ವರೂಪ ನಿರೂಪಕ ಧರ್ಮಗಳ ಉಪದೇಶಕ್ಕಾಗಿ ಹೇಳಿದ ಮಾತಾಗಿರುತ್ತದೆ.

ಜೀವಸ್ವರೂಪ ಕಥನಂ

ಆಕ್ಕೈಯಾಲ್ ಜೀವಸ್ವರೂಪತ್ತೈ ಜ್ಞಾನತ್ವ ಮಾನನ್ದತ್ವ ಮಮಲ ತ್ವ ಮಣುತ್ವ ಮಿತ್ಯಾದಿಗಳಾನ ನಿರೂಪಕಧರ್ಮಙ್ಗಳೈಯಿಟ್ಟು ನಿರೂ ಪಿತ್ತು, ಜ್ಞಾನಮಾನಂದಮಮಲ ಮಣುವೆನ್ರು, ಇವ್ವುಮ್ಮಙ್ಗಳಾ ಲೇ ಶೊಲ್ಲಕ್ಕಡವದು.

ಜೀವಸ್ವರೂಪ ಕಥನವು

ಆಕ್ಕೈಯಾಲ್:— ಆದುವರಿಂದ ಎಂದರೆ ಸ್ವರೂಪವನ್ನು ನಿರೂಪಿಸುವ ಧರ್ಮಗಳ ಮೂಲಕವಾಗಿಯೇ ವಸ್ತುಸ್ವರೂಪವನ್ನು ನಿರ್ದೇಶಿಸಬೇಕಾಗಿರುವದ ರಿಂದ, **ಜೀವಸ್ವರೂಪತ್ತೈ** - ಜೀವಾತ್ಮನ ಸ್ವರೂಪವನ್ನು, **ಜ್ಞಾನತ್ವ**, ಆನ ನ್ದತ್ವ, **ಅಮಲತ್ವ** - ಪರಿಶುದ್ಧವಾಗಿರುವಿಕೆ, **ಅಣುತ್ವ** - ಅಣುವಾಗಿರುವಿಕೆ, ಇವೇ ಮೊದಲಾದ, **ನಿರೂಪಕಧರ್ಮಙ್ಗಳೈಯಿಟ್ಟು** - ಸ್ವ ರೂ ಪ ವ ನ್ನು ಬೋಧಿಸುವ ಧರ್ಮಗಳಮೂಲಕವಾಗಿಯೇ, **ನಿರೂಪಿತ್ತು** - ಉ ಪ ದೇ ಶಿ ಸಿ, **ಜ್ಞಾನಮಾನಂದ ಮಮಲಮಣುವೆನ್ರು** - ಜೀವನು ಜ್ಞಾನಸ್ವರೂಪನು, ಆನಂದರೂಪನು, ಅಮಲನು ಅಣುವು ಎಂದು, **ಇವ್ವುಮ್ಮಙ್ಗಳಾಲೆ** - **ಈ** ರೀತಿ ಯಲ್ಲಿ, ಜೀವನ ಸ್ವರೂಪವು, **ಶೊಲ್ಲಕ್ಕಡವದು** - ಹೇಳಲ್ಪಡುವದು, ವ್ಯವಹರಿ ಸಲ್ಪಡುವದು. **ಈ** ವಾಕ್ಯದಲ್ಲಿ **ಇತ್ಯಾದಿಗಳಾನ** ಎಂಬುವದರಿಂದ **ಪ್ರತ್ಯಕ್ಷವು** ಎಂದರೆ ತನಗೆ ತಾನೇ ತೋರುವದು ಮೊದಲಾದವು ಹೇಳಲ್ಪಟ್ಟವು. ಜೀವಸ್ವರೂಪವನ್ನು ಜ್ಞಾನತ್ವ, ಆನನ ತ್ವ, ಅಮಲತ್ವ' ಅಣುತ್ವ ಮೊದಲಾದ ಪದಗಳಿಂದ ನಿರ್ದೇಶಿಸಿರುವದರಿಂದ ಜೀವನು ಜ್ಞಾನಾನಂದಾ ಮಲಗುಣಗಳುಳ್ಳ ವನು ಎಂದು ಕೂಡಾ ಹೇಳಿದಂತಾಯಿತು. ಚಿತನ ಸ್ವರೂಪವು ಅಣುಎಂಬುವ ದರಿಂದ, ಚಿತನು ಅಣುಪರಿಮಾಣ ಉಳ್ಳವನೆಂದೂ ಹೇಳಿದಂತಾಯಿತು. ಆದರೆ ಜ್ಞಾನಮುಳ್ಳವಾದುದರಿಂದ ವಿಷಯಯುಕ್ತವಾದುದನ್ನು ಜ್ಞಾನಾನಂದ ಶಬ್ದಗ ಳಿಂದ ನಿರ್ದೇಶಿಸಿರುವದೂ ಏಕೆಂದರೆ, ಈ ಜ್ಞಾನಾನಂದಗಳು ಧರ್ಮಿಸ್ವರೂಪವು ಎಂಬ ಭಾವವು. ಸೂರ್ಯನು ತೇಜಸ್ವರೂಪನಾಗಿಯೂ ತೇಜೋರೂಪಗುಣವು ಳ್ಳವನಾಗಿಯೂ ಹೇಗೆ ಇದ್ದಾನೋ ಹಾಗೆ ಎಂಬ ಭಾವವು. ಆದುದರಿಂದಲೇ **"ವಿಜ್ಞಾನಂಯಜ್ಞಂತನುತೇ"** ಜ್ಞಾನಸ್ವರೂಪನೂ ಜ್ಞಾನಗುಣಕನೂ ಆದ ಆತ್ಮನು ಯಜ್ಞವನ್ನು ನಡೆಸುತ್ತಾನೆ" ಎಂದು ಶ್ರುತಿಯು ಹೇಳುತ್ತದೆ. **"ಏಷೋ ಣುಃ ಆತ್ಮಾ"** "ಈ ಜೀವಸ್ವರೂಪವಾಗಿ ಅಣುಪರಿಮಾಣವುಳ್ಳ ಆತ್ಮ ನು ಹೇಯಗುಣರಹಿತನು." ಎಂದಲ್ಲಿ ಜೀವನನ್ನು ಅಣುವೆಂದು ಹೇಳಿರುತ್ತದೆ. ಇಂತಹ ಜೀವನಿಗೆ ಜ್ಞಾನವಿಷಯವುಳ್ಳವನಾದುದರಿಂದ ಉಳ್ಳ ಎಂದರ್ಥಕೊಡುವ **ಮಯಟ್**

ಜೀವಾತ್ಮನಃ ಶೇಷತ್ವಂ

ಇಜ್ಜೀವತತ್ವಂ ಸರ್ವೇಶ್ವರನುಕ್ಕು ಶೇಷವಾಯೇ ಇರುಕ್ಕುಮೆನ್ರುಮ್, ಅವನುಕ್ಕೇ ನಿರುಪಾಧಿಕ ಶೇಷಮೆನ್ರುಮ್, ಅಯೋಗಾನ್ಯಯೋಗ ವ್ಯವಚ್ಛೇದಜ್ಞಾಲೇ ಪ್ರಥಮಪದತ್ತಿಲ್ ತೋತ್ತಿನ ವಿಶೇಷತ್ವಮ್ ಸಂಬಂಧರೂಪವಾಕ್ಕೈಯಾಲೇ ಸಂಬಂಧಿಸ್ವರೂಪಂ

ಪ್ರತ್ಯಯದಿಂದಸೇರಿಸಿ **"ಜ್ಞಾನಾನಂದಮಯಸ್ತ್ವಾತ್ಮಾ"** ಎಂಬಪ್ರಯೋಗವೂ ಉಂಟು.

ಹೀಗೆ ಜೀವನಿಗೆ ಸ್ವರೂಪ ನಿರೂಪಕ ಧರ್ಮಗಳು (೧) ಜ್ಞಾನತ್ವ (೨) ಆನಂದತ್ವ (೩) ವಿಮಲತ್ವ (೪)ಅಣುತ್ವ ಮೊದಲಾದವುಗಳೆಂದು ತಿಳಿಸಿ, ಮುಂದೆ ಜೀವಾತ್ಮನ **ಶೇಷತ್ವವೇನು** ಸ್ವರೂಪ ನಿರೂಪಕಧರ್ಮವೇ ಅಥವಾ ನಿರೂಪಿತಸ್ವರೂಪ ವಿಶೇಷಣವೇ ಎಂದು ಚರ್ಚಿಸುವವರಾಗಿ, ಶೇಷತ್ವವನ್ನು ಎರಡು ವಿಧವಾಗಿಯೂ ಭಾವಿಸಬಹುದೆಂದುಹಪಾದಿಸಿ, ತಮ್ಮ ಅಭಿಪ್ರಾಯದಲ್ಲಿ, ಅದು ನಿರೂಪಿತ ಸ್ವರೂಪ ವಿಶೇಷಣವೆಂದು ತಿಳಿಸುತ್ತಾರೆ.

ಜೀವಾತ್ಮನ ಶೇಷಭಾವವು.

ಇಜ್ಜೀವತತ್ವಂ- ಈ ಜೀವಾತ್ಮನು, **ಸರ್ವೇಶ್ವರನುಕ್ಕು ಶೇಷವಾಯೇ ಇರುಕ್ಕುಮೆನ್ರುಂ** - ಸರ್ವೇಶ್ವರನಿಗೆ ಶೇಷರೂಪನಾಗಿಯೇ ಇರುತ್ತಾನೆಂಬ, ಅಯೋಗವ್ಯವಚ್ಛೇದದಿಂದಲೂ, **ಅವನುಕ್ಕೇ** - ಆ ಸರ್ವೇಶ್ವರನಿಗೇನೇ, **ನಿರುಪಾಧಿಕ ಶೇಷಮೆನ್ರುಮ್** - ನಿರುಪಾಧಿಕ ಶೇಷಭೂತನೆಂಬ, ಅನ್ಯಯೋಗವ್ಯವಚ್ಛೇದದಿಂದಲೂ, **ಪ್ರಥಮಪದತ್ತಿಲ್** - ಮೂಲಮಂತ್ರದ ಮೊದಲನೇಪದವಾದ **ಓಂ** ಎಂಬ ಪ್ರಣವದಲ್ಲಿ, **ತೋತ್ತಿನವಿಶೇಷತ್ವಂ** - ತೋರಿಬರುವ **ಈ** ಶೇಷಭಾವವು, **ಸಂಬಂಧರೂಪವಾಕ್ಕೈಯಾಲೇ** - ಸರ್ವೇಶ್ವರನಿಗೂ ಜೀವಾತ್ಮನಿಗೂ ಇರುವ ಸಂಬಂಧವನ್ನು ಬೋಧಿಸುತ್ತದೆಯಾದುದರಿಂದ, **ಸಂಬಂಧಿಸ್ವರೂಪಂ ನಿರೂಪಿತವಾಗಾನಲ್ಲದು** - ಹಾಗೆ ಶೇಷಭೂತನಾದ ಜೀವಾತ್ಮನ ಸ್ವರೂಪವು ನಿರ್ದೇಶಿಸಲ್ಪಟ್ಟ ಹೊರತು, ಎಂದರೆ ತಿಳಿದಹೊರತು, **ಅರಿಯವೊಣ್ಣಾಮೈಯಾಲೇ** - ತಿಳಿಯಲಾರದುದರಿಂದ, **ಜೀವನಕ್ಕು ಇದು-** ಜೀವಾತ್ಮನಿಗೆ **ಈ** ಶೇಷತ್ವವು, **ನಿರೂಪಿತಸ್ವರೂಪ ವಿಶೇಷಣಮೆನ್ನಲಾಮ್** - ನಿರೂಪಿತಸ್ವರೂಪ ವಿಶೇಷಣವೆಂದು ಹೇಳಬಹುದು. ಈ ವಾಕ್ಯದಮೂಲಕ, ಜೀವಾತ್ಮನ ಶೇಷಭಾವವು ಎಲ್ಲಿ ತೋರಿಬರುತ್ತದೆಂಬುವದನ್ನು ಉಪಪಾದಿಸುತ್ತಾರೆ. ಮೂಲಮಂತ್ರದ ಪ್ರಥಮಪದವಾದ **ಓಂ** ಎಂಬಲ್ಲಿ ತೋರಿಬರುತ್ತದೆ.

ನಿರೂಪಿತನೂನಾಲಲ್ಲದು ಅರಿಯವೊಣ್ಣಾನ್ಮೈಯಾಲೇ ಜೀವನುಕ್ಕು ಇದು ನಿರೂಪಿತ ಸ್ವರೂಪ ವಿಶೇಷಣಮೆನ್ನಲಾಮ್.

ಅಣುತ್ವೇಸತಿ ಚೇತನತ್ವಂಪೋಲೆ, ಸ್ವತಶ್ಶೇಷತ್ವೇಸತಿ ಚೇತನತ್ವಮು

ಹೇಗೆಂದರೆ:— **ಓಂ** ಎಂಬ ಪದವು ಅ, ಉ, ಮಕಾರ ಯುಕ್ತವಾದುದು. **ಮಕಾರವಾಚ್ಯನು** ಜೀವಾತ್ಮನು; ಅಕಾರವಾಚ್ಯನು ಜಗತ್ಕಾರಣನಾದ ಶ್ರಿಯಃಪತಿಯಾದ ನಾರಾಯಣನು; ಇಲ್ಲಿ ಚತುರ್ಥೀ ವಿಭಕ್ತಿಯು ಲುಪ್ತವಾಗಿರುತ್ತದೆ. ಆದುದರಿಂದ **ಆಯ** ಎಂದು ಇಟ್ಟುಕೊಳ್ಳಬೇಕು. ಉಕಾರವು ಅವಧಾರಣವು, **ಏವ** ಎಂಬರ್ಥವು. ಆದುದರಿಂದ ಮಕಾರವಾಚ್ಯನಾದ ಜೀವಾತ್ಮನು, **ಆಯೈವ** ಲಕ್ಷ್ಮೀನಾರಾಯಣನಿಗಾಗಿಯೇ ಎಂದರೆ ಲಕ್ಷ್ಮೀನಾರಾಯಣರಿಗೇ ಶೇಷಭೂತನು ಎಂದು ಓಂ ಎಂಬುವದರ ಅರ್ಥವು; ಇತರರಾದ ಬ್ರಹ್ಮರುದ್ರಾದಿಗಳಿಗೆ ಯಾರಿಗೂ ಶೇಷಭೂತನಲ್ಲವು ಎಂಬಭಿಪ್ರಾಯ ಉಂಟಾಗುತ್ತದೆ. ಹೀಗೆ ತಾತ್ಪರ್ಯ ಉಂಟಾಗುವದಕ್ಕೆ ಅನ್ಯಯೋಗ ವ್ಯವಚ್ಛೇದವೆಂದು ಹೆಸರು. ಜೀವಾತ್ಮನು ಲಕ್ಷ್ಮೀನಾರಾಯಣರಿಗೆ ಶೇಷಭೂತನೇ ವಿನಾ ಮತ್ತಿನ್ನೇನೂ ಅಲ್ಲವೆಂದು ಅರ್ಥ ಹೇಳುವದು ಅಯೋಗವ್ಯವಚ್ಛೇದವೆನಿಸುತ್ತದೆ. ಹೀಗೆ ಅವಧಾರಣವಾದ ಏವ ಎಂಬುವದು **ವಿಶೇಷಣಕ್ಕೆ ಸಂಬಂಧಿಸಿದರೆ ಅಯೋಗವ್ಯವಚ್ಛೇದವೆಂದೂ, ವಿಶೇಷ್ಯಕ್ಕೆ ಸಂಬಂಧಿಸಿದರೆ ಅನ್ಯಯೋಗವ್ಯವಚ್ಛೇದ** ವೆಂದೂ ತಿಳಿಯುವದು. ಈ ಶಬ್ದಗಳಿಗೆ ಮುಂದೆ ನಾಲ್ಕೈದುವಾಕ್ಯಗಳನಂತರ ತಾವೇ ಅರ್ಥವನ್ನು ಅನುಗ್ರಹಿಸುತ್ತಾರೆ. ಹೀಗೆ ಜೀವಾತ್ಮನು ಸರ್ವೇಶ್ವರನಿಗೆ ಶೇಷಭೂತನು ಎಂದು ಪ್ರಮಾಣದಿಂದ ತೋರಿಬರುವದರಿಂದ, ಈ ಶೇಷತ್ವವು, ತನಗೂ ಪರಮಾತ್ಮನಿಗೂ ಇರುವ ಸಂಬಂಧವನ್ನು ತೋರಿಸುತ್ತದೆ. ಆಗ ಜೀವಾತ್ಮಸ್ವರೂಪ ತಿಳಿಯದೆ ಜೀವನಿಗೆ ಈ ಶೇಷತ್ವರೂಪ ಸಂಬಂಧವನ್ನು ಹೇಳಲಾಗುವದಿಲ್ಲವಾದುದರಿಂದ, ಈ ಶೇಷತ್ವವು ನಿರೂಪಿತ ಸ್ವರೂಪ ವಿಶೇಷಣವೆಂಬ ಭಾವವು. ಇದಿಗ ತನ್ನ ಅಭಿಪ್ರಾಯವು. ಆದರೆ ಪೂರ್ವಾಚಾರ್ಯರುಗಳಲ್ಲಿ ಕೆಲವರು ಈ ಶೇಷತ್ವವನ್ನು ಜೀವಾತ್ಮನ ಸ್ವರೂಪನಿರೂಪಕ ಧರ್ಮವನ್ನಾಗಿಯೇ ಭಾವಿಸಿದರು. ಇದಕ್ಕೆ ಕಾರಣವನ್ನು ಮುಂದಿನ ವಾಕ್ಯದಲ್ಲಿ ಉಪಪಾದಿಸುತ್ತಾರೆ. ಆದರೆ ಪೂರ್ವಾಚಾರ್ಯರುಗಳ ಅಭಿಪ್ರಾಯವಾದುದರಿಂದ ಅದನ್ನು ಸಮರ್ಥಿಸಿಕೊಂಡುತ್ತಾರೆಯೇ ವಿನಾ, ನಿರಾಕರಿಸುವದಿಲ್ಲವು.

ಅಣುತ್ವೇಸತಿ ಚೇತನತ್ವಂಪೋಲೆ - ಅಣುಭಾವವಿರುವ ಚೇತನಭಾವವೆಂದು ಜೀವನಿಗೆ ಲಕ್ಷಣವನ್ನು ಹೇಳುವಹಾಗೆ. **ಸ್ವತಶ್ಶೇಷತ್ವೇಸತಿ ಚೇತನತ್ವಮುಮ್** - ಸ್ವಾಭಾವಿಕವಾದ ಶೇಷಭಾವದಿಂದ ಕೂಡಿರುವ ಚೇತ

ಮ್ ಜೀವಲಕ್ಷಣಮಾಕ ವೈತ್ತಾ ಕೈಯಾಲೆ ಇಶ್ಶೇಷತ್ವಂ ಜೀವನುಕ್ಕು ಸ್ವರೂಪನಿರೂಪಕ ಮೆನ್ನುವುಮಾಮ್.

ನಭಾವವೆಂದು, **ಜೀವಲಕ್ಷಣಮಾಕವೈತ್ತಾ ಕೈಯಾಲೆ** ಜೀವಾತ್ಮಲಕ್ಷಣವೆಂ ದು ಇಟ್ಟುಕೊಂಡರೆ ಎಂದರೆ ಸಮರ್ಥನೆಮಾಡಿದರೆ, **ಇಶ್ಶೇಷತ್ವಮ್** - ಆಗ **ಈ** ಶೇಷತ್ವವೂ ಕೂಡ, **ಜೀವನುಕ್ಕು ಸ್ವರೂಪನಿರೂಪಕ ಮೆನ್ನುವುಮಾಮ್** ಜೀವಾತ್ಮನ ಸ್ವರೂಪವನ್ನು ನಿರ್ಧರಿಸುವ ಧರ್ಮವಾಗುತ್ತದೆ. ಒಂದು ಪದಾರ್ಥಕ್ಕೆ **ಲಕ್ಷಣ** ಹೇಳಿದರೆ, ಆ ಲಕ್ಷಣದಿಂದ ವ್ಯಕ್ತವಾಗುವ ಧರ್ಮವು ಇತರ ಯಾವ ವಸ್ತುವಿನಲ್ಲೂ ಇರಕೂಡದು. ಇನ್ನೆಲ್ಲಾದರೂ ಇದ್ದರೆ, **ಅತಿವ್ಯಾಪ್ತಿ** ಎಂಬ ದೋಷ ಉಂಟಾಗುತ್ತದೆ. ಆಗ ಅದು ಲಕ್ಷಣವೆಂದು ಹೇಳಿಕೊಳ್ಳುವದಿಲ್ಲ. **ಈಗ** ಜೀವಾತ್ಮನಷ್ಟೆಂದು ಜೀವಲಕ್ಷಣ ಹೇಳಿದರೆ, ಲಕ್ಷ್ಮಿಯೂ ಪರಮಾತ್ಮನೂ ಚೇತನರಾದುದರಿಂದ ಅತಿವ್ಯಾಪ್ತಿ ದೋಷವುಂಟಾಗುತ್ತದೆ. ಅದು ದರಿಂದ **ಅಣುತ್ವೇಸತಿ** ಎಂದು ಆ ಚೇತನಭಾವಕ್ಕೆ ಸೇರಿಸಿದರೆ, ಆಗ ಲಕ್ಷ್ಮಿಯೂ ಪರಮಾತ್ಮನೂ ಸಹ ಅಣುವಲ್ಲದೆ ವಿಭುವಾದುದರಿಂದ, ಅಣುಭಾವವಿರಲಿಕ್ಕಾಗಿ ಚೇತನತ್ವವನ್ನು ಎಂಬುದು ಜೀವಲಕ್ಷಣವಾಗುತ್ತದೆ. ಹಾಗೆಯೇ **ಸ್ವತಃಶೇಷತ್ವೇಸತಿ ಚೇತನತ್ವಂ** ಎಂದು ಹೇಳಿದರೆ ಜೀವಲಕ್ಷಣವಾಗುತ್ತದೆ. ಲಕ್ಷ್ಮೀಪರಮಾತ್ಮರಲ್ಲಿ ಆಗ ಅತಿವ್ಯಾಪ್ತಿ ಇರುವದಿಲ್ಲವು. ಲಕ್ಷ್ಮೀನಾರಾಯಣರಿಗೆ ಸ್ವಾಭಾವಿಕವಾಗಿ ಶೇಷರಾಗಿರುವಭಾವವು, **"ದಾಸಭೂತಾಸ್ಸ್ವತಸ್ಸರ್ವೇ"** ಎಂದು ಹೇಳಿರುವಹಾಗೆ, ಇರುವದರಿಂದ, ಹಾಗೆ ಜೀವಲಕ್ಷಣ ಹೇಳಬೇಕಾಗಿರುತ್ತದೆ. **ಸ್ವತಃಶೇಷತ್ವೇಸತಿ** ಎಂದು ಹೇಳದೆ, ಸುಮ್ಮನೆ **ಶೇಷತ್ವೇ ಸತಿ** ಎಂದು ಹೇಳಿದರೂ ಲಕ್ಷ್ಮೀಪರಮಾತ್ಮರಲ್ಲೂ ಅಂತಹ ಶೇಷತ್ವವು ಸಮಯಗಳಲ್ಲಿ ತೋರಿಬರುವದರಿಂದ ಅತಿವ್ಯಾಪ್ತಿ ದೋಷವುಂಟಾಗುತ್ತದೆ. ಅವತಾರಕಾಲಗಳಲ್ಲಿ ಇವರುಗಳು ಜನಕ ದಶರಥರುಗಳಿಗೂ, ಭೀಮ ವಸುದೇವರುಗಳಿಗೂ ಶೇಷಭಾವವನ್ನು ವಹಿಸಿದುದರಿಂದಲೂ, ಮತ್ತು ಪರಮಭಕ್ತರಾದ ನಾರದ ವಸಿಷ್ಠ ವಿಶ್ವಾಮಿತ್ರಾದಿ ಋಷಿಗಳಿಗೂ, ಗಜೇಂದ್ರಧ್ರುವಾದಿಗಳಿಗೂ ಭಕ್ತಪರಾಧೀನತಾರೂಪವಾದ ಶೇಷಭಾವವನ್ನು ತೋರಿಸಿದುದರಿಂದಲೂ, ಅಂತಹ ಅತಿವ್ಯಾಪ್ತಿಯನ್ನು ತಪ್ಪಿಸುವದಕ್ಕಾಗಿ **ಸ್ವತಃ** ಎಂದರೆ ಸ್ವಾಭಾವಿಕವಾದ ಎಂಬ ಪದವನ್ನು ಲಕ್ಷಣದಲ್ಲಿ ಸೇರಿಸಬೇಕಾಗಿ ಬಂತು. ಲಕ್ಷ್ಮೀನಾರಾಯಣರ ಶೇಷತ್ವವಾದರೋ ಸ್ವಾಭಾವಿಕವಾದುದಲ್ಲವು. ಉಪಾಧಿಯಿಂದುಂಟಾದುದು. ಜೀವಶೇಷತ್ವವಾದರೋ ಸ್ವಾಭಾವಿಕವಾದುದು. ಹೀಗೆ ಜೀವಲಕ್ಷಣವನ್ನು ಹೇಳಿದರೆ, ಆಗ ಶೇಷತ್ವವೂ ಕೂಡ ಸ್ವರೂಪ ನಿರೂಪಕ ಧರ್ಮವಾಗುತ್ತದೆ. ಅದರೆ ಹೀಗೆ ಲಕ್ಷಣಹೇಳಿದರೆ ಒಂದು ಅನಾನುಕೂಲತೆಯುಂಟು. ಇದೇ ಲಕ್ಷಣವು ಲಕ್ಷ್ಮೀಗೂ ಅನ್ವ

ಈಶ್ವರಲಕ್ಷಣಂ

ಇಪ್ಪಡಿವಿಭುತ್ವೇಸತಿ ಚೇತನತ್ವಮುಮ್, ಅನನ್ಯಾಧೀನತ್ವ ನಿರುಪಾಧಿಕ ಶೇಷತ್ವಾದಿಗಳುಮ್ ಈಶ್ವರಲಕ್ಷಣಜ್ಞಳ್.

ಜೀವೇಶ್ವರ ಸಾಧಾರಣ ಲಕ್ಷಣಂ

ಜೀವೇಶ್ವರರೂಪಮಾನ ಆತ್ಮವರ್ಗತ್ತುಕ್ಕೆಲ್ಲಾಮ್ ಪೊದುವಾನ ಲಕ್ಷಣ ಮ್ ಚೇತನತ್ವಮುಮ್, ಪ್ರತ್ಯಕ್ತ್ವಮುಮ್.

ಯಿಸಬಹುದು. ಏಕೆಂದರೆ, ಆಕೆಯೂ ತನ್ನಪತಿಯಾದ ಸರ್ವೇಶ್ವರನಿಗೆ **ಸ್ವತಃಶೇಷಳು.** ಹೀಗೆ ಲಕ್ಷ್ಮಿಗೂ ಜೀವನಿಗೂ ಸಹ ಒಂದೇಲಕ್ಷಣ ಹೇಳಿದುದಾದರೆ ಲಕ್ಷ್ಮಿಯೂ ಜೀವಕೋಟಿಗೆ ಸೇರಿದವಳೆಂಬ ತಪ್ಪಾದ ಅಭಿಪ್ರಾಯವು ಉಂಟಾಗಬಹುದು. ಆದರೆ **ಈ** ಲಕ್ಷಣವು ಆಕೆಯಲ್ಲಿ ಅನ್ವಯಿಸದೇ ಇರುವದಕ್ಕಾಗಿ, ಆಕೆಯು ಸರ್ವೇಶ್ವರನಿಗೆ ಪತ್ನಿಯಾಗಿ ಶೇಷಳೇವಿನಾ ಇನ್ನೆಲ್ಲಾ ವಿಷಯಗಳಲ್ಲೂ ಸ್ವಾಮಿಯ ಹಾಗೆಯೇ ಸರ್ವೇಶ್ವರಳು, ಸರ್ವನಿಯನ್ತ್ರಿಯು, ಆದುದರಿಂದ ಬಾಧಕವಿಲ್ಲವು. ಅದೂ ಅಲ್ಲದೆ ಲಕ್ಷ್ಮಿಯು ಸ್ವಸಙ್ಕಲ್ಪದಿಂದ ಶೇಷಳು, ಜೀವಾತ್ಮನು ಹಾಗಲ್ಲವು ; ಆದುದರಿಂದಲೂ ಬಾಧಕವಿಲ್ಲವು. ಹೀಗೆ ಸ್ವಲ್ಪ ಆಕ್ಷೇಪ ಬಂದೀತಾದುದರಿಂದ, ಜ್ಞಾನನಿಧಿಗಳಾದ ಸ್ವಾಮಿನಿಗನೂನ್ತದೇತಿಕರಿಗೆ ಶೇಷತ್ವವನ್ನು ನಿರೂಪಿತ ಸ್ವರೂಪವಿಶೇಷಣವೆಂದೇ ಹೇಳುವದರಲ್ಲಿ ಅಭಿಪ್ರಾಯವು. ಹೀಗೆ ಜೀವಲಕ್ಷಣಗಳನ್ನು ಹೇಳಿ, ಪರಮಾತ್ಮ ಲಕ್ಷಣಗಳನ್ನು ಮುಂದೆ ತಿಳಿಸುತ್ತಾರೆ.

ಸರ್ವೇಶ್ವರ ಲಕ್ಷಣವು.

ಇಪ್ಪಡಿ - ಹೀಗೆಯೆಂದರೆ ಜೀವನಿಗೆ ಹೇಗೆ ಲಕ್ಷಣವನ್ನು ಹೇಳಿದೆವೋ ಹಾಗೆಯೇ, **ವಿಭುತ್ವೇಸತಿ ಚೇತನತ್ವಮುಮ್** - ಸರ್ವವ್ಯಾಪಕತ್ವದೊಂದಿಗೆ ಸೇರಿದ ಚೇತನತ್ವವು, **ಅನನ್ಯಾಧೀನತ್ವ** - ಇತರರಿಗೆ ಯಾರಿಗೂ ಅಧೀನವಾಗದಿರುವ ಸ್ವಾತಂತ್ರ್ಯವುಳ್ಳ ಚೇತನತ್ವವು, **ನಿರುಪಾಧಿಕಶೇಷತ್ವಾದಿಗಳುಮ್**- ಉಪಾಧಿರಹಿತವಾದ ಶೇಷಭಾವದಿಂದ ಸೇರಿದ ಚೇತನತ್ವವೇ ಮೊದಲಾದವುಗಳು, **ಈಶ್ವರಲಕ್ಷಣಜ್ಞಳ್** - ಸರ್ವೇಶ್ವರನ ಲಕ್ಷಣಗಳು. ಈ ವಾಕ್ಯದಲ್ಲಿ (೧) ವಿಭುತ್ವೇಸತಿಚೇತನತ್ವಂ (೨) ಅನನ್ಯಾಧೀನತ್ವೇ ಸತಿಚೇತನತ್ವಂ (೩) ನಿರುಪಾಧಿಕಶೇಷತ್ವೇ ಸತಿಚೇತನತ್ವಂ. ಎಂದು ಹೀಗೆ ಮೂರುವಿಧವಾಗಿಯೂ ಈಶ್ವರ ಲಕ್ಷಣಗಳನ್ನು ಹೇಳಬಹುದು ಎಂಬ ತಾತ್ಪರ್ಯವು. ಚೇತನತ್ವವು ಅನೇಕ

ಆತ್ಮರುಗಳ ಧರ್ಮವಾದುದರಿಂದ, ನಿತ್ಯಮುಕ್ತಬದ್ಧರಲ್ಲಿ ಅತಿವ್ಯಾಪ್ತಿ ತಪ್ಪಿಸುವದಕ್ಕಾಗಿ, **ವಿಭುತ್ವೇಸತಿ** - ಸರ್ವವ್ಯಾಪಕತ್ವವಿರಲಿಕ್ಕಾಗಿ ಎಂದುಸೇರಿಸಿ ಹೇಳತಕ್ಕದ್ದಾಗಿರುತ್ತದೆ. ಏಕೆಂದರೆ, ನಿತ್ಯಮುಕ್ತಬದ್ಧರುಗಳು ಅಣುಸ್ವರೂಪವಾದುದರಿಂದ ವಿಭುತ್ವವಿಲ್ಲವು. ಆದರೆ ಲಕ್ಷ್ಮಿಗೂ ಕೂಡ ಇದೇ ಲಕ್ಷಣ ಹೇಳಬಹುದಲ್ಲಾ, ಆಗ ಲಕ್ಷ್ಮಿಯಲ್ಲಿ ಅತಿವ್ಯಾಪ್ತಿಯುಂಟಾಗುವದಿಲ್ಲವೇ ಎಂದರೆ, ಲಕ್ಷ್ಮಿಯು ಈಶ್ವರನಲ್ಲೇ ಅಂತರ್ಗತಳಾದುದರಿಂದ ವಿರೋಧವಿಲ್ಲವು. ಹಾಗೆಯೇ ಸ್ವಾತಂತ್ರ್ಯವು ಅನೇಕರಿಗಿದ್ದರೂ, ಅದು ಅನನ್ಯಾಧೀನವಾಗುವದಿಲ್ಲವು ; ಅವರ ಸ್ವಾತಂತ್ರ್ಯವೆಲ್ಲವೂ ಸರ್ವೇಶ್ವರಸ್ವಾತಂತ್ರ್ಯಕ್ಕಧೀನವಾದುವು ; ಸರ್ವೇಶ್ವರ ಸ್ವಾತಂತ್ರ್ಯಮಾತ್ರವೇ ಅನನ್ಯಾಧೀನವು, ಅನ್ಯಾಧೀನವಾದುದಲ್ಲವು. ಹಾಗೆಯೇ ಶೇಷಿಯಾಗಿರುವ ಭಾವವು ಪಿತಾ, ಗುರು, ಭಾಗವತಾದಿಗಳಲ್ಲೂ ಉಂಟು. ಅಲ್ಲೆಲ್ಲಾ ಅತಿವ್ಯಾಪ್ತಿ ನಿವಾರಣಕ್ಕಾಗಿ **ನಿರುಪಾಧಿಕ** ವೆಂಬ ಪ್ರಯೋಗವು. ಪಿತಾ, ಗುರು, ಭಾಗವತಾದಿಗಳಲ್ಲಿರುವ ಶೇಷಿತ್ವವು ಸೋಪಾಧಿಕವಾದುದು. ಆದುದರಿಂದ ಸರ್ವೇಶ್ವರನ ಶೇಷಿತ್ವವು ನಿರುಪಾಧಿಕವಾದುದು ಎಂಬ ತಾತ್ಪರ್ಯವು. ಮೂಲದಲ್ಲಿ **ಶೇಷಿತ್ವಾದಿಗಳುಂ** ಎಂದು ಆದಿಶಬ್ದವನ್ನುಪಯೋಗಿಸಿರುವದರಿಂದ, **ನಿರುಪಾಧಿಕನಿಯಂತೃತ್ವ, ಸ್ವತಸ್ಸರ್ವಜ್ಞತ್ವ, ಸರ್ವಕಾರಣತ್ವ** ಮೊದಲಾದವುಗಳು ಹೇಳಲ್ಪಟ್ಟವು.

ಜೀವೇಶ್ವರರುಗಳಿಗೆ ಸಾಧಾರಣವಾದ ಲಕ್ಷಣವು.

ಜೀವೇಶ್ವರರೂಪಮಾನ ಆತ್ಮವರ್ಗತ್ತುಕ್ಕೆಲ್ಲಾಂ - ಜೀವೇಶ್ವರರೂಪದಲ್ಲಿರುವ ಆತ್ಮಸಮುದಾಯಕ್ಕೆಲ್ಲಾ, **പൊതുവാനലക്ഷണമാം** - ಸಾಧಾರಣವಾದ ಲಕ್ಷಣವು, ಎರಡು:—(೧) ಜ್ಞಾತನತ್ವವು (೨) **പ്രത്യക്ത്വവು**. ಇಲ್ಲಿ **ಆತ್ಮವರ್ಗ** ಶಬ್ದವನ್ನುಪಯೋಗಿಸಿರುವದರಿಂದ ಜೀವಾತ್ಮಪಕ್ಷದಲ್ಲಿ ಜೀವಕೋಟಿ ಎಲ್ಲವೂ ಹೇಳಲ್ಪಟ್ಟಿತು; ಈಶ್ವರಕೋಟಿಯಲ್ಲಿ ಈಶ್ವರನೂ ಲಕ್ಷ್ಮಿಯೂ ಸಹ ಹೇಳಲ್ಪಟ್ಟರೆಂದು ಭಾವಿಸತಕ್ಕದ್ದು.

ಜ್ಞಾತನತ್ವ ವೆಂದರೇನು ? ಜ್ಞಾನಕ್ಕೆ ಆಶ್ರಯವಾಗಿರುವದು. ಈ ಧರ್ಮರೂಪವಾದ ಜ್ಞಾನವನ್ನು ಧರ್ಮಭೂತಜ್ಞಾನವೆಂದು ಕರೆಯುವರು.

പ്രത്യക്ത്വ ವೆಂದರೇನು ? **തനക്കുതാൻതോത്തുക്കൈ** - ತನಗೆ ತಾನೆಂದು ತೋರುವಿಕೆಯು. **അപ്പോതു** - ಹಾಗೆ ತನಗೆ ತಾನೆಂದು ತೋರುವ ಸಮಯದಲ್ಲಿ, **ധർമ്മഭൂതജ്ഞാന നിരപേക്ഷമാക** - ನಿರೂಪಿತಸ್ವರೂಪವಿಶೇಷಣರೂಪದಲ್ಲಿರುವ ಜ್ಞಾನಗುಣದ ಅಪೇಕ್ಷೆಯಿಲ್ಲದೇನೆ, **നാനെന്നുതോത്തുമാം** - ನಾನು ಎಂದು ತೋರುತ್ತದೆ, ತಾನು ಎಂದು ಗೊತ್ತಾಗುತ್ತದೆಂಬ

ಚೇತನತ್ವಮಾವದು? ಜ್ಞಾನಾಶ್ರಯವಾಕ್ಕೈ.
ಪ್ರತ್ಯಕ್ತ್ವವಾವದು? ತನಕ್ಕುತ್ತಾ ತೋತ್ತುಕ್ಕೈ. ಅಪ್ಪೋದು ಧರ್ಮಭೂತಜ್ಞಾನ ನಿರಪೇಕ್ಷವಾಕ ನಾನೆನ್ರು ತೊತ್ತುಮ್. ಇಪ್ಪಡಿ ಚೇತನತ್ವಾದಿಗಳ್ ಈಶ್ವರನುಕ್ಕುಮ್ ಪೊದುವಾಕ್ಕೈಯಾಲೇ ಅವನಿರ್ ಕಾಟ್ಟಿಲ್ ವ್ಯಾವೃತ್ತಿ ತೋತ್ತು ಕ್ಕೈಕ್ಕಾಕ ಜೀವಲಕ್ಷಣತ್ತಿಲ್ ಸ್ವತಶ್ಶೇಷತ್ವಾದಿಗಳ್ ಶೊಲ್ಲುಗಿರದು.

ಭಾವವು. ಈ ಪತ್ಯಕ್ತ್ವವೂಕೂಡ ಜ್ಞಾನವಲ್ಲ ಭಾವವಲ್ಲವೋ? ಆಗ ಚೇತನತ್ವವಲ್ಲೇ ಸೇರಲಿಲ್ಲವೋ ? ಎಂದರೆ, ಈ ಎರಡಕ್ಕೂ ವ್ಯತ್ಯಾಸ ಉಂಟೆಂದು ಹೇಳುತ್ತಾರೆ:— ಈ ಪತ್ಯಕ್ತವು ಧರ್ಮಭೂತಜ್ಞಾನದ ಅವಶ್ಯಕತೆ ಇಲ್ಲದೇನೇ ಉಂಟಾಗುತ್ತದೆಂದು ಉಪದೇಶಿಸಿಸುತ್ತಾರೆ. ಬಾಹ್ಯವಿಷಯಜ್ಞಾನಕ್ಕೆ ಧರ್ಮಭೂತಜ್ಞಾನವು ಆವಶ್ಯಕವು. ಧರ್ಮಭೂತಜ್ಞಾನದ್ವಾರವೇ ಆ ಬಾಹ್ಯವಿಷಯಗಳ ಜ್ಞಾನ ಉಂಟಾಗುತ್ತದೆ. ಸ್ವವಿಷಯಜ್ಞಾನಕ್ಕಾದರೋ ಧರ್ಮಭೂತಜ್ಞಾನ ಬೇಕಾಗಿಲ್ಲವು ಎಂಬರ್ಥವು. **ಘಟಮಹಂಜಾನಾಮಿ** - ಎಂಬಲ್ಲಿ 'ಘಟವನ್ನು ನಾನು ತಿಳಿಯುತ್ತೇನೆ'ಂಬರ್ಥ ಉಂಟಾಗುವದರಿಂದ, (೧) ತಿಳಿಯುವ ಬಾಹ್ಯವಸ್ತುವೂ, (೨) ತಿಳಿಯತಕ್ಕ ಜ್ಞಾನಾಶ್ರಯನಾದ ಕರ್ತೃವೂ (೩) ಧರ್ಮಭೂತಜ್ಞಾನದ್ವಾರ ತಿಳಿಯೋಣವೂ, ಈ ಮೂರೂ ಪ್ರತ್ಯೇಕವಾಗಿ ಉಂಟಾಗುತ್ತದೆ. ಆದರೆ **ನಾನು** ಎಂದು ತಿಳಿಯುವಾಗ, ತಿಳಿಯತಕ್ಕ ವಸ್ತುವೂ ತಾನೇ, ತಿಳಿಯುವವನೂ ತಾನೇಯಾಗಿ ಬೇರೆ ಇನ್ನು ಯಾವುದರಪೇಕ್ಷೆಯೂ ಬೇಕಾಗಿರುವದಿಲ್ಲವೆಂಬ ಭಾವವು. **ಇಪ್ಪಡಿ** - ಈ ಮೇಲೆಹೇಳಿದ ರೀತಿಯಲ್ಲಿ, **ಚೇತನತ್ವಾದಿಗಳ್**- ಚೇತನತ್ವ, ಪ್ರತ್ಯಕ್ತ್ವಗಳು, ಈಶ್ವರನಿಗೂ ಜೀವನಿಗೂ ಸಾಧಾರಣವಾದುದರಿಂದ, **ಅವನಿರ್ ಕಾಟ್ಟಿಲ್** - ಪರೇಶ್ವರನಿಗಿಂತಲೂ, **ವ್ಯಾವೃತ್ತಿತೋತ್ತುಗ್ಕೈಕ್ಕಾಕ** - ವ್ಯತ್ಯಾಸವನ್ನು ತೋರಿಸುವದಕ್ಕಾಗಿ, **ಜೀವಲಕ್ಷಣತ್ತಿಲ್** ಜೀವಾತ್ಮಲಕ್ಷಣವಲ್ಲಿ **ಸ್ವತಶ್ಶೇಷತ್ವಾದಿಗಳ್** - ಸ್ವತಶೇಷತ್ವಮೊದಲಾದವುಗಳನ್ನೂ ಎಂದರೆ **ಸ್ವತಶ್ಶೇಷತ್ವೇ ಸತಿಚೇತನತ್ವಂ** - ಎಂದು ಜೀವಲಕ್ಷಣವನ್ನು, **ಶೊಲ್ಲುಗಿರದು**-ಹೇಳುವದು.

ಅಯೋಗಾನ್ಯಯೋಗವ್ಯವಚ್ಛೇದಾರ್ಥ ನಿರೂಪಣಂ.

ಪ್ರಥಮಾಕ್ಷರತ್ತಿಲ್ ಚತುರ್ಥಿಯಿಲ್ ತೋತ್ತಿನ ತಾದರ್ಥ್ಯತ್ತುಕ್ಕು ಪಾಧಿಯಿಲ್ಲಾಮೈಯಾಲೇ, ಸರ್ವರಕ್ಷಕನಾದ ಶ್ರಿಯಃ ಪತಿಕ್ಕು ಜೀವಾತ್ಮಾ ನಿರುಪಾಧಿಕ ಶೇಷಮಾಯೇ ಯಿರಕ್ಕುಮೆನ್ರು, ಇಪ್ಪಡಿ ಯಾವತ್ಸ್ವರೂಪಂ ಸಂಬಂಧಂ ಶೊಲ್ಲುಗೈ ಅಯೋಗವ್ಯವಚ್ಛೇದಂ.

ಹಿಂದೆ **ಸ್ವತಶ್ಶೇಷತ್ವೇ ಸತಿಚೇತನತ್ವಂ** ಎಂದು ಜೀವಲಕ್ಷಣವನ್ನು ಹೇಳಿದರಲ್ಲಾ. ಹಾಗೆ ಹೇಳಲು ಪ್ರತಿಪದ ಪ್ರಯೋಜನವನ್ನು ಈಗ ವಿಶದವಾಗಿ ತಿಳಿಸುತ್ತಾರೆ. ಲಕ್ಷಣದ ಪ್ರತಿ ಪದಗಳ ಪ್ರಯೋಜನಕ್ಕೆ **ಪದಪ್ರಯೋಜನ**ವೆಂದು ಹೆಸರು. ಚೇತನತ್ವವು ಸಮಸ್ತ ಆತ್ಮರುಗಳ ಸಾಧಾರಣ ಧರ್ಮವು; ಅದುಪರಿಂದ ಲಕ್ಷ್ಮೀನಾರಾಯಣರೂ ಚೇತನರಾದ ಪ್ರಯುಕ್ತ ಅವರುಗಳನ್ನು ಪ್ರತ್ಯೇಕಿಸಿ ಹೇಳುವುದಕ್ಕಾಗಿ, **ಸ್ವತಶ್ಶೇಷತ್ವೇಸತಿ** ಎಂದು ಸೇರಿಸಿ ಲಕ್ಷಣ ಹೇಳಬೇಕೆಂದು **ತಿಳಿಸುತ್ತಾರೆ.**

ಮುಂದಿನ ವಾಕ್ಯಗಳಿಂದ ಹಿಂದೆ ತಾವು ಉಪಯೋಗಿಸಿದ ಅಯೋಗ ವ್ಯವಚ್ಛೇದ, ಅನ್ಯಯೋಗ ವ್ಯವಚ್ಛೇದ ಅಭಿಪ್ರಾಯಗಳು ಹೇಗೆ ಉಂಟಾಗುತ್ತದೆ ಎಂಬುವದನ್ನು ವಿಶದವಾಗಿ ತಿಳಿಸುವದಲ್ಲದೆ, ಜೀವನು ಶ್ರಿಯಃಪತಿಗೆ ನಿರುಪಾಧಿಕಶೇಷನೆಂಬುವದು ಎಲ್ಲಿ ಹೇಳಿದೆ ಎಂಬುವದನ್ನು ತಿಳಿಸುತ್ತಾರೆ.

ಅಯೋಗ ಮತ್ತು ಅನ್ಯಯೋಗ ವ್ಯವಚ್ಛೇದಾರ್ಥಗಳ ನಿರೂಪಣವು

ಪ್ರಥಮಾಕ್ಷರತ್ತಿಲ್-ಪ್ರಣವದ ಮೊದಲನೆಯ ಅಕ್ಷರವಾದ **ಅಕಾರದಲ್ಲಿ** **ಚತುರ್ಥಿಯಿಲ್ ತೋತ್ತಿನ**-ಲೋಪವನ್ನು ಹೊಂದಿರುವ ಚತುರ್ಥೀ ವಿಭಕ್ತಿಯಿಂದ ತೋರಿ ಬರುವ **ತಾದರ್ಥ್ಯತ್ತುಕ್ಕು**-ತಾದರ್ಥ್ಯಕ್ಕೆ, ಚತುರ್ಥೀವಿಭಕ್ತಿಯು ತಾದರ್ಥ್ಯವನ್ನು ತೋರಿಸುತ್ತದೆ, ಶ್ರಿಯಃಪತಿಗಾಗಿಯೇ ಈ ಜೀವಾತ್ಮನು ಎಂದಾಗುವದರಿಂದ ಚತುರ್ಥೀ ವಿಭಕ್ತಿಯು ತಾದರ್ಥ್ಯವನ್ನು ಸೂಚಿಸುತ್ತದೆ ಎಂಬ ಭಾವವು. ಹೀಗೆ ಜೀವನು ಶ್ರಿಯಃಪತಿಗಾಗಿಯೇ ಎಂಬ **ತಾದರ್ಥ್ಯಕ್ಕೆ ಉಪಾಧಿಯಿಲ್ಲಾಮೈಯಾಲೆ**-ಎಂದಿಗೂ ಚ್ಯುತಿ ಅಥವಾ ತೊಂದರೆ **ಇಲ್ಲದುದರಿಂದ**, ಎಂದರೆ ಜೀವನು ಶ್ರಿಯಃಪತಿಗಾಗಿಯೇ ಬರುವದಕ್ಕೆ ಎಂದಿಗೂ ತೊಂದರೆಯುಂಟಾಗದಿರುವದರಿಂದ, ಸರ್ವರಕ್ಷಕನಾದ ಶ್ರಿಯಃಪತಿಗೆ, ಜೀವಾತ್ಮನು ನಿರುಪಾಧಿಕಶೇಷನಾಗಿಯೇ **ಯಿರುಕ್ಕುಮೆನ್ರು**-ಇರುತ್ತಾನೆಂದು **ಇಪ್ಪಡಿ**-ಈ ರೀತಿಯಲ್ಲಿ **ಯಾವತ್ಸ್ವರೂಪಂ**-ಈತನ ಸ್ವರೂಪವಿರುವವರೆಗೂ, **ಸಂಬಂಧಂಶೊಲ್ಲುಗೈ** ಜೀವಾತ್ಮನು ಸರ್ವೇಶ್ವರನಿಗೇನೇ ನಿರುಪಾಧಿಕ ಶೇಷನೆಂಬ ಸಂಬಂಧವನ್ನು ಹೇಳುವದು **ಅಯೋಗವ್ಯವಚ್ಛೇದವು**". ಮಕಾರಸ್ತು ತಯೋರ್ದಾಸಃ" ಎಂದುಹೇಳಿರುವ ಹಾಗೆ, ಮಕಾರವಾಚ್ಯನಾದ ಜೀವಾತ್ಮನು ಅಕಾರವಾಚ್ಯನಾದ ವಿಷ್ಣುವಿಗೂ ಉಕಾರವಾಚ್ಯಳಾದ ಲಕ್ಷ್ಮಿಗೂ ಸಹ, ಶೇಷನು ಎಂದಾಗುತ್ತದೆ. ಇಲ್ಲಿ **"ಅಗ್ರತಃ" ಪ್ರಯಯೌರಾಮಸ್ಸೀತಾ ಮಧ್ಯೇಸುಮಧ್ಯಮಾ, ಪೃಷ್ಠತಸ್ತು ಧನುಷ್ಪಾಣಿಃ**

ಮಧ್ಯಮಾಕ್ಷರತ್ತಿಲ್ ಅವಧಾರಣ ಸಾಮರ್ಥ್ಯತ್ತಾಲೇ ಯವನುಕ್ಕೇ ನಿರುಪಾಧಿಕಶೇಷಂ ವೇರೊರುತ್ತರಕ್ಕು ನಿರುಪಾದಿಕ ಶೇಷವುನ್ರೆಜ್ಞ್ಯಿಲ ಅನ್ಯಯೋಗ ವ್ಯವಚ್ಛೇದವುಂ.

ಲಕ್ಷ್ಮಣೋನುಜಗಾಮಹ'' ಎಂಬ ಮಹರ್ಷಿಯ ವಾಕ್ಯವು ಇಲ್ಲಿ ಪ್ರಮಾಣವಾಗಿದೆ. ವಿಷ್ವಕ್ಸೇನ ಸಂಹಿತೆಯಲ್ಲಿ ''**ಅಸ್ಯಾಮನುಚ್ಚಶೇಷಂಹಿವಿಭೂತಿರುಭಯತ್ಮಕಾ''** '' **ಈ** ಎರಡಾದ ಲೀಲಾವಿಭೂತಿ ನಿತ್ಯವಿಭೂತಿಗಳು **ಈ** ಲಕ್ಷ್ಮೀಗೂ ನನಗೂ ಸಹ ಶೇಷಭೂತವಾದುವು'' ಇತ್ಯಾದಿ ಪ್ರಮಾಣಗಳು ಜೀವಾತ್ಮನ ಶೇಷತ್ವವನ್ನು ಸ್ಥಾಪಿಸುತ್ತವೆ. ಆದರೆ ಶ್ರೀಮದಾಚಾರ್ಯರವರು ಪ್ರಣವದ ಮಧ್ಯಮಾಕ್ಷರವಾದ **ಉ** ಎಂಬುವದಕ್ಕೆ **ಏವ** ಎಂಬ ಅವಧಾರಣಾರ್ಥ ಮೂಲಕ ಜೀವನಿಗೆ ನಿರುಪಾಧಿಕ ಶೇಷತ್ವವನ್ನು ಸ್ಥಾಪಿಸುತ್ತಾರೆ.

ಅವಧಾರಣವಾದ **ಏವ** ಕಾರದಿಂದ ವ್ಯವಚ್ಛೇದವು ಮೂರು ವಿಧವಾಗಿರುತ್ತದೆ. ವ್ಯವಚ್ಛೇದವೆಂದರೆ ಇತರವಾದವುಗಳಿಗಿಂತ ಭಿನ್ನವಾಗಿರುವಿಕೆಯು.

೧ **ಅಯೋಗವ್ಯವಚ್ಛೇದವು.** ಇದು, ಏವ ಎಂಬಅವಧಾರಣವು **ವಿಶೇಷಣ**ದೊಂದಿಗೆ ಸಂಬಂಧಿಸುವದರಿಂದುಂಟಾಗುವ ಅರ್ಥವು. **ಶಂಖಃಪಾಂಡರ ಏವ,** ಶಂಖವು ಬೆಳ್ಳಗೆನೇ ಇರುವಂಥಾದ್ದು, ಕಪ್ಪು ಕೆಂಪು ಅಲ್ಲವು ಎಂಬಭಿಪ್ರಾಯವುಂಟಾಗುತ್ತದೆ. **ಜೀವಃಶೇಷಏವ** ಜೀವಾತ್ಮನು ಪರಮಾತ್ಮನಿಗೆ ಯಾವಾಗಲೂ ಶೇಷನಾಗಿಯೇ ಇರುವಂಥಾವನು ಎಂಬುವದರಿಂದ ಸ್ವತಂತ್ರನೆಂದಿಗೂ ಅಲ್ಲವೆಂಬ ಭಾವವು.

೨. **ಅನ್ಯಯೋಗವ್ಯವಚ್ಛೇದವು** ಇದು, ಅವಧಾರಣವು **ವಿಶೇಷ್ಯ**ದೊಂದಿಗೆ ಸಂಬಂಧಿಸುವದರಿಂದುಂಟಾಗುವ ಅರ್ಥವು. **ಪಾರ್ಥಏವಧನುರ್ಧರಃ** ಪಾರ್ಥನೇ ಧನುರ್ಧಾರಿಯು ಎಂದರೆ ಇನ್ಯಾರೂ ಅಂತಹಭಿಧಾನಾದ ಧನುರ್ಧಾರಿಯಲ್ಲವೆಂಬ ಅಭಿಪ್ರಾಯ ಉಂಟಾಗುತ್ತದೆ. **ಅಯೈವ ಜೀವಃ** ಶ್ರೀಯಃಪತಿಗನೇ **ಈ** ಜೀವನು ಶೇಷನು ಎಂದರೆ ಇನ್ಯಾರಿಗೂ ಅಂತಹನಿರುಪಾಧಿಕ ಶೇಷನಲ್ಲವು, ಬ್ರಹ್ಮರುದ್ರಾದಿಗಳಿಗಲ್ಲವು ಎಂಬಭಿಪ್ರಾಯವು **ತೋಂ ಬರುತ್ತದೆ.**

೩. **ಅತ್ಯಂತಾಯೋಗ ವ್ಯವಚ್ಛೇದವು.** ಇದು, ಅವಧಾರಣವು ಕ್ರಿಯಾಪದದೊಂದಿಗೆ ಸಂಬಂಧಿಸುವದರಿಂದುಂಟಾಗುವ ಅರ್ಥವು ಉದಾ. **ಯದ್ಭವತಿ ತನ್ನಿತ್ಯಮೇವ** ಯಾವುದು ಉತ್ಪನ್ನವಾಗುತ್ತದೋ ಅದುನಾಶವನ್ನು ಹೊಂದದೆ ಬೇಕು, ಅನ್ಯಥಾ ಆಗಲು ಸಾಧ್ಯವೇ ಇಲ್ಲವೆಂಬ ಭಾವವು. ಈ ಮೂರನೆಯ ವ್ಯವಚ್ಛೇದವು ಇಲ್ಲಿ ಚರ್ಚಿಸಲ್ಪಡಲಿಲ್ಲವು.

ಪ್ರಕೃತದಲ್ಲಿ ಮೊದಲು ಅಯೋಗ ವ್ಯವಚ್ಛೇದದಿಂದ **ತೋರಿಬರುವ ಅರ್ಥವನ್ನು** ನಿರೂಪಿಸಿ, **ಈಗ** ಅನ್ಯಯೋಗ ವ್ಯವಚ್ಛೇದಾರ್ಥವನ್ನು ತಿಳಿಸುತ್ತಾರೆ.

ಪ್ರಣವದ ಮಧ್ಯಮಾಕ್ಷರವಾದ "ಉ" ಕಾರವು, ಅವಧಾರಣವಾದ **ಏವ** ಎಂಬ ಅರ್ಥವುಳ್ಳದಾದುದರಿಂದ, **ಆಯ್ಯೈವ ಮಕಾರ ವಾಚ್ಯಃ** ಎಂಬ ಯೋಜನೆಯಿಂದ ಸರ್ವೇಶ್ವರನಾದ ಶ್ರಿಯಃ ಪತಿಗೇನೇ ಈಜೀವಾತ್ಮನು ನಿರುಪಾಧಿಕ ಶೇಷನು ಎನ್ನುವದರಿಂದ ಬೇರೆ ಇನ್ನು ಯಾರಿಗೂ ಅತನು ನಿರುಪಾಧಿಕ ಶೇಷನಲ್ಲವು ಎಂಬುವದು ಅನ್ಯಯೋಗ ವ್ಯವಚ್ಛೇದಾರ್ಥವು. ಇದನ್ನು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.

ಮಧ್ಯಮಾಕ್ಷರತ್ತಿಲ್-ಪ್ರಣವದ ಮಧ್ಯಮಾಕ್ಷರವಾದ "ಉ"ಕಾರದಲ್ಲಿ ತೋರುವ, **ಅವಧಾರಣಸಾಮರ್ಥ್ಯತ್ತಾಲೆ**- ಅವಧಾರಣಾರ್ಥದ ಸಾಮರ್ಥ್ಯದಿಂದ **ಅವನುಕ್ಕೇ**-ಆ ಶ್ರಿಯಃಪತಿಗೇನೇ, **ನಿರುಪಾಧಿಕ ಶೇಷಂ**-ಈ ಜೀವಾತ್ಮನು ನಿರುಪಾಧಿಕ ಶೇಷನು, **ವೇರೊರುತ್ತರಕ್ಕು**-ಇನ್ನೊಬ್ಬರಿಗೂ, **ನಿರುಪಾಧಿಕಶೇಷಮನ್ರೆಜ್ಞ್ಯ**-ನಿರುಪಾಧಿಕ ಶೇಷನಲ್ಲವು ಎಂದು ಹೇಳುವಿಕೆಯು, ಅನ್ಯಯೋಗ ವ್ಯವಚ್ಛೇದವು. ಶ್ರುತಿಗಳಲ್ಲಿ **ಉ**ಕಾರವನ್ನು ಅವಧಾರಣಾರ್ಥದಲ್ಲಿ ಉಪಯೋಗಿಸಿರುವದಕ್ಕೆ ನಿದರ್ಶನಗಳಂತೆ:—"**ತದೇವಾಗ್ನಿ ಸ್ತದ್ವಾಯುಸ್ತತ್ಸೂರ್ಯಸ್ತದು ಚಂದ್ರಮಾಃ** ಎಂಬ ವಾಕ್ಯದಲ್ಲಿ **ತದೇವಾಗ್ನಿಃ** ಎಂದು ಹೇಳಿರುವ ಹಾಗೆ **ತದು**, **ತತ್—ಉ** ಎಂಬದಾಗಿ **ತದೇವಾಗ್ನಿಃ ತದುಚಂದ್ರಮಾಃ** ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟಿರುತ್ತದೆ. ಜೀತಸನು "**ದಾಸಭೂತಾಸ್ಸ್ವತಸ್ಸರ್ವೇ**" ಎಂದು ಹೇಳಿರುವ ಹಾಗೆ ಲಕ್ಷ್ಮೀನಾರಾಯಣರಿಗೆ ಮಾತ್ರ ನಿರುಪಾಧಿಕ ಶೇಷನು. ತಾಯಿತಂದೆ ಗುರು ಪೋಷಕರು ಮುಂತಾದವರುಗಳಿಗೆ ಶೇಷನಾಗಿರುವದು ನಿರುಪಾಧಿಕವಾಗಿಯಲ್ಲವು, **ಸೋಪಾಧಿಕವಾಗಿ ಎಂದು ತಿಳಿಯತಕ್ಕದ್ದು.**

ಈ ನಮ್ಮ ಶೇಷತ್ವವು ಲಕ್ಷ್ಮೀನಾರಾಯಣರಿಗೇನೇ ವಿನಾ ಇತರರಿಗಿಲ್ಲವು ಎಂದರೆ, ಭಾಗವತೋತ್ತಮರಿಗೂ ಆಚಾರ್ಯರುಗಳಿಗೂ ಶೇಷತ್ವ ಹೇಗೆ ಎಂಬ ಶಂಕಾ ನಿವಾರಣಾರ್ಥವಾಗಿ ಹೇಳುತ್ತಾರೆ.

ಇಶ್ಶೇಷತ್ವಮ್ ಭಾಗವತ ಶೇಷತ್ವ ಪರ್ಯಂತ ಮಾಕ ವಳರುಮ್ಪಡಿ ಮೇಲೆ ಶೊಲ್ಲಕ್ಕಡವೋಮ್.

ಜೀವಾತ್ಮ ಪ್ರವೃತ್ತಿ ನಿರೂಪಣಂ.

ಇಪ್ಪಡಿ ಯಿರುಕ್ಕಿರ ಚೇತನರು ಡೈಯ ಪ್ರವೃತ್ತಿಯಾವದು ? ಪರಾಧೀನಮುಮಾಯ್ ಪರಾರ್ಥಮುಮಾನಕರ್ತೃತ್ವಮುಮ್. ಭೋಕ್ತೃತ್ವಮುಮ್ ಈಶ್ವರರ್ತರ್ ಭೋಕ್ತೃತ್ವಾರ್ಥವಾಕ ವಿವರ್‌ಗಳಕ್ಕು ಕರ್ತೃತ್ವ ಭೋಕ್ತೃತ್ವಂಗಳೈಯುಂಡಾಕ್ಕುಕ್ಕೈಯಾಲಿವೈಪರಾರ್ಥಜ್ಞಳ್.

ಇಶ್ಶೇಷತ್ವಂ - ಈ ಭಗವಚ್ಛೇಷತ್ವವು, **ಭಾಗವತ ಶೇಷತ್ವ ಪರ್ಯನ್ತ ಮಾಕ** - ಭಾಗವತ ಶೇಷತ್ವವರಿವಿಗೂ, **ವಳರುಮ್ಪಡಿ** - ಆಕೈವೃದ್ಧಿ ಹೊಂದುವ ಪ್ರಕಾರವನ್ನು **ಮೇಲೆ** - ಮುಂದೆ ಪುರುಷಾರ್ಥಕಾಷ್ಠಾಧಿಕಾರದಲ್ಲಿ, **ಶೊಲ್ಲಕ್ಕಡವೋಮ್** - ಹೇಳುತ್ತೇವೆ. ಭಗವಚ್ಛೇಷತ್ವ ಪರಿವಾಹವು ಭಾಗವತ ಶೇಷತ್ವವರಿವಿಗೂ ವ್ಯಾಪಿಸುತ್ತದೆಂಬುವದನ್ನು ಪುರುಷಾರ್ಥಕಾಷ್ಠಾಧಿಕಾರದಲ್ಲಿ ವಿಶದವಾಗಿ ತೋರಿಸುವೆವೆಂಬಭಿಪ್ರಾಯವು.

ದ್ವಿವಿಧಚೇತನರಾದ ಜೀವಾತ್ಮಪರಮಾತ್ಮರ ಸ್ವರೂಪವನ್ನು ಬೋಧಿಸಿ, ಅವರುಗಳ ಸ್ಥಿತಿಯು, ಕಾಲಾಂತರಾನುವೃತ್ತಿ ಎಂದು ಹೇಳಿದುದರಿಂದ, ಪ್ರವೃತ್ತಿಯಲ್ಲೇ ಸೇರಿದುದರಿಂದ ಅವರುಗಳ ಪ್ರವೃತ್ತಿಗಳನ್ನು ಕುರಿತು ಹೇಳುತ್ತಾರೆ. ಮೊದಲು ಜೀವಾತ್ಮರ ಪ್ರವೃತ್ತಿಯನ್ನು ಕುರಿತು ಬೋಧಿಸುತ್ತಾರೆ.

ಜೀವಾತ್ಮರ ಪ್ರವೃತ್ತಿ ನಿರೂಪಣವು.

ಇಪ್ಪಡಿಯಿರುಕ್ಕಿರ - ಮೇಲೆ ಹೇಳಿದ ಸ್ವರೂಪ ಸ್ವಭಾವಗಳುಳ್ಳ ಚೇತನರುಡೈಯ ಪ್ರವೃತ್ತಿಯಾವುದು? ಚೇತನರ ಪ್ರವೃತ್ತಿಯು ಯಾವುದು? **ಪರಾಧೀನಮುಮಾಯ್** - ಈಶ್ವರಾಧೀನವಾಗಿಯೂ, **ಪರಾರ್ಥಮುಮಾನ** - ಈಶ್ವರನಿಗೇ ಪ್ರಯೋಜನವಾಗಿಯೂ ಇರುವ (1) ಕರ್ತೃತ್ವವು, (2) ಭೋಕ್ತೃತ್ವವು. ಜೀವಾತ್ಮರ ಪ್ರವೃತ್ತಿಗಳೆಲ್ಲಾ ಈಶ್ವರಾಧೀನವಾಗಿಯೂ, ಈಶ್ವರನ ಪ್ರಯೋಜನಕ್ಕಾಗಿಯೇ ಇವೆ ಎಂಬ ಭಾವವು. ಜೀವನು **ಮಾಡುವುದೆಲ್ಲವೂ ಅತನು ಅನುಭವಿಸುವುದೆಲ್ಲವೂ ಈಶ್ವರ ಪ್ರಯೋಜನಕ್ಕಾಗಿ** ಎಂದು ಹೇಳತಕ್ಕಾ, ಅದರಭಿಪ್ರಾಯವೇನೆಂಬುವದನ್ನು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. ಈಶ್ವರನು ಪರಿಪೂರ್ಣಕಾಮನು, ಅಂಥಾವನಿಗೆ ಪ್ರಯೋಜನವೆಂದರೇನೆಂಬುದನ್ನು ತಿಳಿಯಪಡಿಸುತ್ತಾರೆ. **ಈಶ್ವರನ್ ತನ್ ಭೋಕ್ತೃತ್ವಮಾಕ** - ಈಶ್ವರನು ತನ್ನ ಲೀಲಾರೂಪ ಭೋಗಾರ್ಥವಾಗಿಯೇ **ಇವರುಗಳುಕ್ಕು** - ಈ **ಜೀವಾತ್ಮರುಗಳಿಗೆ ಕರ್ತೃತ್ವ ಭೋಕ್ತೃತ್ವಗಳನ್ನು, ಉಂಡಾಕ್ಕು ಕೈಯಾಲೇ**- ಉಂಟುಮಾಡುವದರಿಂದ **ಇವೈ** - ಈ ಕರ್ತೃತ್ವ ಭೋಕ್ತೃತ್ವಗಳು, **ಪರಾರ್ಥಜ್ಞಳ್** - ಪರಪ್ರಯೋಜನವುಳ್ಳವುಗಳೆಂದು ತಿಳಿಸಿಕೊಳ್ಳುತ್ತವೆ.

ಬದ್ಧಮುಕ್ತನಿತ್ಯಾನಾಂ ಸ್ವರೂಪಸ್ಥಿತಿ ಪ್ರವೃತ್ತಿ ಭೇದ ಕಥನಂ

ಬದ್ಧಚೇತನರುಕ್ಕು ನೀಕ್ಕಿಯುಳ್ಳಾರಿಲ್ ಭೇದಂ :—ಅವಿದ್ಯಾಕರ್ಮ ವಾಸನಾರುಚಿ ಪ್ರಕೃತಿ ಸಂಬಂಧ ಯುಕ್ತರಾಯಿರುಕ್ಕೈ. ಇವರುಗಳುಕ್ಕು ಅನ್ಯೋನ್ಯಂ ವರುಮ್

ಜೀವಾತ್ಮನಿಗೆ ಕರ್ತೃತ್ವ ಉಂಟೆಂದು ಶಾರೀರಕ ಸೂತ್ರ (೨.೩.೩೩) ವಾದ **"ಕರ್ತಾ ಶಾಸ್ತ್ರಾರ್ಥವತ್ವಾತ್"** ಎಂಬ ಸೂತ್ರದಲ್ಲಿ ಉಪಪಾದಿಸಲ್ಪಟ್ಟ ಮುಂದಿನ ಅಧಿಕರಣದಲ್ಲಿ (೨.೩.೪೦) ಪರಾತ್ತು ತಚ್ಛ್ರುತೇಃ ಎಂಬ ಶಾರೀರಕ ಸೂತ್ರದಲ್ಲಿ ಆಕರ್ತೃತ್ವವು ಸರ್ವಸ್ವಾತಂತ್ರ್ಯವಲ್ಲವೆಂದೂ, ಈಶ್ವರಾಯತ್ತವಾಮುದೆಂದೂ ಹೇಳಲ್ಪಟ್ಟಿರುತ್ತದೆ. **"ಭೋಕ್ತಾ ಭೋಗ್ಯಂ ಪ್ರೇರಿತಾರಂಚ ಮತ್ವಾ"** (ಶ್ವೇ. ೧. ೧೨) ಎಂಬ ಶ್ರುತಿಯೂ ಜೀವಾತ್ಮನಿಗೆ ಭೋಕ್ತೃತ್ವವನ್ನು ಬೋಧಿಸುತ್ತದೆ. ಈ ಭೋಕ್ತೃತ್ವವು ಕರ್ಮಕೃತವಾಮುದೆಂದು "ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತಿ" ಎಂಬ ಶ್ರುತಿಯಲ್ಲಿ ಉದಾಹರಿಸಲ್ಪಟ್ಟಿರುತ್ತದೆ. ಈ ಭೋಕ್ತೃತ್ವವು ಸಿದ್ಧಿಸುವದಕ್ಕಾಗಿ, ಪ್ರಕೃತಿಯಲ್ಲಿ ಭೋಗ್ಯಭಾವವನ್ನು ಸರ್ವೇಶ್ವರನು ಸಂಕಲ್ಪಿಸಿರುತ್ತಾನೆ. ಅಪರಿ ಸರ್ವೇಶ್ವರನಿಗೂ ಕೂಡ ಭೋಕ್ತೃತ್ವವನ್ನು ಈ ಮೇಲಣ ವಾಕ್ಯದಲ್ಲಿ ಹೇಳಿರುತ್ತದೆಯಲ್ಲಾ, ಆ ಭೋಕ್ತೃತ್ವವು ಎಂಥಾದ್ದೆಂದರೆ, **"ಲೋಕವತ್ತು ಲೀಲಾಕೈವಲ್ಯಂ"** ಎಂಬ ಶಾರೀರಕ ಸೂತ್ರದಲ್ಲಿ (೨.೧.೩೩) ಉಪಪಾದಿಸಿರುವ ಹಾಗೆ, ಜೀವಾತ್ಮನ ಹಾಗೆ ಕರ್ಮಮೂಲಕ ಪ್ರಾಪ್ತವಾದ ಭೋಕ್ತೃತ್ವವಿಲ್ಲವು, ಪೂರ್ಣಕಾಮನಿಗೆ ಲೋಕದಲ್ಲಿ ಹೇಗೆ ಲೀಲೆಯೇ ಪ್ರಯೋಜನವೋ, ಹಾಗೆಯೇ ಪರಿಪೂರ್ಣಕಾಮನಾದ ಸರ್ವೇಶ್ವರನಿಗೆ ಭೋಕ್ತೃತ್ವವು ಲೀಲಾರೂಪವಾಮುದು. ಈ ಅಭಿಪ್ರಾಯಗಳನ್ನೆಲ್ಲಾ ಶ್ರೀಮದಾಚಾರ್ಯರವರು,

ಭೋಗ್ಯಂಮುಕುಂದ ಗುಣಭೇದ ಮಚೇತನೇಷು
ಭೋಕ್ತೃತ್ವ ಮಾತ್ಮನಿ ನಿವೇಶ್ಯ ನಿಜೇಚ್ಛಯೈವ।
ಪಾಂಚಾಲಿಕಾ ಶುಕ ವಿಭೂಷಣ ಭೋಗದಾಯೀ
ಸವ್ಯಾಡಿವಾತ್ಮಸಮಯಾ ಸಹ ನೋದಸೇತ್ವಂ"

ಎಂಬ ಶರಣಾಗತಿ ದೀಪಿಕಾ ಶ್ಲೋಕದಲ್ಲಿ ಬಹು ಸ್ವಾರಸವಾಗಿ ಉಪಪಾದಿಸಿರುತ್ತಾರೆ. ಇವರಭಿಪ್ರಾಯವೇನೆಂದರೆ :—"ಓ ಮುಕ್ತಿದಾಯಕನಾದ ದೀಪಪ್ರಕಾಶಸ್ವಾಮಿಯೇ, ನೀನು ನಿನ್ನ ಸಙ್ಕಲ್ಪಮೂಲಕವಾಗಿ ಅಜೇತನಗಳಲ್ಲಿ ನಾನಾ

ಜ್ಞಾನಸುಖಾದಿಭೇದತ್ರೈ ಬ್ರಹ್ಮಾದಿಸ್ತಂಬ ಪರ್ಯನ್ತಗಳಾನ ವಕು
ಪ್ಪುಗಳಿಲೇ ಕಣ್ಡುಕೊಳ್ಳುವದು. ಇಬ್ಬದ್ಧಚೇತನರ್ ತನಾತ್ಮುಕ್ಕು

ರಸಭೇದವಿರುವ ಭೋಗ್ಯಭಾವವನ್ನೂ, ಚೇತನರಲ್ಲಿ ಭೋಕ್ತೃಭಾವವನ್ನೂ ಇಟ್ಟು ಪೂರ್ಣಕಾಮನಾದ ರಾಜನು ತನಗೆ ಸಮಳಾದ ಪತ್ನಿಯೊಂದಿಗೆ, ಜೊಂಬೆಗಳಿಗೆ ನಾನಾವಿಧ ಆಭರಣಗಳನ್ನು ಹಾಕುತ್ತ, ಮತ್ತು ಪಂಜರದಲ್ಲಿರುವ ಗಿಳಿಗೆ ಹಾಲು ಹಣ್ಣು ಮುಂತಾದ ಭೋಗಗಳನ್ನಿತ್ತು ಆನಂದಿಸುವನೋ, ಹಾಗೆಯೇ ನೀನೂ ಕೂಡ ಲಕ್ಷ್ಮಿಯೊಂದಿಗೆ ಆನಂದಿಸುತ್ತೀಯೆ."

ಬದ್ಧಮುಕ್ತ ನಿತ್ಯರುಗಳಿಗೆ ಸ್ವರೂಪಸ್ಥಿತಿ ಪ್ರವೃತ್ತಿಗಳಲ್ಲಿರುವ ಪರಸ್ಪರ ಭೇದವು.

ಬದ್ಧಚೇತನರಿಗೂ, ನೀಕ್ಕಿಯುಳ್ಳಾರಿಲ್ ಭೇದವುಮ್ - ಮಿಕ್ಕ ಇತರರಾದ ಮುಕ್ತ ನಿತ್ಯರಿಗೂ ಇರುವ ಭೇದವೇನೆಂದರೆ:—ಬದ್ಧರು ಅವಿದ್ಯಾ, ಕರ್ಮ ವಾಸನಾ, ರುಚಿ, ಪ್ರಕೃತಿಸಂಬಂಧಗಳಿಂದ ಕೂಡಿರುತ್ತಾರೆ. ನಿತ್ಯರಿಗೆ ಈ ಐದರ ಸಂಬಂಧವು ಎಂದಿಗೂ ಇಲ್ಲವೆಂದೂ, ಮುಕ್ತರಿಗೆ ಆ ದೆಸೆಯಲ್ಲಿ ಅವುಗಳ ಸಂಬಂಧವು ಇಲ್ಲವೆಂದೂ ಭಾವವು. ಈ ಐದರ ಉಪಪಾದನೆಗಾಗಿ ಗಲಜನೇ ಪುಟವನ್ನು ಪರಾಂಬರಿಸಿ. ಬದ್ಧನಿಗೆ ಸರ್ವೇಶ್ವರನ ಕೃಪೆಯಿಂದ ಆತನನುಷ್ಠಿಸಿದ ಸಾಧ್ಯೋಪಾಯ ವ್ಯಾಜದಿಂದ ಲಭಿಸಿದ ಅರ್ಚಿರಾದಿ ಗತಿಯಲ್ಲಿ ವಿರಜಾತರಣ ಕಾಲದಲ್ಲಿ ಇವು ಐದರ ಸಂಬಂಧವೂ ತೊಲಗಿಹೋಗಿ ಮುಕ್ತದೆಸೆಯಲ್ಲಿ ಇವುಗಳ ಸಂಬಂಧವಿರುವದಿಲ್ಲವು. ಇವರುಗಳುಕ್ಕು - ಈ ಬದ್ಧ ಜೀವಾತ್ಮರಿಗೆ ಅನ್ಯೋನ್ಯಂವರುಮ್ - ಅನ್ಯೋನ್ಯವಾಗಿ ಉಂಟಾಗುವ, ಕರ್ಮತಾರತಮ್ಯಾನುಗುಣವಾಗಿ ಪ್ರತಿಯೊಂದು ಜೀವನಿಗೂ ಉಂಟಾಗುವ ಜ್ಞಾನಸುಖಾದಿ ಭೇದತ್ರೈ- ಜ್ಞಾನ ಸುಖ ಮೊದಲಾದ ಭೇದಗಳನ್ನು ಎಂದರೆ ಜ್ಞಾನದಲ್ಲೂ ಸುಖಭೋಗ ಮೊದಲಾದವುಗಳಲ್ಲೂ ಇರುವ ವ್ಯತ್ಯಾಸಗಳನ್ನು. ಬ್ರಹ್ಮಾದಿಸ್ತಂಬಪರ್ಯನ್ತಗಳಾನ-ಚತುರ್ಮುಖ ಬ್ರಹ್ಮ ಮೊದಲುಗೊಂಡು ಕ್ರಿಮಿಕೀಟಾದಿಗಳವರಿವಿಗೂ, ವಕುಪ್ಪುಗಳಿಲೇ - ಶರೀರ ಭೇದಗಳಲ್ಲಿ, ಕಣ್ಡುಕೊಳ್ಳದು - ತಿಳಿದುಕೊಳ್ಳುವದು. ಸುಖಾದಿ ಎಂಬಲ್ಲಿ ಆದಿ ಪದದಿಂದ ದುಃಖಶಕ್ತಿ ಮೊದಲಾದವುಗಳು ಹೇಳಲ್ಪಟ್ಟವು. ಇಲ್ಲಿ ಬದ್ಧಚೇತನರು ಅನೇಕಾನೇಕರಾದುದರಿಂದ ಈ ಮೇಲೆ ಹೇಳಿದ ಕರ್ಮಾವಿದ್ಯಾದಿಗಳೂ ಅವುಗಳಿಂದುಂಟಾಗುವ ಜ್ಞಾನಸುಖಾದಿಗಳೂ ಚತುರ್ಮುಖನ ಮೊದಲು ಇರುವೆ ಕೀಟಗಳವರಿವಿಗೂ ವ್ಯತ್ಯಸ್ತವಾಗುವು. ಹಾಗೆ ಬೇರೆಬೇರೆ ಎಂಬುವ ಅಂಶಗಳನ್ನು ಅವರುಗಳ ಶರೀರಭೇದ ಮೊದಲಾದವುಗಳಿಂದಲೇ ತಿಳಿಯಬಹುದು. ಸೃಷ್ಟಿಗೆ ಮೊದಲು ಚೇತನರೆಲ್ಲಾ ಅಚಿತ್ಪ್ರಾಯ

ಕರ್ಮಾನುರೂಪವಾಕ ಈಶ್ವರನಡೈತ್ತ ಶರೀರಂಗಳೈ ಧರ್ಮಿಸ್ವರೂಪತ್ತಾ
ಲುಮ್, ಧರ್ಮಭೂತಜ್ಞಾನತ್ತಾಲುಮ್, ಧರಿಯಾನಿರ್ಪರ್ಗಳ್.

ರಾಗಿ ಸಙ್ಕಲ್ಪಾದಿಗಳಿಂದ ಶೂನ್ಯರಾಗಿರುವಾಗ, ಇವರಿಗೆ ಈ ವಿಧವಾದ ಶರೀರ ಧಾರಣೆಯು ಹೇಗೆ ಎಂಬುವದನ್ನು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. ಇಬ್ಬದ್ಧಚೇತನರ್ - ಈ ಬದ್ಧರಾದ ಚೇತನರು, ತನ್ತಾಮುಕ್ಕ್ಕು - ಅವರವರುಗಳಿಗೆ, ಕರ್ಮಾನುರೂಪವಾಕ - ಕರ್ಮಗಳಿಗನುಸಾರವಾಗಿ, ಈಶ್ವರ್ - ಸರ್ವೇಶ್ವರನು, ಅಡೈತ್ತ - ಜೀವಾತ್ಮರ ವಶಮಾಡಿದ, ಶರೀರಙ್ಗಳೈ - ಶರೀರಗಳನ್ನು, ಧರ್ಮಿಸ್ವರೂಪತ್ತಾಲುಮ್ - ಧರ್ಮಿಯಾದ ಆತ್ಮನ ಸ್ವರೂಪದಿಂದಿಂದಲೂ, ಧರ್ಮಭೂತಜ್ಞಾನತ್ತಾಲುಮ್ - ಆತ್ಮನ ಧರ್ಮವಾದ ಜ್ಞಾನದಿಂದಲೂ, ಧರಿಯಾನಿರ್ಪರ್ಗಳ್ - ಧರಿಸುತ್ತಿರುವರು. ಸೃಷ್ಟಿಗೆ ಮೊದಲು ಹಿಂದಿನ ಕಲ್ಪದಲ್ಲಿ ಉಂಟಾಗಿದ್ದ ಕರ್ಮಸಂಬಂಧವು ಈ ಜೀವಾತ್ಮರುಗಳಿಗೆ ಇದ್ದೇ ಇತ್ತು. ಸೃಷ್ಟಿಕಾಲದಲ್ಲಿ ಈ ಕರ್ಮಗಳಿಗೆ ಅನುಸಾರವಾಗಿ ಸರ್ವೇಶ್ವರನು " ಅಚಿದವಿಶಿಷ್ಟಾನ್ಯಳಯೇ ಜಂತೂನವಲೋಕ್ಯ ಜಾತನಿರ್ವೇದಾ ।
ಕರಣಕಳೇಬರ ಯೋಗಂ ವಿತರಸಿ ವೃಷಶೈಲನಾಥ ಕರುಣೇತ್ವಂ ॥
(ದಯಾ ಶತಕ) ಎಂದು ಹೇಳಿರುವಹಾಗೆ ಅವರಿಗೆ ಶರೀರಗಳನ್ನು ದಯಪಾಲಿಸುತ್ತಾನೆ. ಇದರಿಂದ ಚತುರ್ಮುಖನ ಮೊದಲುಗೊಂಡು ಎಲ್ಲಾವಿಧ ಚೇತನರುಗಳಿಗೂ ಇರುವ ಸುಖಭೋಗ ವ್ಯತ್ಯಾಸವು ಅವರವರುಗಳ ಪೂರ್ವಕರ್ಮಾನುಸಾರ ಉಂಟಾದುದೆಂದು ಭಾವಿಸತಕ್ಕದ್ದು. ಹೀಗೆ ಈಶ್ವರನ ಅವರವರ ಕರ್ಮಾನುಸಾರ ದಯಪಾಲಿಸಿದ ಶರೀರಗಳನ್ನು ಈ ಚೇತನರು ಧರಿಸಿರುವದರಿಂದ, ಈ ಬದ್ಧರು ನಿತ್ಯಮುಕ್ತರಹಾಗೆ ಇಲ್ಲದೆ, ವಿಧವಿಧವಾದ ಶರೀರಗಳನ್ನು ಏಕೆ ಹೊಂದಿರುತ್ತಾರೆಂಬ ಶಂಕೆಯು ಪರಿಹೃತವಾಗುತ್ತದೆ. ಅದೂ ಅಲ್ಲದೆ ಅವರಲ್ಲಿ ಕೆಲವರಿಗೆ ಉತ್ಕೃಷ್ಟವಾದ ದೇವಮಾನುಷ ಶರೀರಗಳನ್ನಿತ್ತು ಇನ್ನು ಕೆಲವರಿಗೆ ಸೂಕರಾದಿ ನಿಕೃಷ್ಟಶರೀರಗಳನ್ನಿತ್ತನೆಂಬ ವೈಷಮ್ಯ ನೈರ್ಘೃಣ್ಯಾದಿ ದೋಷಗಳೂ ಕೂಡ ಇದರಿಂದ ದೂರೀಕೃತಗಳಾಗುತ್ತವೆ. ಈ ಬದ್ಧರು ಶರೀರವನ್ನು ಧರಿಸುವ ಸತ್ತೆಯೂ ಕೂಡ ಈಶ್ವರಸಙ್ಕಲ್ಪಾಧೀನವೆಂಬುವದು ಇದರಿಂದ ಗೋಚರವಾಗುತ್ತದೆ. ಶರೀರಧಾರಣವು ಎರಡು ಕಾರಣಗಳಿಂದುಂಟಾಗುತ್ತವೆಂದು ಹೇಳುತ್ತಾರೆ :—

(1) ಧರ್ಮಿಸ್ವರೂಪವು—ಇದು ಈಶ್ವರಸಙ್ಕಲ್ಪಾಧೀನವಾದುದು. ಏಕೆಂದರೆ, ಸುಷುಪ್ತಿ, ಮೂರ್ಛಾವಸ್ಥೆಗಳಲ್ಲಿ, ಧರ್ಮಭೂತಜ್ಞಾನವಿಕಾಸವಿಲ್ಲದಿರು

ಧರ್ಮಿಯಾಲ್ ವರುಗಿರಧಾರಣಂ ಶರೀರತ್ತಿನುಡೈಯ ಸತ್ತೈಕ್ಕು ಪ್ರಯೋಜಕವಾಯಿರುಕ್ಕುಮ್. ಜಾಗ್ರದಾದ್ಯವಸ್ಥೈಯಿಲ್ ಧರ್ಮಭೂತಜ್ಞಾನತ್ತಾಲೇ ವರುಕಿರ ಶರೀರಧಾರಣಮ್ ಪುರುಷಾರ್ಥ ತದುಪಾಯಾನುಷ್ಠಾನಙ್ಗಳುಕ್ಕುಮ್, ಕೃತೋಪಾಯನಾನ ಪರಮೈಕಾನ್ತಿಕ್ಕು ಭಗವದನುಭವ ಕೈಙ್ಕರ್ಯಙ್ಗಳುಕ್ಕುಮ್ ಉಪಯುಕ್ತವಾ ಯಿರುಕ್ಕುಮ್.

ವಾಗಲೂ, ದೇಹಧಾರಣೆಯುಂಟಾಗುವದರಿಂದ, ಈಶ್ವರಸಙ್ಕಲ್ಪಾಧೀನವಾದ ತನ್ನ ಸ್ವರೂಪದಿಂದ ಆತ್ಮನು ದೇಹವನ್ನು ಧಾರಣೆ ಮಾಡುತ್ತಾನೆ.

(೨) ಧರ್ಮಭೂತಜ್ಞಾನವು—ಇದು ಜಾಗ್ರದವಸ್ಥೆಗಳಲ್ಲಿ ಶರೀರಧಾರಣೆಗೆ ಸಾಧಕವು. ಇವೆರಡೂ ಶರೀರಧಾರಣೆಗೆ ಅವಶ್ಯಕವೆಂದು ಮುಂದಿನ ವಾಕ್ಯದಿಂದ ತೋರ್ಪಡಿಸುತ್ತಾರೆ.

ಧರ್ಮಿಯಾಲ್ ವರುಕಿರಧಾರಣಂ - ಧರ್ಮಿಯಾದ ಆತ್ಮಸ್ವರೂಪದಿಂದುಂಟಾಗುವ ಶರೀರಧಾರಣವು, ಶರೀರತ್ತಿನುಡೈಯಸತ್ತೈಕ್ಕು - ಶರೀರಕ್ಕೆ ಸತ್ತೆಯನ್ನುಂಟುಮಾಡುವವರಲ್ಲಿ, ಪ್ರಯೋಜಕವಾಯಿರುಕ್ಕುಂ - ಪ್ರಯೋಜನ ಉಳ್ಳದ್ದಾಗಿರುತ್ತದೆ. ಇದು ಹೇಗೆ ಎಂಬುವದನ್ನು ಮುಂದೆ "ಇಜ್ಜೀವರ್‌ಗಳ್" ಎಂದು ಪ್ರಾರಂಭಿಸುವ ವಾಕ್ಯದಿಂದ ವ್ಯತಿರೇಕರೂಪದಲ್ಲಿ ತೋರಿಸುತ್ತಾರೆ. ಅದಕ್ಕೆ ಪೂರ್ವಭಾವಿಯಾಗಿ ಧರ್ಮಭೂತಜ್ಞಾನವೂ ಕೂಡ ಹೇಗೆ ಶರೀರಧಾರಣೆಗೆ ಪ್ರಯೋಜಕವೆಂಬುವದನ್ನು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. ಜಾಗ್ರದಾದ್ಯವಸ್ಥೈಯಿಲ್ - ಜಾಗ್ರದಾದಿ ಅವಸ್ಥೆಗಳಲ್ಲಿ ಎಂದರೆ ಜ್ಞಾನವಾಗಿ, ಎಚ್ಚರವಾಗಿರುವ ಕಾಲಗಳಲ್ಲಿ, ಧರ್ಮಭೂತಜ್ಞಾನತ್ತಾಲೆನರುಕಿರ - ಧರ್ಮಭೂತ ಜ್ಞಾನದಿಂದುಂಟಾಗುವ, ಶರೀರಧಾರಣವು, ಪುರುಷಾರ್ಥ ತದುಪಾಯಾನುಷ್ಠಾನಙ್ಗಳುಕ್ಕು - ಧರ್ಮಾರ್ಥಕಾಮ ಮೋಕ್ಷಪ್ರಾಪ್ತಿಗೂ, ಮತ್ತೂ ಅವುಗಳ ಸಿದ್ಧಿಗಾಗಿ ಅವಲಂಬಿಸಬೇಕಾದ ಉಪಾಯಗಳ ಅನುಷ್ಠಾನಕ್ಕೂ, ಕೃತೋಪಾಯನಾನ - ಸಾಧ್ಯೋಪಾಯಗಳಾದ ಭಕ್ತಿಪ್ರಪತ್ತಿಗಳನ್ನನುಷ್ಠಿಸಿ ಕೃತಕೃತ್ಯನಾಗಿರುವ, ಪರಮೈಕಾನ್ತಿಕ್ಕು - ಪರಮೈಕಾನ್ತಿಯಾದ ಮೋಕ್ಷಾರ್ಥಿಗೆ, ಭಗವದನುಭವಕೈಙ್ಕರ್ಯಙ್ಗಳುಕ್ಕುಮ್ - ಭಗವಂತನನ್ನು ಅನುಭವಿಸುವುದಕ್ಕೂ ಆತನಿಗೆ ಕೈಙ್ಕರ್ಯಗಳನ್ನೆಸಗುವುದಕ್ಕೂ, ಉಪಯುಕ್ತವಾಯಿರುಕ್ಕುಮ್ - ಉಪಯೋಗವಾಗಿರುತ್ತದೆ. ಈ ಧರ್ಮಭೂತ

ಜ್ಞಾನದ ಮಾಹಾತ್ಮ್ಯವನ್ನು ಈ ಮೇಲಿನ ವಾಕ್ಯದಿಂದ ಉಪದೇಶಿಸುತ್ತಾರೆ. ಜಾಗ್ರದವಸ್ಥೆಯಲ್ಲಿ ಶರೀರಧಾರಣಕ್ಕೆ ಉಪಯುಕ್ತವಾದುದೆಂದು ತಿಳಿಸಿ, ಮನುಷ್ಯನಾದವನು ಚತುರ್ವಿಧ ಪುರುಷಾರ್ಥಗಳನ್ನು ಪಡೆಯುವದಕ್ಕೆ ಬೇಕಾದ ಸಾಧನಗಳಾದ ಯಜ್ಞಯಾಗಾದಿಗಳ ಅನುಷ್ಠಾನವೇನು, ಮೋಕ್ಷಪ್ರಾಪ್ತಿಗೆ ಬೇಕಾದ ಬ್ರಹ್ಮಜ್ಞಾನವೇನು, ಇವುಗಳನ್ನೆಲ್ಲಾ ಹೊಂದಲು ಸಹಕಾರಿಯಾಗಿರುತ್ತದೆ; ಮತ್ತು ಮೋಕ್ಷಾರ್ಥಿಯಾದ ಪರಮೈಕಾಂತಿಗೆ ಈ ಲೋಕದಲ್ಲೂ ಮತ್ತು ದೇಹಾವಸಾನಾನಂತರವೂ, ಮುಖ್ಯವಾಗಿ ಬೇಕಾದುದು ಯಾವುದೆಂದರೆ :—ಭಗವದನುಭವ ಕೈಙ್ಕರ್ಯಗಳು; ಅವುಗಳನ್ನು ಹೊಂದಲು ಈ ಧರ್ಮಭೂತಜ್ಞಾನವು ಸಹಕಾರಿಯಾಗಿರುತ್ತದೆ ಎಂಬ ಭಾವವು. ಇಲ್ಲಿ ಉಪಾಸಕನಿಗೇನೋ ಪರಬ್ರಹ್ಮಸಾಕ್ಷಾತ್ಕಾರರೂಪದಲ್ಲಿ ಭಗವದನುಭವ ಉಂಟು. ಆದರೆ ಪ್ರಪದನಾನುಷ್ಠಾನಿಗೆ ಇಲ್ಲಿಯೂ ಕೂಡ ಭಗವದನುಭವ ಉಂಟೋ ಎಂದರೆ, ಅದಕ್ಕೆ ನಮ್ಮಾಳ್ವಾರ್ರವರೇ ನಿದರ್ಶನವು; ಭಗವದನುಭವ ಅವರಿಗೆ ಉಂಟೆಂಬುದು ಅವರ ಅಮೋಘಪಾಶುರಗಳಿಂದಲೇ ವೇದ್ಯವು. ಹೀಗೆ ಪ್ರಪದನಾನುಷ್ಠಾನ ಮಾಡಿ ಕೃತಕೃತ್ಯನಾದ ಮುಮುಕ್ಷುವಿಗೆ ಶರೀರಧಾರಣದಿಂದ ಪ್ರಯೋಜನವೇನು ಎಂಬ ಆಕ್ಷೇಪಕ್ಕೆ ಈ ಮೇಲಿನ ವಾಕ್ಯವು, ಭಗವದನುಭವ ಕೈಙ್ಕರ್ಯಾದಿಗಳಿಗೆ ಉಪಯುಕ್ತವಾಗುತ್ತದೆಂದು ಸಮಾಧಾನವನ್ನು ಬೋಧಿಸುತ್ತದೆ.

ಆದರೆ ಇನ್ನು ಕೆಲವರು ಐಹಿಕಪುರುಷಾರ್ಥಗಳನ್ನೇ ಆಗಲಿ, ಅಥವಾ ಆಮುಷ್ಮಿಕ ಪುರುಷಾರ್ಥಗಳನ್ನೇಯಾಗಲಿ ಈ ಶರೀರಧಾರಣೆ ಮೂಲಕವಾಗಿ, ಧರ್ಮಭೂತಜ್ಞಾನದ ಬಲದಿಂದ ಸಂಪಾದಿಸಿಕೊಳ್ಳದೆಯೂ, ಸುಖಾದಿಗಳನ್ನು ಮೇಲೆ ಹೇಳಿದ ರೀತಿಯಲ್ಲಿ ಅನುಭವಿಸದೆಯೂ ದುಃಖಭಾಗಿಗಳಾಗಿದ್ದಾರಲ್ಲಾ, ಅವರಿಗೆ ಈ ಧರ್ಮಭೂತಜ್ಞಾನವು ಹಾಗೆ ಪರಿಣಮಿಸಲು ಕಾರಣವೇನೆಂದರೆ :—ಆಹಾರವು ಸತ್ವವಿಶಿಷ್ಟವಾಗಿದ್ದರೆ ಹೇಗೆ ಶರೀರಿಗೆ ಅನುಕೂಲವಾಗಿ, ಗುರೂಪಸದನ ಮುಂತಾದ್ದರಲ್ಲಿ ಅಭಿರುಚಿಯುಂಟಾಗಿ ಮೋಕ್ಷಪ್ರಾಪ್ತಿಗೆ ಅನುಕೂಲವಾಗುತ್ತದೋ, ಹಾಗಲ್ಲದೆ ವಿಷಸಂಸ್ಪೃಷ್ಟವಾಗಿದ್ದರೆ ಈತನಿಗೆ ದೇಹಧಾರಣೆಗೆ ಹೇಗೆ ವಿಘಾತವನ್ನುಂಟುಮಾಡುತ್ತದೆಯೋ, ಹಾಗೆಯೇ, ಈ ಧರ್ಮಭೂತಜ್ಞಾನವೂ ಅಂತಹ ಪಾಪಕರ್ಮಗಳಿಂದ ಬದ್ಧನಾದವನ ವಿಷಯದಲ್ಲಿ ಮೇಲೆ ಹೇಳಿದ ಪುರುಷಾರ್ಥಸಾಧನೆಗಳಿಗೆ ವಿಪರೀತವಾದ ಮಾರ್ಗಗಳಲ್ಲಿ ಪ್ರವರ್ತಿಸುವ ಹಾಗೆ ಮಾಡುತ್ತದೆಂದು ಮುಂದೆ ಹೇಳುತ್ತಾರೆ.

ಪಾಪಕೃತ್ತುಗಳುಕ್ಕು ಇಶ್ಶರೀರಧಾರಣಮ್ ವಿಪರೀತಫಲತ್ತುಕ್ಕು ಹೇತುವಾಯಿರುಕ್ಕುಂ. ಇಜ್ಜೀವರ್‌ಗಳ್ ಇಶ್ಶರೀರತ್ತೈ ವಿಟ್ಟಾಲ್ ಇದಿ೯ ಸಂಘಾತಂ ಕುಲೈಯುಮಿತ್ತನೈ. ಶರೀರತ್ತುಕ್ಕು ಪಾದಾನ ಮಾನ ದ್ರವ್ಯಜ್ಞಳ್ ಈಶ್ವರಶರೀರಮಾಯ್‌ಕ್ಕೊಂಡು ಕಿಡಕ್ಕುಮ್.

ಪಾಪಕೃತ್ತುಗಳುಕ್ಕು - ಪಾಪ ಮಾಡಿದವಂಗೆ, ಈ ಶರೀರಧಾರಣವು, ವಿಪರೀತಫಲತ್ತುಕ್ಕು - ಮೇಲೆ ಹೇಳಿದ ರೀತಿಯಲ್ಲಿ ಪುರುಷಾರ್ಥಸಾಧನೆಗೆ ಅನುಕೂಲಿಸದೆ ವಿಪರೀತವಾದ ಪಾಪಫಲಗಳಿಗೆ, ಹೇತುವಾಯಿರುಕ್ಕುಂ - ಕಾರಣವಾಗಿರುತ್ತದೆ. ಇದಕ್ಕೆ ಹಿರಣ್ಯಕಶಿಪು, ರಾವಣ, ಕಂಸ, ದುರ್ಯೋಧನಾದಿಗಳೇ ನಿದರ್ಶನವು. ಹಾಗೆಯೇ ಶರೀರಧಾರಣವು ಅನುಕೂಲಫಲದಾಯಕವಾಗಿ ಪರಿಣಮಿಸುವದಕ್ಕೆ ಅನೇಕ ನಿದರ್ಶನಗಳುಂಟು :—ಪ್ರಹ್ಲಾದ, ಧ್ರುವ, ಸುಗ್ರೀವ, ಆಂಜನೇಯ, ವಿಭೀಷಣ, ಪಾಂಡವರು, ಅಕ್ರೂರ, ವಿದುರ, ಉದ್ಧವಾದಿಗಳು. "ಸಾಧುಕಾರೀ ಸಾಧುರ್ಭವತಿ, ಪಾಪಕಾರೀ ಪಾಪೋ ಭವತಿ" ಎಂಬ ವಾಕ್ಯವೂ, "ಶುಭಕೃಚ್ಛುಭಮಾಪ್ನೋತಿ ಪಾಪಕೃತ್ಪಾಪಮಶ್ನುತೇ । ವಿಭೀಷಣಸ್ಸುಖಂ ಪ್ರಾಪ್ತಸ್ತ್ವಂ ಪ್ರಾಪ್ತಃ ಪಾಪಮೀದೃಶಂ" ಎಂದರೆ "ಶುಭಕರವಾದ ವ್ಯಾಪಾರಗಳುಳ್ಳವನು ಮಂಗಳವನ್ನು ಹೊಂದುವನು, ಪಾಪಕರ್ಮವನ್ನು ಮಾಡುವವನು ದುಃಖವನ್ನನುಭವಿಸುವನು" ಎಂಬ ಮಂದೋದರೀ ವಾಕ್ಯವೂ ಈ ಅಭಿಪ್ರಾಯವನ್ನೇ ವ್ಯಕ್ತಪಡಿಸುತ್ತದೆ. ಮುಂದೆ ಧರ್ಮಿಸ್ವರೂಪವೂ ಧರ್ಮಭೂತಜ್ಞಾನವೂ ಸಹ ಸದಾ ಆತ್ಮನೊಂದಿಗೆ ಇರತಕ್ಕವೇ ವಿನಾ ಶರೀರಕ್ಕೆ ಸಂಬಂಧಿಸಿದವಲ್ಲವೆಂಬದಾಗಿ ಮುಂದೆ ತಿಳಿಸುತ್ತಾರೆ. ಇಜ್ಜೀವರ್‌ಗಳ್ - ಈ ಜೀವಾತ್ಮರು, ಇಶ್ಶರೀರತ್ತೈವಿಟ್ಟಾಲ್ - ಈ ಶರೀರವನ್ನು ಬಿಟ್ಟರೆ, ಇದಿ೯ ಸಂಘಾತಂ - ಈ ಶರೀರದ ಪಂಚಭೂತಗಳ ಸಂಯೋಗವು, ಅಥವಾ ಕರಚರಣಾದ್ಯವಯವಗಳ ಸಂಯೋಗವು, ಕುಲೈಯುಮ್ - ನಾಶವಾಗುತ್ತದೆ, ಇತ್ತನೈ - ಇಷ್ಟೇ ಸರಿ; ಶರೀರತ್ತುಕ್ಕು ಪಾದಾನಮಾನದ್ರವ್ಯಜ್ಞಳ್ - ಶರೀರಕ್ಕೆ ಮೂಲಕಾರಣಭೂತವಾದ ದ್ರವ್ಯಗಳು, ಈಶ್ವರಶರೀರಮಾಯ್‌ಕ್ಕೊಂಡು ಕಿಡಕ್ಕುಂ - ಈಶ್ವರನಿಗೆ ಶರೀರವಾಗಿಕೊಂಡು ನಿಲ್ಲುತ್ತವೆ. ಮರಣಪ್ರಾಪ್ತವಾಗಿ ಆತ್ಮನು ಈ ಶರೀರವನ್ನು ಬಿಟ್ಟುಹೋಗುವಾಗ ಆತನ ಸ್ವರೂಪ ಮತ್ತು ಧರ್ಮಭೂತಜ್ಞಾನದಲ್ಲೂ ಏನೊಂದು ವ್ಯತ್ಯಾಸವಿರುವದಿಲ್ಲವು. ಆದುದರಿಂದ ಸಂಘಾತಂಕುಲೈಯುಮ್ ಇತ್ತನೈ ಎಂಬದಾಗಿ ಹೇಳಿರುತ್ತಾರೆ. ಸ್ಥೂಲರೂಪದೇಹವನ್ನು ಮಾತ್ರ

ಬಿಟ್ಟು ಹೋಗುವನು. ಸೂಕ್ಷ್ಮ ರೂಪದಲ್ಲಿ ಮುಖ್ಯಪ್ರಾಣ, ಇಂದ್ರಿಯಗಳೂ ಮನಸ್ಸು ಇವುಗಳೊಂದಿಗೆ ಹೋಗುವನು. ಬಿಟ್ಟು ಹೋದ ಸ್ಥೂಲಶರೀರವು ಅನಂತರ ಕೊಳೆಯುತ್ತದೆ. ಆತ್ಮನು ದೇಹದಲ್ಲಿರುವವರಿವಿಗೂ ಕೊಳೆಯುವುದಿಲ್ಲವು. ಕೊಳೆತ ನಂತರ ಪಂಚಭೂತಗಳೊಂದಿಗೆ ಆಯಾ ಭಾಗಗಳು ಹೋಗಿ ಸೇರಿಕೊಳ್ಳುತ್ತವೆ. ಹಾಗೆ ಕೊಳೆತರೆ ಆ ದ್ರವ್ಯಗಳೆಲ್ಲಾ ನಾಶಹೊಂದಿದವೆಂದು ತಿಳಿಯಕೂಡದು. ಶರೀರದ್ರವ್ಯವೆಲ್ಲಾ ಸರ್ವೇಶ್ವರನಿಗೂ ಕೂಡ ಶರೀರವೆಂದು ಹಿಂದೆಯೇ ಹೇಳಲ್ಪಟ್ಟಿರುತ್ತದಷ್ಟೆ. ಜೀವನಿಗೆ ಶರೀರವಾದಾಗ, ಆ ದ್ರವ್ಯಗಳೆಲ್ಲಾ ಜೀವನಿಗೂ ಜೀವದ್ವಾರಾ ಈಶ್ವರನಿಗೂ ಸಹ ಶರೀರವಾಗಿತ್ತು. ಜೀವನ ದೇಹಾವಸಾನಾನಂತರ ಆ ದ್ರವ್ಯಗಳು ಸರ್ವೇಶ್ವರನಿಗೆ ಶರೀರವಾಗಿಯೇ ಇರುತ್ತವೆ. ಪ್ರಕೃತಿಯು ನಿತ್ಯವಾದುದರಿಂದ ನಾಶವೆಂಬುವದಿಲ್ಲವು. ಆದುದರಿಂದ ಸಂಘಾತಂಕುಲ್ಯೆಯುವ್ ಎಂದು ಹೇಳಿದರೇ ವಿನಾ ದ್ರವ್ಯವೇ ನಾಶವಾಗುತ್ತದೆಂದು ಹೇಳಲಿಲ್ಲವು, ಅವಸ್ಥಾನಾಶವೇ ವಿನಾ ದ್ರವ್ಯನಾಶವಿಲ್ಲವೆಂದು ತಿಳಿಸುವದಕ್ಕಾಗಿಯೇ ಇರ್ದಿ ಸಂಘಾತಂ ಕುಲ್ಯೆಯುವ್ ಎಂದು ಹೇಳಿರುತ್ತಾರೆ. ದಹನಕರ್ಮವು, ಇದನ್ನೇ ಶೀಘ್ರವಾಗಿ ನಡೆಯುವ ಹಾಗೆ ಮಾಡುವದರಿಂದಲೂ ದೇಹವು ಕೊಳೆತು ಕ್ರಿಮಿಮೊದಲಾದವುಗಳ ಪಾಲಾಗದೆ ಹಾಗೆ ಮಾಡುವದರಿಂದಲೂ, ಕೊಳೆಯುವ ಹಾಗೆ ಬಿಡುವದಕ್ಕಿಂತ, ಉತ್ತಮ ಪಕ್ಷವು. ಪಾಶ್ಚಾತ್ಯರೂ ಕೂಡ ಈಗ ದ್ವಿಜರು ಅವಲಂಬಿಸಿರುವ ದಹನ ಕರ್ಮವನ್ನೇ ಅವಲಂಬಿಸುವರಾಗಿರುತ್ತಾರೆ.

ಬದ್ಧರಿಗೂ ನಿತ್ಯಮುಕ್ತರಿಗೂ ಸ್ಥಿತಿಪ್ರವೃತ್ತಿಗಳಲ್ಲಿರುವ ವ್ಯತ್ಯಾಸವು.

ಹೀಗೆ ಬದ್ಧಜೀವನಿಗೆ ನೈಜಸ್ವರೂಪದಲ್ಲಿ ಏನೊಂದು ಭೇದವಿಲ್ಲವೆಂದು ತಿಳಿಸಿ, ಕರ್ಮಾನುಗುಣವಾಗಿ ಧರ್ಮಭೂತಜ್ಞಾನದ ಸಙ್ಕೋಚವಿಕಾಸಗಳ ಮೂಲಕ ಪರಸ್ಪರ ವಿಶೇಷಭೇದಗಳುಂಟೆಂದು ತಿಳಿಸಿ, ಮುಂದೆ ಅವರ ಸ್ಥಿತಿಪ್ರವೃತ್ತಿಗಳು, ನಿತ್ಯಮುಕ್ತರ ಸ್ಥಿತಿಪ್ರವೃತ್ತಿಗಳಿಗಿಂತಲೂ ಹೇಗೆ ವ್ಯತ್ಯಸ್ತವಾದುವೆಂದು ತಿಳಿಸುತ್ತಾರೆ. ಆದರೆ ವ್ಯತ್ಯಾಸವೇಕಿರಬೇಕೆಂಬ ಶಂಕಾಬಾಧಿಸಬಹುದು. ಹೇಗೆಂದರೆ :—ಜೀವಾತ್ಮರೆಲ್ಲಾ ಜಾನೈಕಾಕಾರತೆಯಿಂದ ಸಮರು, ಎಲ್ಲರೂ ಸರ್ವೇಶ್ವರನಿಗೆ ಶರೀರವು; ಎಲ್ಲರೂ ಸರ್ವೇಶ್ವರನಿಂದಲೇ ಸತ್ತೆಯುಳ್ಳವರು; ಹೀಗಿರುವಲ್ಲಿ ವ್ಯತ್ಯಾಸವು ಯಾವ ಕಾರಣದಿಂದವೆಂದರೆ :—ಬದ್ಧನಿಗೆ ಅನಾದಿಯಾಗಿ ಬಂದಿರುವ ಕರ್ಮಪ್ರವಾಹನೇ ಕಾರಣವೆಂದೂ, ತನ್ಮೂಲಕವಾಗಿ ಇವನಿಗೆ ಸ್ಥಿತಿಪ್ರವೃತ್ತಿಗಳಲ್ಲಿ ವ್ಯತ್ಯಾಸ ಉಂಟಾಗಿರುತ್ತದೆಂದು ಹೇಳುತ್ತಾರೆ :—

ಬದ್ಧಾನಾಂ ನಿತ್ಯಮುಕ್ತೇಭ್ಯಃ ಸ್ಥಿತಿ ಪ್ರವೃತ್ತಿ ಭೇದ ಕಥನಂ

ಬದ್ಧಚೇತನರುಕ್ಕು ಇತರರಿಲ್ ಕಾಟ್ಟಿಲ್ ಸ್ಥಿತಿಭೇದಮ್ :— ಸಂಸಾರಸಂಬಂಧಮ್ ಯಾವನ್ಮೋಕ್ಷ ಮನುವರ್ತಿಕ್ಕೈ.

ಪ್ರವೃತ್ತಿಭೇದಮ್ :— ಪುಣ್ಯಪಾಪಾನುಭಯರೂಪಜ್ಞಾನ ತ್ರಿವಿಧ ಪ್ರವೃತ್ತಿಗಳುಮ್.

ಬದ್ಧಚೇತನರುಕ್ಕು ಇತರರಿಲ್ ಕಾಟ್ಟಿಲ್ - ಬದ್ಧಚೇತನರಿಗೆ ಇತ್ತರಾದ ನಿತ್ಯಮುಕ್ತರುಗಳಿಗಿಂತ ಸ್ಥಿತಿಯಲ್ಲಿ ವ್ಯತ್ಯಾಸವೇನೆಂದರೆ :—ಸಂಸಾರ ಸಂಬಂಧಮ್ - ಸಂಸಾರ ಸಂಬಂಧವು ಎಂದರೆ ಪ್ರಕೃತಿ ಸಂಬಂಧವು, ಯಾವನ್ಮೋಕ್ಷಂ - ಮೋಕ್ಷಪ್ರಾಪ್ತಿಯುಂಟಾಗುವವರಿವಿಗೂ, ಅನುವರ್ತಿಕ್ಕೈ - ಅನುಸರಿಸಿ ಬರೋಣವು. ಕರ್ಮಮೂಲಕವಾಗಿ ಒದಗಿದ ಸಂಸಾರ ಸಂಬಂಧವು ಎಂದರೆ ಪ್ರಕೃತಿರೂಪ ಶರೀರಸಂಬಂಧವು ಈತನು ಮೋಕ್ಷವನ್ನು ಹೊಂದುವವರಿಗೂ ಈತನಿಗೆ ತಪ್ಪಿದ್ದಲ್ಲವು ಎಂಬ ಭಾವವು. ಜೀವಾತ್ಮನು ಲೀಲಾವಿಭೂತಿಯಲ್ಲಿರುವವರಿವಿಗೂ ಪ್ರಕೃತಿ ಸಂಬಂಧವೂ ತನ್ಮೂಲಕ ಕರ್ಮವಾಸನಾದಿಗಳೂ ತಪ್ಪಿದ್ದಲ್ಲವು. ನಿತ್ಯವಿಭೂತಿಯನ್ನು ಸೇರಿ ಮೋಕ್ಷಸುಖಾನುಭವದಲ್ಲಿ ಪ್ರಕೃತಿ, ಕರ್ಮವಾಸನಾದಿಗಳ ಸಂಬಂಧವಿಲ್ಲವು. ಭಕ್ತಿಪ್ರಪತ್ತಿರೂಪಸಾಧ್ಯೋಪಾಯಗಳಲ್ಲಿ ಯಾವುದಾದರೂ ಒಂದನ್ನವಲಂಬಿಸಿದರೆ ಆಗ ದೇಹಾವಸಾನಾನಂತರ ಅರ್ಚಿರಾದಿ ಗತಿಯು ಪ್ರಾಪ್ತವಾಗಿ, ವಿರಜಾನದಿಯನ್ನು ದಾಟಿ, ಅಮಾನವ ಕರ ಸ್ಪರ್ಶದಿಂದ ಈತನಿಗೆ ಪ್ರಕೃತಿ ಮೊದಲಾದವುಗಳ ಸಂಬಂಧವು ತೊಲಗುತ್ತದೆ.

ಹಿಂದೆ ಜೀವನಿಗೆಲ್ಲಾ ಸಾಮಾನ್ಯವಾಗಿ ಪ್ರವೃತ್ತಿಯು ಕರ್ತೃತ್ವ ಭೋಕ್ತೃತ್ವವೆಂದು ಹೇಳಲ್ಪಟ್ಟಿತು. ಈಗ ಪ್ರವೃತ್ತಿಯಲ್ಲೂಕೂಡ ಬದ್ಧಚೇತನರಿಗೂ ಇತರರಾದ ನಿತ್ಯಮುಕ್ತರುಗಳಿಗೂ ವ್ಯತ್ಯಾಸವುಂಟೆಂದು ತಿಳಿಸುತ್ತಾರೆ.

ಪ್ರವೃತ್ತಿಭೇದಮ್ ಬದ್ಧಚೇತನರಿಗೆ ಇತರರಿಗಿಂತ ಪ್ರವೃತ್ತಿಯಲ್ಲಿ ವ್ಯತ್ಯಾಸವೇನೆಂದರೆ :— ಪುಣ್ಯಪಾಪಾನುಭಯ ರೂಪಜ್ಞಾನ - ಪುಣ್ಯ, ಪಾಪ, ಪುಣ್ಯಪಾಪವೆರಡೂ ಅಲ್ಲದೆ, ಹೀಗೆ ತ್ರಿವಿಧ ಪ್ರವೃತ್ತಿಗಳುಮ್ - ಮೂರು ವಿಧವಾದ ಪ್ರವೃತ್ತಿಗಳು. ಈತನ ಪ್ರವೃತ್ತಿಗೆ ಕರ್ಮವೆಂದು ಹೆಸರು, ಕರ್ಮಗಳು ಮೂರು ವಿಧ : ಪುಣ್ಯ, ಪಾಪ, ಅನುಭಯವೆಂದು. ಪುಣ್ಯವೂ ಪಾಪವೂ ಇಲ್ಲದ ಕರ್ಮವು ಅನುಭಯವಾದುದು. ನಿತ್ಯಕರ್ಮಾನುಷ್ಠಾನಗಳೂ ನಿಷಿದ್ಧವಲ್ಲದಿರುವ ಇಂದ್ರಿಯವ್ಯಾಪಾರಗಳೂ ಇವೇ ಮೊದಲಾದವು.

ಮುಕ್ತಾನಾಂ ಇತರೇಭ್ಯಃ ಸ್ವರೂಪಾದಿ ಭೇದ ಕಥನಂ.

ಮುಕ್ತರುಕ್ಕು ನೀಕ್ಕಿಯುಳ್ಳಾರಿಲ್ ಭೇದಂ :— ಪ್ರತಿಬಂಧಕ ನಿವೃತ್ತಿಯಾಲೈ ಯಾವಿರ್ಭೂತಸ್ವರೂಪರಾಯಿರುಕ್ಕೈ. ಸ್ಥಿತಿಭೇದಂ :-

ಮೋಕ್ಷೋಪಾಯಸಾಧನಗಳೂ ಕೂಡ ಇವುಗಳಲ್ಲೇ ಅಂತರ್ಗತಗಳು. ಪುಣ್ಯಗಳೂ ಕೂಡ, ಸ್ವರ್ಗಭೋಗಾದಿ ಸುಖಗಳನ್ನು ಅಲ್ಪಕಾಲ ಕೊಡತಕ್ಕವುಗಳಾದುದರಿಂದ, ಪಾಪಗಳ ಹಾಗೆಯೇ ಮೋಕ್ಷಪ್ರತಿಬಂಧಕಗಳು. ಅದುದರಿಂದ ಅವುಗಳನ್ನೂ ಕೂಡ ಪಾಪಗಳಲ್ಲಿಯೇ ಸೇರಿಸಿ ಹೇಳುತ್ತಾರೆ. ಮೋಕ್ಷಾರ್ಥಿಯು ಪುಣ್ಯಪಾಪಗಳೆರಡನ್ನೂ ಕಳೆದುಕೊಳ್ಳಬೇಕು. "ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ" ಎಂದು ಶ್ರುತಿಯು ಹೇಳುತ್ತದೆ. ಪುಣ್ಯಕರ್ಮಗಳು ಯಾವುವೆಂದರೆ :—ಇಷ್ಟಾ - ಯಾಗಾದಿಗಳು, ಪೂರ್ತಾ - ಧಾವಿ, ಕೆರೆ, ಕಟ್ಟೆ ಮೊದಲಾದವುಗಳನ್ನು ಕಟ್ಟಿಸುವದು ; ಇವುಗಳನ್ನು ಮಾಡುವವರಿಗೆ, ದ್ಯುಲೋಕವೆಂದರೆ ಸ್ವರ್ಗಲೋಕದ ಪ್ರಾಪ್ತಿಯು ಹೇಳಿರುತ್ತದೆ. ಇವರುಗಳಿಗೆ ಮೋಕ್ಷವಿಲ್ಲವು. ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ (ಗೀತಾ. 9.21.) ಎಂದು ಹೇಳಿರುವಹಾಗೆ ಆ ಪುಣ್ಯಕರ್ಮ ಫಲಾನುಭವವು ಪೂರೈಸಲು, ಮಿಕ್ಕ ಕರ್ಮಾನುಭವಕ್ಕಾಗಿ ಜನ್ಮವೆತ್ತಲು ಪುನಃ ಈ ಲೋಕಕ್ಕೇ ಬರುವರು. ಅದುದರಿಂದ ಇಂತಹ ಪುಣ್ಯಕರ್ಮಗಳನ್ನು ಮಾಡಿದರೂ, ಆ ಪುಣ್ಯಕರ್ಮ ಫಲಾನುಭವದಿಂದ ತಪ್ಪಿಸಿಕೊಳ್ಳುವದಕ್ಕಾಗಿ "ನಮಮ" ವೆಂದು ತ್ಯಾಗವನ್ನು ಹೇಳತಕ್ಕದ್ದು. ಇಂತಹ ಕರ್ಮಗಳ ಸಂಬಂಧವೇ ಆಗಲಿ ಮತ್ತು ಇತರ ನಿತ್ಯಕರ್ಮಾನುಷ್ಠಾನದ ಅವಶ್ಯಕತೆಯೇ ಆಗಲಿ ನಿತ್ಯಮುಕ್ತರುಗಳಿಗಿರುವುದಿಲ್ಲ. ಬದ್ಧರಿಗೆ ಮಾತ್ರವೇ ಇಂತಹ ಮೂರು ವಿಧವಾದ ಪ್ರವೃತ್ತಿಗಳೆಂದು ಭಾವಿಸತಕ್ಕದ್ದು.

ಮುಕ್ತರಿಗೆ ಇತರರಿಗಿಂತ ಸ್ವರೂಪಸ್ಥಿತಿಪ್ರವೃತ್ತಿಯಲ್ಲಿರುವ ವ್ಯತ್ಯಾಸವು.

ಮುಕ್ತರುಕ್ಕು - ಮುಕ್ತರಿಗೆ, ನೀಕ್ಕಿಯುಳ್ಳಾರಿಲ್ - ಇತರರಾದ ಬದ್ಧ ನಿತ್ಯರುಗಿಂತ ಇರುವ, ಭೇದಂ - ಸ್ವರೂಪದಲ್ಲಿರುವ ಭೇದವೇನೆಂದರೆ :— ಪ್ರತಿಬಂಧಕನಿವೃತ್ತಿಯಾಲೇ - ಪ್ರತಿಬಂಧಕವಾಗಿಪ್ಪ ಪ್ರಕೃತಿಸಂಬಂಧವು ನಿವರ್ತಿಸಿಹೋಗುವದರಿಂದ, ಆವಿರ್ಭೂತಸ್ವರೂಪರಾಯಿರುಕ್ಕೈ-ತಮ್ಮ ನೈಜ ಸ್ವರೂಪವಾದ ಜ್ಞಾನತ್ವ, ಆನಂದತ್ವ, ಅಮಲತ್ವಾದಿಗಳು ಆವಿರ್ಭಾವ ಉಳ್ಳವ

ಪೂರ್ವಾವಧಿಯುಣ್ಣಾನ ವಾವಿರ್ಭಾವತ್ತುಕ್ಕುತ್ತ್ರರಾವಧಿಯನ್ರಿಕ್ಕೇ ಯಿರುಕ್ಕೈ.

ರಾಗಿರುವಿಕೆಯು. ಪ್ರಕೃತಿ ಸಂಬಂಧದಿಂದ ಸ್ವಸ್ವರೂಪವು ತಿರೋಹಿತವಾಗಿತ್ತು. ಮುಕ್ತದೆಸೆಯಲ್ಲಿ ಪ್ರಕೃತಿಸಂಬಂಧವಿಲ್ಲದುದರಿಂದ, ತನ್ನ ಜ್ಞಾನ ಮುಂತಾದವುಗಳಿಗೆ ಆಚ್ಛಾದನವು ತಪ್ಪಿಹೋಗಿ ಸ್ವಸ್ವರೂಪಾವಿರ್ಭಾವವುಂಟಾಗುತ್ತದೆ. ಹಾಗೆಯೇ ಶ್ರುತಿಯಲ್ಲಿ ಪರಂಜ್ಯೋತಿರುಪಸಮ್ಪದ್ಯ ಸ್ವೇನರೂಪೇಣಾಭಿನಿಷ್ಪದ್ಯತೇ, ಎಂದು ಸ್ವಸ್ವರೂಪಾವಿರ್ಭಾವವು ಮುಕ್ತನಿಗೆ ಹೇಳಲ್ಪಟ್ಟಿರುತ್ತದೆ. ಈ ಅಭಿಪ್ರಾಯವನ್ನೇ " ಸಮ್ಪದ್ಯಾವಿರ್ಭಾವಃ ಸ್ವೇನ ಶಬ್ದಾತ್ " (ಶಾರೀ. 4. 4. 1.) ಎಂಬ ಸೂತ್ರವು ಉಪಪಾದಿಸುತ್ತದೆ. ಆದುದರಿಂದ ಮುಕ್ತನು ಬದ್ಧನಿಗಿಂತ ಸ್ವರೂಪದಲ್ಲಿ ವಿಲಕ್ಷಣನು. ಬದ್ಧನಾದರೋ ತಿರೋಹಿತ ಸ್ವಸ್ವರೂಪವನ್ನುಳ್ಳವನು. ಮುಕ್ತನು, ತಿರೋಹಿತವಾದುದು ತಪ್ಪಿಹೋಗಿ ಸ್ವಸ್ವರೂಪಾವಿರ್ಭಾವವುಳ್ಳವನು. ನಿತ್ಯನು ಎಂದಿಗೂ, ಸ್ವರೂಪವು ತಿರೋಹಿತವಾಗದೇ ಅನಾದಿಯಾಗಿ ಸ್ವಸ್ವರೂಪವುಳ್ಳವನು.

ಸ್ಥಿತಿ ಭೇದವು - ಮುಕ್ತನಿಗೆ ಇತರರಿಗಿಂತಲೂ ಸ್ಥಿತಿಯಲ್ಲಿರುವ ವ್ಯತ್ಯಾಸವೇನೆಂದರೆ :—ಪೂರ್ವಾವಧಿಯುಣ್ಣಾನ ವಾವಿರ್ಭಾವತ್ತುಕ್ಕು - ಮುಕ್ತನ ಸ್ವಸ್ವರೂಪಾವಿರ್ಭಾವವು ಯಾವುದೋ ಒಂದು ಕಾಲದಲ್ಲಿ ಉಂಟಾಗುವದರಿಂದ ಅದಕ್ಕೆ ಪೂರ್ವಾವಧಿಯುಂಟು ಎಂದರೆ ಅದಕ್ಕೆ ಮುಂಚೆ ಸ್ವಸ್ವರೂಪಾವಿರ್ಭಾವವು ಇರಲಿಲ್ಲವು; ಆದುದರಿಂದ ಪೂರ್ವಾವಧಿಯುಳ್ಳ ಈ ಸ್ವಸ್ವರೂಪಾವಿರ್ಭಾವಕ್ಕೆ, ಉತ್ತರಾವಧಿಯನ್ರಿಕ್ಕೆ ಯಿರುಕ್ಕೈ - ಆ ಸ್ವಸ್ವರೂಪಾವಿರ್ಭಾವವಾದುದಕ್ಕೆ ಉತ್ತರಾವಧಿ ಇಲ್ಲದ ಹಾಗೆ ಎಂದರೆ ಅದಕ್ಕೆ ಎಂದಿಗೂ ಚ್ಯುತಿ ಇಲ್ಲದ ಹಾಗೆ ಇರುವಿಕೆಯು. ಈ ಮುಕ್ತರ ಸ್ವರೂಪಾವಿರ್ಭಾವಕ್ಕೆ ಪೂರ್ವಾವಧಿಯುಂಟೇ ವಿನಾ ಉತ್ತರಾವಧಿಯಿಲ್ಲವು. ನಿತ್ಯರು ಯಾವಾಗಲೂ ಸ್ವಸ್ವರೂಪದಿಂದಲೇ ಇರುವದರಿಂದ ಇವಕ್ಕೆ ಪೂರ್ವಾವಧಿಯೂ ಇಲ್ಲವು, ಉತ್ತರಾವಧಿಯೂ ಇಲ್ಲವು. ಬದ್ಧರಿಗಾದರೋ ಸ್ವಸ್ವರೂಪಾವಿರ್ಭಾವವೇ ಇಲ್ಲವು.

ಆದರೆ ಬದ್ಧರಿಗೆ ಪರಸ್ಪರ ಸ್ಥಿತಿಯಲ್ಲಿ ಬೇಧವಿರುವಹಾಗೆ ಮುಕ್ತರಿಗೆ ಪರಸ್ಪರ ಸ್ಥಿತಿಯಲ್ಲಿ ಭೇದ ಉಂಟೋ ಎಂದರೆ, ಅಂತಹಭೇದವೇನೂ ಇಲ್ಲವೆಂದೂ ಆದರೆ ಕೆಲವರಿಗೆ ಆ ಮುಕ್ತಸ್ಥಿತಿಯು ಬೇಗ ಉಂಟಾದುದರಿಂದ ಹೆಚ್ಚು ಕಾಲ ಮುಕ್ತಾವಸ್ಥೆಯೂ, ಇನ್ನು ಕೆಲವರಿಗೆ ತುಂಬಾ ಕಾಲವಿಳಂಬದಿಂದುಂಟಾಗುವ

ಇವರುಗಳಕ್ಕನ್ಯೋನ್ಯಂ ಸ್ಥಿತಿಭೇದ ಮಾವಿರ್ಭವತ್ತಿಲ್ ಮುರ್ಪಾಡು ಪಿರ್ಪಾಡುಗಳಾಲುಣ್ಟಾನ ಮುನ್ಬತ್ತ ವೇತ್ತ ಚ್ಚುರಕ್ಕುಮ್.

ಪ್ರವೃತ್ತಿ ಭೇದಮ್ :— ಅನಾದಿ ಕಾಲ ಮಿಳನ್ದು ಪೆತ್ತ ಪರಿಪೂರ್ಣ ಭಗವದನುಭವಜನಿತ ಪ್ರೀತಿಕಾರಿತಮಾನ ಯಥಾಭಿಮತ ಕೈಙ್ಕರ್ಯ ತದ್ವಿಶೇಷಙ್ಗಳ್.

ದರಿಂದ ಕಮ್ಮಿಕಾಲ ಮುಕ್ತಾವಸ್ಥೆಯೂ ಇಷ್ಟೇ ವ್ಯತ್ಯಾಸವೇ ವಿನಾ ಜೀವರಿ ಇನ್ನು ಯಾವ ವ್ಯತ್ಯಾಸವೂ ಇಲ್ಲವೆಂದು ಮುಂದಿನ ವಾಕ್ಯದಿಂದ ಹೇಳುತ್ತಾರೆ.

ಇವರ್‌ಗಳುಕ್ಕು – ಈ ಮುಕ್ತಾತ್ಮರುಗಳಿಗೆ, ಅನ್ಯೋನ್ಯಂ ಸ್ಥಿತಿ ಭೇದಂ–ಪರಸ್ಪರ ಸ್ಥಿತಿಭೇದವು, ಆವಿರ್ಭವತ್ತಿಲ್–ಮುಕ್ತದೆಸೆಯು ಪ್ರಾಪ್ತವಾಗಿ ಸ್ವಸ್ವರೂಪಾವಿರ್ಭಾವದಲ್ಲಿ, ಮುರ್ಪಾಡು ಪಿರ್ಪಾಡುಗಳಾಲುಣ್ಟಾನ – ಮುಂದಾಗಿಯೂ ಹಿಂದಾಗಿಯೂ ಆಗುವದರಿಂದುಂಟಾದ, ಮುನ್ಬತ್ತ – ಪೂರ್ವಾವಧಿಯುಳ್ಳ, ಏತ್ತಚ್ಚುರುಕ್ಕುಂ – ಹೆಚ್ಚು ಕಡಿಮೆಯು, ಒಬ್ಬರಿಗೆ ಮುಕ್ತಾವಸ್ಥೆಯು ಮುಂದಾಗಿಯಾಗುವದರಿಂದ ಮುಕ್ತದೆಸೆಯು ಹೆಚ್ಚುಕಾಲ ಉಳ್ಳದ್ದಾಗುತ್ತದೆ; ಇನ್ನೊಬ್ಬರಿಗೆ ಹಿಂದಾಗಿಯಾಗುವದರಿಂದ ಸ್ವಲ್ಪ ಕಮ್ಮಿ ಕಾಲ ಉಳ್ಳದ್ದಾಗುತ್ತದೆಂಬಭಿಪ್ರಾಯವು; ಎಂದರೆ ಒಬ್ಬ ಮುಕ್ತನಿಗೆ ಹೆಚ್ಚು ಕಾಲದನುಭವ, ಇನ್ನೊಬ್ಬನಿಗೆ ಕಮ್ಮಿ ಕಾಲ ಅನುಭವ, ಇಷ್ಟೇ ವಿನಾ ಆನಂದವು ಎಲ್ಲರಿಗೂ ಒಂದೇ ಸಮವೆಂಬ ಭಾವವು. ಉತ್ತರಾವಧಿ ಇಲ್ಲದೇನೆ ಎಲ್ಲರಿಗೂ ಸಮಾನವಾದ ಆನಂದವಾದರೂ ಪೂರ್ವಾವಧಿಯಲ್ಲಿ ಮಾತ್ರ ಒಬ್ಬನಿಗೆ ಮುಂದಾಗಿಯೂ, ಇನ್ನೊಬ್ಬನಿಗೆ ಹಿಂದಾಗಿಯೂ ಪ್ರಾಪ್ತವಾಗುತ್ತದೆ.

ಪ್ರವೃತ್ತಿಭೇದಮ್ – ಮುಕ್ತರ ಪ್ರವೃತ್ತಿಯು ಬದ್ಧನಿತ್ಯರ ಪ್ರವೃತ್ತಿಗಳಿಗಿಂತಲೂ ಹೇಗೆ ವ್ಯತ್ಯಸ್ತವಾದುದೆಂದರೆ :—ಅನಾದಿಕಾಲಂ ಇಳನ್ದು – ಅನಾದಿ ಕಾಲದಿಂದ ಇಲ್ಲದೇ ಇದ್ದು, ಪೆತ್ತ – ತದನಂತರ ಹೊಂದಿದ, ಪರಿಪೂರ್ಣ ಭಗವದನುಭವ ಜನಿತ – ಪರಿಪೂರ್ಣ ಬ್ರಹ್ಮಾನುಭವದಿಂದ ಹುಟ್ಟಿದ ಪ್ರೀತಿಕಾರಿತನಾನ – ಭಕ್ತಿಕೃತಜ್ಞತಾಭಾವಗಳಿಂದ ಮಾಡಲ್ಪಟ್ಟ, ಯಥಾಭಿಮತ ಕೈಂಕರ್ಯ – ತಮಗೆ ಇಷ್ಟವಾದ ಕೈಙ್ಕರ್ಯಗಳೂ, ತದ್ವಿಶೇಷಙ್ಗಳ್ – ಮತ್ತು ಆಯಾಯಾ ಕಾಲವಿಶೇಷಗಳಲ್ಲಿ ಮಾಡುವ ವಿಶೇಷ ಕೈಙ್ಕರ್ಯಗಳೂ, ಇಲ್ಲಿ ಭಗವದನುಭವ ಜನಿತ ಭಕ್ತಿಯುಕ್ತವಾದ ಯಥಾಭಿಮತ ಕೈಙ್ಕರ್ಯಗಳು ಬದ್ಧರಿಗೂ ಮುಕ್ತರಿಗೂ ನಿತ್ಯರಿಗೂ ಸಮಾನವಾದವು.

ನಿತ್ಯಾನಾಂ ಸ್ವರೂಪಕಥನಂ

ನಿತ್ಯರುಕ್ಕು ನೀಕ್ಕುಳ್ಳಾರಿಲ್ ಭೇದಂ:— ಅನಾದ್ಯಾವಿರ್ಭೂತ ಸ್ವರೂಪರಾಯ್ ಪರತಂತ್ರರಾಯಿರುಕ್ಕ್ವು.

ಮುಕ್ತರಿಗೆ ವಿಶಾತ್ರವಿರುವ ವೈಲಕ್ಷಣ್ಯವನ್ನು ತೋರಿಸುವದಕ್ಕಾಗಿ (1) ಅನಾದಿಕಾಲಮಿಳನ್ನು ಪೆತ್ತ ಎಂಬ ಮತ್ತು (2) ಪರಿಪೂರ್ಣ ವೆಂಬ ಎರಡು ವಿಶೇಷಣಗಳನ್ನಿಲ್ಲಿ ಉಪಯೋಗಿಸಿರುತ್ತಾರೆ. ಪರಿಪೂರ್ಣ ಬ್ರಹ್ಮಾನುಭವವು ಬದ್ಧರಾದ ಪರಮೈಕಾಂತಿಗಳಿಗಿಲ್ಲವು, ಬ್ರಹ್ಮಾನುಭವವೇನೋ ಧ್ಯಾನಮೂಲಕವಾಗಿ ಉಂಟು, ಆದರೆ ಪರಿಪೂರ್ಣ ಬ್ರಹ್ಮಾನುಭವವಿಲ್ಲವು. ಅದು ನಿತ್ಯಮುಕ್ತರುಗಳಿಗೆ ಮಾತ್ರವೇ ಉಂಟು. ನಿತ್ಯರಿಗೆ ಸದಾ ಉಂಟು, ಅನಾದಿಕಾಲದಿಂದಲೂ ಉಂಟು; ಮುಕ್ತರಿಗಾದರೋ ಅನಾದಿಕಾಲಮಿಳನ್ನು ಪೆತ್ತದು – ಅನಾದಿಕಾಲ ತಪ್ಪಿ, ಅನಂತರ ಲಭಿಸಿದುದು. ಆದುದರಿಂದ ಈ ವಿಷಯದಲ್ಲಿ ನಿತ್ಯರುಗಿಂತಲೂ ವ್ಯತ್ಯಾಸ ಹೊಂದಿದುದು.

ಮುಂದೆ ನಿತ್ಯರಿಗೂ ಇತರ ಚೇತನರಿಗೂ ಇರುವ ವ್ಯತ್ಯಾಸವನ್ನು ತಿಳಿಸುತ್ತಾರೆ:—

ನಿತ್ಯರ ಸ್ವರೂಪವು.

ನಿತ್ಯರುಕ್ಕು ನೀಕ್ಕುಳ್ಳಾರಿಲ್ ಭೇದಂ – ನಿತ್ಯರಿಗೆ ಇತರ ಚೇತನರುಗಳಾದ ಮುಕ್ತ ಬದ್ಧರುಗಳಿಗಿಂತಲೂ ಸ್ವರೂಪದಲ್ಲಿರುವ ವ್ಯತ್ಯಾಸವೇನೆಂದರೆ:- ಇಲ್ಲಿ ಭೇದಂ ಎಂದರೆ ಸ್ವರೂಪತ್ತಿಲ್ ಎಂದು ಅಧ್ಯಾಹಾರ ಮಾಡಿಕೊಳ್ಳತಕ್ಕದ್ದು; ಏಕೆಂದರೆ ಉತ್ತರವು ಸ್ವರೂಪವಿಷಯಿಕವಾದುದರಿಂದ.

ಅನಾದ್ಯಾವಿರ್ಭೂತ ಸ್ವರೂಪರಾಯ್ – ಅನಾದಿಯಾಗಿಯುಂಟಾದ ಸ್ವರೂಪವುಳ್ಳವರಾಗಿ, ಪರತಂತ್ರರಾಯಿರುಕ್ಕ್ವು – ಭಗವದಧೀನರಾಗಿರುವಿಕೆಯು. ಈ ನಿತ್ಯರ ಸ್ವರೂಪವು ಅನಾದಿಯಾಗಿರುವದು ಎಂದು ಹೇಳಿರುವದರಿಂದ ಮುಕ್ತರ ಸ್ವರೂಪಕ್ಕಿಂತ ವೈಲಕ್ಷಣ್ಯವು ಹೇಳಲ್ಪಟ್ಟಿತು. ಮುಕ್ತರ ಸ್ವರೂಪನಿರ್ಮಾವವು ಅನಾದಿಯಾಗಿ ಬಂದುದಲ್ಲವು. ಈಶ್ವರನು, ನಿತ್ಯರ ಸ್ವರೂಪವು ನಿತ್ಯವಾಗಿರಲೆಂದು ಸಂಕಲ್ಪಿಸಿದುದರಿಂದ, ಭಗವತ್ಸಂಕಲ್ಪಕ್ಕೆ ಅಧೀನವಾದುದಾಗಿ ಪರತಂತ್ರವಾದುದಾಯಿತು. ಆದುದರಿಂದ ನಿತ್ಯರೆಲ್ಲಾ ಸರ್ವೇಶ್ವರನಿಗೆ ಪರತಂತ್ರರು. ಇಲ್ಲಿ ಸರ್ವೇಶ್ವರನಿಗೆ ಪರತಂತ್ರರೆಂದು ಹೇಳುವದು ಲಕ್ಷ್ಮೀನಾರಾಯಣರಿಬ್ಬರಿಗೂ ಪರತಂತ್ರರೆಂದು ಹೇ-

ನಿತ್ಯರುಗಳುಡ್ಯೆಯು ಸ್ಥಿತಿಭೇದಂ.

ಇವರುಗಳುಕ್ಕು ನೀಕ್ಕಿಯುಳ್ಳಾರಿಲ್ ಕಾಟ್ಟಿಲ್ ಸ್ಥಿತಿಭೇದಂ, ಅನಾದ್ಯನುವೃತ್ತವಾನ ಶೇಷಿತತ್ವಾನುಭವಂ. ಇದು ನಿತ್ಯರ್ಕ್ಕಲ್ಲಾವ್

ಲ್ಪಟ್ಟಿತೆಂದು ಭಾವಿಸತಕ್ಕದ್ದು. ಶ್ರೀ ಭಾಷ್ಯಕಾರರವರು ತಾವು ಬರೆದ ವೈಕುಂತಗದ್ಯದಲ್ಲಿ " ಶೇಷ ತೇಷಾಶನಾದಿ ಸರ್ವಂಪರಿಜನಂ ಭಗವತಸ್ತತ್ತದವಸ್ಥೋಚಿತಪರಿಚರ್ಯಾಯಾಂ ಆಜ್ಞಾಪಯನ್ತ್ಯಾ.....ಶ್ರಿಯಾ ಸಹಾಸೀನಂ " ಅಂದರೆ "ಅನಂತ ಗರುಡ ಮೊದಲಾದ ಸಮಸ್ತ ಪರಿಜನರನ್ನೂ ಸರ್ವೇಶ್ವರನಾದ ತನ್ನ ಪತಿಗೆ ಆಯಾ ಸಂದರ್ಭಗಳಲ್ಲಿ ಯೋಗ್ಯವಾದ ಕೈಂಕರ್ಯಗಳಲ್ಲಿ ಆಜ್ಞಾಪಿಸುವಂಥಾ ಲಕ್ಷ್ಮಿಯೊಂದಿಗೆ ವಿಜಮಾಡಿಸಿರುವ ಸರ್ವೇಶ್ವರನನ್ನು " ಎಂದು ಹೇಳಿರುವದರಿಂದ ನಿತ್ಯರೂ ಕೂಡ ಲಕ್ಷ್ಮಿಗೆ ಪರತಂತ್ರರೆಂದಾಯಿತು. ಇದನ್ನನುಸರಿಸಿಯೇ ಶ್ರೀ ಪರಾಶರಭಟ್ಟರವರು, ತಾವು ರಚಿಸಿದ ಶ್ರೀ ಗುಣರತ್ನಕೋಶದಲ್ಲಿ ನಿತ್ಯರೆಲ್ಲರೂ ಲಕ್ಷ್ಮಿಯು ಪರಿಚರ್ಯದಲ್ಲಿ ನಿರತರಾಗಿದ್ದಾರೆಂದು ಹೇಳಿರುತ್ತಾರೆ.

ಆದರೆ ನಿತ್ಯರು ಹೇಗೆ ಸರ್ವೇಶ್ವರನಿಗೆ ಅಧೀನರೋ, ಹಾಗೆಯೇ ಲಕ್ಷ್ಮಿಯೂ ಸಹ ತನ್ನ ಪತಿಗೆ ಅಧೀನಳು ; ಆದುದರಿಂದ ಲಕ್ಷ್ಮಿಯು ನಿತ್ಯರಲ್ಲೇ ಸೇರಿದವಳಾಗಿ, ಇತರ ನಿತ್ಯರನ್ನು ನಿಯಮಿಸುವ ಅಧಿಕಾರವನ್ನು ತನ್ನ ಪ್ರಿಯವಲ್ಲಭನಿಂದ ತನ್ನಲ್ಲಿರುವ ಪ್ರೇಮಾತಿಶಯಮೂಲಕವಾಗಿ ಏಕೆ ಹೊಂದಿರಕೂಡದು, ಎಂದರೆ ಹಾಗಲ್ಲವು. ನಿತ್ಯರು ಸರ್ವೇಶ್ವರನ ಸಙ್ಕಲ್ಪದಿಂದ ತನಗೂ ತನ್ನ ಪತ್ನಿಗೂ ಸಹ ಅಧೀನರು. ಲಕ್ಷ್ಮಿಯಾದರೋ ಹಾಗಲ್ಲವು ; ಲಕ್ಷ್ಮಿಯು ತನ್ನ ಸ್ವಂತ ಸಙ್ಕಲ್ಪಮೂಲಕ ತನ್ನ ಪತಿಗೆ ಅಧೀನಳು. ಈ ಅಭಿಪ್ರಾಯವನ್ನೇ ಶ್ರೀ ಪರಾಶರಭಟ್ಟರವರು " ಸ್ವತಃ ಶ್ರೀಃ ತ್ವಂ ವಿಷ್ಣೋಸ್ಸ್ವಮಸಿ " (ಶ್ರೀಗುಣ 31) ಎಂಬ ಶ್ಲೋಕದಲ್ಲಿ ಉಪಪಾದನೆ ಮಾಡಿರುತ್ತಾರೆ. ಆದುದರಿಂದ ನಿತ್ಯರ ಪಾರತಂತ್ರ್ಯಕ್ಕೂ ಲಕ್ಷ್ಮಿಯ ಪಾರತಂತ್ರ್ಯಕ್ಕೂ ವ್ಯತ್ಯಾಸವುಂಟು. ಲಕ್ಷ್ಮಿಯು ಈ ಕಾರಣದಿಂದ ಜೀವಕೋಟಿಗೆ ಸೇರಿದವಳೆಂದು ಹೇಳಲಾಗುವುದಿಲ್ಲವು.

ನಿತ್ಯರುಗಳಿಗಿರುವ ಸ್ಥಿತಿಭೇದವು.

ಇವರುಗಳುಕ್ಕು - ಈ ನಿತ್ಯರಿಗೆ, ನೀಕ್ಕಿಯುಳ್ಳಾರಿಲ್ ಕಾಟ್ಟಿಲ್ ಸ್ಥಿತಿಭೇದಂ - ಮಿಕ್ಕ ಇತರರಾದ ಬದ್ಧಮುಕ್ತರುಗಳಿಗಿಂತಲೂ ಸ್ಥಿತಿಭೇದವೇ

ಪೊಂದುವಾನಪಡಿಯಾಲೇ ಯಿವರ್‌ಗಳುಕ್ಕನ್ಯೋನ್ಯಮ್ ಸ್ಥಿತಿಯಿಲ್ ವೈಷಮ್ಯಮಿಲ್ಲೈ.

ನಿತ್ಯರುಗಳುಡೈಯ ಪ್ರಪತ್ತಿಭೇದಂ

ಇವರ್‌ಗಳುಕ್ಕು ಪ್ರವೃತ್ತಿಭೇದಂ. ಅನಾದಿಪ್ರವಾಹ ನಿತ್ಯಜ್ಞಾನ ಕೈಙ್ಕರ್ಯವಿಶೇಷಜ್ಞಳ್. ಅನನ್ತ ಗರುಡಾದಿಗಳುಕ್ಕಧಿಕಾರವಿಶೇಷಙ್ಗ

ನೆಂದರೆ :—ಅನಾದ್ಯನುವೃತ್ತಮಾನ - ಅನಾದಿಯಾಗಿ ತಮಗೆ ಅನುವೃತ್ತಿಸಿ ಕೊಂಡು ಬಂದಿರುವ, ಶೇಷಿತತ್ವಾನುಭವಂ - ಶೇಷಿತತ್ವವಾದ ಲಕ್ಷ್ಮೀನಾರಾಯಣನನ್ನು ಅನುಭವಿಸುವದು. ಇಲ್ಲಿ ಶೇಷ್ಯನುಭವಂ ಎಂದು ಹೇಳದೆ, ಶೇಷಿತತ್ವಾನುಭವಂ ಎಂಬ ಪ್ರಯೋಗದಭಿಪ್ರಾಯವೇನೆಂದರೆ:-"ಉಭಯಾಧಿಷ್ಠಾನಂ ಚೈಕಂ ಶೇಷಿತ್ವಂ" ಎಂದು ಹೇಳಿರುವ ಮೇರಿಗೆ ಶೇಷಿಭಾವವು ಲೋಕದಂಪತಿಗಳಿಬ್ಬರನ್ನೂ ಹೊಂದಿರುವದೆಂದು ತಿಳಿಸುವ ಉದ್ದಿಶ್ಯವಾಗಿ ಹಾಗೆ ಪ್ರಯೋಗಿಸಿರುತ್ತಾರೆ. ಶೇಷಿತತ್ವಾನುಭವವು ಮುಕ್ತರಿಗೂ ಉಂಟು. ಆದರೆ ಅದು ಅನಾದ್ಯನುವೃತ್ತಮಾನವಾದುದಲ್ಲವು. ನಿತ್ಯರಿಗೆ ಮಾತ್ರವೇ ಅನಾದಿಯಾಗಿ ಅನುವರ್ತಿಸಿ ಬಂದಿರುವಂಥಾದ್ದು.

ಬದ್ಧ ಮುಕ್ತರಲ್ಲಿ ಪರಸ್ಪರ ಸ್ಥಿತಿಭೇದ ಉಂಟೆಂದು ಹಿಂದೆ ಹೇಳಲ್ಪಟ್ಟಿತು. ಹಾಗೆ ನಿತ್ಯರಲ್ಲೂ ಉಂಟೋ ಎಂದರೆ, ಅಂತಹ ಭೇದವೇನೂ ಇಲ್ಲವೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. ಇದು – ಈ ಶೇಷಿತತ್ವದ ಅನುಭವವು, ನಿತ್ಯರ್ಕ್ಕಲ್ಲಾಂ – ನಿತ್ಯರಿಗೆಲ್ಲಾ, ಪೊದುವಾನಪಡಿಯಾಲೇ – ಸಮವಾದುದರಿಂದ, ಇವರ್‌ಗಳುಕ್ಕನ್ಯೋನ್ಯಂ ಸ್ಥಿತಿಯಿಲ್ ವೈಷಮ್ಯಮಿಲ್ಲೈ – ಈ ನಿತ್ಯರಿಗೆ ಪರಸ್ಪರವಾಗಿ ಸ್ಥಿತಿಯಲ್ಲಿ ಏನೊಂದೂ ತಾರತಮ್ಯವಿಲ್ಲವು.

ಮುಂದೆ ನಿತ್ಯರುಗಳಿಗಿರುವ ಪ್ರವೃತ್ತಿಯಲ್ಲಿ ವೈಲಕ್ಷಣ್ಯವನ್ನು ತಿಳಿಸುತ್ತಾರೆ.

ಇವರ್‌ಗಳುಕ್ಕು ಪ್ರವೃತ್ತಿಭೇದಮ್ – ನಿತ್ಯರುಗಳಿಗೆ ಪ್ರವೃತ್ತಿಯಲ್ಲಿರುವ ಭೇದವು ಯಾವುದೆಂದರೆ :—ಅನಾದಿಪ್ರವಾಹನಿತ್ಯಜ್ಞಾನ ಕೈಙ್ಕರ್ಯಂಗಳ್ – ಅನಾದಿಯಾಗಿ ಬಂದಿರುವ ಮತ್ತು ಪ್ರವಾಹರೀತ್ಯಾ ನಿತ್ಯವಾದ ಕೈಙ್ಕರ್ಯವಿಶೇಷಣಗಳನ್ನು ಮಾಡುವದು. ಹಿಂದೆ ಮುಕ್ತರ ಪ್ರವೃತ್ತಿಯು

ಳುಮ್ ತದುಚಿತಕೈಙ್ಕರ್ಯಗಳುಮ್, ವ್ಯವಸ್ಥಿತಂಗಳಾಯಿರುಕ್ಕ, ನಿತ್ಯರ್ಕ್ಕುಮ್ ಮುಕ್ತರ್ಕ್ಕುಮ್ ಸರ್ವವಿಧಕೈಙ್ಕರ್ಯಸಿದ್ಧಿಯುಣ್ಡೆನ್ಗಿರ ವರ್ಥಮ್

ಪೂರ್ವದಲ್ಲಿ ಇಲ್ಲದೆ ಈಗ ಪ್ರಾಪ್ತವಾಗಿರುವ, ಶ್ರಿಯಃಪತಿಯ ಕೈಙ್ಕರ್ಯವೆಂದು ಹೇಳಲ್ಪಟ್ಟಿತು. ಆದರೆ ಕೈಙ್ಕರ್ಯಗಳೆಲ್ಲಾ ಕ್ರಿಯಾರೂಪವಾಗಿ ಅನಿತ್ಯವಾಗಿರುವಾಗ ಅವುಗಳಿಗೆ ನಿತ್ಯತ್ವ ಹೇಗೆ ಎಂದರೆ, ಆ ಕೈಙ್ಕರ್ಯಗಳಲ್ಲೇ ಅವರು ಸತತ ನಿರತರಾಗಿರುವ ಪ್ರಯುಕ್ತ ಪ್ರವಾಹತಃ ನಿತ್ಯವು ಎಂಬಭಿಪ್ರಾಯವು. ಇಲ್ಲಿ ಕೈಙ್ಕರ್ಯ ವಿಶೇಷಙ್ಗಳ್ – ಎಂದು ಹೇಳಿರುವದರಿಂದ ಒಬ್ಬೊಬ್ಬ ನಿತ್ಯಸೂರಿಗೂ ಬೇರೆ ಬೇರೆ ಕೈಙ್ಕರ್ಯಗಳು ನಿಯತವಾಗಿವೆ ಎಂಬುವದು ಸೂಚಿತವಾಗುತ್ತದೆ. ಶೇಷನು ಶಯನಾದಿಗಳಿಗೂ. ಗರುಡನು ವಾಹನಕ್ಕೂ. ವಿಷ್ವಕ್ಸೇನರು ಸೇನಾಪತಿತ್ವಕ್ಕೂ, ಶಂಖಚಕ್ರಾಳ್ವಾರುಗಳು ವಿರೋಧಿನಿರಸನಕ್ಕೂ, ಹೀಗೆಯೇ ಇನ್ನೂ ಇತರರು ಮಿಕ್ಕ ಕೈಙ್ಕರ್ಯಗಳಿಗೂ ನಿಯತರಾಗಿರುತ್ತಾರೆಂಬುವದು ವಿಶೇಷಙ್ಗಳ್ ಎಂಬ ಶಬ್ದದಿಂದ ಬೋಧಿತವಾಗುತ್ತದೆ. ಹೀಗೆ ನಿತ್ಯರುಗಳಿಗೂ ಮುಕ್ತರುಗಳಿಗೂ ನಿಯತವಾದ ಕೈಙ್ಕರ್ಯಗಳು ವ್ಯವಸ್ಥಿತಗಳಾಗಿರುವಾಗ, ಅವರುಗಳಿಗೆ ಸರ್ವವಿಧ ಕೈಙ್ಕರ್ಯಸಿದ್ಧಿಪ್ರಾಪ್ತಿಯುಂಟೆಂದು ಹೇಳುವದು ಹೇಗೆ ಎಂಬ ಶಂಕಾವನ್ನು ಮುಂದೆ ನಿವಾರಣೆ ಮಾಡುತ್ತಾರೆ. ಶ್ರುತಿಯಲ್ಲಿ ಸೋಶ್ನುತೇ ಸರ್ವಾ ಕಾಮಾ್ ಎಂದು ಹೇಳಿರುತ್ತದೆ. ಶ್ರೀಭಗವದ್ವಾಷ್ಯಕಾರರವರು "ಅಶೇಷ ಶೇಷತೈಕರಿತರೂಪ ನಿತ್ಯಕೈಙ್ಕರ್ಯಾಪೇಕ್ಷಯಾ" ಎಂಬದಾಗಿ ಪ್ರಯೋಗಿಸಿರುವದರಿಂದ ಸರ್ವವಿಧ ಕೈಙ್ಕರ್ಯಸಿದ್ಧಿಯೂ ಮುಕ್ತನಿಗುಂಟೆಂಬ ಸಮಾಧಾನವು ಸಮಂಜಸವಾದುದೆಂಬುವದನ್ನು ಮುಂದೆ ವ್ಯಕ್ತಪಡಿಸುತ್ತಾರೆ.

ಅನನ್ತಗರುಡಾದಿಗಳುಕ್ಕು – ಅನಂತ ಗರುಡ ಮೊದಲಾದ ನಿತ್ಯಸೂರಿಗಳಿಗೆ, ಇಲ್ಲಿ ಆದಿ ಪದದಿಂದ ವಿಷ್ವಕ್ಸೇನರೂ, ಶಂಖಚಕ್ರಾಳ್ವಾರುಗಳೂ, ದ್ವಾರಪಾಲಕರೂ ಮೊದಲಾದವರು ಹೇಳಲ್ಪಟ್ಟರು, ಅಧಿಕಾರ ವಿಶೇಷಙ್ಗಳುಮ್ – ಕೊಡಲ್ಪಟ್ಟ ವಾಹನ, ಸೇನಾಪತಿತ್ವ, ವಿರೋಧಿನಿರಸನಾದಿ ಅಧಿಕಾರ ವಿಶೇಷಗಳೂ, ತದುಚಿತ ಕೈಙ್ಕರ್ಯಗಳುಮ್ – ಆ ಅಧಿಕಾರಗಳಿಗೆ ಯೋಗ್ಯವಾದ ಕೈಙ್ಕರ್ಯಗಳೂ, ವ್ಯವಸ್ಥಿತಂಗಳಾಯಿರುಕ್ಕ – ಇವರಿವರಿಗೆ ಈ ಈ ಕೈಙ್ಕರ್ಯಗಳೆಂದು ನಿಯತವಾಗಿರುವಾಗ, ನಿತ್ಯರಿಗೂ ಮುಕ್ತರಿಗೂ ಸಹ, ಸರ್ವ ವಿಧವಾದ ಕೈಙ್ಕರ್ಯಗಳ ಸಿದ್ಧಿಯುಂಟೆಂದು ಹೇಳುವ, ಅರ್ಥಂ ಕೂಡುಮೋ ವೆನ್ನಿಲ್ – ಅಭಿಪ್ರಾಯವು ಸಮಂಜಸ

ಕೂಡುವೋ ವೆನ್ನಿಲ್ ? ಸ್ವಾಮಿನುಡೈಯ ವಭಿಪ್ರಾಯತ್ತುಕ್ಕೇಡಾಗ ತನಕ್ಕಭಿಮತಂಗಳಾನ ಕೈಙ್ಕರ್ಯಂಗಳಿಲೇ ಕಿಡಯಾದವೈ ಯೊನ್ರು ಮಿಲ್ಲಾಮೈಯಾಲುಮ್, ಓರೋರುತ್ತರುಕ್ಕು ವ್ಯವಸ್ಥಿತಙ್ಗಳಾನ ಕೈಙ್ಕರ್ಯಙ್ಗಳೈತ್ತಾಂಗಳ ನುಷ್ಠಿಕ್ಕವೇಣುನೆಙ್ಗಿರನಭಿಸನ್ಧಿ ವೇರೊರುತ್ತರುಕ್ಕುಪ್ಪಿರವಾಮೈಯಾಲುಮ್, ಆರೇನುನೊರುವರನುಷ್ಠಿಕ್ಕುಮ್ ಕೈಙ್ಕರ್ಯಮುಮ್ ಸ್ವಾಮಿಕ್ಕು ಪ್ರಿಯಮಾನ ಪಡಿಯಾಲೇ, ತದುಚಿತ ಕೈಙ್ಕರ್ಯಙ್ಗಳುಮ್ ಸರ್ವರುಕ್ಕುಮ್ ಪ್ರಿಯಮಾಯ್ ಕೈಙ್ಕರ್ಯಫಲಮಾನ ಪ್ರೀತಿಯಿಲ್ ವಾಶಿಯಿಲ್ಲಾಮೈಯಿನಾಲುಮ್ ಸರ್ವರುಕ್ಕುಮ್ ಸರ್ವವಿಧಕೈಙ್ಕರ್ಯಸಿದ್ಧಿಯುಣ್ಡಿನ್ಗ್ರಯಿಲ್ ವಿರೋಧಮಿಲ್ಲೈ.

ವೋ ? ಎಂದರೆ ;—ಸ್ವಾಮಿಯನುಡೈಯ ವಭಿಪ್ರಾಯತ್ತುಕ್ಕು – ಸರ್ವೇಶ್ವರನ ಅಭಿಪ್ರಾಯಕ್ಕೆ, ಈಡಾಗ – ಅನುಸಾರವಾಗಿ, ತನಕ್ಕಭಿಮತಙ್ಗಳಾನ – ತನಗೆ ಇಷ್ಟವಾದ, ಕೈಙ್ಕರ್ಯಙ್ಗಳಿಲೇ ಕಿಡಯಾದವೈ ಯೊನ್ರುಮ್ – ಕೈಙ್ಕರ್ಯಗಳಲ್ಲಿ ದುರ್ಲಭವಾದುದು ಯಾವುದೊಂದೂ, ಯಿಲ್ಲಾಮೈಯಾಲುಮ್ – ಇಲ್ಲದೆ ಇರುವದರಿಂದಲೂ, ಮತ್ತು, ಓರೋರುತ್ತರುಕ್ಕು ವ್ಯವಸ್ಥಿತಙ್ಗಳಾನ ಕೈಙ್ಕರ್ಯಙ್ಗಳಿಲೆ – ಪ್ರತಿಯೊಬ್ಬರಿಗೂ ಈ ಈ ಕೈಙ್ಕರ್ಯವೆಂಬದಾಗಿ ಸರ್ವೇಶ್ವರನ ನಿಯಮದಿಂದ ವ್ಯವಸ್ಥಿತಗಳಾಗಿರುವ ಕೈಙ್ಕರ್ಯಗಳನ್ನು, ತಾಂಗಳನುಷ್ಠಿಕ್ಕವೇಣುನೆಙ್ಗಿರ – ತಾವುಗಳು ಮಾಡಬೇಕೆಂಬ ಅಭಿಸಂಧಿ–ಅಪೇಕ್ಷೆಯು, ವೇರೊರುತ್ತರುಕ್ಕು ಪಿರವಾನ್ಮೈಯಾಲುಮ್ – ಬೇರೆ ಇನ್ನು ಯಾರಿಗೂ ಹುಟ್ಟದೇ ಇರುವದರಿಂದಲೂ, ಮತ್ತು, ಆರೇನುನೊರುವರನುಷ್ಠಿಕ್ಕುಂ ಕೈಙ್ಕರ್ಯಮುಮ್ – ಯಾರಾದರೂ ಒಬ್ಬರು ಮಾಡಿದ ಕೈಙ್ಕರ್ಯವು, ಸ್ವಾಮಿಕ್ಕು ಪ್ರಿಯಮಾನ ಪಡಿಯಾಲೆ–ಹಾಗೆಯೇ ಪ್ರಿಯವಾಗುವದರಿಂದ, ತದುಚಿತ ಕೈಙ್ಕರ್ಯಙ್ಗಳುಮ್ – ಆ ಸರ್ವೇಶ್ವರನಿಗೆ ಯೋಗ್ಯವಾದ ಕೈಙ್ಕರ್ಯಗಳೂ, ಸರ್ವರುಕ್ಕುಮ್ ಪ್ರಿಯಮಾಯ್ – ಎಲ್ಲರಿಗೂ ತುಂಬಾ ಪ್ರಿಯವಾದುವಾಗಿ, ಕೈಙ್ಕರ್ಯಫಲಮಾನ ಪ್ರೀತಿಯಿಲ್ – ಅಂತಹ ಕೈಙ್ಕರ್ಯಕ್ಕೆ ಫಲರೂಪವಾದ ಭಗವತ್ಪ್ರೀತಿಯಲ್ಲಿ, ವಾಶಿಯಿಲ್ಲಾಮೈಯಿನಾಲುಮ್ – ವ್ಯತ್ಯಾಸವೇನೂ ಇಲ್ಲವಾದುದರಿಂದಲೂ, ಸರ್ವರುಕ್ಕುಮ್ ಸರ್ವವಿಧ ಕೈಙ್ಕರ್ಯಸಿದ್ಧಿಯುಣ್ಟ್ರಿನ್ಗ್ರಯಿಲ್ – ಎಲ್ಲರಿಗೂ ಎಲ್ಲಾ ವಿಧ ಕೈಙ್ಕರ್ಯವೂ ಸಿದ್ಧಿಯೂ ಉಂಟೆಂದು ಹೇಳುವದರಲ್ಲಿ, ವಿರೋಧಮಿಲ್ಲೈ – ಏನೊಂದು ವಿರೋಧವೂ ಇಲ್ಲವು. ನಿತ್ಯರ ಪ್ರವೃತ್ತಿಗಳಲ್ಲಿ ಪರ

ಸ್ಪರ ಭೇದವೇನೂ ಇಲ್ಲವೆಂದು ಹೇಳಲ್ಪಟ್ಟಿತು. ಆದರೆ ನಿತ್ಯರುಗಳು ಮಾಡುವ ಕೈಙ್ಕರ್ಯಗಳಲ್ಲಿ ವ್ಯತ್ಯಾಸವಿದೆಯಲ್ಲಾ ಎಂದರೆ ಎಲ್ಲವೂ ಭಗವತ್ಪ್ರೀತಿಗೋಸ್ಕರ ಮಾಡತಕ್ಕವುಗಳಾದುದರಿಂದ ಏನೊಂದೂ ವ್ಯತ್ಯಾಸವಿಲ್ಲವು.

ಆದರೆ ಶ್ರುತಿಗಳಲ್ಲಿ ಎಲ್ಲರಿಗೂ ಎಲ್ಲಾ ವಿಧ ಕೈಙ್ಕರ್ಯಗಳನ್ನು ಮಾಡುವ ಸುಕೃತವು ಮುಕ್ತದೆಸೆಯಲ್ಲಿ ಉಂಟಾಗುತ್ತದಲ್ಲಾ ಅದು ಹೇಗೆ ಎಂದರೆ ಹೇಳುತ್ತಾರೆ. ಕೆಲವು ವಿಧ ಕೈಂಕರ್ಯಗಳು ಲಕ್ಷ್ಮಿಗೂ ತನಗೂ ಸಹ ಮಾಡತಕ್ಕದ್ದೆಂದು ಅವರುಗಳಿಂದಲೇ ನಿಯಮಿತವಾಗಿರುತ್ತವೆ. ಶೇಷ ಗರುಡ ವಿಷ್ವಕ್ಸೇನಾದಿಗಳೆಲ್ಲಾ ಹೀಗೆ ನಿಯಮಿತ ಕೈಂಕರ್ಯನಿಷ್ಠರಾಗಿರುತ್ತಾರೆ. ಈ ಕೈಂಕರ್ಯಗಳನ್ನೆಲ್ಲಾ ಇತರರು ಮಾಡದಪಕ್ಷದಲ್ಲಿ ಎಲ್ಲಾ ವಿಧ ಕೈಂಕರ್ಯಗಳನ್ನೂ ಮಾಡುವ ಆನಂದವು ಎಲ್ಲರಿಗೂ ಉಂಟಾಗುತ್ತದೆಂಬ ಶ್ರುತಿವಾಕ್ಯದ ಸಾಮಂಜಸ್ಯವು ಹೇಗೆ? ಎಂದರೆ ಸಮಾಧಾನವನ್ನು ಹೇಳುತ್ತಾರೆ. ಮುಕ್ತರಿಗೂ ಕೂಡ ಸರ್ವವಿಧ ಕೈಂಕರ್ಯವನ್ನು ಮಾಡುವ ಯೋಗ್ಯತೆ ಏನೋ ಉಂಟಾಗಿರುವುದು ನಿಶ್ಚಯವು. ಆದರೂ ದಿವ್ಯ ದಂಪತಿಗಳು ಒಬ್ಬೊಬ್ಬರಿಗೂ ಒಂದೊಂದು ಕೈಂಕರ್ಯವನ್ನು ನಿಯಮಿಸಿ ಅಂತಹ ಕೈಂಕರ್ಯಗಳ ಮೂಲಕ ಸುಪ್ರೀತರಾಗುವದರಿಂದ, ಅಂತಹ ಸ್ವಾಮಿಗೆ ಅಭಿಮತವಾದ ಕೈಙ್ಕರ್ಯಗಳನ್ನು ಎಸಗುವದೇ ತನಗೂ ಇಷ್ಟವಾದುದರಿಂದ, ಅಂತಹ ಕೈಙ್ಕರ್ಯಗಳಲ್ಲಿ ಪ್ರವರ್ತಿಸುವನೇ ವಿನಾ, ಇತರ ಕೈಙ್ಕರ್ಯಗಳಲ್ಲಿ ಪ್ರವರ್ತಿಸನು. ಹಾಗೆ ನಿಯಮಿತ ಕೈಙ್ಕರ್ಯಗಳನ್ನೆಸಗುವದರಿಂದಲೇ ಸರ್ವರಿಗೂ ಪ್ರೀತ್ಯತಿಶಯ ಉಂಟಾಗುವದೂ ಅಲ್ಲದೆ, ಕೈಂಕರ್ಯಫಲರೂಪವಾಗಿ ಸರ್ವೇಶ್ವರನೂ ಸುಪ್ರೀತನಾಗುವನು. ಪ್ರತಿಯೊಬ್ಬರೂ ಸರ್ವವಿಧ ಕೈಂಕರ್ಯವನ್ನೂ ಕೈಕೊಂಡು ಎಲ್ಲರೂ ಸರ್ವವಿಧ ಕೈಂಕರ್ಯವನ್ನು ಎಸಗುವರು ಎಂಬಭಿಪ್ರಾಯವಲ್ಲವು. ಕೈಂಕರ್ಯಗಳ ಮುಖ್ಯಫಲವು ಭಗವತ್ಪ್ರೀತಿಯಾದುದರಿಂದ, ಯಾರು ಯಾವ ಕೈಂಕರ್ಯವನ್ನನುಷ್ಠಿಸಿದರೆ ಸ್ವಾಮಿಗೆ ಪ್ರೀತಿಯುಂಟಾಗುತ್ತದೋ, ಅದೇ ಸರ್ವರಿಗೂ ಅಭಿಮತವಾದುದರಿಂದ ಸರ್ವರೂ ಅದನ್ನೇ ತಾವೇ ಅನುಷ್ಠಿಸಿದಹಾಗೆ ಭಾವಿಸಿ ಸಂತೋಷಪಡುವರು. ಇದರಿಂದ ಇತರರು ಮಾಡಿದ ಕೈಂಕರ್ಯವನ್ನು ತಾವು ಅನುಷ್ಠಿಸಲು ಯೋಗ್ಯತೆಯಿಲ್ಲವೆಂದಾಗಲಿಲ್ಲವು. ಎಲ್ಲಾ ಕೈಂಕರ್ಯಗಳನ್ನು ಮಾಡುವ ಯೋಗ್ಯತೆಯಿದ್ದರೂ ಲೋಕದಂಪತಿಗಳಿಗೆ ಯಾವ ಕೈಂಕರ್ಯದಲ್ಲಿ ಅಭಿಮತವೋ, ಯಾವುದನ್ನು ಮಾಡಬೇಕೆಂದು ಅವರ ಆಜ್ಞೆಯೋ, ಅಂತಹ ಕೈಂಕರ್ಯವನ್ನು ಮಾಡುವದೇ ಈತನಿಗೆ ಯುಕ್ತವೆಂಬಭಿಪ್ರಾಯವು. ಆದುದರಿಂದ ಸರ್ವರಿಗೂ ಸರ್ವವಿಧ ಕೈಂಕರ್ಯಸಿದ್ಧಿಯುಂಟೆಂದು ಹೇಳುವದರಲ್ಲೇನೂ ವಿರೋಧವಿಲ್ಲವೆಂಬ ತಾತ್ಪರ್ಯವು.

ಧರ್ಮಭೂತಜ್ಞಾನ ನಿರೂಪಣಂ.

ಇವ್ವಾತ್ಮಕ್ಕಳಿಲ್ಲಾರ್ಕ್ಕುಮ್ ಧರ್ಮಿಸ್ವರೂಪಮ್ಪೋಲೇ ಧರ್ಮಭೂತ ಜ್ಞಾನಮುಮ್ ದ್ರವ್ಯಮಾಯಿರುക്ക, ಇದಿನ್ ಸ್ವರೂಪತ್ತೈ ತನಿತ್ತಿಜ್ಞರು

ಧರ್ಮಭೂತಜ್ಞಾನ ವಿಷಯವು.

ಇನ್ನು ಮುಂದೆ ಧರ್ಮಭೂತಜ್ಞಾನವನ್ನು ಕುರಿತು ಹೇಳುತ್ತಾರೆ. ಆತ್ಮನಿಗೆ ಸ್ವರೂಪವೂ ಜ್ಞಾನರೂಪವಾದುದು, ಗುಣವೂ ಕೂಡ ಜ್ಞಾನರೂಪವಾದುದೇ ಎಂದು ಹೇಳಲ್ಪಟ್ಟಿತು. ಧರ್ಮಭೂತಜ್ಞಾನವೂ ದ್ರವ್ಯವೇ; ಹಾಗಾದರೆ ಅಚೇತನವು ತ್ರಿಗುಣ, ಕಾಲ, ಶುದ್ಧಸತ್ವವೆಂದು ಮೂರುವಿಧವೆಂದು ಹೇಳಲ್ಪಟ್ಟಿತಲ್ಲದೆ, ಇದನ್ನು ಏಕೆ ಅಲ್ಲಿ ಸೇರಿಸಿ ಹೇಳಲಿಲ್ಲವೆಂಬ ಶಂಕಾ ಪ್ರಥಮತಃ ಉತ್ಪನ್ನವಾಗುತ್ತದೆ. ಶ್ರೀ ಭಾಷ್ಯಕಾರರು ಅಚೇತನವು ಮೂರು ವಿಧವೆಂದು ಹೇಳಿದರೇ ವಿನಾ ನಾಲ್ಕು ವಿಧವೆಂದು ಉಪದೇಶಿಸಲಿಲ್ಲವು. ಈ ಶಂಕಾವಿಗೆ ಮೊದಲು ಸಮಾಧಾನ ಹೇಳುವದು ಅತ್ಯಾವಶ್ಯಕವೆಂದು ಭಾವಿಸಿ ಮುಂದೆ ಅಪ್ಪಣೆ ಕೊಡಿಸುತ್ತಾರೆ.

ಇವ್ವಾತ್ಮಕ್ಕಳಿಲ್ಲಾರ್ಕ್ಕುಮ್ - ಈ ಎಲ್ಲಾ ಜೀವಾತ್ಮರುಗಳಿಗೂ, ಧರ್ಮಿಸ್ವರೂಪಮ್ಪೋಲೆ - ಧರ್ಮಿಯಾದ ಆತ್ಮನಿನ ಸ್ವರೂಪವಾದ ಜ್ಞಾನದ ಹಾಗೆ, ಧರ್ಮಭೂತಜ್ಞಾನಮುಮ್ - ಆದರ ವಿಶೇಷಣವಾದ ಪ್ರಕಾಶರೂಪವಾದ ಜ್ಞಾನವೂ ಕೂಡ, ದ್ರವ್ಯಮಾಯಿರುക്ക-ಒಂದು ದ್ರವ್ಯವಾಗಿರುವಾಗ ಅದು ಹೇಗೆ ದ್ರವ್ಯವೆಂದರೆ "ಉಪಾದಾನಂ ದ್ರವ್ಯಂ, ಅವಸ್ಥಾಶ್ರಯಃ ಉಪಾದಾನಂ" ಎಂದು ದ್ರವ್ಯಶಬ್ದಕ್ಕೆ ಅರ್ಥ ಬರೆದಿರುವದರಿಂದ, ಈ ಧರ್ಮಭೂತಜ್ಞಾನವೂ ಅವಸ್ಥೆಗೆ ಆಶ್ರಯವಾದುದರಿಂದ ದ್ರವ್ಯವು ಎಂಬ ಭಾವವು. ಇದಿನ್ ಸ್ವರೂಪತ್ತೈ - ಈ ವಿಶೇಷಣರೂಪವಾದ ಜ್ಞಾನದ ಸ್ವರೂಪವನ್ನು, ತನಿತ್ತು - ಬೇರೆಯಾಗಿ, ಇಜ್ಜಿಲ್ - ಇಲ್ಲಿ ಎಂದರೆ ಶ್ರೀಯತಿವರ್ಯರ ವೈಕುಂಠಗದ್ಯದ ಪ್ರಥಮವಾಕ್ಯವಾದ " ಸ್ವಾಧೀನ ತ್ರಿವಿಧ ಚೇತನಾಚೇತನ " ವೆಂಬುವದರಲ್ಲಿ, ಅರುಳಿಚ್ಚೆಯ್ಯಾದೊಳಿನ್ರದು - ಇದನ್ನು ಸೇರಿಸಿ ಹೇಳದೇ ಬಿಟ್ಟಿರುವದು, ಯಾವ ಕಾರಣದಿಂದ ಎಂದರೆ ಹೇಳುತ್ತಾರೆ. ಚೇತನರೆನ್ರಿರುತ್ತ ವಿಶಿಷ್ಟತ್ತಿಲೇ - ಚೈತನ್ಯವನ್ನುಳ್ಳವರು ಚೇತನರು, ಎಂಬುವದರಿಂದ ಜ್ಞಾನವುಳ್ಳವರಾದುದರಿಂದಲೇ ಚೇತನರೆಂದೆನಿಸಿಕೊಳ್ಳುತ್ತಾರೆ, ಆದುದರಿಂದ ಚೇತನರೆಂಬದಾಗಿ ಹೇಳಲ್ಪಟ್ಟ ವಿಶಿಷ್ಟಾರ್ಥದಲ್ಲಿ ಎಂದರೆ ವಿಶೇಷ್ಯದಲ್ಲಿ,

ಳಿಚ್ಚೆಯ್ಯಾದೊಳಿನ್ವದು, ಚೇತನರೆನ್ಬೆಡುತ್ತ ವಿಶಿಷ್ಟತ್ತಿಲೇ ವಿಶೇಷಣ ವಾಯ್ ಚ್ಚೊರುಕಿ ನಿರ್ಕ್ಕೈಯಡಿಯಾಕ.

ವಿಶೇಷಣವಾಯ್-ವಿಶೇಷಣವಾಗಿ, ಧರ್ಮವಾಗಿ, ಚೊರುಗಿನಿರ್ಕ್ಕೈ – ಅಂತರ್ಭೂತವಾಗಿರುವದೆಂಬ, ಅಡಿಯಾಕ - ಕಾರಣದಿಂದ, ಹಾಗೆ ಹೇಳದೆ ಬಿಟ್ಟಿರುವದು ಎಂಬ ಭಾವವು. ಆತ್ಮನು ಜ್ಞಾನಸ್ವರೂಪನು, ಆತನ ಗುಣವೂ ಜ್ಞಾನಸ್ವರೂಪವಾದುದೇ. ಹೇಗೆಂದರೆ, ಸೂರ್ಯನು ತೇಜಸ್ಸ್ವರೂಪನು, ಆತನಲ್ಲಿರುವ ಗುಣವೂ ಕೂಡ ಪ್ರಕಾಶವಾದುದರಿಂದ ತೇಜೋರೂಪವಾದುದು, ಹೇಗೋ ಹಾಗೆ ಎಂದು ಭಾವಿಸತಕ್ಕದ್ದು. ಈ ಗುಣರೂಪವಾದ ಜ್ಞಾನಕ್ಕೆ ಧರ್ಮಭೂತಜ್ಞಾನವೆಂಬ ಹೆಸರು. ಈ ಮೇಲಿನ ವಾಕ್ಯದಲ್ಲಿ "ಇವ್ವಾತ್ಮಾಕ್ಕಳೆಲ್ಲಾರುಕ್ಕುಮ್" ಎಂದು ಪ್ರಯೋಗಿಸಿರುವಡರಿಂದ, ಬದ್ಧಮುಕ್ತನಿತ್ಯರಾದ ಸರ್ವಾತ್ಮರುಗಳನ್ನೆಲ್ಲಾ ಕುರಿತು ಹೇಳಲ್ಪಟ್ಟಿತೆಂದು ಭಾವಿಸತಕ್ಕದ್ದು. ಪರಮಾತ್ಮನೂ ಕೂಡ ಆತ್ಮಾವಾದುದರಿಂದ ಆತನೂ ಕೂಡ ಹಾಗೆಯೇ ಜ್ಞಾನಸ್ವರೂಪನೂ ಮತ್ತು ಜ್ಞಾನಗುಣವುಳ್ಳವನು. "ಸತ್ಯಂಜ್ಞಾನಮನಂತಂ ಬ್ರಹ್ಮ" "ಯಸ್ಸರ್ವಜ್ಞಸ್ಸರ್ವವಿತ್" ಇತ್ಯಾದಿ ಶ್ರುತಿಗಳು ಧರ್ಮಿಯೂ ಜ್ಞಾನವೆಂದೂ, ಧರ್ಮವೂ ಜ್ಞಾನವೆಂದೂ ಬೋಧಿಸುವದರಿಂದ ಪರಬ್ರಹ್ಮನು ನಿರ್ಗುಣನೆಂಬ ಶಾಂಕರ ವಾದವು ಅಸಮಂಜಸವಾದುದೆಂದು ಇದರಿಂದಲೇ ತೋರಿಬರುತ್ತದೆ. ಈ ಧರ್ಮಭೂತಜ್ಞಾನವುಂಟೆಂಬುವದನ್ನು ಹೇಗೆ ಪ್ರತಿಯೊಬ್ಬರೂ ನಿರ್ಧರಿಸಬಹುದೆಂದರೆ, "ಅಹಮಿದಂಜಾನಾಮಿ" "ನಾನು ಇದನ್ನು ತಿಳಿಯುವೆನು" ಎನ್ನುವಾಗ ತೋರಿಬರುತ್ತದೆ. ಧರ್ಮಿಯೇನೋ ದ್ರವ್ಯವು, ಈ ಧರ್ಮವಾದ ಜ್ಞಾನವೂ ಕೂಡ ದ್ರವ್ಯವೆಂಬುವದು ಹೇಗೆ ಎಂದರೆ ಅದಕ್ಕೆ ಶ್ರೀನಿಗಮಾಂತ ಮಹಾದೇಶಿಕರವರು ಇದರ ಲಕ್ಷಣವನ್ನು "ಧರ್ಮಭೂತಜ್ಞಾನಂ ದ್ರವ್ಯಂ ಜ್ಞಾನತ್ವಾತ್ ಆತ್ಮವತ್" ಎಂಬ ಪ್ರಯೋಗದ ಮೂಲಕ, ಅವರು ಅನುಗ್ರಹಿಸಿರುವ ನ್ಯಾಯಸಿದ್ಧಾಂಜನವೆಂಬ ಗ್ರಂಥದಲ್ಲಿ ಹೇಳಿರುತ್ತಾರೆ. ದ್ರವ್ಯಕ್ಕೆ ಲಕ್ಷಣವು ಒಂದು ಅವಸ್ಥೆಯನ್ನು ಆಶ್ರಯಿಸಿರೋಣವು. ಇಲ್ಲಿ ಜ್ಞಾನತ್ವವೆಂಬ ಅವಸ್ಥೆಯನ್ನು ಆಶ್ರಯಿಸಿರುವದರಿಂದ ದ್ರವ್ಯವು. ಯಾವಾಗ ಚೇತನನೆಂಬದಾಗಿ ಹೇಳಲ್ಪಟ್ಟಿತೋ, ಆಗ ಜೊತೆಯಲ್ಲೇ ಧರ್ಮಭೂತಜ್ಞಾನವೂ ಬೋಧಿತವಾಗುವದರಿಂದ, ಅದನ್ನು ಬೇರೆಯಾಗಿ ಹೇಳಿ, ಅಚೇತನಗಳು ಮೂರು ವಿಧವೆಂದು ಹೇಳಲ್ಪಟ್ಟಿತೇ ವಿನಾ ನಾಲ್ಕು ವಿಧವೆಂದು ಶ್ರೀ ಯತಿವರ್ಯರು ಹೇಳಲಿಲ್ಲವು. ಈಗ ಧರ್ಮಭೂತಜ್ಞಾನದ ಸ್ವರೂಪಲಕ್ಷಣವನ್ನು ಬೋಧಿಸು

ಇದ್ಧರ್ಮಭೂತಜ್ಞಾನಮ್ ವಿಷಯಪ್ರಕಾಶನ ದಶೈಯಿಲೇ ಸ್ವಾಶ್ರಯತ್ತುಕ್ಕು ಸ್ವಯಂಪ್ರಕಾಶಮಾಯಿರುಕ್ಕುಮ್. ಇದು ಈಶ್ವರನುಕ್ಕುಮ್, ನಿತ್ಯರ್ಕ್ಕುಮ್ ನಿತ್ಯವಿಭುವಾಯಿರುಕ್ಕುಮ್.

ಮುಕ್ತರ್ಕಳಾಗಿರುಕ್ಕ ಸಂಸಾರಾವಸ್ಥೈಯಿಲ್ ಕರ್ಮಾನುರೂಪಮಾಕ ಬಹುವಿಧಸಜಾತೀಯ ವಿಕಾಸವತ್ತಾಯ್ ಮುಕ್ತಾವಸ್ಥೈಯಿಲೆ (ನೈಜ)

ತ್ತಾರೆ. ಲಕ್ಷಣವನ್ನು ಹೇಳುವಾಗ ಅಧರ್ಮಭೂತಜ್ಞಾನಕ್ಕೆ ಮಾತ್ರವೇ ಅಸಾಧಾರಣವಾದುದನ್ನು ತಿಳಿಸಬೇಕಾದ ಪ್ರಯುಕ್ತ ಅದನ್ನು ನಿರೂಪಿಸುತ್ತಾರೆ.

ಇದ್ಧರ್ಮಭೂತಜ್ಞಾನಂ - ಈ ವಿಶೇಷರೂಪವಾಗಿರುವ ಜ್ಞಾನವು, ಧರ್ಮಿಯಾದ ಜ್ಞಾನವಲ್ಲವೆಂಬ ಭಾವವು, ವಿಷಯಪ್ರಕಾಶನದ ಶೈಯಿಲೆ - ಬಾಹ್ಯವಸ್ತುಗಳನ್ನು ಪ್ರಕಾಶಪಡಿಸುವ ಅವಸ್ಥೆಯಲ್ಲಿ, ಸ್ವಾಶ್ರಯತ್ತುಕ್ಕು - ತನಗೆ ಆಶ್ರಯವಾದ ಆತ್ಮನಿಗೆ, ಸ್ವಯಂಪ್ರಕಾಶವಾಗಿರುತ್ತದೆ. ಸ್ವಯಂಪ್ರಕಾಶವೆಂದು ಹೇಳಿದುದರಿಂದ ತ್ರಿಗುಣವಾದ ಪ್ರಕೃತಿ, ಕಾಲಗಳಿಗಿಂತಲೂ ಭಿನ್ನವಾದುದೆಂದು ಹೇಳಲ್ಪಟ್ಟಿತು. ಸ್ವಾಶ್ರಯತ್ತುಕ್ಕು ಪ್ರಕಾಶ ವೆಂದು ಹೇಳಿದುದರಿಂದ ಆತ್ಮಾವಿಗಿಂತ ಬೇರೆಯಾದುದೆಂದೂ ಹೇಳಲ್ಪಟ್ಟಿತು. ವಿಷಯ ಪ್ರಕಾಶ ಮಾಡುತ್ತದೆಂದು ಹೇಳುವುದರಿಂದ, ಶುದ್ಧಸತ್ವಕ್ಕಿಂತ ಭಿನ್ನವಾದುದೆಂದೂ ಹೇಳಲ್ಪಟ್ಟಿತು.

ಇದು-ಈ ಧರ್ಮಭೂತಜ್ಞಾನವು, ಸರ್ವೇಶ್ವರನಿಗೂ ನಿತ್ಯರಿಗೂ ಸಹ, ನಿತ್ಯವಿಭುವಾಯಿರುಕ್ಕುಮ್ - ಅನಾದಿಯಾಗಿ ಸದಾ ವಿಭುವಾಗಿರುತ್ತದೆ, ಇಲ್ಲಿ "ನಿತ್ಯವಿಭುವಾಯಿರುಕ್ಕುಮ್" ಎಂಬುವದು ನಿತ್ಯಂವಿಭುವಾಯಿರುಕ್ಕುಮ್ ಎಂಬಭಿಪ್ರಾಯದಿಂದ ಪ್ರಯೋಗಿಸಿರುವದಾಗಿರುತ್ತದೆ; ಎಂದರೆ, ಯಾವಾಗಲೂ ಅನಾದಿಕಾಲದಿಂದಲೂ ವಿಭುವಾಗಿರುತ್ತದೆ ಎಂಬ ಭಾವವು.

ಮುಕ್ತರ್ಕ್ಕು-ಈಶ್ವರ ನಿತ್ಯರಲ್ಲದೆ ಇತರ ಜೀವಾತ್ಮರಿಗೆ, ಸಂಸಾರದೆಸೆಯಲ್ಲಿ ಅವರುಗಳ ಕರ್ಮಾನುಗುಣವಾಗಿ, ಬಹುವಿಧ ಸಜಾತೀಯ ವಿಕಾಸವತ್ತಾಯ್ - ನಾನಾವಿಧವಾದ ಸಂಕೋಚ ವಿಕಾಸಗಳನ್ನು ಹೊಂದಿದಾಗಿ ಎಂದರೆ ಒಬ್ಬರಿಗೆ ತುಂಬಾ ಸಂಕೋಚವೂ, ಇನ್ನೊಬ್ಬರಿಗೆ ಅದಕ್ಕೂ ಕಮ್ಮಿ ಹೀಗೆ ಬಹುವಿಧ ಸಂಕೋಚವುಳ್ಳದ್ದಾಗಿಯೂ, ಹಾಗೆಯೇ ಇನ್ನು ಕೆಲವರಿಗೆ ಧರ್ಮಭೂತಜ್ಞಾನವು ಸ್ವಲ್ಪವೇ ವಿಕಾಸವುಳ್ಳದ್ದಾಗಿ, ಇನ್ನು ಇತರರಿಗೆ ಅದಕ್ಕಿಂತ ಹೆಚ್ಚು ವಿಕಾಸವುಳ್ಳದ್ದಾಗಿಯೂ ಇರುತ್ತದೆಂಬ ಭಾವವು; ಯಾರಿಗೂ ಬದ್ಧ ದೆಸೆಯಲ್ಲಿ ಪೂರ್ಣ ವಿಕಾಸವಿಲ್ಲವೆಂಬಭಿಪ್ರಾಯವು; ಮುಕ್ತಾವಸ್ಥೆ

ಏಕವಿಕಾಸತ್ತಾಲೆ ಪಿನ್ನು ಯಾವತ್ಕಾಲಮ್ ವಿಭುವಾಯಿರುಕ್ಕುಮ್.

ಧರ್ಮಭೂತ ಜ್ಞಾನತ್ತಿನುಡೈಯ ಪ್ರವೃತ್ತಿ.

ಇದುಕ್ಕು ಪ್ರವೃತ್ತಿಯಾವದು ? (1) ವಿಷಯಜ್ಞಳೈ ಪ್ರಕಾಶಿಪ್ಪಿ

ಯಿಲೇ – ಮುಕ್ತದಿಸೆಯಲ್ಲಿ, ಏಕವಿಕಾಸತ್ತಾಲೇ – ಅದಕ್ಕೆ ಸಹಜವಾದ ಒಂದೇವಿಧವಾದ ಪೂರ್ಣ ವಿಕಾಸದೊಂದಿಗೆ, ಪಿನ್ನುಪಯಾವತ್ಕಾಲಮ್-ಅನಂತರ ಎಲ್ಲಾ ಕಾಲದಲ್ಲೂ, ವಿಭುವಾಗಿರುತ್ತದೆ. ಇಲ್ಲಿ ಏಕವಿಕಾಸತ್ತಾಲೆ ಎಂದು ಹೇಳಿರುವದರಭಿಪ್ರಾಯವೇನೆಂದರೆ :—ಬದ್ಧಾವಸ್ಥೆಯಲ್ಲಿ ಈ ಧರ್ಮಭೂತ ಜ್ಞಾನಕ್ಕೆ ಸ್ವಲ್ಪ ಸಂಕೋಚವಿದ್ದೇ ಇರುತ್ತದೆಂದೂ, ಆದರೆ ಒಬ್ಬರಿಗೆ ಹೆಚ್ಚು ಸಂಕೋಚವೂ, ಇನ್ನೊಬ್ಬರಿಗೆ ಸಾಧಾರಣ ಸಂಕೋಚವೂ, ಇನ್ನೊಬ್ಬರಿಗೆ ಅತ್ಯಲ್ಪ ಸಂಕೋಚವೂ ಹೀಗೆ ಕರ್ಮಾನುಗುಣವಾಗಿ ಪ್ರಾಪ್ತವಾಗುತ್ತದೆಂದೂ ಹೇಳಲ್ಪಟ್ಟಿತು. ಮುಕ್ತಾವಸ್ಥೆಯಲ್ಲಾದರೋ ಈ ಪ್ರಕೃತಿಯಿಂದುಂಟಾಗುವ ಸಂಕೋಚವಿಲ್ಲದಿರುವದರಿಂದ, ಆತ್ಮನ ಧರ್ಮ ಭೂತಜ್ಞಾನವು ತನ್ನ ನೈಜವಾದ ಪ್ರಕಾಶವನ್ನು ಹೊಂದುವದರಿಂದ ಸ್ವೇನರೂಪೇಣಾಭಿ ನಿಷ್ಪದ್ಯತೇ ಎಂದು ಶ್ರುತಿಯಲ್ಲಿ ಹೇಳಲ್ಪಟ್ಟಿರುತ್ತದೆ. ಎಲ್ಲಾ ಮುಕ್ತಾತ್ಮರ ಧರ್ಮಭೂತ ಜ್ಞಾನವೂ ಇಂತಹ ಪರಿಪೂರ್ಣಪ್ರಕಾಶವನ್ನು ಹೊಂದುವದರಿಂದ ಎಲ್ಲವೂ ಒಂದೇ ವಿಧವಾದ ವಿಕಾಸವನ್ನು ಹೊಂದಿ, ಇಂತಹ ಜ್ಞಾನೈಕಾಕಾರತೆಯ ಮೂಲಕ ಎಲ್ಲಾ ಮುಕ್ತಾತ್ಮರೂ ಸಮರೆಂಬ ಭಾವವು. ಇದರಿಂದ ಧರ್ಮಭೂತ ಜ್ಞಾನದ ಸ್ವರೂಪ ಸ್ಥಿತಿಗಳು ಹೇಳಲ್ಪಟ್ಟವು. ಲಕ್ಷ್ಮಿಯ ಧರ್ಮಭೂತಜ್ಞಾನವಿಷಯವಾಗಿ ಏನೂ ಹೇಳಲ್ಪಡಲಿಲ್ಲವಲ್ಲಾ ಎಂದರೆ ಲಕ್ಷ್ಮಿಯೂ ಸರ್ವೇಶ್ವರನಲ್ಲೇ ಅಂತರ್ಭೂತಳಾದುದರಿಂದ ಆಕೆಯ ಧರ್ಮಭೂತ ಜ್ಞಾನವೂ ಈಶ್ವರನ ಧರ್ಮಭೂತಜ್ಞಾನದ ಹಾಗೆ, ಅನಾದಿಕಾಲದಿಂದಲೂ ವಿಭುವಾಗಿರುತ್ತದೆಂದು ತಿಳಿಯತಕ್ಕದ್ದು.

ಧರ್ಮ ಭೂತಜ್ಞಾನದ ಪ್ರವೃತ್ತಿಯು

ಮುಂದೆ ಧರ್ಮಭೂತಜ್ಞಾನದ ಪ್ರವೃತ್ತಿಯು ನಾಲ್ಕು ವಿಧವೆಂದು ಹೇಳಲ್ಪಡುತ್ತದೆ :—

ಇದುಕ್ಕು ಪ್ರವೃತ್ತಿಯಾವದು ? – ಈ ಧರ್ಮಭೂತ ಜ್ಞಾನಕ್ಕೆ ಪ್ರವೃತ್ತಿಯು ಯಾವುದು? (1) ವಿಷಯಜ್ಞಳೈ ಪ್ರಕಾಶಿಪ್ಪಿಕ್ಕೈಯುನ್–

ಕ್ಕೈಯುಮ್, (2) ಪ್ರಯತ್ನಾವಸ್ಥೈಯಾಲೆ ಶರೀರಾದಿಗಳೈ ಪ್ರೇರಿಕ್ಕೈಯುಮ್, (3) ಬದ್ಧದಶೈಯಿಲ್ ಸಙ್ಕೋಚವಿಕಾಸಙ್ಗಳುಮ್, (4) ಆನುಕೂಲ್ಯ ಪ್ರಾತಿಕೂಲ್ಯ ಪ್ರಕಾಶಮುಖತ್ತಾಲೇ ಭೋಗಮೆಙ್ಗಿರ ವವಸ್ಥೈಯೈ ಯಡೈಗೈಯುಮ್.

ಭೋಗವಾವದು ?-ತನಕ್ಕನುಕೂಲಮಾಕವಾದಲ್ ಪ್ರತಿಕೂಲಮಾಕವಾದಲೊನ್ನೈಯನುಭವಿಕ್ಕೈ. ಈಶ್ವರವಿಭೂತಿಯಾನ ಸರ್ವವಸ್ತು

ಬಾಹ್ಯವಸ್ತುಗಳನ್ನು ಪ್ರಕಾಶಗೊಳಿಸುವುದು. (2) ಪ್ರಯತ್ನಾವಸ್ಥೈಯಾಲೆ – ಕೆಲಸಗಳನ್ನು ಮಾಡಬೇಕೆಂದು ಪ್ರಯತ್ನಿಸುವ ದೆಸೆಯ ಮೂಲಕ, ಶರೀರಾದಿಗಳೈ ಪ್ರೇರಿಕ್ಕೈಯುಮ್ – ಶರೀರೇಂದ್ರಿಯಗಳನ್ನು ಪ್ರೇರಿಸೋಣವೂ, (3) ಬದ್ಧದಶೈಯಿಲ್ ಸಙ್ಕೋಚ ವಿಕಾಸಙ್ಗಳುಮ್ – ಬದ್ಧಾವಸ್ಥೆಯಲ್ಲಿ ಸಂಕೋಚವಿಕಾಸಗಳನ್ನು ಹೊಂದುವದು; ಇದು ಕರ್ಮಾನುಗುಣವಾಗಿ ಉಂಟಾಗತಕ್ಕದ್ದು. (4) ಆನುಕೂಲ್ಯ ಪ್ರಾತಿಕೂಲ್ಯ ಪ್ರಕಾಶಮುಖತ್ತಾಲೇ - ಕರ್ಮಾನುಗುಣವಾಗಿ ಕೆಲವು ಸಂದರ್ಭದಲ್ಲಿ ವಸ್ತುಗಳು ಅನುಕೂಲವಾಗಿ ತೋರಿ ಇನ್ನು ಬೇರೇ ಸಂದರ್ಭದಲ್ಲಿ ಅವು ಪ್ರತಿಕೂಲವಾಗಿ ತೋರಿ, ಭೋಗಮೆಙ್ಗಿರ ವವಸ್ಥೈಯೈ - ಸುಖದುಃಖಗಳ ಭೋಗವೆಂಬುವ ಅವಸ್ಥೆಯನ್ನು, ಅಡೈಗೈಯುಮ್ - ಹೊಂದುವದು. ಹೀಗೆ ನಾಲ್ಕು ವಿಧ ಪ್ರವೃತ್ತಿಗಳು; ಆನುಕೂಲ್ಯ ಪ್ರಾತಿಕೂಲ್ಯ ವೆಂಬುವವರ ಮುಂದೆ ವಸ್ತು ಎಂಬ ಪದವನ್ನು ಇಟ್ಟುಕೊಳ್ಳತಕ್ಕದ್ದು. ಧರ್ಮ ಭೂತಜ್ಞಾನವು ಬಾಹ್ಯ ವಿಷಯಗಳನ್ನು ಪ್ರಕಾಶಗೊಳಿಸುವ ಸಾಮರ್ಥ್ಯ ಉಳ್ಳದು. ಈ ಶಕ್ತಿಯು ಧರ್ಮಿಸ್ವರೂಪಕ್ಕೆ ಇಲ್ಲವು. ಧರ್ಮಿಯು ತನ್ನನ್ನು ಮಾತ್ರವೇ ಪ್ರಕಾಶಿಸುತ್ತದೇ ವಿನಾ ವಿಷಯಗಳನ್ನು ಪ್ರಕಾಶಿಸಲಾರದು. ಶರೀರಾದಿ ಎಂಬಲ್ಲಿ, ಆದಿ ಪದದಿಂದ ಇಂದ್ರಿಯಗಳು ಹೇಳಲ್ಪಟ್ಟವು. ಇಲ್ಲಿ ಭೋಗ ಶಬ್ದವು ಸಾಧಾರಣವಾಗಿ ಆನುಕೂಲ್ಯವಾದುದರ ಅನುಭವದಲ್ಲೇ ಉಪಯೋಗಿಸಲ್ಪಡುವಾಗ, ಇಲ್ಲಿ ಪ್ರಾತಿಕೂಲ್ಯವಾದುದನ್ನು ಸೇರಿಸಿ, ಸುಖದುಃಖಾನುಭವಗಳೆರಡನ್ನೂ ಬೋಧಿಸುತ್ತವೆಯೇ ಎಂದರೆ, ಭೋಗ ಶಬ್ದಕ್ಕೆ ಹಾಗೆಯೇ ಅರ್ಥವೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.

ಭೋಗವಾವದು ? – ಭೋಗವೆಂದರೇನು ? – ಒನ್ನೈ – ಒಂದು ವಸ್ತುವನ್ನು. ತನಕ್ಕನುಕೂಲಮಾಕವಾದಲ್ – ತನಗೆ ಅನುಕೂಲವಾಗಿ ಸುಖರೂಪದಲ್ಲಾಗಲಿ, ಅಥವಾ ಪ್ರತಿಕೂಲಮಾಕವಾದಲ್ – ಪ್ರತಿಕೂಲ

ಕ್ಕಳುಕ್ಕುಮ್-ಅನುಕೂಲ್ಯಮ್ ಸ್ವಭಾವಮಾಯಿಪ್ಪಡಿ ಈಶ್ವರನುಮ್ ನಿತ್ಯರುಮ್ ಮುಕ್ತರು ಮನುಭವಿಯಾನಿರ್ಕ, ಸಂಸಾರಿಗಳುಕ್ಕು ಕಾಲ ಭೇದತ್ತಾಲುಮ್, ಪುರುಷಭೇದತ್ತಾಲುಮ್, ದೇಶಭೇದತ್ತಾಲುಮ್ ಅಲ್ವಾನುಕೂಲಮಾಯುಮ್, ಪ್ರತಿಕೂಲಮಾಯುಮ್, ಉದಾಸೀನ ಮಾಯುಮ್, ಇರುಕ್ಕರವಿವ್ವಿಭಾಗಜ್ಗಳೆಲ್ಲಾ ಮಿವ್ವಸ್ತುಕ್ಕಳುಕ್ಕು ಸ್ವಭಾವ ಸಿದ್ಧಜ್ಗಳನ್ರು.

ವಾಗಿ ದುಃಖರೂಪದಲ್ಲಾಗಲಿ, ಅನುಭವಿಕ್ಕೈ – ಅನುಭವಿಸೋಣವು. ಅನುಕೂಲಾನುಭವವೇ ಸುಖವು, ಪ್ರತಿಕೂಲಾನುಭವವೇ ದುಃಖವು. ಆದರೆ ಈಶ್ವರ, ಲಕ್ಷ್ಮೀ, ನಿತ್ಯಮುಕ್ತರುಗಳಿಗೆಲ್ಲಾ ಅನುಭವವು ಯಾವಾಗಲೂ ಅನುಕೂಲವಾಗಿಯೇ ಇರುತ್ತದೆ, ಎಂದಿಗೂ ಪ್ರತಿಕೂಲವಾಗಿ ಇರುವದೇ ಇಲ್ಲವು. ಹೀಗಿರುವಲ್ಲಿ ಬದ್ಧದೆಸೆಯಲ್ಲಿ ಮಾತ್ರ ಅನುಕೂಲವಾಗಿಯಾಗಲಿ, ಅಲ್ವಾನುಕೂಲವಾಗಿಯಾಗಲಿ, ಅನುಕೂಲಪ್ರತಿಕೂಲವೆರಡೂ ಇಲ್ಲದೇಯಾಗಲಿ, ಅಥವಾ ಪೂರಾಪ್ರತಿಕೂಲವೇಯಾಗಲಿ ಇರಲು ಕಾರಣವೇನೆಂಬ ಶಂಕಾವನ್ನು ಊಹಿಸಿದವರಾಗಿ ಅದಕ್ಕೆ ಸಮಾಧಾನವನ್ನು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. ಈಶ್ವರವಿಭೂತಿಯಾನ – ಸರ್ವೇಶ್ವರನ ವಿಭೂತಿಗೆ ಸೇರಿದ, ಸಮಸ್ತ ವಸ್ತುಗಳಿಗೂ, ಅನುಕೂಲ್ಯಂ ಸ್ವಭಾವಮಾಯ್ – ಸಹಜವಾದ ಸ್ವಭಾವವು ಅನುಕೂಲವಾಗಿಯೇ ಇರತಕ್ಕದ್ದಾಗಿ, ಇಪ್ಪಡಿ – ಈ ರೀತಿಯಲ್ಲಿ, ಈಶ್ವರನುಮ್- ಲಕ್ಷ್ಮೀಯುಕ್ತನಾದ ಈಶ್ವರನೂ, ನಿತ್ಯರೂ, ಮುಕ್ತರೂ, ಸಹಾ ಅನುಭವಿಯಾನಿರ್ಕ – ಅನುಭವಿಸುತ್ತಿರುವಾಗ, ಸಂಸಾರಿಗಳುಕ್ಕು – ಬದ್ಧ ಜೀವರಿಗೆ ಮಾತ್ರ, ಕಾಲಭೇದದಿಂದಲೂ, ಪುರುಷಭೇದದಿಂದಲೂ, ದೇಶಭೇದದಿಂದಲೂ, ಇವುಗಳು ಕೆಲವರಿಗೆ ಸ್ವಲ್ವಾನುಕೂಲವಾಗಿಯೂ, ಕೆಲವರಿಗೆ ಪ್ರತಿಕೂಲವಾಗಿಯೂ, ಉದಾಸೀನಮಾಯುಮ್ – ಕೆಲವರಿಗೆ ಅನುಕೂಲ ಪ್ರತಿಕೂಲವೆರಡೂ ಅಲ್ಲದೆಯೂ, ಇರುಕ್ಕರ ವಿವ್ವಿಭಾಗಂಗಳೆಲ್ಲಾ – ಇರುವಂಥಾ ಈ ವ್ಯತ್ಯಾಸಗಳೆಲ್ಲವೂ, ಸ್ವಭಾವ ಸಿದ್ಧಂಗಳನ್ರು – ಆ ವಸ್ತುಗಳಿಗೆ ಸ್ವಭಾವ ಸಿದ್ಧಗಳೆಂದು ಭಾವಿಸತಕ್ಕದ್ದಲ್ಲವು. ಇಲ್ಲಿ ಈಶ್ವರ ವಿಭೂತಿಯು ಎರಡು:— ಒಂದು ತ್ರಿಪಾದ್ವಿಭೂತಿಯು, ಇದಕ್ಕೆ ನಿತ್ಯವಿಭೂತಿಯೆಂದೂ ಹೆಸರು. ಇದು ದಿವ್ಯ ವೈಕುಂಠವೂ ಅಲ್ಲಿರುವ ಭೋಗ್ಯ ಭೋಗಸ್ಥಾನ ಭೋಗೋಪಕರಣ ವಸ್ತುಗಳು. ಇವು ಯಾವಾಗಲೂ ಈಶ್ವರಲಕ್ಷ್ಮೀನಿತ್ಯಮುಕ್ತರುಗಳಿಗೆಲ್ಲಾ ಅನುಕೂಲವಾಗಿಯೇ ಇರುವವು. ಲೀಲಾವಿಭೂತಿಯು ಏಕಪಾದ್ವಿಭೂತಿಯು. ಇದು

ಇದು ಇವರ್‌ಗಳುಡೈಯ ಕರ್ಮಜ್ಞಳಕ್ಕೀಡಾಗ ಸತ್ಯಸಜ್ಕಲ್ಪನಾನ

ಭೂಲೋಕ ಮುಂತಾದ ಲೋಕಗಳನ್ನೆಲ್ಲಾ ಒಳಗೊಂಡಿರುತ್ತದೆ. ಇದು ಜೀವ ನರ ಕರ್ಮಾಯತ್ತವಾಗಿ ಕೆಲವರಿಗೆ ಅನುಕೂಲ, ಕೆಲವರಿಗೆ ಅಲ್ಪಾನುಕೂಲ, ಕೆಲವರಿಗೆ ಪ್ರತಿಕೂಲ, ಇನ್ನು ಕೆಲವರಿಗೆ ಎರಡೂ ಅಲ್ಲದೆ, ಹೀಗೆಲ್ಲಾ ಇರುತ್ತದೆ. ಆದರೆ ಈಶ್ವರ ನಿತ್ಯಮುಕ್ತರುಗಳಿಗೆ ಲೀಲಾ ವಿಭೂತಿಯೂ ಕೂಡ ಅನುಕೂಲವಾದುದೇ. ಬದ್ಧರಿಗೆ ಮಾತ್ರ ಹಾಗೆಲ್ಲಾ ಪರಿಣಮಿಸುವದು, ಪುರುಷ ಭೇದದಿಂದಲೂ ದೇಶಕಾಲಾದಿ ಭೇದದಿಂದಲೂ ಎಂದು ತಿಳಿಸುತ್ತಾರೆ. ಹೇಗೆಂದರೆ :—ಆಹಾರವು ಯವ್ವನಸ್ಥನಿಗೆ ತುಂಬಾ ಸುಖಕರವು, ಜರೆಯಲ್ಲಿ ಬಹು ಕ್ಲೇಶವನ್ನುಂಟುಮಾಡಬಹುದು. ಬಿಸಿನೀರಿನ ಸ್ನಾನವು ಮೊಗುವಿಗೆ ಕ್ಲೇಶವು, ಮುದುಕನಿಗೆ ಆಪ್ಯಾಯನವು, ಇವು ಕಾಲಭೇದಕ್ಕೆ ನಿದರ್ಶನವು. ಪುರುಷ ಭೇದಕ್ಕೆ ಉದಾಹರಣೆಯು :—ಸಂಭೋಗವು ಪುರುಷನಿಗೆ ಅಷ್ಟು ಕ್ಲೇಶಕರವಲ್ಲವು, ಸ್ತ್ರೀಗೆ ಪ್ರಸವಾದಿ ದುಃಖಗಳಿಗೆ ಕಾರಣವಾಗಬಹುದು. ಬೇವು ನಮಗೆ ಕಹಿಯು, ಒಂಟಿಗೆ ತುಂಬಾ ರುಚಿಯಾದುದು. ಹುಲ್ಲು ನಮಗೆ ನಿಸ್ಸಾರವು, ಆಕಳಿಗೆ ಅಮೃತ ಸದೃಶವಾದ ಕ್ಷೀರೋತ್ಪತ್ತಿಗೆ ಕಾರಣವಾಗಿ ಸಾರವತ್ತಾದುದು. ದೇಶಭೇದಕ್ಕೆ ಉದಾಹರಣೆಯು :—ತಣ್ಣೀರು ಉಷ್ಣ ರಾಜ್ಯದಲ್ಲಿರುವವನಿಗೆ ಸುಖಕರವು, ತುಂಬಾ ಛಳಿರಾಜ್ಯದಲ್ಲಿರುವವನಿಗೆ ದುಃಖ ಕರವು. ದ್ರವ್ಯವು ಒಬ್ಬನಿಗೆ ಭಗವದ್ಭಾಗವತಾರಾಧನೆಗೆ ಸಾಧಕವಾಗಿ ತುಂಬಾ ಹಿತಕರವಾಗಬಹುದು; ಇನ್ನೊಬ್ಬನಿಗೆ ವಿಷಯಾನುಭವ ಮೂಲಕ ಅಧರ್ಮ ಪ್ರವರ್ತನೆಗೆ ಸಹಕಾರಿಯಾಗಿ ಅನಿಷ್ಟ ಪ್ರಾಪ್ತಿಗೆ ಕಾರಣವಾಗಬಹುದು. ಕರ್ಮ ಗಳ ಬಾಧೆಯಿಲ್ಲದೆ ವರಪ್ರಸಾದ ಮಹಿಮೆಯಿಂದಲೂ ಶ್ರೀಹರಿಯನುಗ್ರಹ ದಿಂದಲೂ ಅನುಕೂಲ್ಯ ಪ್ರಾಪ್ತಿಯುಂಟು. ಹೇಗೆಂದರೆ :—ಲಾಂಗೂಲಾ ಗ್ನಿಯು ಆಂಜನೇಯನಿಗೂ, ಮಹಾಕಾಳಕೂಟ ವಿಷವು ರುದ್ರನಿಗೂ, ಹಿರಣ್ಯ ಕಶಿಪುವಿನ ನಾನಾ ವಿಧವಾದ ಹಿಂಸೆಗಳು ಪ್ರಹ್ಲಾದನಿಗೂ ಪ್ರತಿಕೂಲಗಳಾಗ ಲಿಲ್ಲವು. ಹೀಗೆ ವಸ್ತುಗಳು ಕರ್ಮಾಯತ್ತವಾಗಿ ದೇಶಕಾಲ ಪುರುಷ ಭೇದ ಗಳಿಂದ ಅನುಕೂಲ್ಯವುಳ್ಳವುಗಳಾಗಿಯೂ ಪ್ರಾತಿಕೂಲ್ಯವುಳ್ಳವುಗಳಾಗಿಯೂ ಪರಿಣಮಿಸುತ್ತವೆ. ಹಾಗೆ ಅನುಕೂಲ್ಯ ಪ್ರಾತಿಕೂಲ್ಯವುಳ್ಳವುಗಳಾಗಿರುವದು ವಸ್ತುಗಳಿಗೆ ಸ್ವಭಾವಸಿದ್ಧವಾದುದಲ್ಲವು. ಹಾಗಾದರೆ, ಹೀಗೆ ವ್ಯತ್ಯಾಸಗಳುಂ ಟಾಗಲು ಕಾರಣವೇನೆಂಬುವದನ್ನು ಮುಂದೆ ತಿಳಿಸುತ್ತಾರೆ:—

ಇದು – ಈ ಧರ್ಮಭೂತಜ್ಞಾನವು ಇಂತಹ ವ್ಯತ್ಯಸ್ತವಾದ ಭೋಗಗಳ

ವೀಶ್ವರನಿವರ್‌ಗಳುಕ್ಕು ಫಲಪ್ರದಾನಂ ಪಣ್ಣಿನ ಪ್ರಕಾರಮ್. ಇಕ್ಕರ್ಮ ಫಲಮನುಭವಿಕ್ಕೈಕ್ಕು ಬದ್ಧರುಕ್ಕು ಸ್ವರೂಪಯೋಗ್ಯತೆಯುಮ್, ಸಹಕಾರಿಯೋಗ್ಯತೈಯು ಮುಣ್ಡು. ಸ್ವರೂಪಯೋಗ್ಯತೈ ಪರತನ್ತ್ರ ಚೇತನತ್ವಂ ; ಸಹಕಾರಿ ಯೋಗ್ಯತೈ ಸಾಪರಾಧತ್ವಮ್. ನಿತ್ಯರು

ನ್ನುಂಟುಮಾಡೋಣವು, ಇವರುಗಳುಡೈಯ ಕರ್ಮಂಗಳುಕ್ಕು – ಈ ಬದ್ಧರ, ಕರ್ಮಗಳಿಗೆ, ಈಡಾಗ – ಉಚಿತವಾದ ಎಂದರೆ ಅನುಸಾರವಾಗಿ, ಸತ್ಯಸಂಕಲ್ಪನಾದ ಸರ್ವೇಶ್ವರನು, ಫಲಪ್ರದಾನಂ ಪಣ್ಣಿನ ಪ್ರಕಾರಂ – ಇವರುಗಳಿಗೆ ಫಲವನ್ನುಂಟುಮಾಡಿದ ಪ್ರಕಾರವೆಂದು ಭಾವಿಸತಕ್ಕದ್ದು. ಬದ್ಧರುಗಳಿಗೆ ಸುಖದುಃಖಾನುಭವವು ಕರ್ಮಾನುಗುಣವಾಗಿ ಉಂಟಾಗತಕ್ಕದ್ದು ; ಅದಕ್ಕಾಗಿಯೇ ಈ ಲೀಲಾವಿಭೂತಿಯಲ್ಲಿರುವ ವಿಚಿತ್ರ ವಿವಿಧಸೃಷ್ಟಿಯೂ ಸರ್ವೇಶ್ವರನ ಅಪ್ರತಿಹತವಾದ ಸಂಕಲ್ಪದಿಂದುಂಟಾಗಿರುತ್ತದೆಂದು ಅರಿಯತಕ್ಕದ್ದು. ಮುಂದೆ ಈ ಕರ್ಮಫಲಾನುಭವಕ್ಕೆ ಬದ್ಧರಿಗೆ ಯೋಗ್ಯತೆಯು ಎರಡು ಕಾರಣಗಳಿಂದುಂಟಾಗುವುದೆಂದು ಅಪ್ಪಣೆ ಕೊಡಿಸುತ್ತಾರೆ. ಇಕ್ಕರ್ಮಫಲಮನುಭವಿಕ್ಕೈಕ್ಕುಮ್ - ಈ ಕರ್ಮಫಲವನ್ನನುಭವಿಸುವದಕ್ಕೆ, ಬದ್ಧರಿಗೆ ಸ್ವರೂಪಯೋಗ್ಯತೆಯೂ, ಸಹಕಾರಿ ಯೋಗ್ಯತೆಯೂ ಹೀಗೆ ಎರಡು ಕಾರಣಗಳಿಂದ ಯೋಗ್ಯತೆಯುಂಟು. ಆ ಯೋಗ್ಯತೆಗಳು ಹೇಗೆ ಉಂಟಾದವೆಂಬುವದನ್ನು ನಿರೂಪಿಸುತ್ತಾರೆ. ಸ್ವರೂಪಯೋಗ್ಯತೆಯು ಯಾವುದೆಂದರೆ, ಪರತನ್ತ್ರ ಚೇತನತ್ವಂ- ಸರ್ವೇಶ್ವರನಿಗೆ ಅಧೀನವಾಗಿರುವ ಚೇತನಭಾವವು. ಸಹಕಾರಿಯೋಗ್ಯತೆಯು ಯಾವುದೆಂದರೆ :—ಸಾಪರಾಧತ್ವಂ - ಅಪರಾಧದಿಂದ ಯುಕ್ತನಾಗಿರುವಿಕೆಯು, ಕರ್ಮಫಲಾನುಭವಕ್ಕೆ ಇವೆರಡೂ ಹೇಗೆ ಮುಖ್ಯವೆಂಬುವದನ್ನು ಸುಲಭವಾಗಿ ಗ್ರಹಿಸಬಹುದು ; ಹೇಗಂದರೆ :—ಒಬ್ಬನು ಇನ್ನೊಬ್ಬನಿಗೆ ಅಧೀನವಾಗಿದ್ದರೆ, ಆತನ ಇಷ್ಟಾನುಸಾರವೇ ನಡೆಯಬೇಕಾಗುತ್ತದೆ. ಹಾಗೆ ನಡೆಯದಿದ್ದರೆ ಸಾಪರಾಧನಾಗುತ್ತಾನೆ. ಸ್ವತಂತ್ರನಾಗಿದ್ದಪಕ್ಷದಲ್ಲಿ ಅಂತಹ ಅಪರಾಧ ಸಂಭವಿಸುವದಿಲ್ಲವು. ಹಾಗೆಯೇ ಬದ್ಧಜೀತನರು " ದಾಸಭೂತಾಸ್ಸ್ವತಸ್ಸ್ವೈ" ಎಂದು ಹೇಳಿರುವಹಾಗೆ ಲಕ್ಷ್ಮೀನಾರಾಯಣರಿಗೆ ದಾಸರಾದುದರಿಂದ ಅಧೀನರು. ಇವರುಗಳು ಈ ಲೋಕದಂಪತಿಗಳ ಇಷ್ಟಾನುಸಾರ ನಡಿಯಬೇಕು. ಇವರುಗಳ ಆಜ್ಞೆಯು ಶಾಸ್ತ್ರಗಳಲ್ಲಿ ವಿಧಿಸಿರುವಹಾಗೆ ನಡಿಯತಕ್ಕದ್ದಾಗಿರುತ್ತದೆ. ಶಾಸ್ತ್ರೋಲ್ಲಂಘನ ಮಾಡಿದವನು 'ಆಜ್ಞಾಚ್ಛೇದೀ ಮಮ ದ್ರೋಹೀ' ಎಂದು ಹೇಳಿರುವಹಾಗೆ ಸಾಪರಾಧಿಯು. ಹೀಗೆ ಪಾರತಂತ್ರ್ಯ,

ಕ್ಕುಮ್ ಮುಕ್ತರುಕ್ಕುಮ್ ಪರತನ್ತ್ರಚೇತನತೈಯಾಲೇ ಸ್ವರೂಪಯೋ
ಗ್ಯತೆಯುಣ್ಟೀಯಾಗಿಲುಮ್ ಈಶ್ವರಾನಭಿಮತ ವಿಪರೀತಾನುಷ್ಠಾನವಿ
ಲ್ಲಾಮೈಯಾಲೇ ಸಹಕಾರಿಯೋಗ್ಯತೈಯಿಲ್ಲೈ. ಈಶ್ವರ್ ಸರ್ವಪ್ರಶಾ
ಸಿತಾವಾಯ್, ತಾನೊರುತ್ತುರುಕ್ಕು ಶಾಸನೀಯನಿರ್ಕ್ಕೇ ನಿರ್ಕ್ಕೈಯಾಲೇ

ಸಾಪರಾಧತ್ವ ಎರಡೂ ಇರುವದರಿಂದ ಕರ್ಮಫಲಾನುಭವವು ಬದ್ಧನಿಗೆ ಮಾತ್ರ
ಉಂಟೆಂದೂ, ಇವುಗಳಿರಡೂ ಸರ್ವೇಶ್ವರನಲ್ಲಿಲ್ಲವಾದುದರಿಂದ ಕರ್ಮಫಲಾನು
ಭವವಿಲ್ಲವು. ಲಕ್ಷ್ಮಿಯೂ, ನಿತ್ಯಮುಕ್ತರೂ ಅಧೀನರಾಗಿದ್ದರೂ, ಸಾಪರಾ
ಧತ್ವವೆಂಬಜ್ಞವಿಲ್ಲದುದರಿಂದ ಇವರುಗಳಿಗೆ ಕರ್ಮ ಫಲಾನುಭವವಿಲ್ಲವೆಂದು
ಮುಂದೆ ಹೇಳುತ್ತಾರೆ, ನಿತ್ಯರುಕ್ಕುಮ್ ಮುಕ್ತರುಕ್ಕುಮ್ – ನಿತ್ಯ
ರಿಗೂ ಮುಕ್ತರಿಗೂ, ಪರತನ್ತ್ರಚೇತನತೈಯಾಲೇ – ಈಶ್ವರನಿಗೆ ಅಧೀನ
ವಾದ ಚೇತನತ್ವವನ್ನು ಹೊಂದಿರುವದರಿಂದ, ಸ್ವರೂಪ ಯೋಗ್ಯತೆಯನ್ನು
ಹೊಂದಿದ್ದರೂ, ಈಶ್ವರಾನಭಿಹಿತ ವಿಪರೀತಾನುಷ್ಠಾನವಿಲ್ಲಾಮೈ
ಯಾಲೆ – ಈಶ್ವರನಿಗೆ, ಅನಭಿಹಿತವೆಂದರೆ ಇಷ್ಟವಿಲ್ಲದ, ವಿಪರೀತಾನುಷ್ಠಾನ
ವೆಂದರೆ ವಿರುದ್ಧಾಚರಣೆಯಿಲ್ಲದುದರಿಂದ, ಸಹಕಾರಿಯೋಗ್ಯತೆಯು ಇವರುಗಳಿ
ಗಿಲ್ಲವು. ನಿತ್ಯರೂ ಮುಕ್ತರೂ ಸಹ ಬದ್ಧರ ಹಾಗೆಯೇ ಸರ್ವೇಶ್ವರನಿಗೆ ಅಧೀ
ನರಾಗಿ ಆತನ ಅಭಿಮತಾನುಸಾರ ನಡೆಯತಕ್ಕವರು, ಆದುದರಿಂದ ಸ್ವರೂಪ
ಯೋಗ್ಯತೆ ಏನೋ ಉಂಟು. ಆದರೆ ಅವರುಗಳು ಬದ್ಧರಹಾಗೆ ವಿರುದ್ಧಾಚರ
ಣೆಯನ್ನು ಎಂದಿಗೂ ಕೈಕೊಳ್ಳಲಾರರಾದುದರಿಂದ ಇವರಿಗೆ ಸಹಕಾರಿಯೋ
ಗ್ಯತೆ ಯಿಲ್ಲವಾದುದರಿಂದ ಕರ್ಮಫಲಾನುಭವರೂಪವಾದ ಸುಖದುಃಖಗಳ
ಭೋಗವು ಇವರಿಗಿಲ್ಲವು. ಸುಖದುಃಖೋಪಭೋಗಕ್ಕೆ ಎರಡು ಅಂಗಗಳು
ಸ್ವರೂಪಯೋಗ್ಯತೆ ಸಹಕಾರಿಯೋಗ್ಯತೆ ಎಂದು ಹೇಳಿ, ಬದ್ಧರಲ್ಲಿ ಇವೆರಡೂ
ಉಂಟೆಂದೂ, ನಿತ್ಯಮುಕ್ತರಲ್ಲಿ ಸ್ವರೂಪಯೋಗ್ಯತೆ ಮಾತ್ರವೇ ಉಂಟು, ಸಹ
ಕಾರಿಯೋಗ್ಯತೆ ಇಲ್ಲವೆಂದೂ ಹೇಳಲ್ಪಟ್ಟಿತು. ಈಶ್ವರನಲ್ಲಾದರೋ ಈ ಎರಡು

ಅಂಗಗಳೂ ಇಲ್ಲವೆಂದು ಮುಂದೆ ಹೇಳುತ್ತಾರೆ.

ಈಶ್ವರ್ – ಸರ್ವೇಶ್ವರನು, ಸರ್ವಪ್ರಶಾಸಿತಾವಾಯ್ – ಎಲ್ಲಾ
ದಕ್ಕೂ ನಿಯನ್ತಾವಾಗಿ, ತಾನೊರುತ್ತುರುಕ್ಕು – ತಾನು ಒಬ್ಬರಿಂದಲೂ,
ಶಾಸನೀಯನನಿರ್ಕ್ಕೇ – ನಿಯಮಿಸಲ್ಪಡದೇ, ನಿರ್ಕ್ಕೈಯಾಲೇ – ಇರುವದ
ರಿಂದ, ಇನ್ನೊಬ್ಬರಿಗೆ ಅಧೀನವಾಗಿರುವ ಸ್ವರೂಪಯೋಗ್ಯತೆಯೂ ಇಲ್ಲವು.

ಪರತನ್ತ್ರಚೇತನತ್ವಮಾಕಿರ ಸ್ವರೂಪಯೋಗ್ಯತೆಯುಮಿಲ್ಲೈ; ಸ್ವತನ್ತ್ರನಾಕ್ಕೈಯಾಲೇ ಸ್ವತನ್ತ್ರಾಜ್ಞಾತಿಲಂಘನಮಾಗಿರ ಸಹಕಾರಿಯೋಗ್ಯತೆಯುಮಿಲ್ಲೈ.

ಧರ್ಮಿಧರ್ಮಿರೂಪ ಜ್ಞಾನಜ್ಞಳುಡೈಯ ಅಸಾಧಾರಣಾಕಾರಂ

ಜೀವೇಶ್ವರರೂಪರಾನ ವಾತ್ಮಾಕ್ಕಳೆಲ್ಲಾರುಡೈಯವುಮ್ ಸ್ವರೂ

ಸ್ವತನ್ತ್ರನಾಕ್ಕೈಯಾಲೇ - ತಾನೇ ಸ್ವತಂತ್ರನಾಗಿರುವುದರಿಂದ, ಸ್ವತನ್ತ್ರಾಜ್ಞಾತಿಲಂಘನಮಾಗಿರ - ಸ್ವತಂತ್ರನಾಗಿ ಆಜ್ಞೆಯನ್ನು ಅತಿಕ್ರಮಿಸಿದ, ಅಥವಾ ಇನ್ನೊಬ್ಬ ಸ್ವತಂತ್ರನ ಆಜ್ಞೆಯನ್ನು ಉಲ್ಲಂಘಿಸಿದ, ಸಹಕಾರಿಯೋಗ್ಯತೆಯುಮಿಲ್ಲೈ-ಸಾಪರಾಧತ್ವರೂಪವಾದ ಸಹಕಾರಿಯೋಗ್ಯತೆಯೂ ಇಲ್ಲವು. ತಾನು ಇನ್ನೊಬ್ಬರಿಗೆ ಅಧೀನವಾಗಿದ್ದು ಅವರುಗಳ ಆಜ್ಞಾತಿಲಂಘನೆ ಮಾಡಿದರಲ್ಲವೇ ಸಾಪರಾಧತ್ವರೂಪವಾದ ಸಹಕಾರಿ ಯೋಗ್ಯತೆಯುಂಟಾಗಬಹುದು. ಹಾಗೆ ಯಾರಿಗೂ ಅಧೀನನಾಗದೆ ಸರ್ವಸ್ವತಂತ್ರನಾದರೆ, ಸಹಕಾರಿಯೋಗ್ಯತೆಯೇ ಇಲ್ಲವು. ಆದುದರಿಂದ ಈಶ್ವರನಿಗೆ ಸ್ವರೂಪಸಹಕಾರಿಯೋಗ್ಯತೆಗಳಿರಡೂ ಇಲ್ಲವಾದುದರಿಂದ. ಕರ್ಮಫಲೋಪಭೋಗವಿಲ್ಲವು. ಆದರೆ ಸರ್ವೇಶ್ವರನು ಭಕ್ತಪರಾಧೀನನಲ್ಲವೇ, ಇದರಿಂದ ಎರಡು ಅಜ್ಞಗಳೂ ಪ್ರಾಪ್ತವಾಗಲಿಲ್ಲವೇ ಎಂದರೆ ಭಕ್ತಪರಾಧೀನನಾಗಿ ನಡೆಯುವುದು ಇಚ್ಛಿಕವು. ಹಾಗೆ ನಡೆಯದಿದ್ದರೇನೂ ಪ್ರತ್ಯವಾಯವಿಲ್ಲವು. ಆದರೆ ಲಕ್ಷ್ಮಿಯ ವಿಷಯದಲ್ಲಿ ಆಚಾರ್ಯರವರು ಏನೂ ಹೇಳಲಿಲ್ಲವಲ್ಲಾ ಎಂದರೆ, ಪರತತ್ವಕ್ಕೇ ಈಕೆಯೂ ಸೇರಿದವಳಾದ ಪ್ರಯುಕ್ತ ಈಶ್ವರ ವಿಷಯದಲ್ಲಿ ಹೇಳಿದುದನ್ನು ಲಕ್ಷ್ಮಿಯ ವಿಷಯದಲ್ಲೂ ಇಟ್ಟುಕೊಳ್ಳತಕ್ಕದ್ದೆಂಬುವದನ್ನು, ವಾಚಕರೇ ಊಹಿಸಬಹುದಾದ ಪ್ರಯುಕ್ತ, ಹೇಳಲಿಲ್ಲವು.

ಧರ್ಮಿಯಾದ ಜ್ಞಾನಕ್ಕೂ ಧರ್ಮವಾದ ಜ್ಞಾನಕ್ಕೂ ಇರುವ ವ್ಯತ್ಯಾಸವು.

ಜೀವೇಶ್ವರರೂಪರಾನ - ಜೀವಾತ್ಮರುಗಳಾಗಿಯೂ ಪರಮಾತ್ಮನಾಗಿಯೂ ಇರುವ, ಆತ್ಮಾಕ್ಕಳೆಲ್ಲಾರುಡೈಯವುಮ್ ಸ್ವರೂಪಂ - ಎಲ್ಲಾ ಆತ್ಮರುಗಳ ಸ್ವರೂಪವು, ಸ್ವಸ್ಮೈಸ್ವಯಂಪ್ರಕಾಶಂ - ತಮಗೆ ತಾವೇ ಪ್ರಕಾಶಿಸಿಕೊಂಡು ತೋರುವಂಥಾದ್ದು. (ಹಿಂದೆ ಎಲ್ಲಾ ಆತ್ಮರುಗಳ ಸ್ವರೂಪರೂಪವಾದ ಜ್ಞಾನದ ಸ್ಥಿತಿ ಪ್ರವೃತ್ತಿಗಳು ಹೇಳಲ್ಪಟ್ಟವು. ಅನಂತರ ಧರ್ಮಭೂತ

ಪಂ, ಸ್ವಸ್ಮೈ ಸ್ವಯಂಪ್ರಕಾಶಮ್. ಇದ್ಧರ್ಮಿಸ್ವರೂಪ ಪ್ರಕಾಶತ್ವಕ್ಕು ಬದ್ಧರುಕ್ಕು ಮುಳ್ಪಡವೊರುಕಾಲತ್ತಿಲುಮ್ ಸಙ್ಕೋಚವಿಕಾಸಙ್ಗಳಿಲ್ಲೈ. ಸರ್ವಾತ್ಮಾಕ್ಕಳುಡೈಯುಮ್ ಧರ್ಮಭೂತಜ್ಞಾನಮ್ ವಿಷಯಪ್ರಕಾಶನ

ಜ್ಞಾನದ ಸ್ವರೂಪಸ್ಥಿತಿ ಪ್ರವೃತ್ತಿಗಳು ಹೇಳಲ್ಪಟ್ಟವು. ಹಾಗಾದರೆ ಈ ಎರಡ ವಿಧ ಜ್ಞಾನಗಳಿಗೂ ಏನಾದರೂ ವ್ಯತ್ಯಾಸವುಂಟೋ ಎಂಬ ಶಂಕಾ ಉಂಟಾಗ ತಕ್ಕದ್ದು ನ್ಯಾಯವು. ಆ ಶಂಕಾ ಸಮಾಧಾನಾರ್ಥವಾಗಿ ಅವುಗಳಿಗಿರುವ ವ್ಯತ್ಯಾಸವನ್ನು ಉಪದೇಶಿಸುತ್ತಾರೆ. ಇದೂ ಇಲ್ಲದೆ ಹಿಂದೆ ಬದ್ಧರ ಧರ್ಮ ಭೂತ ಜ್ಞಾನಕ್ಕೆ ಸಙ್ಕೋಚವಿಕಾಸಾದಿಗಳುಂಟೆಂದು ಹೇಳಲ್ಪಟ್ಟಿತು; ಅಂತಹ ಸಙ್ಕೋಚವಿಕಾಸಾದಿಗಳು ಬದ್ಧರ ಧರ್ಮಿರೂಪಜ್ಞಾನಕ್ಕೆ ಉಂಟೇ ಇಲ್ಲವೇ ಎಂಬ ಶಂಕಾನಿವಾರಣಾರ್ಥವಾಗಿಯೂ ಹೇಳುತ್ತಾರೆ. ಈಗ, ಎಲ್ಲಾ ಆತ್ಮರುಗಳಿಗೂ ಎಂದರೆ ಜೀವಾತ್ಮರಿಗೂ ಪರಮಾತ್ಮನಿಗೂ ಸಹ ಇರುವ ಸ್ವರೂಪವೆಂಥಾದ್ದೆಂದರೆ:—ತನಗೆ ತಾನೇ ತೋರುವ ಸ್ವಯಂಪ್ರಕಾಶತ್ವವು. ಇದೇ ಸ್ವಸ್ಮೈ ಸ್ವಯಂಪ್ರಕಾಶತ್ವವೆಂದು ಹೇಳಲ್ಪಟ್ಟಿತು. ಆದರೆ ಈ ಧರ್ಮಿಸ್ವರೂಪ ಜ್ಞಾನಕ್ಕೇನಾದರೂ, ಬದ್ಧರ ಧರ್ಮಭೂತಜ್ಞಾನಕ್ಕೆ ಸುಷುಪ್ತ್ಯಾದಿಗಳಲ್ಲಿ ಸಂಕೋಚವಿಕಾಸವಿರುವ ಹಾಗೆ ಸಂಕೋಚವಿಕಾಸಗಳುಂಟೋ ಎಂದರೆ ಬದ್ಧರಿಗೂಕೂಡ ಸ್ವರೂಪ ರೂಪಜ್ಞಾನಕ್ಕೆ ಸಂಕೋಚವಿಕಾಸಗಳಿಲ್ಲವೆಂದು ಹೇಳುತ್ತಾರೆ :–ಇದ್ಧರ್ಮಿಸ್ವರೂಪಪ್ರಕಾಶತ್ವಕ್ಕು–ಈ ಧರ್ಮಿರೂಪವಾದ ಜ್ಞಾನಕ್ಕೆ, ಬದ್ಧರುಕ್ಕುಮುಳ್ಪಡ–ಬದ್ಧರಿಗೂ ಕೂಡ, ವೊರುಕಾಲತ್ತಿಲುಮ್–ಯಾವದೊಂದು ಕಾಲದಲ್ಲೂಸ ಙ್ಕೋಚವಿಕಾಸಗಳಿಲ್ಲವು. ಬದ್ಧರಿಗೂಕೂಡ ವಿಲ್ಲವೆಂದು ಹೇಳಿದುದರಿಂದ ಮುಕ್ತನಿತ್ಯೇಶ್ವರೇಶ್ವರರಿಗೆ ಇಲ್ಲವೆಂಬುವದು ಕೈಮುತಿಕನ್ಯಾಯಸಿದ್ಧವು. ಆದರೆ ಧರ್ಮಭೂತಜ್ಞಾನಕ್ಕೆ ಸ್ವಯಂಪ್ರಕಾಶತ್ವವಿಲ್ಲವೇ ಎಂದರೆ, ಸ್ವಯಂಪ್ರಕಾಶತ್ವವೇನೋ ಉಂಟು, ಆದರೆ ಸ್ವಸ್ಮೈ ಸ್ವಯಂಪ್ರಕಾಶತ್ವವಿಲ್ಲವು, ತನಗೆತಾನೇ ಪ್ರಕಾಶಿಸಿಕೊಳ್ಳುವದಿಲ್ಲವು, ಇತರರಿಗಾಗಿ ಎಂದರೆ, ಆತ್ಮವಿಗಾಗಿ ಸ್ವಯಂಪ್ರಕಾಶವು; ಹಾಗೆ ಪ್ರಕಾಶಿಸುವಾಗ ಬಾಹ್ಯವಿಷಯಗಳನ್ನು ಪ್ರಕಾಶಗೊಳಿಸುತ್ತದೆ ಎಂಬದಾಗಿ ಮುಂದೆ ಹೇಳುತ್ತಾರೆ.

ಸರ್ವಾತ್ಮಾಕ್ಕಳುಡೈಯ ಧರ್ಮಭೂತಜ್ಞಾನಂ – ಸಮಸ್ತ ಆತ್ಮರುಗಳ ಧರ್ಮಭೂತಜ್ಞಾನವು. ವಿಷಯಪ್ರಕಾಶನತ್ತಿಲೇ– ಬಾಹ್ಯವಸ್ತುಗಳನ್ನು ಪ್ರಕಾಶಪಡಿಸುವ ಸಮಯದಲ್ಲಿ, ಸ್ವಾಶ್ರಯತ್ತುಕ್ಕು -ತನಗೆ ಆಶ್ರಯವಾದ ಆತ್ಮವಿಗೆ, ಸ್ವಯಂಪ್ರಕಾಶವಾಗಿರುತ್ತದೆ. ಇಲ್ಲಿ ಸರ್ವಾತ್ಮಾಕ್ಕಳುಡೈ

ವೇಳೈಯಿಲೇ ಸ್ವಾಶ್ರಯತ್ತುಕ್ಕು ಸ್ವಯಂಪ್ರಕಾಶಮಾಯಿರುಕ್ಕುಮ್. ಜ್ಞಾನತ್ವಮುಮ್, ಸ್ವಯಂಪ್ರಕಾಶತ್ವಮುಮ್, ಧರ್ಮಧರ್ಮಿಕ್ಕಳುಕ್ಕು ಸಾಧಾರಣಮ್. ಧರ್ಮಭೂತಜ್ಞಾನತ್ತುಕ್ಕು ವಿಷಯಿತ್ವಂ ಏತ್ತಮ್ ಧರ್ಮಿಯಾನವಾತ್ಮ ಸ್ವರೂಪತ್ತುಕ್ಕು ಪ್ರತ್ಯಕ್ತ್ವಂ ಏತ್ತಮ್.

ಯುಮ್ ಎಂದು ಹೇಳಿರುವುದರಿಂದ ಸರ್ವೇಶ್ವರನ ಧರ್ಮಭೂತಜ್ಞಾನವೂ ಕೂಡ ಹೀಗೆಯೇ ವಿಷಯಪ್ರಕಾಶನ ಕಾಲದಲ್ಲೇ ಸ್ವಯಂ ಪ್ರಕಾಶವೆಂದು ತೋರುತ್ತದೆ. ಆದರೆ ಬದ್ಧಚೇತನರ ಹಾಗೆ ಸುಷುಪ್ತ್ಯಾದಿಗಳಲ್ಲಿ ಸಙ್ಕೋಚವಿರುವ ಹಾಗೆ ಸಙ್ಕೋಚವು ಎಂದಿಗೂ ಇಲ್ಲವು. ನಿತ್ಯಮುಕ್ತರಿಗೂ ಕೂಡ ಹಾಗೆಯೇ ಧರ್ಮಭೂತಜ್ಞಾನದ ಸಂಕೋಚವಿಲ್ಲವು. ವಿಷಯಪ್ರಕಾಶನ ವೇಳೆಸದಾಸರ್ವೇಶ್ವರ ನಿತ್ಯಮುಕ್ತರಿಗುಂಟೆಂಬ ಭಾವವು. ಮುಂದೆ ಈ ಧರ್ಮಧರ್ಮಿರೂಪಜ್ಞಾನಗಳಿಗಿರುವ ಸಾಧಾರಣವಾದ ಆಕಾರವು,ಅಸಾಧಾರಣವಾದ ಆಕಾರವು ಯಾವುವೆಂದು ವಿಶದೀಕರಿಸುತ್ತಾರೆ. ಜ್ಞಾನತ್ವಮುಮ್ ಸ್ವಯಂಪ್ರಕಾಶತ್ವಮುಮ್ - ಜ್ಞಾನವೂ, ತಾನಾಗಿಯೇ ಪ್ರಕಾಶಿಸೋಣವೂ, ಇವೆರಡೂ, ಧರ್ಮಧರ್ಮಿಗಳುಕ್ಕು ಸಾಧಾರಣಂ - ಧರ್ಮವಾದ ಜ್ಞಾನಕ್ಕೂ, ಧರ್ಮಿಯಾದ ಆತ್ಮಾವಿಗೂ ಸಹ ಸಾಧಾರಣವಾದುವು ಎಂದರೆ ಎರಡಕ್ಕೂ ಸಮವು. ಇದು ಹಿಂದೆಯೇ ಉಪಪಾದಿತವಾಗಿದ್ದರೂ, ಚನ್ನಾಗಿ ಅವಗಾಹನೆಗೆ ಬರುವದಕ್ಕಾಗಿ ಪುನಃ ಸಂಗ್ರಹಿಸಿ ಹೇಳುತ್ತಾರೆ. ಆದರೆ ಧರ್ಮಭೂತಜ್ಞಾನಕ್ಕೆ ವಿಷಯಿತ್ವಂ ಏತ್ತಂ - ವಿಷಯಗಳಾದ ಬಾಹ್ಯವಸ್ತುಗಳನ್ನು ಪ್ರಕಾಶಗೊಳಿಸುವುದು ಒಂದು ಹೆಚ್ಚಿನ ವಿಷಯವು. ಧರ್ಮಿಯಾದ ಆತ್ಮನ ಸ್ವರೂಪಕ್ಕೆ ಪ್ರತ್ಯಕ್ತ್ವಂ ಏತ್ತಂ - ತನಗೆ ತಾನೇ ಪ್ರಕಾಶಿಸುವದು ಒಂದು ಹೆಚ್ಚಿನ ವಿಷಯವು. ಧರ್ಮಧರ್ಮಿಗಳಿರಡಕ್ಕೂ ಜ್ಞಾನತ್ವ ಮತ್ತು ಸ್ವಯಂಪ್ರಕಾಶವಿದ್ದರೆ, ಯಾವುದು ಧರ್ಮಿ, ಯಾವುದು ಧರ್ಮವೆಂದು ಹೇಗೆ ನಿರ್ಧರಿಸಬಹುದು ಎಂದರೆ:—ಧರ್ಮಕ್ಕೆ ವಿಷಯಪ್ರಕಾಶನವೇ ಅತಿಶಯವಾದುದೆಂದೂ, ಧರ್ಮಿಗೆ ತನಗೆ ತಾನೇ ತೋರುವದೇ ಅತಿಶಯವಾದುದೆಂದೂ, ಹೇಳಲ್ಪಟ್ಟಿತು. ಇಲ್ಲಿ ವಿಷಯಿತ್ವಂ ಎಂದು ಸುಮ್ಮನೆ ಹೇಳದೆ ಧರ್ಮಭೂತಜ್ಞಾನತ್ತುಕ್ಕು ವಿಷಯಿತ್ವಂ ಎಂದು ಹೇಳಿದುದರಭಿಪ್ರಾಯವೇನೆಂದರೆ ವಿಷಯಿತ್ವವು ಧರ್ಮಭೂತಜ್ಞಾನಕ್ಕಲ್ಲದೆ ಇನ್ನು ಆತ್ಮಾ ಮೊದಲಾದವುಗಳಿಲ್ಲವೆಂಬ ಅಭಿಪ್ರಾಯದಿಂದ ಹೇಳಿದುದಾಗಿರುತ್ತದೆ. ಹಾಗೆಯೇ ಧರ್ಮಿಯಾನ ಆತ್ಮಸ್ವರೂಪತ್ತುಕ್ಕು ಪ್ರತ್ಯಕ್ತ್ವಂ ಏತ್ತಂ ಎಂದು ಹೇಳಿದ್ದುದರಭಿಪ್ರಾಯವು ಪ್ರತ್ಯಕ್ತ್ವವು ಆತ್ಮಾವಿಗೇ ಅಲ್ಲದೆ ಮಿಕ್ಕ ಇನ್ನು ಯಾವು

ಉಕ್ತ ಜ್ಞಾನತ್ವ ಸ್ವಯಂ ಪ್ರಕಾಶತ್ವ ವಿಷಯಿತ್ವ ಪ್ರತ್ಯಕ್ತ್ವಾನಾಂ ನಿರೂಪಣಂ.

1. ಜ್ಞಾನತ್ವಮಾವುದು? ಕಸ್ಯ ಚಿತ್ಪ್ರಕಾಶತ್ವಮ್. ಅದಾವದು? ತನ್ನುಡ್ಯೆಯ ವಾಕವುಮಾಮ್, ವೇರೊನ್ರಿನುಡ್ಯೆಯ ವಾಕವುಮಾಮ್, ಏದೇನು ವೊನ್ರಿನುಡ್ಯೆಯ ವ್ಯವಹಾರಾನು ಗುಣ್ಯತ್ತ್ವೈ ಪಣ್ಣುಗ್ಯೆ.

ದಕ್ಕೂ ಇಲ್ಲವೆಂದು ವ್ಯಕ್ತಪಡಿಸುವುದಕ್ಕೆಂದು ಭಾವಿಸತಕ್ಕದ್ದು. ಈಗ ಜ್ಞಾನತ್ವ ಸ್ವಯಂಪ್ರಕಾಶತ್ವ ವಿಷಯಿತ್ವ ಪ್ರತ್ಯಕ್ತ್ವ ವೆಂದು ನಾಲ್ಕು ಪದಗಳು ಉಪಯೋಗಿಸಲ್ಪಟ್ಟವು. ಇವುಗಳಭಿಪ್ರಾಯವನ್ನು ವಿಶದೀಕರಿಸುತ್ತಾರೆ.

ಜ್ಞಾನತ್ವ ಸ್ವಯಂಪ್ರಕಾಶತ್ವ ವಿಷಯಿತ್ವ ಪ್ರತ್ಯಕ್ತ್ವ ಶಬ್ದಗಳ ಅರ್ಥ ನಿರೂಪಣವು.

1. ಜ್ಞಾನತ್ವಮಾವದು ? – ಜ್ಞಾನತ್ವವೆಂದರೇನು? ಕಸ್ಯಚಿತ್ಪ್ರಕಾಶತ್ವಂ – ಯಾವದಾದರೊಂದನ್ನು ಪ್ರಕಾಶ ಮಾಡೋಣವು, ಅದಾವದು – ಹಾಗೆಂದರೇನು? ತನ್ನುಡ್ಯೆಯ ವಾಕವುಮಾಮ್ – ತನ್ನನ್ನಾಗಲಿ ಎಂದರೆ ಆತ್ಮಾವಾದ ತನ್ನನ್ನಾಗಲಿ, ವೇರೋನ್ರಿನುಡ್ಯೆಯ ವಾಕವುಮಾಮ್–ಬೇರೆ ಇನ್ನೊಂದರನ್ನಾಗಲಿ ಹೀಗೆ ಏದೇನುವೊನ್ರಿನುಡ್ಯೆಯ – ಯಾವುದಾದರೂ ಒಂದರ, ವ್ಯವಹಾರಾನುಗುಣ್ಯತ್ತ್ವೈ-ಶಬ್ದಪ್ರಯೋಗಕ್ಕೆ ಅನರ್ಹತೆಯು ಹೋಗಿ ಅರ್ಹತೆಯುಂಟಾಗುವದನ್ನು, ಪಣ್ಣುಗ್ಯೆ-ಮಾಡೋಣವು. ಜ್ಞಾನತ್ವವೂ ಧರ್ಮಿಯಾದ ಆತ್ಮನಿಗೂ, ಧರ್ಮವಾದ ಧರ್ಮಭೂತಜ್ಞಾನಕ್ಕೂ ಉಂಟು. ಈ ಎರಡು ಭಾವವನ್ನೂ ತೋರಿಸುವುದಕ್ಕಾಗಿ, ತನ್ನುಡ್ಯೆಯವಾಕವುಮಾಮ್ ಎಂಬುವದರಿಂದ ತನ್ನನ್ನೇ ಪ್ರಕಾಶಪಡಿಸುವ, ಆತ್ಮನ ಜ್ಞಾನತ್ವವೂ, ವೇರೊನ್ರಿನುಡ್ಯೆಯವಾಕವುನೂಂ ಎಂಬುವದರಿಂದ ವಿಷಯಪ್ರಕಾಶಮಾಡುವ ಧರ್ಮಭೂತಜ್ಞಾನದ, ಜ್ಞಾನತ್ವವೂ ಹೇಳಲ್ಪಟ್ಟಿತು. ಇಂತಹ ಜ್ಞಾನದಿಂದ ಒಂದು ವಸ್ತು ಪ್ರಕಾಶಿಸಲ್ಪಟ್ಟನಂತರ, ಅದು ಇಂಥಾದ್ದು, ಇಂಥಾದ್ದಲ್ಲವು, ಇದು ಘಟವು ವಸ್ತ್ರವಲ್ಲವು ಎಂದು ಹೇಳುವ ವ್ಯವಹಾರ ಯೋಗ್ಯತೆಯುಂಟಾಗುತ್ತದೆ. ಇಲ್ಲಿ ವಿಷಯಗತ ಜ್ಞಾನವು, ಧರ್ಮಿಯಾದ ಆತ್ಮನಿಗೆ ಧರ್ಮಭೂತಜ್ಞಾನದ ಮೂಲಕವಾಗಿ ಆಗುವಾಗ ಆತ್ಮನಿಗೆ ಜ್ಞಾನತ್ವವನ್ನು ಹೇಳುವದು ಲಾಕ್ಷಣಿಕವೆಂದೆಲ್ಲಿ ಹೇಳಿಯಾರೋ ಎಂದು ಶಂಕಿಸಿ, ಈ ವಾಕ್ಯದ ಮೂಲಕ ಜ್ಞಾನತ್ವವು

2. ಸ್ವಯಂಪ್ರಕಾಶತ್ವವೂವಾವದು ? ತನ್ನೈ ವಿಷಯಿಾಕರಿಪ್ಪ ದೊರು ಜ್ಞಾನಾಂತರತ್ತಾಲ ಪೇಕ್ಷೈಯರತ್ತಾನೆ ಪ್ರಕಾಶಿಕ್ಕೈ.

ಧರ್ಮಧರ್ಮಿಗಳಿರಡಕ್ಕೂ ಸಾಧಾರಣವಾದುದೆಂದು ಹೇಳುವದರಿಂದ ಮುಖ್ಯವೇ ವಿನಾ ಲಾಕ್ಷಣಿಕವಲ್ಲವೆಂದು ತೋರ್ಪಡಿಸಿರುತ್ತಾರೆ. ಹೇಗೆಂದರೆ ತೇಜಸ್ತತ್ವವು ಧರ್ಮಿಯಾದ ಸೂರ್ಯನಿಗೂ, ಆತನ ಧರ್ಮವಾದ ಕಿರಣಗಳಿಗೂ ಸಾಧಾರಣವಾದುದಾಗಿ ಹೇಗೆ ಮುಖ್ಯಧರ್ಮವೋ ಹಾಗೆಯೇ ಜ್ಞಾನತ್ವವೂ ಕೂಡ ಧರ್ಮಿಧರ್ಮಗಳಾದ ಆತ್ಮಾ ಮತ್ತು ಧರ್ಮಭೂತಜ್ಞಾನಗಳಿಗೂ ಮುಖ್ಯವೇ ಎಂಬಭಿಪ್ರಾಯವು.

2. ಸ್ವಯಂಪ್ರಕಾಶತ್ವವೆಂದರೇನು ? ತನ್ನೈ ವಿಷಯೀಕರಪ್ಪದು - ತನ್ನನ್ನು ಪ್ರಕಾಶಪಡಿಸುವಂತಹ, ಒರುಜ್ಞಾನಾನ್ತರತ್ತಾಲ್ - ಬೇರೊಂದು ಜ್ಞಾನದ, ಅಪೇಕ್ಷೆ ಅರ - ಅಪೇಕ್ಷೆಯಿಲ್ಲದೆ, ಅವಶ್ಯಕತೆಯಿಲ್ಲದೆ, ತಾನೇಪ್ರಕಾಶಿಕ್ಕೈ - ತಾನಾಗಿಯೇ ಪ್ರಕಾಶಿಸುವಿಕೆಯು. (ಹಿಂದೆ ಜ್ಞಾನತ್ವವಿದ್ದರೆ ವ್ಯವಹರಿಸುವ ಯೋಗ್ಯತೆಯೆಂದು ಹೇಳಲ್ಪಟ್ಟಿತು. ಜಡ ಪದಾರ್ಥಗಳಾದ ಅಚಿತ್ತು ವ್ಯವಹರಿಸಲಾರವು, ಏಕೆಂದರೆ ಅವುಗಳಿಗೆ ಜ್ಞಾನತ್ವವಿಲ್ಲವು. ಆತ್ಮಾ ಧರ್ಮಭೂತ ಜ್ಞಾನಸಹ ವ್ಯವಹರಿಸಲು ಅನುಕೂಲ್ಯವನ್ನುಂಟುಮಾಡುವುವು. ಆದುದರಿಂದ ಎರಡಕ್ಕೂ ಜ್ಞಾನತ್ವ ಉಂಟೆಂದು ಹೇಳಲ್ಪಟ್ಟಿತು. ಈಗ ಇವೆರಡಕ್ಕೂ ಸ್ವಯಂಪ್ರಕಾಶತೆಯುಂಟೆಂದು ಬೋಧಿಸುತ್ತಾರೆ. ಇತರ ಜ್ಞಾನದಪೇಕ್ಷೆಯೇ ಇಲ್ಲದೆ ತಾನಾಗಿಯೇ ಪ್ರಕಾಶಿಸುವದು ಎಂದರೆ ತಾನಾಗಿಯೇ ವ್ಯವಹಾರಾನುಕೂಲ್ಯವನ್ನುಂಟುಮಾಡುವದು, ಸ್ವಯಂಪ್ರಕಾಶತ್ವವು. ಇತರ ಜ್ಞಾನದ ಪೇಕ್ಷೆಯಿಲ್ಲದೇ ತಾನಾಗಿಯೇ ಪ್ರಕಾಶಿಸುವದು ಸ್ವಯಂಪ್ರಕಾಶವಾದರೆ, ಆಗ ಧರ್ಮಭೂತಜ್ಞಾನವೂ ಸ್ವಯಂಪ್ರಕಾಶವಾದುದೆಂದು ಹೇಗೆ ಹೇಳಲಾಗುತ್ತದೆಂಬ ಆಕ್ಷೇಪಣೆಯಂಟಾಗಬಹುದು. ಏಕೆಂದರೆ, ಧರ್ಮಭೂತಜ್ಞಾನವು ತನಗೆ ಆಶ್ರಯವಾದ ಆತ್ಮಾವನ್ನು ಬಿಟ್ಟಿರಲಾರದು, ಆಗ ಜ್ಞಾನಾಂತರ ಸಂಬಂಧವುಂಟಾಗಲಿಲ್ಲವೇ ? ಜ್ಞಾನಾಂತರತ್ತಾಲಪೇಕ್ಷೈಯರ ಎಂಬ ಪ್ರಯೋಗವು ಹೇಗೆ ಕೂಡುತ್ತದೆ ? ಎಂದರೆ, ಧರ್ಮಭೂತಜ್ಞಾನವು ಯಾವಾಗಲೂ ಆತ್ಮಾವಿನೊಂದಿಗೇನೇ ಇದ್ದರೂ, ಈ ಆತ್ಮನು ಆ ಧರ್ಮಭೂತಜ್ಞಾನವನ್ನು ವಿಷಯೀಕರಿಸದೆ ಇರುವದರಿಂದ ಅಂತಹ ಆಕ್ಷೇಪಣೆಗೆ ಕಾರಣವಿಲ್ಲವೆಂಬ ಭಾವವು. ಘಟ ಮುಂತಾದವುಗಳ ಪ್ರಕಾಶಕ್ಕೆ ಧರ್ಮಭೂತಜ್ಞಾನಬೇಕು; ಆ ಜ್ಞಾನಪ್ರಕಾಶಕ್ಕೆ ಬೇರೊಂದ ಜ್ಞಾನವು ಬೇಕಾಗಿಲ್ಲವು. ಹೇಗೆಂದರೆ ಕತ್ತಲೆಯಲ್ಲಿರುವ ಘಟ ಪ್ರಕಾಶಕ್ಕೆ

3. ಧರ್ಮಭೂತಜ್ಞಾನತ್ತುಕ್ಕು ವಿಷಯಿತ್ವಮಾವದು? ತನ್ನೈ ಯೊಳಿಂದ ದೊನ್ರೈಕ್ಕಾಟ್ಟುಕೈ.

4. ಆತ್ಮಾಕ್ಕಳುಕ್ಕು ಪ್ರತ್ಯಕ್ಷ್ವಮಾವದು?—ಸ್ವಸ್ಮೈ ಭಾಸಮಾನತ್ವಂ, ಅದಾವದು? ತರ್ಪ ಪ್ರಕಾಶತ್ತುಕ್ಕುತ್ತಾನ್ ಫಲಿಯಾಯಿರುಕ್ಕೈ

ಬೆಳಕು ಬೇಕು. ಆ ಬೆಳಕಿಗೆ ಬೇರೆ ಬೆಳಕು ಹೇಗೆ ಅನಾವಶ್ಯಕವೋ ಹಾಗೆ ಎಂಬ ತಾತ್ಪರ್ಯವು.

3. ಧರ್ಮಭೂತಜ್ಞಾನತ್ತುಕ್ಕು ವಿಷಯಿತ್ವಮಾವದು? ಧರ್ಮಭೂತ ಜ್ಞಾನಕ್ಕೆ ವಿಷಯಿತ್ವವು ಮುಖ್ಯ ಧರ್ಮವೆಂದು ಹೇಳಲ್ಪಟ್ಟಿತಲ್ಲಾ, ಹಾಗೆಂದರೇನು? ತನ್ನೈಯೊಳಿಂದದು - ತನ್ನನ್ನು ಬಿಟ್ಟು, ಒನ್ರೈಕಾಟ್ಟುಗೈ - ಬೇರೆ ಯೊಂದು ವಸ್ತುವನ್ನು ತೋರಿಸೋಣವು, ಎಂದರೆ, ತನ್ನನ್ನು ಮಾತ್ರ ಪ್ರಕಾಶಿಸಲು ಶಕ್ತಿಯಿಲ್ಲದೆ, ಇತರ ಬಾಹ್ಯವಸ್ತುಗಳನ್ನು ಪ್ರಕಾಶಪಡಿಸೋಣವು. ಈ ಧರ್ಮಭೂತಜ್ಞಾನವು ತನ್ನನ್ನು ಬಿಟ್ಟು ಮಿಕ್ಕ ಬಾಹ್ಯವಸ್ತುಗಳನ್ನೆಲ್ಲಾ ಆತ್ಮಾವಿಗೆ ತೋರ್ಪಡಿಸುವ ಶಕ್ತಿಯನ್ನು ಹೊಂದಿದೆ ಎಂಬ ತಾತ್ಪರ್ಯವು. ಧರ್ಮಿಯಾದ ಆತ್ಮನಿಗೆ ಹೀಗೆ ತನ್ನನ್ನು ಬಿಟ್ಟು ಬೇರೆ ಇತರ ವಸ್ತುಗಳನ್ನು ಮಾತ್ರ ಪ್ರಕಾಶಗೊಳಿಸುವ ಶಕ್ತಿಯಿಲ್ಲವು. ಧರ್ಮಭೂತ ಜ್ಞಾನಕ್ಕೆ ಮಾತ್ರ ಈ ಶಕ್ತಿಯಿರುವದರಿಂದ ಧರ್ಮಭೂತಜ್ಞಾನತ್ತುಕ್ಕು ವಿಷಯಿತ್ವಮೇತ್ತಂಎಂದು ಹೇಳಲ್ಪಟ್ಟಿತು. ಧರ್ಮಿಯಾದ ಆತ್ಮಾ ಪ್ರಕಾಶಿಸುವಾಗ ಅಹಂ ಎಂಬಪ್ರತ್ಯಕ್ಷ್ವದೊಂದಿಗೆ ಪ್ರಕಾಶಿಸುತ್ತದೆ. ಆದುದರಿಂದ ಇಂತಹ ವಿಷಯಿತ್ವವುಧರ್ಮಭೂತಜ್ಞಾನಕ್ಕೆ ಮಾತ್ರವೇ ಅಲ್ಲದೆ ಆತ್ಮಾವಿಗೆ ಯಿಲ್ಲವೆಂದು ತಿಳಿಸುವುದಕ್ಕಾಗಿಯೇ, ಧರ್ಮಭೂತಜ್ಞಾನತ್ತುಕ್ಕು ವಿಷಯಿತ್ವಮಾವುದು ಎಂದು ಪ್ರಯೋಗಿಸಿರುತ್ತಾರೆ.

4. ಆತ್ಮದುಗಳಿಗೆ ಪ್ರತ್ಯಕ್ಷ್ವವೆಂದರೇನು? ಸ್ವಸ್ಮೈ ಭಾಸಮಾನತ್ವಂ- ತನಗೋಸ್ಕರವಾಗಿಯೇ ತನ್ನ ಪ್ರಯೋಜನಕ್ಕಾಗಿಯೇ ತಾನೇ ಪ್ರಕಾಶಿಸುವದು. ತನ್ನನ್ನು ತಾನೇ ತಿಳಿಯುವದು, ಅದಾವದು - ಹಾಗೆಂದರೇನು? ತರ್ಪಪ್ರಕಾಶತ್ತುಕ್ಕು - ತನ್ನ ಪ್ರಕಾಶಕ್ಕೆ, ತಾನ್ ಫಲಿಯಾಯಿರುಕ್ಕೈ ಎನ್ರಪಡಿ - ತಾನೇ ವ್ಯವಹಾರಕರ್ತಾ ಎಂದು ಹೇಳಿದಂತಾಯಿತು. ಫಲಿ ಎಂದರೆ ಫಲಾನ ಭವಮಾಡುವ ಕರ್ತಾ ಎಂಬರ್ಥವು; ಇಲ್ಲಿ ಫಲವ್ಯಾವುದೆಂದರೆ ಪ್ರಕಾಶಪಡಿಸುವ ಕರ್ತೃತ್ವವು, ಎಂದರೆ ವ್ಯವಹಾರಕರ್ತೃತ್ವವು. ಪ್ರತ್ಯಕ್ಷ್ವಶಬ್ದಕ್ಕೆ ವ್ಯುತ್ಪತ್ತಿ ಮೂಲಕವಾಗಿಯೇ ಸ್ವಸ್ಮೈ ಭಾಸಮಾನತ್ವಂ ಎಂಬರ್ಥಬರುತ್ತದೆಂಬುವದು ಆಚಾರ್ಯರಭಿಪ್ರಾಯವು:—ಹೇಗೆಂದರೆ:—ಪ್ರತಿ ಎಂದರೆ ಆತ್ಮಾನಂಪ್ರತಿ

ಎನ್ನಪಡಿ.

ಏದೇನು ಮೊರುವಸ್ತುವಿನ್ ಪ್ರಕಾಶತ್ತುಕ್ಕು ಫಲಿಎನ್ಗಿರ ಸಾಮಾ ನ್ಯಾಕಾರತ್ತೈ ತರ್ಕಪ್ರಕಾಶತ್ತುಕ್ಕುತ್ತಾರ್ ಫಲಿ ಎನ್ರು ವಿಶೇಷಿತ್ತವಾರೇ

ತನ್ನನ್ನುಕುರಿತು, ಅಂಚತಿ ಭಾಸತೇ, ಪ್ರಕಾಶಿಸುತ್ತದೆ. ಆದುದರಿಂದಲೇ ಪ್ರತ್ಯಕ್ತ್ವಕ್ಕೆ ಸ್ವಸ್ಮೈಭಾಸಮಾನತ್ವಂ ಎಂದು ಆರ್ಥಬರೆದರು. ಈ ಧರ್ಮವು, ಘಟಾದಿವಸ್ತುಗಳಲ್ಲಿಲ್ಲವು. ಏಕೆಂದರೆ, ಅವುಗಳು ಇತರ ಸಹಾಯದಿಂದ ಪ್ರಕಾಶಿಸುವಂಥಾವುಗಳು. ಘಟ ಮೊದಲಾದ ವಸ್ತುಗಳು ಪ್ರಕಾಶಹೊಂದಿದರೆ, ಆದರಿಂದುಂಟಾಗುವ ಪ್ರಯೋಜನವನ್ನು ಆ ಘಟಾದಿಗಳು ಅನುಭವಿಸಲಾರವು, ಅವುಗಳು ವ್ಯವಹಾರಕರ್ತಾವಲ್ಲವು, ಆತ್ಮಮಾತ್ರವೇ ಫಲಿಯು. ಈ ಪ್ರತ್ಯಕ್ತ್ವವೂ ಧರ್ಮಭೂತಜ್ಞಾನಕ್ಕೂ ಇಲ್ಲವು. ಅದು ತನ್ನನ್ನು ತಾನೇ ತಿಳಿಯಲಾರದು, ಆದುದರಿಂದ ಪ್ರತ್ಯಕ್ತ್ವವು ಆತ್ಮವಿಗೆ ಮಾತ್ರವೇ ಇರುವ ಧರ್ಮವು. ಇದನ್ನು ಬೋಧಿಸುವದಕ್ಕಾಗಿಯೇ ಸ್ವಾಮಿದೇಶಿಕರವರು ಆತ್ಮಾಕ್ಕಳುಕ್ಕು ಪ್ರತ್ಯೆಕ್ತ್ವಮಾವದು? ಎಂದೇ ಪ್ರಯೋಗಿಸಿರುತ್ತಾರೆ. ಆ ಪ್ರತ್ಯಕ್ತ್ವವನ್ನು ಅಹಂ ಎಂಬ ಬುದ್ಧಿಯಿಂದ ತಿಳಿಯಬಹುದು. ಜ್ಞಾನೈಕಾಕಾರತೆಯಿಂದ ಆತ್ಮತ್ವವು ಎಲ್ಲಾ ಆತ್ಮರುಗಳಿಗೂ ಯಿರುವ ಧರ್ಮವಾದರೂ, ಪ್ರತ್ಯಕ್ತ್ವರೂಪವಾವ ಪ್ರತಿಯೊಂದು ಆತ್ಮವಿಗೂ ಉಂಟಾಗುವ ಅಹಂ ಎಂಬ ಜ್ಞಾನವು ಬೇರೆಬೇರೆಯಾದುದರಿಂದ ಪ್ರತ್ಯಕ್ತ್ವವು ಪ್ರತಿಯೊಂದು ಆತ್ಮವಿಗೂ ಭಿನ್ನಭಿನ್ನವಾದುದು.

ಏದೇನುಮೊರುವಸ್ತುವಿ - ಯಾವುದಾದರೂ ಒಂದು ವಸ್ತುವಿನ, ಎಂದರೆ ಆತ್ಮಾ, ಧರ್ಮಭೂತ ಜ್ಞಾನ, ವಿಷಯಗಳು, ಈ ಮೂರರಲ್ಲಿ ಯಾವುದಾದರೂ ಒಂದು ವಸ್ತುವಿನ, ಪ್ರಕಾಶತ್ತುಕ್ಕು - ಪ್ರಕಾಶಕ್ಕೆ, ಫಲಿ ಎಂದರೆ ಫಲವನ್ನು ಅನುಭವಿಸುವವನು ಆತನೇ ವ್ಯವಹಾರಕರ್ತಾವಾಗುತ್ತಾನೆ; ಹೀಗೆ ವ್ಯವಹಾರಕರ್ತಾ, ಎಜ್ಗಿರ - ಎನ್ನುವ, ಸಾಮಾನ್ಯಾಕಾರತ್ತೈ - ಸಾಮಾನ್ಯ ಭಾವವನ್ನೇ, ತರ್ಕಪ್ರಕಾಶತ್ತುಕ್ಕುತಾನ್ ಫಲಿ - ತನ್ನ ಪ್ರಕಾಶಕ್ಕೆ ತಾನೇ ಕರ್ತಾ ಎಂದರೆ ಸ್ವವ್ಯವಹಾರವನ್ನು ತಾನೇ ಉಂಟುಮಾಡಿಕೊಳ್ಳುವಿಕೆ, ಎನ್ರುವಿಶೇಷಿತ್ತವಾರೇ-ಎಂಬ ವಿಶೇಷಭಾವವನ್ನಾಗಿ ವಿಶೇಷಿಸಿ ಹೇಳುವುದೇ ಪ್ರತ್ಯಕ್ತ್ವವೆನಿಸುತ್ತದೆ. ಇಲ್ಲಿ ಪ್ರಕಾಶವನ್ನು ಕುರಿತು ಫಲಿ ಎಂದು, ಹೇಳಿರುವದರಭಿಪ್ರಾಯವೇನೆಂದರೆ:—ಪ್ರಕಾಶದಿಂದ ಸಾಧ್ಯವಾದ ವ್ಯವಹಾರ ಮೊದಲಾದ ಪ್ರಯೋಜನವನ್ನು ಹೊಂದುವಿಕೆಯು. ಬಾಹ್ಯವಿಷಯಗಳೇಯಾಗಲಿ, ಧರ್ಮಭೂತ

ಪ್ರತ್ಯಕ್ತ್ವಮಾಮ್. ಇವ್ವಿಶೇಷ ಮಿಲ್ಲಾದವಸ್ತುವುಕ್ಕು ಇಸ್ಸಾಮಾನ್ಯಮು ಮಿತ್ತೋಡು ವ್ಯಾಪ್ತಮಾನ ಚೇತನತ್ವಮು ಇಲ್ಲೈ.

ಜ್ಞಾನವೇಯಾಗಲಿ ಫಲಿಯಾಗಲಾರವು, ಏಕೆಂದರೆ ಇವುಗಳಿಗೆ ವ್ಯವಹಾರ ಕರ್ತೃತ್ವವಿಲ್ಲವು. ಧರ್ಮ ಭೂತಜ್ಞಾನವು ವ್ಯವಹಾರಕ್ಕೆ ಸಹಕಾರಿಯಾದರೂ ಅದು ಫಲಿಯಲ್ಲವು. ಈ ಸಾಮಾನ್ಯಾಕಾರವಾದ, ಧರ್ಮಿ, ಧರ್ಮಭೂತಜ್ಞಾನ, ವಿಷಯ, ಇವುಗಳನ್ನೆಲ್ಲಾ ವ್ಯವಹರಿಸುವ ಯೋಗ್ಯತೆಯು, ಆತ್ಮಾವಿಗೆ ಮಾತ್ರವೇ ಎಂದರೆ ಜೀವಾತ್ಮರಿಗೂ ಪರಮಾತ್ಮನಿಗೂ ಮಾತ್ರ ಉಂಟು. ಇಲ್ಲಿ ಹೇಳಿರುವದರ ಮುಖ್ಯಾಭಿಪ್ರಾಯವೇನೆಂದರೆ:—ಆತ್ಮವರ್ಗಕ್ಕೆ, ಧರ್ಮಿ, ಧರ್ಮಭೂತಜ್ಞಾನ, ಬಾಹ್ಯವಿಷಯ ಇವುಗಳನ್ನೆಲ್ಲಾ ವ್ಯವಹರಿಸುವ ಕರ್ತೃತ್ವ ಉಂಟು. ಅವುಗಳಲ್ಲಿ ವಿಶೇಷ ಧರ್ಮವಾದ, **ತನ್ನ ವ್ಯವಹಾರಕ್ಕೆ ತಾನೇ ಕರ್ತೃತ್ವವಾಗಿರುವಿಕೆಯೇ ಪ್ರತ್ಯಕ್ತ್ವವೆಂದು** ಹೇಳಲ್ಪಟ್ಟಿತು. **ಅಹಂಬುದ್ಧ್ಯಾ ಪರಾಗರ್ಥಾತ್ಪ್ರತ್ಯಗರ್ಥೋಽಪಿ ಭಿದ್ಯತೇ** ಎಂದು ಶ್ರೀ ಯಾಮುನೇಯರು ಹೇಳಿರುವ ಹಾಗೆ ತನ್ ಪ್ರಕಾಶತ್ತುಕ್ಕು ತಾನೇ ಫಲಿಯಾಗಿರುವದೇ ಪ್ರತ್ಯಕ್ತ್ವವು, **ಇವ್ವಿಶೇಷ ಮಿಲ್ಲಾದವಸ್ತುವುಕ್ಕು**–ಈ ವಿಶೇಷವಾದ ಪ್ರತ್ಯಕ್ತ್ವವಿಲ್ಲದ ವಸ್ತುಗಳಿಗೆ ಎಂದರೆ ಆತ್ಮಾಗಳಲ್ಲದ ಇತರ ವಸ್ತುಗಳಿಗೆ, **ಇಸ್ಸಾಮಾನ್ಯಮುಮ್**–ಈ ಸಾಮಾನ್ಯಧರ್ಮವಾದ ಯಾವುದನ್ನಾದರೂ **ವ್ಯವಹರಿಸುವ ಕರ್ತಾವಾಗಿರುವ** ಭಾವವೂ, **ಇತ್ತೋಡೆ ವ್ಯಾಪ್ತಮಾನ** – ಈ ಫಲಿತ್ವವೆಲ್ಲಿದೆಯೋ ಅಲ್ಲಿ ಚೇತನತ್ವವೂ ಉಂಟು ಎಂದು ವ್ಯಾಪ್ತಿಯನ್ನು ಹೇಳಲು ಅನುಕೂಲವಾಗಿ ಅದರೊಂದಿಗೆ ಸೇರಿರುವ, **ಚೇತನತ್ವಮುಮ್** – ಚೇತನತ್ವವೂ ಎಂದರೆ ಜ್ಞಾನಕ್ಕೆ ಆಶ್ರಯವಾಗಿರುವ ಭಾವವೂ, **ಇಲ್ಲೈ** – ಇಲ್ಲವು, **ಈ ಪ್ರತ್ಯಕ್ತ್ವವಿರುವ ಆತ್ಮರುಗಳು ಮಾತ್ರವೇ ಪ್ರಕಾಶಫಲಿಗಳು** ಎಂದರೆ ವ್ಯವಹಾರ ಕರ್ತೃಗಳು ಮತ್ತು ಜ್ಞಾನಕ್ಕೆ ಆಶ್ರಯವಾಗಿರುವವರು. ಇತರಗಳಾದ ಬಾಹ್ಯವಸ್ತುಗಳಿಗೆ ಫಲಿತ್ವವೂ ಇಲ್ಲವು, ಜ್ಞಾನತ್ವವೂ ಇಲ್ಲವು. ಇತ್ತೋಡುವ್ಯಾಪ್ತಮಾನವೆಂದು ಏಕೆ ಹೇಳಲ್ಪಟ್ಟಿತೆಂದರೆ "**ಯತ್ರಯತ್ರಫಲಿತ್ವಂ, ತತ್ರ ತತ್ರ ಜ್ಞಾನಾಶ್ರಯತ್ವಂ, ಚೇತನತ್ವಂ**" ಎಲ್ಲಿಲ್ಲಿ ವ್ಯವಹಾರ ಕರ್ತೃತ್ವ ಉಂಟೋ ಅಲ್ಲಿಲ್ಲಾ ಜ್ಞಾನಾಶ್ರಯತ್ವವೂ ಉಂಟು ಎಂಬ ವ್ಯಾಪ್ತಿಯು ಹೇಳಬಹುದಾದುದರಿಂದ, ವ್ಯಾಪ್ತಮಾನ ಎಂದು ಪ್ರಯೋಗಮಾಡಿರುತ್ತಾರೆ. ಚೇತನತ್ವ, ಪ್ರತ್ಯಕ್ತ್ವ ಮೊದಲುಗೊಂಡು ಎಲ್ಲಾ ವಿಧವಾದ ಪ್ರಕಾಶಫಲಿತ್ವವು ಆತ್ಮನಿಗೇ ವಿನಾ ಇತರ ಪದಾರ್ಥಗಳಿಗಿಲ್ಲವೆಂಬ ತಾತ್ಪರ್ಯವು. ಈ ವಾಕ್ಯದಲ್ಲಿ ಸಾಮಾನ್ಯವಿಶೇಷಶಬ್ದ

ಗಳನ್ನು ಪಯೋಗಿಸಿರುವದರ ಭಾವವು ಹೇಗೆಂದರೆ :—ಪ್ರತ್ಯಕ್ತ್ವವೇ, ಫಲಿತ್ವಕ್ಕೆ ಕಾರಣವಾದುದರಿಂದ, ಕಾರಣವನ್ನು ವಿಶೇಷಾವಸ್ಥೆಯನ್ನಾಗಿಯೂ, ಇತರಫಲಿತ್ವವನ್ನೂ ಸಾಮಾನ್ಯ ಧರ್ಮವನ್ನಾಗಿಯೂ ಭಾವಿಸಿ ಹೇಳಿದರು. ಪ್ರತ್ಯಕ್ತ್ವವು ಆತ್ಮನಿಗೆ ಇರುವದರಿಂದಲೇ ಇತರ ಪ್ರಕಾಶ ಫಲಿತ್ವವಿದೆ ಎಂಬ ಭಾವವು. ವಿಶೇಷವೆಂದರೆ ಮುಖ್ಯಧರ್ಮವು, ಇದು ಇಲ್ಲದೆ ಇದ್ದರೆ ಪ್ರಕಾಶ ಫಲಿತ್ವವಿರಲಾರದು, ಆದುದರಿಂದ ಪ್ರಕಾಶಫಲಿತ್ವವು ಸಾಮಾನ್ಯಧರ್ಮವು. ಇಲ್ಲಿ ವಿಶೇಷ ಸಾಮಾನ್ಯಪದಗಳನ್ನು ಶ್ರೀ ನಿಗಮಾನ್ತದೇಶಿಕರವರು ನೈಯಾಯಿಕರ ಅಭಿಪ್ರಾಯದಹಾಗೆ ಅನೇಕವಸ್ತುಗಳಿಗಿರುವ ಧರ್ಮವನ್ನು ಸಾಮಾನ್ಯವಾಗಿಯೂ, ಕೆಲವುಗಳಿಗೆ ಮಾತ್ರವಿರುವ ಧರ್ಮವನ್ನು ವಿಶೇಷವಾಗಿಯೂ, ಉಪಯೋಗಿಸಲಿಲ್ಲವು. ಆ ಸಂದರ್ಭದಲ್ಲಿ ಜಾತಿವ್ಯಕ್ತಿ ಪದಗಳಹಾಗೆ ವಿಶೇಷ ಧರ್ಮವಿಲ್ಲದಿದ್ದರೂ ಸಾಮಾನ್ಯಧರ್ಮವಿದ್ದೇ ಇರಬೇಕು. ಹೇಗೆಂದರೆ :—ಬ್ರಾಹ್ಮಣತ್ವವು ಅನೇಕರಲ್ಲಿರುವ ಧರ್ಮವು; ವೈಷ್ಣವತ್ವವು ಕೆಲವರಲ್ಲಿ ಮಾತ್ರವೇ ಇರುವ ಧರ್ಮವು. ಇಲ್ಲಿ ನೈಯಾಯಿಕನ ಪ್ರಕಾರ ಬ್ರಾಹ್ಮಣತ್ವವು ಸಾಮಾನ್ಯಧರ್ಮವು, ವೈಷ್ಣವತ್ವವು ವಿಶೇಷಧರ್ಮವು. ವೈಷ್ಣವರಲ್ಲದ ಬ್ರಾಹ್ಮಣರಿರಬಹುದಾದ ಪ್ರಯುಕ್ತ ವಿಶೇಷವಿಲ್ಲದ ಸಾಮಾನ್ಯ ಉಂಟು. ಈ ರೀತಿಯಲ್ಲಿ ಶ್ರೀಮದಾಚಾರ್ಯರವರು ಈ ಪದಗಳನ್ನು ಪಯೋಗಿಸಲಿಲ್ಲವು. ಆದರೆ ಬ್ರಾಹ್ಮಣರೆಲ್ಲಾ ಪರಬ್ರಹ್ಮನನ್ನೇ ಆರಾಧಿಸುವವರಾಗಿ, ಪರಬ್ರಹ್ಮವು ವಿಷ್ಣುವೆಂದೇ ತಿಳಿದು ಎಲ್ಲಾ ಬ್ರಾಹ್ಮಣರೂ ವೈಷ್ಣವರೇ ಆಗಿದ್ದಪಕ್ಷದಲ್ಲಿ, ಆಗ ಎಲ್ಲಿ ವೈಷ್ಣವತ್ವವಿಲ್ಲವೋ ಅಲ್ಲಿ ಬ್ರಾಹ್ಮಣತ್ವವೂ ಇಲ್ಲವು ಎಂಬ ವ್ಯಾಪ್ತಿಯನ್ನು ಹೇಳಬಹುದು. ಈ ಸಂದರ್ಭದಲ್ಲೂ ಹಾಗೆಯೇ ಪ್ರಕಾಶ ಫಲಿತ್ವವು ಆತ್ಮ ಮತ್ತು ಬಾಹ್ಯವಸ್ತುಗಳ ವಿಷಯವಾದುದು, ಇದು ಸಾಮಾನ್ಯವು, ತನ್ನನ್ನೇ ಕುರಿತ ಫಲಿತ್ವವು ವಿಶೇಷವು. ಯಾವಾಗ ವಿಶೇಷವೇ ಇಲ್ಲವೋ, ಆಗ ಸಾಮಾನ್ಯವೂ ಇಲ್ಲವೆಂದು ಹೇಳಿದರು. ಯಾವಾಗ ಮುಖ್ಯವಾದುದೇ ಇಲ್ಲವೋ, ಆಗ ಅದರೊಂದಿಗೆ ಜೀವಿಸಿದುದೂ ಕೂಡ ಇಲ್ಲವೆಂಬ ಭಾವವು. "ಈ ವಸ್ತುವು ನನ್ನದು" ಎಂದು ಅಜ್ಞೀಕರಿಸೋಣದರಲ್ಲಿ ಪ್ರಕಾಶಫಲಿತ್ವವೂ ಪ್ರತ್ಯಕ್ತ್ವವೂ ಉಂಟು. ಆ ಪ್ರತ್ಯಕ್ತ್ವದ ಸಹಾಯವಿಲ್ಲದೆ ಪ್ರಕಾಶಫಲಿತ್ವವು ಉಂಟಾಗಲಾರದು ಎಂಬಭಿಪ್ರಾಯವು, ಯಾವಾಗ ಪ್ರಕಾಶಫಲಿತ್ವವಿಲ್ಲವೋ ಆಗ ಜ್ಞೇತನತ್ವವೂ ಇಲ್ಲವು ಎಂದು ಸಹ ಹೇಳಿದರು.

ಇದ್ಧರ್ಮಧರ್ಮಿಗಳಿರುಣ್ಣುಮ್ ಸ್ವಯಂಪ್ರಕಾಶಮಾಯಿರುನ್ನಾಲುಮ್, ನಿತ್ಯತ್ವಾದಿ ಧರ್ಮವಿಶೇಷ ವಿಶಿಷ್ಟರೂಪಜ್ಞಳಾಲೆ ಜ್ಞಾನಾನ್ತರವೇದ್ಯಜ್ಞಳುಮಾಮ್.

ಇದ್ಧರ್ಮಧರ್ಮಿಗಳಿರುಣ್ಣುಮ್.....ಇರುನ್ನಾಲುಮ್ – ಈ ಧರ್ಮಿಧರ್ಮಗಳಾದ ಆತ್ಮಾ, ಧರ್ಮಭೂತಜ್ಞಾನಗಳಿರಡೂ ಸ್ವಯಂ ಪ್ರಕಾಶವಾಗಿದ್ದರೂ, ನಿತ್ಯತ್ವಾದಿ ಧರ್ಮವಿಶೇಷ ವಿಶಿಷ್ಟರೂಪಜ್ಞಳಾಲೇ - ನಿತ್ಯತ್ವವೇ ಮೊದಲಾದ ವಿಶೇಷಧರ್ಮಗಳಿಂದ ಸೇರಿದವುಗಳಾಗಿ, ಜ್ಞಾನಾಂತರವೇದ್ಯಜ್ಞಳುಮಾಮ್ - ಬೇರೇ ಜ್ಞಾನದಿಂದ ತಿಳಿಯತಕ್ಕವುಗಳಾಗಿವೆ. ಇಲ್ಲಿ ನಿತ್ಯತ್ವಾದಿ ಎಂದು ಆದಿ ಶಬ್ದದಿಂದ, ಜೀವಾತ್ಮಾ ಅಣುವಾಗಿಯೂ, ಪರಮಾತ್ಮಾ ಧರ್ಮಭೂತಜ್ಞಾನ ಸಹ ವಿಭುವಾಗಿಯೂ ಇರುವ ಧರ್ಮಗಳು ಹೇಳಲ್ಪಟ್ಟವೆಂದು ಸಾರದೀಪಿಕೆ ವ್ಯಾಖ್ಯಾನಕಾರರು ಹೇಳುತ್ತಾರೆ. ಶ್ರೀಮಾನ್ ತೆಟ್ಟಲೂರು ನರಸಿಹ್ಮಾಚಾರ್ಯರ ವ್ಯಾಖ್ಯಾನದಲ್ಲಿ ಆತ್ಮವು ದೇಹಾತಿರಿಕ್ತವಾದುದೆಂಬ ಮತ್ತು ಅತೀತವಾದುದನ್ನೂ ಸೂಚಿಸುತ್ತದೆಂದು ಹೇಳಲ್ಪಟ್ಟಿರುತ್ತದೆ. ಧರ್ಮಿಯ ಸ್ವಯಂಪ್ರಕಾಶವಾದರೋ ಪ್ರತ್ಯಕ್ತ್ವ, ಅನುಕೂಲತ್ವ, ಏಕತ್ವ ವಿಶಿಷ್ಟರೂಪವುಳ್ಳದ್ದು. ಧರ್ಮಭೂತ ಜ್ಞಾನದ ಸ್ವಯಂಪ್ರಕಾಶವಾದರೋ ಜ್ಞಾನತ್ವ, ಅನುಕೂಲತ್ವ, ವಿಷಯಿತ್ವ ಮೊದಲಾದ ವಿಶಿಷ್ಟರೂಪವುಳ್ಳದ್ದು. ಇವೆರಡೂ ಸ್ವತಃ ಪ್ರಕಾಶವುಳ್ಳವುವಾದರೂ, ಜ್ಞಾನಾನ್ತರ ವೇದ್ಯವಾದಾಗ ನಿತ್ಯತ್ವಾದಿ ಧರ್ಮಗಳಿಂದ ಕೂಡಿದವಾಗಿ ತಿಳಿಯಲ್ಪಡುತ್ತವೆಂಬ ಭಾವವು. ಆದರೆ ಧರ್ಮಭೂತಜ್ಞಾನವು ಒಬ್ಬ ಧರ್ಮಿಗೆ ಒಂದೇಯಾದುದರಿಂದ ಬೇರೇ ಜ್ಞಾನದಿಂದ ತಿಳಿಯಲ್ಪಡುತ್ತದೆ ಎಂದರೇನೆಂಬ ಶಙ್ಕಾ ಉಂಟಾಗಬಹುದು. ಒಬ್ಬ ಚೇತನನಿಗೆ ಘಟ ಜ್ಞಾನ ಬಂದಾಗಲೂ ಪಟಜ್ಞಾನ ಬಂದಾಗಲೂ ಧರ್ಮಭೂತಜ್ಞಾನವು ಒಂದೇ. ಧರ್ಮಭೂತಜ್ಞಾನವು ಯಾವಾಗ ತನಗೆ ಪ್ರಕಾಶಿಸುತ್ತದೋ ಆಗ ತಾನೇ ಅವರ ಸ್ವರೂಪವು ಗೋಚರವಾಗಿ ಅದಕ್ಕೆ ನಿತ್ಯತ್ವಾದಿಗಳುಂಟೆಂದು ತೋರಿಬರುತ್ತದೆ. ಆ ಧರ್ಮಭೂತಜ್ಞಾನವು ಹಾಗೆ ಪ್ರಕಾಶಿಸುವದು ಯಾವಾಗವೆಂದರೆ, ವಿಷಯಗಳನ್ನು ಎಂದರೆ ಬಾಹ್ಯವಸ್ತುಗಳನ್ನು ಪ್ರಕಾಶಿಸುವ ಕಾಲದಲ್ಲಿ ಎಂದು ತಾನೇ ಹೇಳತಕ್ಕದ್ದು. ಹಾಗೆ ವಿಷಯ ಪ್ರಕಾಶಮಾಡದೇ ಇರುವ ಕಾಲದಲ್ಲಿ, ಅದು ಯಾರಿಗೂ ಗೊತ್ತಾಗುವದಿಲ್ಲವು. ಹಾಗಾದರೆ ಆ ಧರ್ಮಭೂತಜ್ಞಾನಕ್ಕೆ ನಿತ್ಯತ್ವ ಹೇಗೆ? ಅಂತಹ ಅವಸ್ಥೆಯು ಅನಿತ್ಯವಲ್ಲವೇ? ಹಾಗೆ ಅನಿತ್ಯವನ್ನು ಹೇಳಿದರೆ, ಪ್ರಮತ್ವವನ್ನೂ ಆರೋಪಿಸಿದ ಹಾಗೆ ಆಗು

ತನ್ನುಡ್ಡೈಯ ಧರ್ಮಭೂತಜ್ಞಾನಂ ತನುಕ್ಕು ಜ್ಞಾನಾನ್ತರವೇದ್ಯ ಮಾವ್ಪೋದು, ಪ್ರಸರಣಭೇದಮಾತ್ರತ್ತಾಲೆ ಜ್ಞಾನಾನ್ತರ ವ್ಯಪದೇಶಮ್.

ತ್ತದೆ. ಧರ್ಮಭೂತಜ್ಞಾನಕ್ಕೆ ನಿತ್ಯತ್ವವನ್ನೂ ಹೇಳಿ, ಜ್ಞಾನಾಂತರ ವೇದ್ಯವೆಂದು ಹೇಳುವದು ಹೇಗೆ ಎಂಬಾಕ್ಷೇಪಣೆಗೆ ಮುಂದಿನ ವಾಕ್ಯದಿಂದ ಸಮಾಧಾನವನ್ನು ಹೇಳುತ್ತಾರೆ.

ತನ್ನುಡ್ಡೈಯ ಧರ್ಮಭೂತಜ್ಞಾನಂ - ತನ್ನ ಧರ್ಮಭೂತಜ್ಞಾನವು, ತನುಕ್ಕು - ತನಗೆ, ಜ್ಞಾನಾನ್ತರ ವೇದ್ಯಮಾವ್ಪೋದು - ಬೇರೇ ಜ್ಞಾನದಿಂದ ತನಗೆ ಉಂಟಾಗುವ ಜ್ಞಾನಮೂಲಕವಾಗಿ ತಿಳಿಯುವಾಗ, ಹೇಗೆಂದರೆ ಆತ್ಮವಾದ ಧರ್ಮಿಯೂ, ಧರ್ಮಭೂತಜ್ಞಾನವೂ ಸಹ ನಿತ್ಯವಾದವು ಎಂಬ ಜ್ಞಾನ ಉಂಟಾದಾಗ, ಪ್ರಸರಣಭೇದಮಾತ್ರತ್ತಾಲೆ - ಇಂದ್ರಿಯಗಳ ಮೂಲಕ ಪ್ರಸರಿಸುವ ಎಂದರೆ ಉಂಟಾಗುವ ಭೇದಗಳ ಮಾತ್ರದಿಂದಲೇ, ಜ್ಞಾನಾನ್ತರವ್ಯಪದೇಶಮ್ - ಬೇರೆ ಜ್ಞಾನವೆಂದು ಹೇಳಿಸಿಕೊಳ್ಳುತ್ತದೆ. ಆದರೆ ಹೀಗೆ ಇಂದ್ರಿಯಗಳ ಮೂಲಕ ವಿಕಾರವನ್ನು ಹೊಂದಿ, ಧರ್ಮಭೂತಜ್ಞಾನ ಮೂಲಕ ಬೇರೆ ಜ್ಞಾನೋತ್ಪತ್ತಿಯುಂಟಾಗುತ್ತದೆಂದರೆ, ಹಾಗೆ ವಿಕಾರ ಹೊಂದುವದು ಅನಿತ್ಯವಾಗುತ್ತದಲ್ಲಾ ಎಂಬಾಕ್ಷೇಪವು ಉಂಟಾಗಬಹುದು. ಅದಕ್ಕೆ ಸಮಾಧಾನ ಹೇಗೆಂದರೆ :—

ಯಥಾ ನಕ್ರಿಯತೇ ಜ್ಯೋತ್ಸ್ನಾ ಮಲಪ್ರಕ್ಷಾಲನಾನ್ಮಣೇಃ ।
ದೋಷಪ್ರಹಾಣಾನ್ನ ಜ್ಞಾನ ಮಾತ್ಮನಃ ಕುರುತೇ ತಥಾ ॥

(ವಿಷ್ಣುಧರ್ಮ 104. 55)

ರತ್ನದಮೇಲಿನ ಕೊಳೆಯನ್ನು ತೊಳೆಯುವದರಿಂದ ಅದರ ನೈಜವಾದ ಪ್ರಕಾಶವು ತೋರಿಬರುತ್ತದೇ ವಿನಾ ಹೊಸದಾಗಿ ಏನೂ ಪ್ರಕಾಶವು ಉಂಟಾಗಲಿಲ್ಲವು; ಹಾಗೆಯೇ ಆತ್ಮಜ್ಞಾನವೂ ಕೂಡ ಅದರ ದೋಷಪರಿಹಾರದಿಂದ ನೈಜವಾದ ಪ್ರಕಾಶದಿಂದ ತೋರಿಬರುತ್ತದೇ ವಿನಾ ಹೊಸದಾಗಿ ಉಂಟಾಗುವುದಿಲ್ಲವು ಎಂಬ ಪ್ರಮಾಣದಿಂದ ಧರ್ಮಭೂತಜ್ಞಾನ ಒಂದೇ ಎಂದು ತೋರಿಬರುತ್ತದೆ. ಒಂದೇ ಧರ್ಮಭೂತಜ್ಞಾನವೇ ಭಿನ್ನಭಿನ್ನವಾಗಿ ವಿಷಯೀಕರಿಸುವಾಗಲೂ ಮತ್ತು ಹಾಗೆ ವಿಷಯೀಕರಿಸದೇ ಇರುವ ಸ್ಥಿತಿಯಲ್ಲಿಯೂ ಅವಸ್ಥಾಭೇದವೇ ವಿನಾ ಬೇರೆ ಬೇರೆ ಧರ್ಮಭೂತಜ್ಞಾನವು ಸೃಷ್ಟಿಸಲ್ಪಡಲಿಲ್ಲವು ಎಂಬ ಭಾವವು.

ಆದರೆ ಧರ್ಮಭೂತಜ್ಞಾನವು ಆತ್ಮಾವಿಗಾಗಿಯೇ ಪ್ರಕಾಶಿಸುವದರಿಂದಲೂ, ತನಗೆತಾನೇ ಪ್ರಕಾಶಿಸದೇ ಇರುವದರಿಂದಲೂ, ಇತರನಿಗಾಗಿಯೇ ಪ್ರಕಾಶವುಳ್ಳದ್ದೆಂದು ಹೇಳಿದಂತಾಯಿತು. ಅಂತಹ ವಸ್ತುವಿನ ಧರ್ಮಕ್ಕೆ ಪರಾಕ್ತ್ವವೆಂದು ಹೆಸರು. ಇದು ತನಗೋಸ್ಕರವಾಗಿಯೇ ಪ್ರಕಾಶಿಸುವ ಧರ್ಮವಾದ ಪ್ರತ್ಯಕ್ತ್ವಕ್ಕೆ ವಿರುದ್ಧವಾದ ಧರ್ಮವು. ಪ್ರತ್ಯಕ್ತ್ವವು ಪರಮಾತ್ಮ ಜೀವಾತ್ಮರುಗಳಿಗುಂಟು; ಪರಾಕ್ತ್ವವು ಜಗತ್ತಿನ ಅಚೇತನ ವಸ್ತುಗಳಿಗುಂಟು. ಈ ಅಭಿಪ್ರಾಯಗಳನ್ನು ಶ್ರೀ ಯಾಮುನಾರ್ಯರು ತಾವು ಅನುಗ್ರಹಿಸಿರುವ ಆತ್ಮಸಿದ್ಧಿ ಎಂಬ ಗ್ರಂಥದಲ್ಲಿ "ಅಹಂ ಬುದ್ಧ್ಯಾ ಪರಾಗರ್ಥಾತ್ ಪ್ರತ್ಯಗರ್ಥೋಹಿ ಭಿದ್ಯತೇ" ಎಂಬ ವಾಕ್ಯದಿಂದ ಸಜ್ಗ್ರಹಿಸಿರುತ್ತಾರೆ. ಹಾಗಾದರೆ ಆತ್ಮಾವಿಗಾಗಿಯೇ ಪ್ರಕಾಶಿಸುವ ಧರ್ಮಭೂತಜ್ಞಾನದ ಸ್ವಭಾವವನ್ನು ಪರಾಕ್ತ್ವವೆಂದು ಹೇಳಬಹುದೋ ಎಂದರೆ, ಅಚೇತನವಸ್ತುಗಳಿಗೆ ಸಾಧಾರಣವಾಗಿ ಈ ಪರಾಕ್ತ್ವಮಾತ್ರವೇ ಇರುತ್ತದೆ. ಅವುಗಳಿಗೆ ಧರ್ಮಭೂತಜ್ಞಾನಕ್ಕಿರುವ ಹಾಗೆ ಸ್ವಯಂಪ್ರಕಾಶ ಧರ್ಮವಿಲ್ಲವು. ಇದಕ್ಕೆ ವಿಷಯಪ್ರಕಾಶಮಾಡುವ ಈ ವೈಲಕ್ಷಣ್ಯವಿರುವದರಿಂದ, ಇದನ್ನೇ "ಧರ್ಮಭೂತಜ್ಞಾನತ್ತುಕ್ಕು ವಿಷಯಿತ್ವಮೇತ್ತಂ" ಎಂದು ಅಪ್ಪಣೆ ಕೊಡಿಸಿರುತ್ತಾರೆ.

ಈಗ ಏನು ಹೇಳಲ್ಪಟ್ಟಿತೆಂದರೆ:—

1. ಪ್ರತ್ಯಕ್ತ್ವವುಳ್ಳವರು – ಪರಮಾತ್ಮ ಜೀವಾತ್ಮರುಗಳು.
2. ಪರಾಕ್ತ್ವವುಳ್ಳವುಗಳು—ಅಚೇತನಗಳಾದ ಪ್ರಕೃತಿ ಮತ್ತು ಕಾಲವು
3. ಧರ್ಮಭೂತಜ್ಞಾನವೂ, ಶುದ್ಧಸತ್ವಮಯವಾದ ನಿತ್ಯವಿಭೂತಿಯೂ ಸಹ ಪರಾಕ್ತ್ವವಿದ್ದರೂ ಸ್ವಯಂಪ್ರಕಾಶವುಳ್ಳವುಗಳು.
4. ಜೀವಾತ್ಮ ಪರಮಾತ್ಮರು ಪ್ರತ್ಯಕ್ತ್ವದೊಂದಿಗೆ ವಿಷಯಗಳ ಹಾಗೆ ಇತರರಿಗೂ ಪ್ರಕಾಶಿಸುವ ಸ್ವಭಾವವುಳ್ಳವರು. ಉಪಾಸನಾದಿಗಳಿಂದ ಮಹಾಭಾಗವತರುಗಳಿಗೆ ಪ್ರಕಾಶಿಸುತ್ತಾರೆ.

ಹಿಂದೆ ತ್ರಿವಿಧಚೇತನರಾದ ಜೀವಾತ್ಮರುಗಳ ಸ್ವರೂಪ ಸ್ಥಿತಿ ಪ್ರವೃತ್ತಿಗಳು ಹೇಳಲ್ಪಟ್ಟವು. ಅನಂತರ ಚೇತನನಿಗೆ ಜ್ಞಾನತ್ವ, ಜ್ಞಾನಾಶ್ರಯತ್ವ, ಸ್ವಯಂಪ್ರಕಾತತ್ವ. ಪ್ರತ್ಯಕ್ತ್ವಗಳುಂಟೆಂದು ಹೇಳಲ್ಪಟ್ಟವು. ಹಾಗೆಯೇ ಆತ್ಮಾವಿನ ಧರ್ಮರೂಪವಾದ ಜ್ಞಾನದ ಸ್ವರೂಪ ಸ್ಥಿತಿಪ್ರವೃತ್ತಿಗಳು ಹೇಳಲ್ಪಟ್ಟವು. ಇವರ ಸ್ವರೂಪವು ಸ್ವಯಂಪ್ರಕಾಶವಾಗಿರುವಿಕೆಯು. ಇದು ಆತ್ಮಾ

ಅಚೇತನ ನಿರೂಪಣಂ.

ತ್ರಿವಿಧಾಚೇತನಂಗಳುಮ್ ಪರರುಕ್ಕೇ ತೋನ್ರುಕ್ಕಡವನವಾಯಿರುಕ್ಕುಂ. ಅಚೇತನತ್ವಮಾವದು? ಜ್ಞಾನಾಶ್ರಯಮುನ್ರಿಕ್ಕೆ ಯೊಳಿಗೈ.

ವಿಗೆ ಅಧೀನವಾಗಿ ಅದರೊಂದಿಗೆ ಅಂತರ್ಭೂತವು. ಇದರ ಸ್ಥಿತಿಯು ನಿತ್ಯವಾದುದು. ಪ್ರವೃತ್ತಿಯು ವಿಷಯಪ್ರಕಾಶಕಾಲದಲ್ಲಿ ಗೋಚರವಾಗಿರೋಣವು; ಮತ್ತು ವಿಷಯಪ್ರಕಾಶಮಾಡಿ ಆತ್ಮಾವಿಗಾಗಿಯೇ ಪ್ರಕಾಶಿಸುವಂಥಾದ್ದೆಂದೂ ಹೇಳಲ್ಪಟ್ಟಿತು. ಮುಂದೆ ಅಚೇತನದ ಸ್ವರೂಪಸ್ಥಿತಿ ಪ್ರವೃತ್ತಿಗಳು ಹೇಳಲ್ಪಡುತ್ತವೆ. ಶ್ರೀಭಾಷ್ಯಕಾರರವರ "ತ್ರಿವಿಧ ಚೇತನಾಚೇತನಂ" ಎಂಬ ವಿಭಾಗವನ್ನನುಸರಿಸಿ ಮೊದಲು ತ್ರಿವಿಧ ಚೇತನಗಳನ್ನು ಕುರಿತು ಹೇಳಿ, ಅನಂತರ ತ್ರಿವಿಧವಾದ ಅಚೇತನಗಳನ್ನು ಕುರಿತು ಹೇಳುತ್ತಾರೆ.

ಅಚೇತನ ಧರ್ಮಗಳು.

ತ್ರಿವಿಧಾಚೇತನಂಗಳುಮ್ - ಮೂರು ವಿಧವಾದ ಅಚೇತನಗಳೂ, ಪರರುಕ್ಕೇ - ಇತರರಿಗೆ ಮಾತ್ರವೇ, ತೋನ್ರುಕ್ಕಡವನವಾಯಿರುಕ್ಕುಂ - ಪ್ರಕಾಶಿಪ್ಪು ಯೋಗ್ಯವಾದವುಗಳಾಗಿವೆ. ಇತರರಿಗೆ ಮಾತ್ರವೇ ಪ್ರಕಾಶಿಸುವ ಧರ್ಮಕ್ಕೆ ಪರಾಕ್ತ್ವವೆಂದು ಹಿಂದೆಯೇ ಹೇಳಲ್ಪಟ್ಟಿತು. ಇಲ್ಲಿ ಪರರುಕ್ಕೇ ಎಂಬಲ್ಲಿ ಏವಕಾರದಿಂದ,ತನಗೆತಾನೇ ಪ್ರಕಾಶಿಸುವ ಸ್ವಭಾವವಿಲ್ಲವೆಂದೂ, ಅಂತಹ ಸ್ವಭಾವವುಳ್ಳ ಆತ್ಮರುಗಳಿಗಿಂತ ಭಿನ್ನವಾದುದೆಂದೂಹೇಳಲ್ಪಟ್ಟಿತು. ಇಲ್ಲಿ ತ್ರಿವಿಧಾಚೇತನಂಗಳುಮ್ ಎಂದರೆ ಮೂರು ಅಚೇತನಗಳೂ ಕೂಡ ಎಂದು ಹೇಳಿದುದರಿಂದ, ಧರ್ಮಭೂತಜ್ಞಾನವು ಹೇಗೆ ತನಗಿಂತ ಇತರವಾದ ಆತ್ಮಾವಿಗಾಗಿಯೇ ಪ್ರಕಾಶಿಸುತ್ತದೋ ಹಾಗೆಯೇ ಈ ಅಚೇತನಗಳು ಇತರರಿಗೇನೇ ಪ್ರಕಾಶಿಸುವಂಥಾವುಗಳು ಎಂಬ ಭಾವವು.

ಅಚೇತನತ್ವಮಾವದು?—ಅಚೇತನತ್ವವೆಂದರೇನು? ಜ್ಞಾನಾಶ್ರಯಮುನ್ರಿಕ್ಕೆಯೊಳಿಗೈ-ಜ್ಞಾನಕ್ಕೆ ಆಶ್ರಯವಲ್ಲದೆ ಇರೋಣವು. ಹಿಂದೆ ಚೇತನತ್ವವೆಂದರೆ ಜ್ಞಾನಕ್ಕೆ ಆಶ್ರಯವಾಗಿರುವಿಕೆಯೆಂದು ಹೇಳಲ್ಪಟ್ಟಿತ್ತು. ಹಾಗೆ ಜ್ಞಾನಕ್ಕೆ ಆಶ್ರಯವಲ್ಲದೇ ಇರುವದೇ ಅಚೇತನತ್ವವೆಂದು ಈಗ ಉಪದೇಶಿಸಲ್ಪಟ್ಟಿತು. ಆದರೆ ಪ್ರಳಯಕಾಲದಲ್ಲಿ ಚೇತನನೂ ಕೂಪ ಜ್ಞಾನವಿಲ್ಲದಹಾಗೆ ಅಚಿತ್ಪ್ರಾಯನಾಗಿರುತ್ತಾನೆಂದು ಶಾಸ್ತ್ರಗಳಲ್ಲಿ ಹೇಳಿರುತ್ತದೆಯ

ಪಿರರುಕ್ಕೇತೋನ್ರುಕೈಯಾವುದು ? ತರ್ಪ್ರಕಾಶತ್ತುಕ್ಕುತ್ತಾರ್ ಫಲಿಯ ನ್ರಿಕ್ಕೆ ಯೊಳಿಗೈ, ಇವೈ ಇರಣ್ಡುಮ್ ಧರ್ಮಭೂತಜ್ಞಾನಾದಿಗಳುಕ್ಕುಮ್ ತುಲ್ಯಂ. ತ್ರಿವಿಧಾ ಚೇತನಜ್ಞಳೆನ್ರೆಡುತ್ತ ವನ್ರಿಲ್ ಪ್ರಕೃತಿಯುಮ್ ಕಾಲಮುಮ್ ಜಡಂಗಳ್. ಶುದ್ಧಸತ್ವಮಾನ ದ್ರವ್ಯತ್ತೈ ಜಡಮೆನ್ರು ಶಿಲರ್ ಶೊಲ್ಲುವರ್ಗಳ್.

ಲ್ಲಾ, ಹಾಗಾದರೆ ಆಗ ಚೇತನರೂ ಕೂಡ ಅಚೇತನರೋ ಎಂದರೆ, ಹಾಗಲ್ಲ ವೆಂದು ತಿಳಿಸುವದಕ್ಕಾಗಿ "ಜ್ಞಾನಾಶ್ರಯಮನ್ರಿಕ್ಕೆಯೊಳಿಗೈ" ಎಂದು ಅತ್ಯಂತಾಭಾವವಾದ, ಎಂದಿಗೂ ಇಲ್ಲದ ಅಭಾವವು, ಇಲ್ಲಿ ಹೇಳಲ್ಪಟ್ಟಿರುತ್ತದೆ. ಪಿರರುಕ್ಕೇ ತೋನ್ರುಕೈಯಾವದು–ಇತರರಿಗೇ ಮಾತ್ರವೇ ತೋರುವ ದೆಂದರೇನು ? ಇದಕ್ಕೆ ಸಂಸ್ಕೃತದಲ್ಲಿ ಪರಸ್ಮೈಭಾಸಮಾನತ್ವವೆಂದು ಹೆಸರು. ತರ್ಪ್ರಕಾಶತ್ತುಕ್ಕು - ತನ್ನ ಪ್ರಕಾಶಕ್ಕೆ, ತಾರ್ ಫಲಿಯನ್ರಿಕ್ಕೈಯೊಳಿಗೈ - ತಾನು ವ್ಯವಹಾರ ಕರ್ತವಾಗಿಲ್ಲದೇ ಇರೋಣವು. ಇದಕ್ಕೆ ಪರಾಕ್ತ್ವವೆಂದು ಹೆಸರು. ಧರ್ಮಭೂತಜ್ಞಾನವೂ ಅಚೇತನದಲ್ಲೇ ಸೇರಿದುದೆಂದು ಮುಂದೆ ತಿಳಿ ಸುತ್ತಾರೆ. ಇವೈಇರಣ್ಡುಮ್ – ಈ ಎರಡು ಧರ್ಮಗಳಾದ ಇತರರಿಗೇನೇ ಪ್ರಕಾಶಿಸೋಣವೂ, ಜ್ಞಾನಕ್ಕೆ ಆಶ್ರಯವಲ್ಲದೇ ಇರೋಣವೂ, ಧರ್ಮಭೂತ ಜ್ಞಾನಾದಿಗಳುಕ್ಕುಮ್ ತುಲ್ಯಂ – ಧರ್ಮಭೂತಜ್ಞಾನವೇ ಮೊದಲಾದವುಗ ಳಿಗೂ ಸಮಾನವು. ಇಲ್ಲಿ ಆದಿ ಶಬ್ದದಿಂದ ಪ್ರಕೃತಿ, ಕಾಲ, ಶುದ್ಧಸತ್ವಗಳು ಹೇಳಲ್ಪಟ್ಟವೆಂದು ಸಾರವಿವರಣೆ ವ್ಯಾಖ್ಯಾತೃವು ಹೇಳುತ್ತಾರೆ. ಸಾರಾಸ್ವಾದಿ ನಿಸಾರದೀಪಿಕೆಯವರು ಶಬ್ದ, ಗುಣ, ಕ್ರಿಯೆಗಳು ಹೇಳಲ್ಪಟ್ಟವೆಂದು ಬರೆದಿರು ತ್ತಾರೆ. ಈಗ ಪ್ರಕೃತಿ, ಕಾಲ, ಶುದ್ಧಸತ್ವ, ಧರ್ಮಭೂತಜ್ಞಾನ, ಈ ನಾಲ್ಕು ಅಚೇತನ ದ್ರವ್ಯಗಳ ಸಾಮಾನ್ಯಧರ್ಮಗಳನ್ನು ಹೇಳಿ, ಅವುಗಳಿಗಿರುವ ಪರಸ್ಪರ ವ್ಯತ್ಯಾಸಗಳನ್ನು ತಿಳಿಸುತ್ತಾರೆ.

ತ್ರಿವಿಧಾಚೇತನಜ್ಞಳೆನ್ರೆಡುತ್ತವನ್ರಿಲ್ - ಅಚೇತನಗಳು ಮೂರು ವಿಧವೆಂದು ಹೇಳಿದವುಗಳಲ್ಲಿ, ಪ್ರಕೃತಿಯೂ ಕಾಲವೂ ಸಹ ಜಡಪದಾರ್ಥಗಳು. ಶುದ್ಧಸತ್ವಮಾನದ್ರವ್ಯತ್ತೈ - ಶುದ್ಧಸತ್ವದ್ರವ್ಯವನ್ನು, ಜಡಮೆನ್ರುಶಿಲರ್ ಶೊಲ್ಲುವರ್ಗಳ್ - ಜಡಪದಾರ್ಥವೆಂದೇ ಕೆಲವರು ಹೇಳುವರು. ಇಲ್ಲಿ ತ್ರಿಗು ಣವಾದ ಪ್ರಕೃತಿಯೂ ಕಾಲವೂ ಸಹ ಜಡವೆಂದು ಹೇಳಿಸಿಕೊಳ್ಳುತ್ತವೆ ಎಂದು ಹೇಳಿದುದರಿಂದ ಮಿಕ್ಕ ನಾಲ್ಕಾದ ಈಶ್ವರತತ್ವ, ಜೀವಾತ್ಮ, ಧರ್ಮಭೂತಜ್ಞಾ ನ, ಶುದ್ಧಸತ್ವವೆನಿಸುವ ನಿತ್ಯವಿಭೂತಿಯ ದ್ರವ್ಯವು, ಅಜಡವೆಂಬ ಭಾವವು.

ಜಡತ್ವ ನಿರೂಪಣಂ

ಜಡತ್ವಮಾವದು? ಸ್ವಯಂಪ್ರಕಾಶಮನ್ರಿಕ್ಕೆ ಯಿರುಕ್ಕೈ. ಭಗವಚ್ಛಾಸ್ತ್ರಾದಿಪರಾಮರ್ಶಂ ಪಣ್ಣಿನವರ್‌ಗಳ್, ಜ್ಞಾನಾತ್ಮಕತ್ವಂ ಶಾಸ್ತ್ರ

ಶುದ್ಧ ಸತ್ವದ್ರವ್ಯವನ್ನು ಕೆಲವರು ಜಡವೆಂದು ಹೇಳುವರು ಎಂದು ಹೇಳಿರುವದರಿಂದ ಅದು ಸರಿಯಾದ ಅಭಿಪ್ರಾಯವಲ್ಲವೆಂದೂ, ಅಂತಹ ಅಭಿಪ್ರಾಯವು ತಮಗೆ ಸಮ್ಮತವಾದುದಲ್ಲವೆಂದೂ, ಭಗವಚ್ಛಾಸ್ತ್ರಾದಿಗಳನ್ನು ಪರಿಶೀಲಿಸಿದ ವಿಶೇಷ ಜ್ಞಾನಿಗಳಭಿಪ್ರಾಯಕ್ಕೆ ವಿರೋಧವಾದುದೆಂದೂ ತಿಳಿಸುತ್ತಾರೆ.

ಜಡತ್ವ ಲಕ್ಷಣವು.

ಜಡತ್ವಮಾವದು?-ಜಡಭಾವವೆಂದರೇನು? ಸ್ವಯಂ ಪ್ರಕಾಶಮನ್ರಿಕ್ಕೆ ಯಿರುಕ್ಕೈ - ತಾನಾಗಿಯೇ ಪ್ರಕಾಶವಿಲ್ಲದಿರುವ ಭಾವವು, ಧರ್ಮಭೂತ ಜ್ಞಾನ ಸಹಾಯವಿಲ್ಲದೆ ತಾನಾಗಿಯೇ ಪ್ರಕಾಶಿಸಲಾರದೇ ಇರುವ ಸ್ಥಿತಿಯು ಎಂಬಭಿಪ್ರಾಯವು. ಪ್ರಕೃತಿಯೂ ಕಾಲವೂ ಸಹ ಜಡವು. ಅವು ಜ್ಞಾನಕ್ಕೆ ಆಶ್ರಯವಲ್ಲವು. ಆದುದರಿಂದಲೇ ಅವು ಸ್ವಯಂಪ್ರಕಾಶವಲ್ಲವು. ಧರ್ಮಿಯಾದ ಆತ್ಮಕ್ಕೂ, ಧರ್ಮಭೂತಜ್ಞಾನಕ್ಕೂ ಜ್ಞಾನತ್ವವಿರುವದರಿಂದ ಸ್ವಯಂ ಪ್ರಕಾಶವುಂಟು. ಮುಂದೆ ಶುದ್ಧ ಸತ್ವವೇನು ಸ್ವಯಂಪ್ರಕಾಶವಿಲ್ಲದುದಾಗಿ ಜಡವೇ, ಅಥವಾ ಸ್ವಯಂಪ್ರಕಾಶ ಉಳ್ಳದ್ದಾಗಿ ಅಜಡವೇ, ಎಂಬ ಸಂದರ್ಭದಲ್ಲಿ, ಸ್ವಯಂಪ್ರಕಾಶವಿಲ್ಲದುದರಿಂದ ಅದು ಜಡವೆಂದು ಕೆಲವರು ಅಭಿಪ್ರಾಯಪಡುತ್ತಾರೆಂದು ಹಿಂದೆ ಹೇಳಿದರು. ಆದರೆ ಭಗವಚ್ಛಾಸ್ತ್ರವಾದ ಪಾಂಚರಾತ್ರ ಶಾಸ್ತ್ರವೇ ಮೊದಲಾದವುಗಳನ್ನು ವಿಮರ್ಶಿಸಿ ತಿಳಿದವರು, ಶುದ್ಧಸತ್ವವನ್ನು ಸ್ವಯಂಪ್ರಕಾಶವೆಂದು ಹೇಳುವದರಿಂದ ಅದು ಜಡವಲ್ಲವೆಂದು ಮುಂದಿನ ವಾಕ್ಯದಿಂದ ತಿಳಿಸಿ, ತಾವು ಶಾಸ್ತ್ರಪ್ರಮಾಣವನ್ನು ಬಹುಮಾನಿಸುವದರಿಂದ ತಮ್ಮ ಅಭಿಪ್ರಾಯವೂ ಸಹ ಹಾಗೆಯೇ ಎಂದು ತಿಳಿಸುತ್ತಾರೆ.

ಭಗವಚ್ಛಾಸ್ತ್ರಾದಿ ಪರಾಮರ್ಶಂ ಪಣ್ಣಿನವರ್‌ಗಳ್ – ಭಗವಚ್ಛಾಸ್ತ್ರವಾದ ಪಾಂಚರಾತ್ರ ಮೊದಲಾದ ಶಾಸ್ತ್ರಗಳನ್ನು ಪರಿಶೀಲಿಸಿ ತಿಳಿದವರುಗಳು, ಜ್ಞಾನಾತ್ಮಕತ್ವಂ ಶಾಸ್ತ್ರಸಿದ್ಧಮಾಕೈಯಾಲೇ – ಶುದ್ಧಸತ್ವದ್ರವ್ಯಕ್ಕೆ ಜ್ಞಾನತ್ವವನ್ನು ಆ ಪಾಂಚರಾತ್ರ ಪ್ರಮಾಣಮೂಲಕ ಸ್ಥಾಪಿಸಿರುವದರಿಂದ, ಶುದ್ಧಸತ್ವದ್ರವ್ಯವು ಸ್ವಯಂಪ್ರಕಾಶವಾದುದು ಎಂದು ಎನ್ಬಾರ್‌ಗಳ್ - ಎಂದು ಹೇಳಿರುವರು. ಪಾಂಚರಾತ್ರದಲ್ಲಿ ಏನು ಹೇಳಿದೆ ಎಂದರೆ :—ಈ ಶುದ್ಧಸತ್ವ

ಸಿದ್ಧ ಮಾಕ್ಕೆಯಾಲೆ ಶುದ್ಧಸತ್ವದ್ರವ್ಯತ್ತೈಸ್ವಯಂಪ್ರಕಾಶಮೆನ್ಬರ್‌ಗಳ್
ಶುದ್ಧಸತ್ವಸ್ಯ ಸ್ವಯಂಪ್ರಕಾಶತ್ವೋಪಪಾದನಂ.

ಇಪ್ಪಡಿ ಸ್ವಯಂಪ್ರಕಾಶಮಾಕಿಲ್, ಸಂಸಾರಿಗಳುಕ್ಕು ಶಾಸ್ತ್ರ

ಮಯವಾದ ನಿತ್ಯವಿಭೂತಿಯು "ಜ್ಞಾನಾನಂದಮಯಾ ಲೋಕಾಃ" ಎಂದು ಪೊಗಳ್ಪಟ್ಟಿರುವುದರಿಂದ ದಿವ್ಯ ವೈಕುಂಠ ಲೋಕಕ್ಕೆ ಜ್ಞಾನತ್ವವು ಹೇಳಲ್ಪಟ್ಟಿತು. ಈ ಪಾಂಚರಾತ್ರ ಶಾಸ್ತ್ರವು ತುಂಬಾ ಮುಖ್ಯವಾದ ಶಾಸ್ತ್ರವಾದುದರಿಂದ ಆ ಪ್ರಮಾಣವು ಪ್ರಬಲವು; ಆದುದರಿಂದ ಅದನ್ನು ತಿರಸ್ಕರಿಸುವದು ಯುಕ್ತವಲ್ಲವೆಂಬ ಭಾವವು. ಇಲ್ಲಿ ಆದಿಶಬ್ದದಿಂದ **"ಕಿಮಾತ್ಮಕೋ ಭಗವಾ೯, ಜ್ಞಾನಾತ್ಮಕೋ ಭಗವಾ೯; ಕಿಮಾತ್ಮಕೋ ಲೋಕಃ, ಜ್ಞಾನಾತ್ಮಕೋ ಲೋಕಃ, ಅವ್ಯತಂದಿವಿ"** ಇತ್ಯಾದಿಪ್ರಮಾಣಗಳು ಸಙ್ಗ್ರಹಿಸಲ್ಪಟ್ಟವು. ಹೀಗೆ ಭಗವಚ್ಛಾಸ್ತ್ರ ಪ್ರಮಾಣಗಳಲ್ಲದೆ ಇತರ ಪ್ರಬಲವಾದ ಪ್ರಮಾಣಗಳಿದ್ದರೂ, ಭಗವಚ್ಛಾಸ್ತ್ರವನ್ನೇ ಮುಖ್ಯವಾಗಿ ಇಲ್ಲಿ ಹೇಳಿದುದರ ಅಭಿಪ್ರಾಯವೇನೆಂದರೆ, ಶ್ರುತಿಗಳು ಹೇಗೆ ಪ್ರಮಾಣವೋ ಹಾಗೆಯೇ ಭಗವಚ್ಛಾಸ್ತ್ರವೂ ಸಹ ನಮಗೆ ಪರಮಾದರಣೀಯವಾದುದು ಎಂದು ತೋರಿಸುವದಕ್ಕಾಗಿ ಎಂಬದಾಗಿ ಭಾವಿಸತಕ್ಕದ್ದು. ಆದುದರಿಂದ ಇಲ್ಲಿ ಆದಿಪದದಿಂದ ನಿತ್ಯವಿಭೂತಿಯನ್ನು ಕುರಿತು ಹೇಳುವ ಶ್ರುತಿಭಾಗವೂ, ರಹಸ್ಯಾಮ್ನಾಯ, ಪುರಾಣ ಮೊದಲಾದವುಗಳು ಸಙ್ಗ್ರಹಿಸಲ್ಪಟ್ಟವು.

ಚಿನ್ಮಯೈ ಸ್ವಪ್ರಕಾಶೈಶ್ಚ ಅನ್ಯೋನ್ಯ ರುಚಿರಂ ಜನೈಃ।
ಸ್ವಸತ್ತಾಭಾಸಕಂ ಸತ್ವಂ ಗುಣಸತ್ವಾದ್ವಿಲಕ್ಷಣಂ ॥

ಎಂಬ ಶ್ಲೋಕದ ಪ್ರಕಾರ ಈ ಲೀಲಾವಿಭೂತಿಯಲ್ಲಿರುವ ಸತ್ವಗುಣಕ್ಕಿಂತಲೂ ವಿಲಕ್ಷಣವಾದುದಾಗಿ ಶುದ್ಧಸತ್ವವು ಜ್ಞಾನಾತ್ಮಕವು ಮತ್ತು ಸ್ವಸತ್ತಾಭಾಸಕವು ಎಂದರೆ ಸ್ವಯಂಪ್ರಕಾಶವಾದುದು. ರಹಸ್ಯಾಮ್ನಾಯ ವಾಕ್ಯಪ್ರಕಾರ ಸರ್ವೇಶ್ವರನ ದಿವ್ಯಮಙ್ಗಳವಿಗ್ರಹವೂ ಶುದ್ಧಸತ್ವಮಯವಾದುದರಿಂದ ಸ್ವಯಂಪ್ರಕಾಶವಾದುದೇ. ಶುದ್ಧಸತ್ವವು ಈ ಅನೇಕ ಪ್ರಮಾಣಗಳನ್ನನುಸರಿಸಿ ಸ್ವಯಂಪ್ರಕಾಶವಾದರೆ ಸಂಸಾರಿಗಳಾದ ನಮಗೂ ಕೂಡ ಏಕೆ ಗೋಚರವಲ್ಲವು? ಶಾಸ್ತ್ರಗಳಲ್ಲಿ ಹೇಳಿರುವ ಪ್ರಕಾರ ನಿತ್ಯಮುಕ್ತರುಗಳಿಗೆ ಮಾತ್ರವೇ ಗೋಚರವಾಗಲು ಕಾರಣವೇನು? ಇತ್ಯಾದಿ ಶಙ್ಕೆಗಳುಂಟಾಗಬಹುದೆಂದು ಭಾವಿಸಿ, ಅವುಗಳಿಗೆ ಸದೃಷ್ಟಾಂತವಾಗಿ ಸಮಾಧಾನವನ್ನು ಹೇಳುತ್ತಾರೆ ಸ್ವಯಂಪ್ರಕಾಶವಾಗಿದ್ದರೂ ಎಲ್ಲರಿಗೂ ಗೋಚರವಾಗಬೇಕೆಂಬುವದೇನೂ ಇರುವದಿಲ್ಲವೆಂದು ಎರಡು ದೃಷ್ಟಾಂತಗಳ ಮೂಲಕ ತಿಳಿಸುತ್ತಾರೆ.

ಶುದ್ಧಸತ್ವಕ್ಕೆ ಸ್ವಯಂಪ್ರಕಾಶಸ್ಥಾಪನೆಯು

ಇಪ್ಪಡಿ – ಈ ಭಗವಚ್ಛಾಸ್ತ್ರಾದಿಗಳು ಉಪಪಾದಿಸುವಹಾಗೆ, **ಸ್ವಯಂಪ್ರ**

ನೇದ್ಯಮಾಕ ವೇಣ್ಡಾದೇ, ತಾನೇ ತೋನ್ರ ವೇಣ್ಡಾವೋ ವೆನ್ನಿಲ್ ? ಸರ್ವಾತ್ಮಾಕ್ಕಳುಡೈಯವುಮ್ ಸ್ವರೂಪಮುಮ್ ಧರ್ಮಭೂತ ಜ್ಞಾನ ಮುಮ್ ಸ್ವಯಂ ಪ್ರಕಾಶಮಾಯಿರುಕ್ಕ, ಸ್ವರೂಪಮ್ ತನಕ್ಕೇ ಸ್ವಯಂಪ್ರಕಾಶ ಮಾಯ್ ವೇರೆಲ್ಲಾರ್ಕ್ಕುಮ್ ಜ್ಞಾನಾನ್ತರ ವೇದ್ಯ ಮಾನಾರ್ಪ್ಪೋಲವುಮ್, ಧರ್ಮಭೂತಜ್ಞಾನಂ ಸ್ವಾಶ್ರಯತ್ತುಕ್ಕು ಸ್ವ ಯಂ ಪ್ರಕಾಶಮಾಯ್, ಇತರರ್ಕ್ಕು ಸ್ವಯಂಪ್ರಕಾಶ ಮಲ್ಲಾದಾಪ್ಪೋ ಲವುಮ್, ಇದುವುಮ್ ನಿಯತವಿಷಯಮಾಕ ಸ್ವಯಂಪ್ರಕಾಶಮಾ ನಾಲ್ ವಿರೋಧಮಿಲ್ಲೈ.

ಕಾಶಮಾಕಿಲ್–ಶುದ್ಧಸತ್ವವು ಸ್ವಯಂ ಪ್ರಕಾಶವಾಗಿದ್ದರೆ, **ಶಾಸ್ತ್ರವೇದ್ಯಮಾಕ ವೇಣ್ಡಾದೆ** – ಶಾಸ್ತ್ರಮೂಲಕವಾಗಿಯೇ ವೇದ್ಯವಾಗಬೇಕೆಂಬುವದಿಲ್ಲವೆ, **ತಾನೇ ತೋನ್ರವೇಣ್ಡಾವೋವೆನ್ನಿಲ್** – ತಾನೇ ಪ್ರತ್ಯಕ್ಷಮೂಲಕ ತೋರಬೇಡವೇ ಎಂದರೆ, **ಸರ್ವಾತ್ಮಾಕ್ಕಳುಡೈಯವುಮ್** – ಸಮಸ್ತ ಆತ್ಮರುಗಳ, **ಸ್ವರೂಪ ಮುಮ್ ಧರ್ಮಭೂತಜ್ಞಾನಮುಮ್ ಸ್ವಯಂಪ್ರಕಾಶಮಾಯಿರುಕ್ಕ** – ಸ್ವರೂಪವೂ ಧರ್ಮಭೂತಜ್ಞಾನವೂ ಎರಡೂ ಸ್ವಯಂಪ್ರಕಾಶವಾಗಿದ್ದರೂ, **ಸ್ವರೂ ಪಂತನಕ್ಕೇ ಸ್ವಯಂಪ್ರಕಾಶಮಾಯ್** – ಆತ್ಮಸ್ವರೂಪವು ತನಗೆ ಮಾತ್ರವೇ ಸ್ವಯಂ ಪ್ರಕಾಶವಾಗಿ ಎಂದರೆ ಅಹಂ ಎಂದು ತೋರುವುದಾಗಿ, **ವೇರೆಲ್ಲಾ ರ್ಕ್ಕುಮ್** – ಮತ್ತೆಲ್ಲರಿಗೂ, **ಜ್ಞಾನಾನ್ತರ ವೇದ್ಯಮಾನಾರ್ಪ್ಪೋಲೆಯುಂ** – ಬೇರೆ ಜ್ಞಾನದಿಂದ ಹೇಗೆ ತಿಳಿಯಲು ಸಾಧ್ಯವೋ, ಹಾಗೆಯೇ, ಮತ್ತು ಧರ್ಮಭೂತ ಜ್ಞಾನವು, **ಸ್ವಾಶ್ರಯತ್ತುಕ್ಕೇ** – ತನಗೆ ಆಶ್ರಯವಾದ ಆತ್ಮನಿಗೆ ಮಾತ್ರವೇ, ಸ್ವಯಂಪ್ರಕಾಶವಾಗಿ, **ಇತರರ್ಕ್ಕು ಸ್ವಯಂ ಪ್ರಕಾಶಮಲ್ಲಾದಾಪ್ಪೋಲ ವುಮ್** – ಇತರರಿಗೆ ಹೇಗೆಸ್ವಯಂಪ್ರಕಾಶವಲ್ಲವೋ ಹಾಗೆಯೇ, **ಇದುವುಮ್** – ಈ ಶುದ್ಧಸತ್ವವೂ ಸಹ, **ನಿಯತ ವಿಷಯಮಾಕ ಸ್ವಯಂ ಪ್ರಕಾಶಮಾ ನಾಲ್** – ಕ್ಲಿಪ್ತವಾಗಿ ಕೆಲವರಿಗೆ ಮಾತ್ರ ಸ್ವಯಂಪ್ರಕಾಶವಾದರೆ ಎಂದರೆ ಈಶ್ವರ, ನಿತ್ಯಮುಕ್ತರಿಗೆ ಮಾತ್ರ ಸ್ವಯಂಪ್ರಕಾಶವಾಗಿ ಬದ್ಧರಿಗೆ ಮಾತ್ರ ಪ್ರಕಾಶವಿಲ್ಲದೆ ಇರುವದೇನೂ, **ವಿರೋಧಮಿಲ್ಲೈ** – ವಿರೋಧವಲ್ಲವು, ಬದ್ಧರಿಗೆ ಶುದ್ಧ ಸತ್ವವು ಪ್ರಕಾಶಿಸಿ ಗೋಚರವಾಗದೆ, ನಿತ್ಯಮುಕ್ತರುಗಳಿಗೆ ಸ್ವಯಂಪ್ರಕಾಶವಾಗಿ ತೋರು ವದರಲ್ಲೇನೂ ವಿರೋಧವಿಲ್ಲವೆಂದು ಹೇಳುತ್ತಾರೆ :—ಏಕೆಂದರೆ, ಬದ್ಧರಾದರೋ ಕರ್ಮವಶ್ಯರು, ಅವರಿಂದ ಅದರ ಸ್ವಯಂಪ್ರಕಾಶತ್ವವನ್ನು ಅರಿಯರು, ನಿತ್ಯಮುಕ್ತ ರಾದರೋ ಕರ್ಮವಶ್ಯರಲ್ಲವು. ಹಾಗೆ ಶುದ್ಧ ಸತ್ವದ ಸ್ವಯಂಪ್ರಕಾಶತ್ವವು ಕೆಲ

ಯೋವೇತ್ತಿಯುಗಪತ್ಸರ್ವಂ ಪ್ರತ್ಯಕ್ಷೇಣ ಸದಾಸ್ವತಃ ।
ತಂಪ್ರಣಮ್ಯ ಹರಿಂ ಶಾಸ್ತ್ರಂ ನ್ಯಾಯತತ್ವಂ ಪ್ರಚಕ್ಷ್ಮಹೇ ॥
ಎಜ್ಞಾರಪಡಿಯೇ ಧರ್ಮಭೂತಜ್ಞಾನತ್ತಾಲೆ ಸರ್ವತ್ತೈಯುಮ್ ಸಾಕ್ಷಾತ್ಕರಿತ್ತುಕೊಂಡಿರುಕ್ಕಿರ ಈಶ್ವರನುಕ್ಕು ಶುದ್ಧಸತ್ವದ್ರವ್ಯಮ್

ವರಿಗೆ ವೇದ್ಯವಾಗಿ ಕೆಲವರಿಗೆ ವೇದ್ಯವಾಗದೇ ಇರುವದಕ್ಕೆ ನಿದರ್ಶನಗಳುಂಟೋ ಎಂದರೆ, ಉಂಟೆಂಬದಾಗಿ ಎರಡು ದೃಷ್ಟಾಂತಗಳಿಂದ ವ್ಯಕ್ತ ಪಡಿಸುತ್ತಾರೆ ಅವು ಯಾವುವೆಂದರೆ ;—

1. ಆತ್ಮನ ಸ್ವರೂಪವು ಸ್ವಯಂಪ್ರಕಾಶವು. ಅದು ತನಗೆ ಮಾತ್ರವೇ ಅಹಂಎಂದು ತೋರಿಬರುತ್ತದೆ. ಇತರರಿಗೆ ಸ್ವಯಂಪ್ರಕಾಶವಲ್ಲವು.
2. ಆತ್ಮನ ಧರ್ಮಭೂತಜ್ಞಾನವೂ ಸ್ವಯಂಪ್ರಕಾಶವಾದುದು. ಹಾಗೆ ಸ್ವಯಂಪ್ರಕಾಶವಾಗಿ ತೋರುವದು ತನಗೆ ಆಶ್ರಯವಾದ ಆತ್ಮನಿಗೆ ಮಾತ್ರವೇಇತರರಿಗಲ್ಲವು.

ಹಾಗೆಯೇ ಶುದ್ಧ ಸತ್ವವೂ ನಿತ್ಯಮುಕ್ತರಿಗೆ ಮಾತ್ರವೇ ಸ್ವಯಂ ಪ್ರಕಾಶವು, ಬದ್ಧರಿಗಲ್ಲವು.

ಮುಂದೆ ಈ ಶುದ್ಧಸತ್ವವು, ಈಶ್ವರನಿತ್ಯಮುಕ್ತರಿಗೆ ಸ್ವಯಂಪ್ರಕಾಶವೆಂದು ಬೋಧಿಸುತ್ತಾರೆ :—"ಯೋವೇತ್ತಿ" ಎಂಬ ಶ್ಲೋಕವು ಶ್ರೀ ನಾಥಮುನಿಗಳ ನ್ಯಾಯತತ್ವವೆಂಬುವ ಗ್ರಂಥದ ಮಙ್ಗಳಾಚರಣ ಶ್ಲೋಕವು. **ಯಃ** – ಯಾವ ಪರಬ್ರಹ್ಮನು, **ಯುಗಪತ್** – ಏಕಕಾಲದಲ್ಲೇ, **ಸರ್ವಂ** – ಸಮಸ್ತವನ್ನೂ, **ಸ್ವತಃ** – ತಾನಾಗಿಯೇ ಸ್ವಾಭಾವಿಕವಾಗಿ, **ಪ್ರತ್ಯಕ್ಷೇಣ** – ಪ್ರತ್ಯಕ್ಷದಿಂದಲೇ, **ವೇತ್ತಿ** – ತಿಳಿಯುತ್ತಾನೋ, **ತಂಹರಿಂ** – ಅಂತಹ ಪಾಪಹರನಾದ ಮಹಾವಿಷ್ಣುವನ್ನು, **ಪ್ರಣಮ್ಯ** – ನಮಸ್ಕರಿಸಿ, **ನ್ಯಾಯತತ್ವವೆಂಬ ಶಾಸ್ತ್ರಂ** – ಶಾಸ್ತ್ರವನ್ನು, **ಪ್ರಚಕ್ಷ್ಮಹೇ** – ಹೇಳುವೆವು", **ಎಜ್ಞಾರಪಡಿಯೇ** – ಎಂದು ಹೇಳಿರುವಹಾಗೆ, **ಧರ್ಮಭೂತಜ್ಞಾನತ್ತಾಲೆ ಸರ್ವತ್ತೈಯುಮ್ ಸಾಕ್ಷಾತ್ಕರಿತ್ತುಕ್ಕೊಂಡಿರುಕ್ಕಿರ** – ತನ್ನ ಧರ್ಮಭೂತಜ್ಞಾನದಿಂದಲೇ ಎಲ್ಲವನ್ನೂ ಸಾಕ್ಷಾತ್ಕರಿಸುವ ಮಹಿಮೆಯುಳ್ಳ, **ಈಶ್ವರನುಕ್ಕು** – ಸರ್ವೇಶ್ವರನಿಗೆ, ಶುದ್ಧಸತ್ವದ್ರವ್ಯವು, **ಸ್ವಯಂಪ್ರಕಾಶಮಾಯಿರುಕ್ಕಿರಪಡಿ** – ಸ್ವಯಂಪ್ರಕಾಶವಾಗಿರುವ ರೀತಿಯು, **ಎಜ್ಞನೇಯೆನ್ನಿಲ್** – ಹೇಗೆ ಎಂದರೆ, ಈ ಮೇಲಿನ ಶ್ಲೋಕವು ಪ್ರಥಮಾಚಾರ್ಯರಾಗಿ, ನಮ್ಮಾಳ್ವಾರ್ಗಳವರ, ವ್ಯಾಪಿಸಿದ ಪ್ರಬಂಧದ ಪ್ರಚಾರಕರಾಗಿ, ಯೋಗಮಹಿಮೆಯುಳ್ಳ ಅರಿತವರಾದ, ಶ್ರೀ ನಾಥಮುನಿಗಳು ಅನುಗ್ರಹಿಸಿದ ನ್ಯಾಯತತ್ವವೆಂಬ ಗ್ರಂಥದ

ಸ್ವಯಂಪ್ರಕಾಶವಾಯಿರುಕ್ಕಿರ ಪಡಿಯೆಜ್ಞನೇಯೆನ್ನಿಲ್ ? ಇವನು ಡೈಯ ಧರ್ಮ ಭೂತಜ್ಞಾನಮ್ ದಿವ್ಯಾತ್ಮ ಸ್ವರೂಪಮ್ ಮುದಲಾಕ ಸರ್ವತ್ತೈಯುಮ್ ವಿಷಯಾಕರಿಯಾನಿರ್ಕ, ದಿವ್ಯಾತ್ಮ ಸ್ವರೂಪಮ್ ಸ್ವಯಂಪ್ರಕಾಶವಾಕಿರಾಪ್ಪೋಲೆ, ಇದುವುಮ್ ಸ್ವಯಂ ಪ್ರ

ಮಂಗಳಾಚರಣ ಶ್ಲೋಕವು. ಇದರಿಂದ ಸರ್ವೇಶ್ವರನ ಧರ್ಮಭೂತಜ್ಞಾನದ ವೈಲಕ್ಷಣ್ಯವನ್ನು ತಿಳಿಸುತ್ತಾರೆ. ನಮಗೆ ಸಜಾತೀಯ ವಿಕಾಸಗಳಿರುವ ಹಾಗೆ ಸರ್ವೇಶ್ವರನ ಧರ್ಮಭೂತ ಜ್ಞಾನಕ್ಕೆ ಎಂದಿಗೂ ಸಂಕೋಚವಿಲ್ಲವು. ಆತನು ಸದಾ ಸ್ವತಃ ವೇತ್ತಿ, ಯಾವಾಗಲೂ ಎಲ್ಲವನ್ನೂ ಸಾಕ್ಷಾತ್ಕರಿಸುವನು. ನಾವಾದರೋ ಕೆಲವು ಸಂದರ್ಭಗಳಲ್ಲ ಇತರರಿಂದಲೂ ಗುರುಗಳಿಂದಲೂ ಶಾಸ್ತ್ರಗಳ ಮೂಲಕವೂ ಸಾಕ್ಷಾತ್ಕರಿಸುವೆವು. ಆತನು ಹಾಗಲ್ಲವು, ಸ್ವತಃ ಸಾಕ್ಷಾತ್ಕರಿಸುವನು. ನಾವುಗಳು ಅನುಮಾನ ಶಾಸ್ತ್ರ ಪ್ರಮಾಣಗಳ ಮೂಲಕವೂ ತಿಳಿಯಬೇಕಾಗುತ್ತದೆ. ಆತನು ಹಾಗಲ್ಲವು ಪ್ರತಕ್ಷಮೂಲಕವಾಗಿಯೇ ಸಮಸ್ತವನ್ನೂ ಸಾಕ್ಷಾತ್ಕರಿಸುವನು. ನಮಗೆ ಒಂದನ್ನು ಸಾಕ್ಷಾತ್ಕರಿಸುವಾಗ ಇನ್ನೊಂದನ್ನು ಸಾಕ್ಷಾತ್ಕರಿಸುವ ಶಕ್ತಿಯಿಲ್ಲವು. ಸರ್ವೇಶ್ವರನಿಗೆ ಹಾಗಲ್ಲವು. ಯುಗಪತ್ ಒಂದೇ ಕಾಲದಲ್ಲೇ ಸರ್ವವನ್ನೂ ಧರ್ಮಭೂತಜ್ಞಾನಮೂಲಕ ಸಾಕ್ಷಾತ್ಕರಿಸಬಲ್ಲನು. ಹೀಗೆ ಸರ್ವವನ್ನೂ ಸದಾ ಏಕಕಾಲದಲ್ಲೇ ಸಾಕ್ಷಾತ್ಕರಿಸುವ ಶಕ್ತಿಯು ಸರ್ವೇಶ್ವರನಿಗೆ ಯುಂಟೆಂಬುವದನ್ನು ಉಪದೇಶಿಸುವದಕ್ಕಾಗಿ ಯೋಗಮಹಿಮೆಯನ್ನರಿತು ಪರಬ್ರಹ್ಮವನ್ನು ಸಾಕ್ಷಾತ್ಕರಿಸಿದ ಶ್ರೀಮನ್ನಾಥಮುನಿ ವಾಕ್ಯವನ್ನು ಉದಾಹರಿಸಿರುತ್ತಾರೆ. ಈ ಶ್ಲೋಕದ ಪೂರ್ವಾರ್ಧವೇ ತಮ್ಮ ಪ್ರಮಾಣಕ್ಕೆ ಸಾಕಾಗಿದ್ದರೂ, ಉತ್ತರಾರ್ಧವನ್ನೂ ಸಹ ಇಲ್ಲಿ ಹೇಳಿರುವುದು ಪರಮ ಬ್ರಹ್ಮವಿತ್ತಾದ ಆಚಾರ್ಯಸೂಕ್ತಿಯಲ್ಲಿ ತಮಗಿರುವ ಆದರಾತಿಶಯವನ್ನೂ ಭಕ್ತಿವಿಶ್ವಾಸವನ್ನೂ ವ್ಯಕ್ತಪಡಿಸುವದಕ್ಕಾಗಿ ಎಂದು ಭಾವಿಸತಕ್ಕದ್ದು. ಈ ಸಂದರ್ಭದಲ್ಲಿ ಒಂದು ಶಙ್ಕಾ ಉಂಟಾಗಬಹುದು ಸರ್ವೇಶ್ವರನು ತನ್ನ ಧರ್ಮಭೂತಜ್ಞಾನವಿಂದಲೇ ಯಾವಾಗಲೂ ಎಲ್ಲವನ್ನೂ ತಾನೇ ಪ್ರತ್ಯಕ್ಷದಿಂದ ಸಾಕ್ಷಾತ್ಕರಿಸುವ ಶಕ್ತಿಯಿರುವಾಗ, ಶುದ್ಧಸತ್ವವು ಏಕೆ ಸ್ವಯಂ ಪ್ರಕಾಶವಾಗಿರಬೇಕು ಎಂಬ ಶಙ್ಕಾವಿಗೆ ಮುಂದಿನವಾಕ್ಯದಿಂದ ಒಂದು ದೃಷ್ಟಾಂತ ಮೂಲಕ ಸಮಾಧಾನವನ್ನು ಹೇಳುತ್ತಾರೆ. **ಇವನುಡೈಯಧರ್ಮ ಭೂತಜ್ಞಾನಮ್** - ಈ ಸರ್ವೇಶ್ವರನ ಧರ್ಮಭೂತಜ್ಞಾನವು, ತನ್ನ ದಿವ್ಯಾತ್ಮ ಸ್ವರೂಪ ಮೊದಲಾಗಿ ಸಮಸ್ತವನ್ನೂ, **ವಿಷಯೀಕರಿಯಾನಿರ್ಕ**-ವಿಷಯೀಕರಿಸುವಂಥಾದ್ದಾಗಿರಲಾಗಿ, **ದಿವ್ಯಾತ್ಮಸ್ವರೂಪಂ ಸ್ವಯಂಪ್ರಕಾಶವಾಕಿರಾಪ್ಪೋಲೆ** -

ಕಾಶಮಾಯಿರುಕ್ಕಲಾಮ್. ಇಪ್ಪಡಿ ನಿತ್ಯರುಕ್ಕುಮ್ ತುಲ್ಯಂ. ವಿಷಯ ಪ್ರಕಾಶಕಾಲತ್ತಿಲೆ ಧರ್ಮಭೂತಜ್ಞಾನಂ ಸ್ವಾಶ್ರಯತ್ತುಕ್ಕೇ ಸ್ವಯಂ ಪ್ರಕಾಶಮಾನಾರ್ಪೋಲೆ ಮುಕ್ತರುಕ್ಕುಮವ್ವಸ್ಥೈಯಿಲೆ ಇದು ಸ್ವಯಂ ಪ್ರಕಾಶಮಾನಾಲ್ ವಿರೋಧಮಿಲ್ಲೈ.

ಸರ್ವೇಶ್ವರನ ದಿವ್ಯಾತ್ಮಸ್ವರೂಪವು ಹೇಗೆ ಸ್ವಯಂ ಪ್ರಕಾಶ ವಾಗಿರುತ್ತದೋ ಹಾಗೆಯೇ, **ಇದುವುಮ್** – ಈ ಶುದ್ಧಸತ್ವದ್ರವ್ಯವೂ, ಸ್ವಯಂಪ್ರಕಾಶವಾಗಿರುತ್ತದೆ. ಈಶ್ವರನು ಸಮಸ್ತವನ್ನು ಸದಾ ವಿಷಯೀಕರಿಸುವುದು ತನ್ನ ಧರ್ಮಭೂತ ಜ್ಞಾನ ಮೂಲಕವಾಗಿಯೇ. ತನ್ನ ಸರ್ವಧರ್ಮ ವಿಶಿಷ್ಟವಾದ ಸ್ವರೂಪ ಪ್ರಕಾಶವೂ ಕೂಡ ಧರ್ಮಭೂತಜ್ಞಾನ ಮೂಲಕವಾಗಿಯೇ. ಆದರೆ ತಾನು ಎಂದು ಇಷ್ಟು ಮಾತ್ರ ಸ್ವರೂಪ ಪ್ರಕಾಶಕ್ಕೆ ಧರ್ಮಭೂತಜ್ಞಾನದ ಆವಶ್ಯಕತೆಯು ಬೇಕಾಗದಿದ್ದರೂ, ದಿವ್ಯಾತ್ಮಸ್ವರೂಪವೂ ಕೂಡ ಹೇಗೆ ಸ್ವಯಂಪ್ರಕಾಶವೋ ಹಾಗೆಯೇ ಶುದ್ಧ ಸತ್ವ ದ್ರವ್ಯಕ್ಕೂ ಕೂಡ ಅದರ ಸರ್ವಧರ್ಮ ವಿಶಿಷ್ಟವಾದ ಪ್ರಕಾಶವು ಸರ್ವೇಶ್ವರನ ಧರ್ಮಭೂತಜ್ಞಾನ ಮೂಲಕವಾಗಿ ಆದರೂ, ಅದರ ಸ್ವಂತ ಸ್ವರೂಪಮಾತ್ರ ಸ್ವಯಂಪ್ರಕಾಶವಾಗಿರುವದರಲ್ಲೇನೂ ಅಭ್ಯಂತರವಿಲ್ಲವೆಂಬ ಭಾವವು. **ಇಪ್ಪಡಿ ನಿತ್ಯರುಕ್ಕುಮ್ ತುಲ್ಯಂ** – ಇಪ್ಪಡಿ ಎಂದರೆ ಸರ್ವೇಶ್ವರನಿಗೆ ಶುದ್ಧ ಸತ್ವದ್ರವ್ಯವು ಹೇಗೆ ಸ್ವಯಂಪ್ರಕಾಶವೋ ಇದೇಮೇರಿಗೆ ನಿತ್ಯರಿಗೂಕೂಡ ಶುದ್ಧಸತ್ವವು, ಸ್ವಯಂಪ್ರಕಾಶವಾಗಿರುವದು ಸಮಾನವಾದುದು. ನಿತ್ಯರಿಗೆ ಇದು ಸ್ವಯಂ ಪ್ರಕಾಶವಲ್ಲವೆಂದು ಎಲ್ಲಿಯೂ ಹೇಳಿಲ್ಲವಾದುದರಿಂದಲೂ, ನಿತ್ಯರು ಸರ್ವೇಶ್ವರನಿಗೆ ಸಮಾನವಾದ ಅನೇಕ ಧರ್ಮಗಳುಳ್ಳವರಾದುದರಿಂದಲೂ, ಶುದ್ಧ ಸತ್ವವು ನಿತ್ಯರಿಗೂ ಸಹ ಈಶ್ವರನಿಗೆ ಹೇಗೋ ಹಾಗೆಯೇ ಸ್ವಯಂಪ್ರಕಾಶವು ಎಂಬ ಭಾವವು. ಮುಂದೆ ಮುಕ್ತರಿಗೆ ಹೇಗೆ ಎಂಬುವದು ಉಪಪಾದಿಸಲ್ಪಟ್ಟು, ಆ ಸಂದರ್ಭದಲ್ಲಿ ಉಂಟಾಗಬಹುದಾದ ಶಂಕೆಗೆ ಸಮಾಧಾನವನ್ನು ಸಹ ಹೇಳುತ್ತಾರೆ. ಹಿಂದೆ ಬದ್ಧರಿಗೆ ಶುದ್ಧ ಸತ್ವವು ಸ್ವಯಂಪ್ರಕಾಶವಾಗಿ ತೋರುವದಿಲ್ಲವೆಂದು ಹೇಳಲ್ಪಟ್ಟಿತು. ಅದೇ ಬದ್ಧರೇ ಮುಕ್ತಾವಸ್ಥೆಯನ್ನು ಹೊಂದಿದರೆ ಹೇಗೆ? ಅವರಿಗೆ ಸ್ವಯಂ ಪ್ರಕಾಶವೇ ಇಲ್ಲವೇ ಎಂದರೆ, ಮುಕ್ತರಿಗೂ ಸ್ವಯಂಪ್ರಕಾಶವೆಂದು ಹೇಳುತ್ತಾರೆ ಒಬ್ಬರಿಗೆ ಸ್ವಯಂ ಪ್ರಕಾಶವಾಗಿಯೂ ಇನ್ನೊಬ್ಬರಿಗೆ ಹಾಗೆ ಅಲ್ಲದೆಯೂ ಇವರೂ ಇರಬಹುದು. ಒಬ್ಬ ಆತನಿಗೆ ಒಂದು ಕಾಲದಲ್ಲಿ ಒಂದೇ ದ್ರವ್ಯವು ಬದ್ಧಾವಸ್ಥೆಯಲ್ಲಿ ಸ್ವಯಂಪ್ರಕಾಶವಲ್ಲದೆಯೂ, ಇನ್ನೊಂದು

ಧರ್ಮಭೂತಜ್ಞಾನತ್ತಿ ನುಡೈಯ ಸ್ವಾತ್ಮಪ್ರಕಾಶನ ಶಕ್ತಿಯಾನ ದು ವಿಷಯಪ್ರಕಾಶಮಿಲ್ಲಾದಕಾಲತ್ತಿಲ್ ಕರ್ಮವಿಶೇಷಜ್ಞಾಲೆ ಪ್ರತಿ ಬದ್ಧೈಯಾನಾರ್ಪೋಲೆ ಶುದ್ಧಸತ್ವತ್ತಿನುಡೈಯ ಸ್ವಾತ್ಮಪ್ರಕಾಶನ ಶಕ್ತಿ ಯುಮ್ ಬದ್ಧ ದಶೈಯಿಲ್ ಪ್ರತಿಬದ್ಧೈಯಾಕೈಯಾಲೆ ಶುದ್ಧ ಸತ್ವಂ ಬದ್ಧರ್ಕ್ಕು ಪ್ರಕಾಶಿಯಾದೊಳಿಗಿರದು.

ಕಾಲದಲ್ಲಿ ಮುಕ್ತಾವಸ್ಥೆಯಲ್ಲಿ ಸ್ವಯಂಪ್ರಕಾಶವಾಗಿಯೂ ಇರುವದು ಹೇಗೆ ಎಂಬ ಶಜ್ಞಾನಿಗೂ ಸಹ ಸಮಾಧಾನವನ್ನು ಹೇಳುತ್ತಾರೆ.

ವಿಷಯಪ್ರಕಾಶಕಾಲತ್ತಿಲೆ – ವಸ್ತುಗಳನ್ನು ಪ್ರಕಾಶಿಸುವಕಾಲದಲ್ಲಿ, ಧರ್ಮಭೂತಜ್ಞಾನವು, **ಸ್ವಾಶ್ರಯತ್ತುಕ್ಕೇ ಪ್ರಕಾಶಮಾನಾರ್ಪೋಲೆ** – ತನಗೆ ಆಶ್ರಯವಾದ ಆತ್ಮನಿಗೆ ಹೇಗೆ ಸ್ವಯಂಪ್ರಕಾಶವೋ ಹಾಗೆಯೇ, **ಮುಕ್ತರುಕ್ಕುಂ** – ಮುಕ್ತರಿಗೂ ಸಹ, **ಅವ್ವವಸ್ಥೈಯಿಲೆ** – ಆ ಮುಕ್ತಾವಸ್ಥೆಯಲ್ಲಿ, **ಇದು ಸ್ವಯಂಪ್ರಕಾಶಮಾನಾಲ್** – ಈ ಶುದ್ಧ ಸತ್ವವು ಸ್ವಯಂಪ್ರಕಾಶವಾಗಿ ತೋರುವದರಲ್ಲಿಯೂ, **ವಿರೋಧಮಿಲ್ಲೈ** – ವಿರೋಧವಿಲ್ಲವು, **ಧರ್ಮಭೂತಜ್ಞಾನತ್ತಿನುಡೈಯ** – ಧರ್ಮಭೂತಜ್ಞಾನದ, **ಸ್ವಾತ್ಮಪ್ರಕಾಶನ ಶಕ್ತಿಯಾನದು** – ತನ್ನ ಸ್ವಯಂಪ್ರಕಾಶವಾಗಿರುವ ಶಕ್ತಿಯು, **ವಿಷಯಪ್ರಕಾಶಮಿಲ್ಲಾದಕಾಲತ್ತಿಲ್** – ವಸ್ತುಗಳನ್ನು ಪ್ರಕಾಶಪಡಿಸದೇ ಇರುವ ಕಾಲದಲ್ಲಿ, **ಕರ್ಮವಿಶೇಷಜ್ಞಾಲೇ** – ಕರ್ಮ ವಿಶೇಷಗಳಿಂದ, **ಪ್ರತಿಬದ್ಧೈಯಾನಾರ್ಪೋಲೆ** – ಹೇಗೆ ತಡೆಯಲ್ಪಟ್ಟಿರುತ್ತದೋ ಹಾಗೆಯೇ, **ಶುದ್ಧಸತ್ವತ್ತಿನುಡೈಯ** – ಶುದ್ಧ ಸತ್ವದ, **ಸ್ವಾತ್ಮಪ್ರಕಾಶನಶಕ್ತಿಯುಮ್** – ತನ್ನ ಸ್ವಯಂ ಪ್ರಕಾಶವಾಗಿರುವ ಶಕ್ತಿಯೂ, **ಬದ್ಧದಶೈಯಿಲ್ ಪ್ರತಿಬದ್ಧೈಯಾಕೈಯಾಲೆ** – ಚೇತನನ ಸಂಸಾರದಶೆಯಲ್ಲಿ ತಡೆಯಲ್ಪಡುವದರಿಂದ, ಶುದ್ಧಸತ್ವವು ಬದ್ಧರಿಗೆ, **ಪ್ರಕಾಶಿಯಾದೊಳಿಗಿರದು** – ಪ್ರಕಾಶಿಸದೇ ಇರುವಂಥಾದ್ದಾಗಿದೆ. ಧರ್ಮಭೂತಜ್ಞಾನವು ಕೆಲವು ವೇಳೆಗಳಲ್ಲಿ ಆತ್ಮನಿಗೆ ಸ್ವಯಂಪ್ರಕಾಶವು, ಇನ್ನು ಕೆಲವು ವೇಳೆಗಳಲ್ಲಿ ಅಲ್ಲವು, ವಿಷಯಗ್ರಹಣಕಾಲಗಳಲ್ಲಿ ಆತ್ಮನಿಗೆ ಸ್ವಯಂಪ್ರಕಾಶವು ; ಮೂರ್ಛಾ ನಿದ್ರಾ ಮೊದಲಾದ ಅವಸ್ಥೆಗಳಲ್ಲಿ ಸ್ವಯಂಪ್ರಕಾಶವಲ್ಲವು; ಹಾಗೆಯೇ ಶುದ್ಧ ಸತ್ವವೂ ಮುಕ್ತದಶೆಯಲ್ಲಿ ಆತ್ಮನಿಗೆ ಸ್ವಯಂಪ್ರಕಾಶವು; ಬದ್ಧದಶೆಯಲ್ಲಿ ಸ್ವಯಂಪ್ರಕಾಶಲ್ಲವವು. ಹೀಗೆ ಶುದ್ಧಸತ್ವವು ಸ್ವಯಂಪ್ರಕಾಶವಾಗಿದ್ದರೂ, ಒಬ್ಬ ಆತ್ಮನಿಗೇನೆ ಒಂದು ಅವಸ್ಥೆಯಲ್ಲಿ ಸ್ವಯಂಪ್ರಕಾಶವಾಗಿ ತೋರುವದೂ, ಇನ್ನೊಂದು ಅವಸ್ಥೆಯಲ್ಲಿ ಹಾಗೆ ತೋರದೆ ಇರುವದೂ, ಎಲ್ಲಿಯಾದರೂ ಉಂಟೋ ಎಂಬ ಶಜ್ಞಾ

ಧಿಯಸ್ಸ್ವಯಂಪ್ರಕಾಶತ್ವಂ ಮುಕ್ತೌ ಸ್ವಾಭಾವಿಕಂ ಯಥಾ ।
ಬದ್ಧೇ ಕದಾಚಿತ್ಸಂರುದ್ಧಂ ತಥಾತ್ರಾಪಿ ನಿಯಮ್ಯತೇ ॥ ೧ ॥

ವಿಗೆ ಏನೂ ಕಾರಣವೇ ಇಲ್ಲವೆಂದು ಹೇಳಿ, ಹಾಗೆ ಅವಸ್ಥಾಭೇದದಿಂದ ಭಿನ್ನ ಭಿನ್ನವಾಗಿ ತೋರುವವಕ್ಕೆ ಸದೃಷ್ಟಾಂತವಾಗಿ ಕಾರಣವನ್ನು ತಿಳಿಸುತ್ತಾರೆ. ಧರ್ಮಭೂತಜ್ಞಾನದ ಸಹಜವಾದ ಧರ್ಮವು ಸ್ವಯಂಪ್ರಕಾಶವಾಗಿರುವಿಕೆಯು, ಅಂತಹ ಧರ್ಮಭೂತಜ್ಞಾನವು ವಿಷಯಪ್ರಕಾಶಮಾಡದಿರುವ ಕಾಲದಲ್ಲಿ, ಅದರ ಸ್ವಯಂಪ್ರಕಾಶತ್ವವು ಕರ್ಮವಿಶೇಷದಿಂದ ತಡೆಯಲ್ಪಟ್ಟಿರುತ್ತದೆ. ಹಾಗೆಯೇ ಶುದ್ಧಸತ್ವದ ಸ್ವಯಂಪ್ರಕಾಶವು ಬದ್ಧದೆಶೆಯಲ್ಲಿ ಕರ್ಮವಿಶೇಷದಿಂದ ತಡೆಯಲ್ಪಟ್ಟಿರುತ್ತದೆ ಎಂಬ ಭಾವವು. ಶುದ್ಧಸತ್ವವು ಶಾಸ್ತ್ರದಲ್ಲಿ ಸ್ವಯಂಪ್ರಕಾಶವೆಂದು ಹೇಳಿದುದರಿಂದ, ತಾವು ಪ್ರಮಾಣ ಶರಣರಾದ ಪ್ರಯುಕ್ತ, ಅದನ್ನೇ ಸಮರ್ಥನಮಾಡಿ ಹೇಳಿ, ಹಾಗೆ ಸ್ಥಾಪಿಸಿದ ಅರ್ಥವನ್ನು ಒಂದು ತಮ್ಮಕಾರಿಕೆಯಾದ ಶ್ಲೋಕದಿಂದ ಅನುಗ್ರಹಿಸುತ್ತಾರೆ.

ಧಿಯಃ – ಧರ್ಮಭೂತಜ್ಞಾನದ, **ಸ್ವಯಂಪ್ರಕಾಶತ್ವವು**, **ಬದ್ಧೇ** – ಸಂಸಾರಿಯಾದ ಜೀವಾತ್ಮನಲ್ಲಿ, **ಕದಾಚಿತ್ಸಂರುದ್ಧಂ** – ಯಾವಾಗಲಾದರೂ ಎಂದರೆ ಬಾಹ್ಯವಿಷಯಗಳನ್ನು ಪ್ರಕಾಶಿಸದೇ ಇರುವ ಕಾಲದಲ್ಲಿ ಅಥವಾ ನಿದ್ರಾಮೂರ್ಛಾದಿ ಕಾಲಗಳಲ್ಲಿ ತಡೆಯಲ್ಪಟ್ಟಿರುತ್ತದೋ ಎಂದರೆ ಆಗ ಕರ್ಮಮೂಲಕವಾಗಿ ಹೇಗೆ ಸ್ವಯಂಪ್ರಕಾಶವಲ್ಲದೆ ಇರುತ್ತದೆಯೋ, **ಮುಕ್ತೌ** – ಮುಕ್ತಾತ್ಮನಲ್ಲಾದರೋ **ಸ್ವಯಪ್ರಕಾಶತ್ವಂ** – ಸ್ವಯಂ ಪ್ರಕಾಶಭಾವವು, **ಕದಾಚಿದಪಿ** – ಇನ್ನು ಬೇರೆ ಕಾಲದಲ್ಲಿ, **ಅಸಂರುದ್ಧಂ** – ತಡೆಯಲ್ಪಟ್ಟಿರುವದಿಲ್ಲವೋ, ಆ ಕಾರಣದಿಂದ ಸ್ವಯಂಪ್ರಕಾಶತ್ವವು ಹೇಗೆ **ಸ್ವಾಭಾವಿಕಂ** – ಸ್ವಾಭಾವಿಕವಾದುದೋ, **ತಥಾ** – ಹಾಗೆಯೇ, **ಅತ್ರಾಪಿ** – ಈ ಶುದ್ಧಸತ್ವದ ವಿಷಯದಲ್ಲಿಯೂ, **ನಿಯಮ್ಯತೇ** – ವಿಧಿಸಲ್ಪಟ್ಟಿರುತ್ತದೆ ಅಥವಾ ವ್ಯವಸ್ಥೆಮಾಡಲ್ಪಟ್ಟಿರುತ್ತದೆ. ಈ ಕಾರಿಕೆಯಿಂದ ಆಚಾರ್ಯರವರು ಎರಡು ಶಙ್ಕೆಗಳಿಗೆ ಸಮಾಧಾನಗಳನ್ನು ಹೇಳುತ್ತಾರೆ :—ಶಙ್ಕೆಗಳು ಯಾವುವೆಂದರೆ :—

1. ಒಂದೇಯಾಗಿರುವ ಸ್ವಯಂಪ್ರಕಾಶವಾದ ಶುದ್ಧ ಸತ್ವವು ಬದ್ಧದೆಸೆಯಲ್ಲಿ ಒಬ್ಬ ಆತ್ಮನಿಗೆ ನೆ ಪ್ರಕಾಶಿಸದೆ ಇರೋಣವೂ, ಅವನಿಗೆ ನೆ ಮುಕ್ತಾವಸ್ಥೆಯಲ್ಲಿ ಪ್ರಕಾಶಿಸೋಣವೂ ವಿರುದ್ಧವಲ್ಲವೇ ?
2. ಹಾಗೆ ಒಂದುಕಾಲದಲ್ಲಿ ಸ್ವಯಂಪ್ರಕಾಶವಾಗಿಯೂ, ಇನ್ನೊಂದುಕಾಲದಲ್ಲಿ ಹಾಗಲ್ಲದೆಯೂ ಇದ್ದರೆ ಸ್ವಯಂಪ್ರಕಾಶವು ಔಪಾಧಿಕವು, ಸ್ವಾಭಾವಿಕ ಧರ್ಮವಲ್ಲವೆಂದು ಹೇಳಬೇಕಾಗುವದಿಲ್ಲವೇ ?

ಇವ್ವಳವು ಅವಸ್ಥಾಂತರಪತ್ತಿ ವಿಕಾರಿ ದ್ರವ್ಯತ್ತುಕ್ಕು ವಿರುದ್ಧಮು

ಇವೆರಡು ಆಕ್ಷೇಪಗಳನ್ನೂ ಧರ್ಮಭೂತಜ್ಞಾನ ದೃಷ್ಟಾಂತದ್ವಾರಾ ಪರಿಹರಿಸುತ್ತಾರೆ. ಧರ್ಮಭೂತಜ್ಞಾನವು ವಿಷಯಪ್ರಕಾಶನ ಕಾಲವಲ್ಲದಿರುವಾಗಲೂ ನಿದ್ರಾಮೂರ್ಛಾವಸ್ಥೆಗಳಲ್ಲೂ ಸ್ವಯಂಪ್ರಕಾವಲ್ಲವು, ವಿಷಯ ಪ್ರಕಾಶನಕಾಲದಲ್ಲ ಸ್ವಯಂಪ್ರಕಾಶವ. ಅದರಹಾಗೆಯೇ ಶುದ್ಧ ಸತ್ವವೂ ಕೂಡ ಸ್ವಾಭಾವಿಕವಾಗಿ, ಸ್ವಯಂಪ್ರಕಾಶವಾಗಿದ್ದರೂ ಬದ್ಧರಿಗೆ ಕರ್ಮದ ಪ್ರತಿಬಂಧದಿಂದ ಸ್ವಯಂಪ್ರಕಾಶವಲ್ಲದೆಯೂ ಅಂತಹ ಕರ್ಮ ಪ್ರತಿಬಂಧವಿಲ್ಲದ ಮುಕ್ತರಿಗೆ ಸ್ವಯಂಪ್ರಕಾಶವಾಗಿಯೂ ಯಿರಬಹುದೆಂಬಭಿಪ್ರಾಯವು.

ಆದರೆ ಧರ್ಮಭೂತಜ್ಞಾನವು ಬಾಹ್ಯವಸ್ತುಗಳನ್ನು ವಿಷಯೀಕರಿಸುವ ಕಾಲವಲ್ಲ ಸ್ವಯಂಪ್ರಕಾಶವಾಗಿಯೂ, ಹಾಗೆ ವಿಷಯೀಕರಿಸದ ಕಾಲದಲ್ಲ ಸ್ವಯಂಪ್ರಕಾಶವಲ್ಲದೆಯೂ ಇರುವದೇನೋ ಸಹಜವಾದುದು. ಶುದ್ಧಸತ್ವವು ಈಶ್ವರ ನಿತ್ಯಮುಕ್ತರಿಗೆ ಸ್ವಯಂಪ್ರಕಾಶವಾಗಿರುವಾಗಲೀ, ಬದ್ಧರಿಗೆ ಮಾತ್ರ ಸ್ವಯಂಪ್ರಕಾಶವಲ್ಲನೆಂದು ಹೇಳುವದು ಸರಿಯೋ? ಅಂತಹ ಸಂದರ್ಭದಲ್ಲ ಶುದ್ಧಸತ್ವಕ್ಕೆ ಧರ್ಮಭೂತಜ್ಞಾನದ ದೃಷ್ಟಾಂತ ಹೇಗೆ ಸರಿಹೋದೀತು? ಈ ಆಕ್ಷೇಪಗೆ ಮುಂದಿನ ವಾಕ್ಯದಿಂದ ಸಮಾಧಾನ ಹೇಳುತ್ತಾರೆ. ಸ್ವಯಂಪ್ರಕಾಶವಾಗಿರುವದು ಆತ್ಮಸ್ವರೂಪದ ಹಾಗೆ ಏಕರೂಪವಾಗಿ ನಿತ್ಯವಾಗಿರತಕ್ಕದ್ದು. ಆದರೆ ಧರ್ಮಭೂತಜ್ಞಾನ ಮತ್ತು ಶುದ್ಧ ಸತ್ವಗಳೆರಡೂ ಸ್ವಯಂಪ್ರಕಾಶವಾಗಿಯೂ ಪ್ರಕಾಶವಲ್ಲದೆಯೂ ಇರಬಹುದೋ ಎಂದರೆ ವಿಕಾರವನ್ನು ಹೊಂದುವ ದ್ರವ್ಯಗಳಿಗೆ ಇಂತಹ ವ್ಯತ್ಯಸ್ತವಾದ ಅವಸ್ಥೆಗಳನ್ನು ಹೊಂದುವಿಕೆ ಏನೂ ವಿರುದ್ಧವಾದ ಧರ್ಮವಲ್ಲವೆಂದು ಅಪ್ಪಣೆ ಕೊಡಿಸುತ್ತಾರೆ.

ಇವ್ವಳವು ಅವಸ್ಥಾಂತರಪತ್ತಿ – ಹೀಗೆ ಒಂದು ಸಂದರ್ಭದಲ್ಲ ಪ್ರಕಾಶವಾಗಿಯೂ ಅಪ್ರಕಾರವಾಗಿಯೂ ಇರುವ ಬೇರೆ ಬೇರೆ ಅವಸ್ಥೆಗಳನ್ನು ಹೊಂದೊಣವು, **ವಿಕಾರಿದ್ರವ್ಯತ್ತುಕ್ಕು** – ವಿಕಾರವನ್ನು ಹೊಂದುವ ದ್ರವ್ಯವಾದ ಶುದ್ಧಸತ್ವಕ್ಕಾಗಲಿ, ಧರ್ಮಭೂತಜ್ಞಾನಕ್ಕಾಗಲಿ, **ವಿರುದ್ಧಮನ್ರು** – ವಿರುದ್ಧವಾದ ಧರ್ಮವಲ್ಲವು. ಶುದ್ಧ ಸತ್ವವು ಮಂಟಪ, ಗೋಪುರ, ಸಿಂಹಾಸನಾದಿ ರೂಪದಲ್ಲ ವಿಕಾರವನ್ನು ಹೊಂದುತ್ತದೆ; ಧರ್ಮಭೂತಜ್ಞಾನವೂ ಕೂಡ ನಿದ್ರಾಜಾಗ್ರದಾದಿ ಅವಸ್ಥೆಗಳಲ್ಲ ಪರಿಣಮಿಸುತ್ತದೆ. ಆದುದರಿಂದ ವಿಕಾರಿದ್ರವ್ಯಗಳಿಗೇನೂ ವಿರುದ್ಧವಲ್ಲವು ಎಂಬಭಿಪ್ರಾಯವು. ಹಾಗೆ ವಿಕಾರಿ ದ್ರವ್ಯಗಳಲ್ಲದ ಆತ್ಮಸ್ವರೂಪಕ್ಕೆ ಅಪ್ರಕಾರಪ್ರಕಾರಗಳು ವಿರುದ್ಧವಾಗಬಹುದು. ಇವುಗಳಲ್ಲವು ಎಂಬ ಭಾವವು.

ನ್ಯು. ಆಕ್ಕೆಯಾಲೆ ಪ್ರಮಾಣ ಪ್ರತಿಪನ್ನಾರ್ಥತ್ತುಕ್ಕು ಯುಕ್ತಿ ವಿರೋ

ಇವರ ಮೇಲೆ ಒಂದು ಆಕ್ಷೇಪಣಾರೂಪ ಯುಕ್ತಿಯು ತೋರಬಹುದು. ಇಷ್ಟು ಕಷ್ಟಪಟ್ಟಾವರೂ ಶುದ್ಧಸತ್ವವು ಸ್ವಯಂಪ್ರಕಾಶವೆಂದು ಸಾಧಿಸುವುದಕ್ಕಿಂತ ಅದು ಸ್ವಯಂಪ್ರಕಾಶವೇ ಅಲ್ಲವು, ಅದು ಜಡದ್ರವ್ಯವೆಂದು ಏಕೆ ಹೇಳಿ ಬಿಡ ಕೂಡದು ಎಂಬ ಯುಕ್ತಿಯು ತೋರಬಹುದು. ಶಾಸ್ತ್ರಪ್ರಮಾಣವು ಅದು ಸ್ವಯಂ ಪ್ರಕಾಶವೆಂದು ಬೋಧಿಸುತ್ತಿರುವಾಗ, ಅಂತಹ ಪ್ರಮಾಣವನ್ನು ಯುಕ್ತಿಯಿಂದ ಖಂಡಿಸುವುದು ಸರಿಯಾದುದಲ್ಲವು. ಯುಕ್ತಿವಾದವು ಹೇಗೆಮಾಡತಕ್ಕದ್ದೆಂಬ ಸಂದರ್ಭದಲ್ಲಿ ವ್ಯಾಸಮಹರ್ಷಿಯು ಒಂದು ನಿಯಮವನ್ನು ವಿಧಿಸಿರುತ್ತಾರೆ.

ಆರ್ಷಂ ಧರ್ಮೋಪದೇಶಂಚ ವೇದಶಾಸ್ತ್ರಾ ವಿರೋಧಿನಾ
ಯಸ್ತರ್ಕೇಣಾನುಸನ್ಧತ್ತೇ ಸಧರ್ಮಂವೇದ ನೇತರಃ ॥

ಎಂದು ಹೇಳಿರುವ ಹಾಗೆ, ಶಾಸ್ತ್ರಪ್ರಮಾಣಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟು ಅದನ್ನು ವಾದದಿಂದ ಸ್ಥಿರೀಕರಿಸೋಣವು ಸತ್ತರ್ಕವು. ಇದೇ ಯುಕ್ತವಾದ ಮಾರ್ಗವು. ಅಂತಹ ಪ್ರಮಾಣಗಳನ್ನು ಯುಕ್ತಿಯಿಂದ ಹೊಡೆದು ಹಾಕುವುದು, ಕುತರ್ಕವಾದುದರಿಂದ ಅಯುಕ್ತಮಾರ್ಗವು ಎಂಬಭಿಪ್ರಾಯದಿಂದ ಮುಂದಿನ ವಾಕ್ಯವನ್ನು ಹೇಳುತ್ತಾರೆ.

ಆಕ್ಕೆಯಾಲೆ–ಆಕಾರಣದಿಂದ ಎಂದರೆ ಶುದ್ಧಸತ್ವವು ಸ್ವಯಂಪ್ರಕಾಶವೆಂಬುದಕ್ಕೆ ಭಗವಚ್ಛಾಸ್ತ್ರ, ಪ್ರಮಾಣವಿರುವದರಿಂದ, **ಪ್ರಮಾಣಪ್ರತಿಪನ್ನಾರ್ಥತ್ತುಕ್ಕು** – ಪಾಂಚರಾತ್ರಾದಿ ಶಾಸ್ತ್ರಪ್ರಮಾಣಗಳಿಂದ ತೋರಿಬರುವ ಅರ್ಥಕ್ಕೆ, **ಯುಕ್ತಿವಿರೋಧಂ** – ಈ ಮೇಲೆ ಹೇಳಿದ ಯುಕ್ತಿಯಿಂದ ವಿರೋಧವನ್ನು, **ಶೊಲ್ಲವಳಿಯಿಲ್ಲೈ** – ಹೇಳಲು ಮಾರ್ಗವಿಲ್ಲವು. ಇಲ್ಲಿ **ಪ್ರಮಾಣಪ್ರತಿ ಪನ್ನ ಸ್ವಯಂಪ್ರಕಾಶಕ್ಕೆ** ಎಂದು ಹೇಳದೆ, **ಪ್ರಮಾಣ ಪ್ರತಿಪನ್ನಾರ್ಥತುಕ್ಕು** ಎಂದು ಸಾಮಾನ್ಯವಾಗಿ ಹೇಳಿದುದರಭಿಪ್ರಾಯವು ಧರ್ಮಭೂತಜ್ಞಾನದ ಪ್ರತ್ಯಕ್ಷಾದಿ ಪ್ರಮಾಣ ಸಿದ್ಧವಾದ ಸ್ವಯಂಪ್ರಕಾಶದಹಾಗೆ, ಶುದ್ಧಸತ್ವದ ಭಗವಚ್ಛಾಸ್ತ್ರ ಸಿದ್ಧವಾದ ಸ್ವಯಂಪ್ರಕಾಶವನ್ನು ಸಹ ಯುಕ್ತಿಯಿಂದ ಹೊಡೆದು ಹಾಕುವದು ಸಾಧ್ಯವಿಲ್ಲವೆಂದು ಹೇಳುವದಕ್ಕಾಗಿ ಎಂದು ಭಾವಿಸತಕ್ಕದ್ದು. ಆದರೆ ಈಶ್ವರ ನಿತ್ಯಮುಕ್ತರುಗಳು ತಮ್ಮ ಜ್ಞಾನಬಲದಿಂದಲೇ ಶುದ್ಧಸತ್ವವಿಗ್ರಹವನ್ನು ಸಾಕ್ಷಾತ್ಕರಿಸುವ ಶಕ್ತಿಯಿರುವಾಗ ಶುದ್ಧಸತ್ವದ ಸ್ವಯಂಪ್ರಕಾಶವು ಅಜ್ಞಾನಗಳಸ್ತನದ ಹಾಗೆ ಸಿದ್ಧಯೋಜನವಲ್ಲವೇ ? ಅಂತಹ ಸಿದ್ಧಯೋಜನವಾಮವನ್ನು ಪರಕ್ಕೆತಾನೇ ಪ್ರಯೋ

ಧಮ್ ಶೊಲ್ಲವಳಿಯಿಲ್ಲೈ. ಇಜ್ಞನನ್ರಿಕ್ಕೇ ಉಪಚಾರತ್ತಾಲೆ ನಿರ್ವಹಿಕ್ಕ ಪಾರ್ಕಿಲ್, ಆತ್ಮಸ್ವರೂಪತ್ತಿಲುಮ್ ಜ್ಞಾನಾದಿ ಶಬ್ದಜ್ಞಳೈ ಉಪಚಾ

ಕರಿಸಬೇಕು. ಆದುದರಿಂದ ಶಾಸ್ತ್ರಪ್ರಮಾಣವಿದ್ದರೂ, ಅದು ಔಪಚಾರಿಕವಾಗಿ ಹೇಳತು ಎಂದು ಭಾವಿಸಕೂಡದು. ಅಂತಹ ಯುಕ್ತಿರೂಪ ಆಕ್ಷೇಪವು ಬಂದೀತಾಗಿ ಭಾವಿಸಿ, ಯುಕ್ತಿಯಿಂದಲೇ ಅಂತಹ ಆಕ್ಷೇಪವನ್ನು ಪರಿಹರಿಸುತ್ತಾರೆ.

ಇಜ್ಞನನ್ರಿಕ್ಕೆ – ಹಾಗಲ್ಲದಿದ್ದರೆ ಎಂದರೆ ಶಾಸ್ತ್ರ ಪ್ರಮಾಣವಾಕ್ಯಕ್ಕೆ ಮುಖ್ಯಾರ್ಥವನ್ನೇ ಹೇಳಲು ಸಾಧ್ಯವಿಲ್ಲದಿದ್ದರೆ, ಅದನ್ನು **ಉಪಚಾರತ್ತಾಲೆ ನಿರ್ವಹಿಕ್ಕಪಾರ್ಕಿಲ್** – ಅದನ್ನು ಲಾಕ್ಷಣಿಕವಾಗಿ ಭಾವಿಸಿ ನೋಡಿದರೆ, **ಆತ್ಮಸ್ವರೂಪತ್ತಿಲುಮ್** – ಆತ್ಮಸ್ವರೂಪದಲ್ಲೂ, **ಜ್ಞಾನಾದಿಶಬ್ದಜ್ಞಳೈ** – ಜ್ಞಾನವೊದಲಾದ ಶಬ್ದಗಳನ್ನು, ಇಲ್ಲಿ ಆದಿಪದದಿಂದ ಸ್ವಯಂಪ್ರಕಾಶವು ಹೇಳಲ್ಪಟ್ಟಿತು, **ಉಪಚಾರತ್ತಾಲೆ** – ಲಾಕ್ಷಣಿಕರೂಪ, **ಅನ್ಯಪರಜ್ಞಳಾಕ್ಕಲಾಮ್** – ಜ್ಞಾತೃತ್ವವೊದಲಾದ ಇತರ ಅಭಿಪ್ರಾಯಗಳನ್ನು ಬೋಧಿಸುತ್ತದೆಂದು ಭಾವಿಸಬಹುದು. ಶಾಸ್ತ್ರ ಪಜ್ಞ್ತಗಳಿಗೆ ಪ್ರಾಮುಖ್ಯತೆಯನ್ನು ಕೊಡದೆ, ತಮ್ಮ ಯುಕ್ತಿವಾದವನ್ನೇ ಮುಖ್ಯವಾಗಿ ಭಾವಿಸಿ ಪ್ರಮಾಣವಾಕ್ಯಗಳಿಗೆ ಸರಿಯಾದ ಮುಖ್ಯಾರ್ಥಗಳನ್ನು ಹೇಳದೆ ಲಾಕ್ಷಣಿಕಾರ್ಥಗಳನ್ನು ಕಲ್ಪಿಸಿದುದಾದರೆ, ಆಗ ಆತ್ಮಸ್ವರೂಪವನ್ನು ಬೋಧಿಸುವ ಜ್ಞಾನ ಶಬ್ದಕ್ಕೆ ಲಾಕ್ಷಣಿಕಾರ್ಥ ಕಲ್ಪಿಸಿ ಜ್ಞಾತೃತ್ವವನ್ನೂ ಸಹ ಬೋಧಿಸುತ್ತದೆ ಎಂದು ಹೇಳಬಹುದಾಗುತ್ತದೆ. ಆತ್ಮಸ್ವರೂಪಜ್ಞಾನಕ್ಕೆ ಮುಖ್ಯವೃತ್ತಿಯಿಂದ ಅರ್ಥ ಹೇಳದರೆ ಅನೇಕ ಜ್ಞಾನವೆಂದು ಹೇಳುವುದು ಕ್ಲೇಶವು, ಆದರೂ ದೋಷವಿಲ್ಲವೆಂದು ಹೇಳುವದಾದರೆ ಈ ಸಂದರ್ಭದಲ್ಲೂ ಬೇಕಾದರೆ ಶುದ್ಧ ಸತ್ವವು ಸ್ವಯಂಪ್ರಕಾಶವೆಂದು ಹೇಳುವ ಪ್ರಮಾಣವು ಲಾಕ್ಷಣಿಕಾರ್ಥವುಳ್ಳದ್ದೆಂದು ಹೇಳಬಹುದು.

ಸ್ವಯಂಪ್ರಕಾಶವಾದ ದ್ರವ್ಯಗಳು ನಾಲ್ಕು:—(1) ಶ್ರಿಯಃಪತಿಯು, (2) ಜೀವಾತ್ಮರುಗಳು, (3) ಇವರುಗಳ ಧರ್ಮಭೂತಜ್ಞಾನವು, (೪) ಶುದ್ಧಸತ್ವವು, ಹೀಗೆ ನಾಲ್ಕು ವಿಧ ದ್ರವ್ಯಗಳಿಗೆ ಸ್ವಯಂಪ್ರಕಾಶರೂಪಸಮಾನ ಧರ್ಮವು (ಸಾಧರ್ಮ್ಯವು) ಇರುವದರಿಂದ ಮಿಕ್ಕ ಇನ್ನೆಲ್ಲಾ ವಿಷಯಗಳಲ್ಲೂ ಸಮಾನ ಧರ್ಮವೇ ಇರಬೇಕೆಂಬ ನಿಯಮವಿಲ್ಲವು. ನಾಲ್ಕು ವಿಧ ಬೇರೆ ದ್ರವ್ಯಗಳೆಂದು ಯಾವಾಗ ಹೇಳಲ್ಪಟ್ಟವೋ ಅವುಗಳಿಗೆ ಪರಸ್ಪರ ವ್ಯತ್ಯಸ್ತ ಧರ್ಮಗಳು (ವೈಧರ್ಮ್ಯಗಳು) ಇದ್ದೇ ಇರಬೇಕೆಂಬುವದು ಸುಸ್ಪಷ್ಟವು. ಆದುದರಿಂದ ಸ್ವಯಂಪ್ರಕಾಶವಾದ ಶುದ್ಧ ಸತ್ವಕ್ಕೆ ಇತರ ಸ್ವಯಂಪ್ರಕಾಶರಾದ ಜೀವೇಶ್ವರರುಗಳಲ್ಲಿಲ್ಲದ ಪರಿಣಾಮಗಳು ಇರಬಹುದೋ

ರತ್ತಾಲೆ ಅನ್ಯಪರಜ್ಞಳಾಕ್ಕಲಾಮ್. ಸ್ವಯಂಪ್ರಕಾಶತ್ತುಕ್ಕು ರೂಪರ ಸಾದಿ ಗುಣಜ್ಞಳುಂ, ಮುನ್ನೈಯಡಿಯಾಕ ವನ್ದ ಪೃಥಿವ್ಯಾದಿ ವಿಭಾಗಮುಮ್, ಪರಿಣಾಮಾದಿಗಳುಮ್ ಕೂಡನೋ ವೆಜ್'ರಚೋದ್ಯಮುಮ್ ಧರ್ಮಭೂತ ಜ್ಞಾನತ್ತುಕ್ಕುಮ್ ಧರ್ಮಿಜ್ಞಾನತ್ತುಕ್ಕು ಮುಂಡಾನ ವೈಷಮ್ಯಜ್ಞಳೈ ಪ್ರತಿಬಂದಿಯಾಗಕ್ಕೊಂಡು ಪ್ರಮಾಣ ಬಲತ್ತಾಲೆ ಪರಿಹೃತಂ.

ಎಂಬ ಚೋದ್ಯವನ್ನುತರಲು ಸಾಧ್ಯವಿಲ್ಲವೆಂದು ಹೇಳುತ್ತಾರೆ. **ಸ್ವಯಂಪ್ರಕಾಶತ್ತುಕ್ಕು** – ಶುದ್ಧಸತ್ವರೂಪವಾದ ಸ್ವಯಂಪ್ರಕಾಶವಾದ ವಸ್ತುವಿಗೆ, ರೂಪರಸಮೊದಲಾದ ಗುಣಗಳೂ, **ಪೃಥಿವ್ಯಾದಿ ವಿಭಾಗಮುಂ –** ಪೃಥಿವೀ ಅಪ್ಪುಮೊದಲಾದ ವಿಭಾಗವೂ, **ಪರಿಣಾಮಾದಿಗಳುಂ–**ಮಂಟಪ ಗೋಪುರಾದಿಗಳಾಗುವ ವಿಕಾರಾವಸ್ಥೆ ಮೊದಲಾದವುಗಳೂ, **ಕೂಡನೋ–**ಸಜ್ಜತವೋ, ಸರಿಯೋ, **ವಿಜ್'ರಚೋದ್ಯಮುಮ್–**ಎನ್ನುವ ಪರಿಹಾಸರೂಪವಾದ ಆಕ್ಷೇಪಣೆಯು, **ಧರ್ಮಭೂತಜ್ಞಾನತ್ತುಕ್ಕುಂ ಧರ್ಮಿಜ್ಞಾನತ್ತುಕ್ಕುಂ**–ಆತ್ಮವಿನ ಸ್ವರೂಪವಾದ ಜ್ಞಾನಕ್ಕೂಧರ್ಮವಾದ ಜ್ಞಾನಕ್ಕೂ **ಉಂಡಾನವೈಷಮ್ಯಜ್ಞಳೈ** – ಇರುವ ವ್ಯತ್ಯಸ್ತವಾದ ಧರ್ಮಗಳನ್ನು, **ಪ್ರತಿಬಂದಿಯಾಗಕ್ಕೊಂಡು** – ಬದಲು ಸಮಾಧಾನವನ್ನಾಗಿಟ್ಟುಕೊಂಡು, **ಪ್ರಮಾಣಬಲತ್ತಾಲೆ ಪರಿಹೃತಂ** – ಪ್ರಮಾಣಬಲದಿಂದೆ ಅಂತಹ ಚೋದ್ಯವು ಪರಿಹರಿಸಲ್ಪಡುತ್ತದೆ. ಶುದ್ಧ ಸತ್ವವು ಸ್ವಯಂಪ್ರಕಾಶವಾದರೆ, ಅದು ಇತರ ಸ್ವಯಂಪ್ರಕಾಶದ್ರವ್ಯಗಳ ಹಾಗೆ ಸಾಧರ್ಮ್ಯವನ್ನು ಹೊಂದಿರತಕ್ಕದ್ದು. ಶುದ್ಧಸತ್ವವೇ ಪರ್ವೇಶ್ವರ ನಿತ್ಯಮುಕ್ತರುಗಳಿಗೆ ಭೋಗ ಭೋಗೋಪಕರಣ ಭೋಗಸ್ಥಾನಗಳಾಗುತ್ತದೆ. ಆದುದರಿಂದ ರೂಪರಸಾದಿ ಗುಣಗಳೂ ಅವಕ್ಕೆ ಉಂಟು. ಲೀಲಾವಿಭೂತಿಯಲ್ಲಿ ಹೇಗೆ ಪೃಥಿವ್ಯಾದಿ ವಿಭಾಗಗಳುಂಟೋ, ಹಾಗೆಯೇ ಆ ನಿತ್ಯ ವಿಭೂತಿಯಲ್ಲಿ ಅಂತಹ ವಿಭಾಗಗಳುಂಟು ಎಂದು ಶಾಸ್ತ್ರದಲ್ಲಿ ಹೇಳಿರುತ್ತದೆ. ಮತ್ತು ಮಂಟಪ ಗೋಪುರಾದಿ ರೂಪದಲ್ಲಿ ವಿಕಾರವನ್ನು ಹೊಂದುತ್ತದೆ. ಹೀಗೆ ಇತರ ಮೂರುವಿಧ ಸ್ವಯಂಪ್ರಕಾಶದ್ರವ್ಯಗಳಿಂತ ವ್ಯತ್ಯಸ್ತಧರ್ಮಗಳು ಈ ಶುದ್ಧ ಸತ್ವಕ್ಕೆ ಎಲ್ಲಾವರೂ ಉಂಟೋ, ಆದುದರಿಂದ ಅದು ಸ್ವಯಂಪ್ರಕಾಶವೇ ಅಲ್ಲವೆಂದು ಏಕೆ ಹೇಳಕೂಡದು ಎಂಬುದಾಗಿ ಚೋದ್ಯವು; ಈ ಚೋದ್ಯಕ್ಕೆ ಅವಕಾಶವೇ ಇಲ್ಲವೆಂದುಪದೇಶಿಸುತ್ತಾರೆ ಸ್ವಯಂಪ್ರಕಾಶಕ ರೂಪಸಾಧರ್ಮ್ಯವಿದ್ದರೆ, ಮಿಕ್ಕ ಎಲ್ಲಾ ವಿಷಯದಲ್ಲೂ ಸಾಧರ್ಮ್ಯವೇ ಇರಬೇಕೆಂಬ ನಿಯಮವೇನೂ ಇಲ್ಲವು. ಆತ್ಮ ಸ್ವರೂಪವೂ ಜ್ಞಾನವೇ ಧರ್ಮವೂ ಜ್ಞಾನವೇ, ಹೀಗೆ ಎರಡೂ ಜ್ಞಾನವಾಗಿದ್ದರೂ, ಅವೆರಡಕ್ಕೂ

ಇಪ್ಪಡಿ ಸ್ವಯಂಪ್ರಕಾಶಮಾನ ಶುದ್ಧಸತ್ವದ್ರವ್ಯತ್ತೈ ಜ್ಞಾತೃತ್ವಮಿಲ್ಲಾ ಮ್ಯೆಯಾಲೆ ತ್ರಿವಿಧಾ ಚೇತನಜ್ಞಳೆನ್ರು ಶೇರಕ್ಕೊತ್ತದು.

ಅನೇಕ ವ್ಯತ್ಯಸ್ತ ಧರ್ಮಗಳು ಏಕೆ ಎಂದು ನಿಮ್ಮ ಆಕ್ಷೇಪಕ್ಕೆ ಪ್ರತಿಬಂದಿಯಾಗಿ ಆಕ್ಷೇಪವನ್ನು ಮಾಡುವೆವು. ಅವೆರಡಕ್ಕೂ ವ್ಯತ್ಯಸ್ತಧರ್ಮಗಳು ಹೇಗೆಂದರೆ :— ಜೀವಾತ್ಮಸ್ವರೂಪಕ್ಕೆ ಪ್ರತ್ಯಕ್ಷತ್ವ ಉಂಟು, ಧರ್ಮಜ್ಞಾನಕ್ಕೆ ಪ್ರತ್ಯಕ್ಷತ್ವವಿಲ್ಲವು, ಪರೋಕ್ಷ ವಿಷಯಿತ್ವಗಳುಂಟು; ಜೀವಾತ್ಮಸ್ವರೂಪವು ಅಣುವು, ಧರ್ಮಭೂತ ಜ್ಞಾನವು ವಿಭುವು; ಧರ್ಮಿಸ್ವರೂಪಕ್ಕೆ ಜ್ಞಾನಸಙ್ಕೋಚವಿಲ್ಲವು, ಧರ್ಮರೂಪ ಜ್ಞಾನಕ್ಕೆ ಸಙ್ಕೋಚವಿಕಾಸಗಳುಂಟು; ಇತ್ಯಾದಿ ವೈಧರ್ಮ್ಯಗಳು ಈ ಎರಡು ಸ್ವಯಂ ಪ್ರಕಾಶ ದ್ರವ್ಯಗಳಿಗೆ ಇವೆ ಎಂದು ಶಾಸ್ತ್ರ ಪ್ರಮಾಣ ಬಲದಿಂದ ಏರ್ಪಟ್ಟಿತೋ, ಹಾಗೆಯೇ ಈ ಸ್ವಯಂಪ್ರಕಾಶವಾದ ಶುದ್ಧಸತ್ವಕ್ಕೆ ಇತರ ಸ್ವಯಂ ಪ್ರಕಾಶದ್ರವ್ಯಗಳಿಲ್ಲದೇ ಇರುವ ಕೆಲವು ವ್ಯತ್ಯಸ್ತಧರ್ಮಗಳಾದ ರೂಪರಸಾದಿ ಗುಣಗಳನ್ನು ಹೊಂದಿರುವದೂ, ಪೃಥಿವ್ಯಾದಿ ವಿಭಾಗಗಳನ್ನು ಹೊಂದಿರುವದೂ, ಮಂಟಪ ಗೋಪುರಾದಿ ವಿಕಾರಗಳನ್ನು ಹೊಂದಿರುವದೂ ಉಂಟು. ಆದುದರಿಂದ ಜೋಡ್ಯಕ್ಕೆ ಅವಕಾಶವೇ ಇಲ್ಲವು. ಒಂದುವೇಳೆ ನೀವು ಜೋಡ್ಯವಾಡಿದರೆ ಅದಕ್ಕೆ ಪ್ರತಿಜೋಡ್ಯವಾಗಿ ಸ್ವಯಂಪ್ರಕಾಶಗತವಾದ ಧರ್ಮಿ ಧರ್ಮರೂಪ ಜ್ಞಾನಗಳಿಗೆ ಏಕೆ ವ್ಯತ್ಯಸ್ತ ಧರ್ಮಗಳೆಂದು ಪ್ರಶ್ನಿಸುವೆವು.

ಆದುದರಿಂದ ನಿಮ್ಮ ಜೋಡ್ಯವು ನಮ್ಮ ಪ್ರತಿಜೋಡ್ಯದ ಮೂಲಕ ಪರಿಹಾರವನ್ನು ಹೊಂದಿತು. ನಮ್ಮ ಜೋಡ್ಯಕ್ಕಾದರೋ ಪ್ರಮಾಣಬಲವುಂಟು, ನಿಮ್ಮ ಜೋಡ್ಯಕ್ಕಾದರೋ ಅಂತಹ ಬಲವಿಲ್ಲವು ಎಂಬ ತಾತ್ಪರ್ಯವು. ಆದುದರಿಂದ ಶುದ್ಧ ಸತ್ವವು ಸ್ವಯಂಪ್ರಕಾಶವು. ಸರ್ವೇಶ್ವರ ನಿತ್ಯಮುಕ್ತರಿಗೆ ಮಾತ್ರ ಪ್ರಕಾಶವು; ಬದ್ಧರಿಗಾದರೋ ಅಪ್ರಕಾಶವು. ಹೀಗೆ ಶುದ್ಧಸತ್ವವು ಸ್ವಯಂಪ್ರಕಾಶವಾದರೆ, ಅದು ಚೇತನವೇ ಅಚೇತನವೇ ಎಂದರೆ, ಅದಕ್ಕೆ ಜ್ಞಾತೃತ್ವವೆಂದರೆ ಜ್ಞಾನಕ್ಕೆ ಆಶ್ರಯವಾಗಿರೋಣವು ಇಲ್ಲವಾದುದರಿಂದ ಚೇತನವಲ್ಲವು, ಅಚೇತನವೇ. ಆದುದರಿಂದಲೇ ಶ್ರೀ ಯತಿ ಸಾರ್ವಭೌಮರು ತ್ರೀ ವೈಕುಂಠ ಗದ್ಯದಲ್ಲಿ **ತ್ರಿವಿಧ ಚೇತನಾಚೇತನ** ವೆಂದು ಪ್ರಾರಂಭಿಸಿದ ವಾಕ್ಯದಲ್ಲಿ ಅಚೇತನದಲ್ಲೇ ಶುದ್ಧ ಸತ್ವವನ್ನು ಸೇರಿಸಿ ಹೇಳಿರುತ್ತಾರೆಂದು ಮುಂದಿನ ವಾಕ್ಯದಿಂದ ಬೋಧಿಸುತ್ತಾರೆ.

ಇಪ್ಪಡಿ – ಈಮೇಲೆ ಶಾಸ್ತ್ರಪ್ರಮಾಣಬಲದಿಂದ ಉಪಪಾದಿಸಿದ ರೀತಿಯಲ್ಲ, ಸ್ವಯಂಪ್ರಕಾಶವಾದ ಶುದ್ಧಸತ್ವ ದ್ರವ್ಯವನ್ನೂ, **ಜ್ಞಾತೃತ್ವಮಿಲ್ಲಾಮ್ಯೆಯಾಲೆ** – ಜ್ಞಾನಕ್ಕೆ ಆಶ್ರಯವಲ್ಲದೆ ಏನೊಂದನ್ನೂ ತಿಳಿಯಲಾರದಾದುದರಿಂದ,

ಇವ್ವಚೇತನಜ್ಗಳ್ ಮೂನ್ರುಕ್ಕುಮ್ ಪ್ರವೃತ್ತಿಯಾವುದು? ಈಶ್ವರಸಜ್ಕಲ್ಪಾನುರೂಪಜ್ಗಳಾನ ವಿಚಿತ್ರಪರಿಣಾಮಾದಿಗಳ್.

ತ್ರಿವಿಧಾಚೇತನಜ್ಗಳೆನ್ರು – ಶ್ರೀ ಭಾಷ್ಯಕಾರಸೂಕ್ತಿಯಲ್ಲಿ ಮೂರು ಅಚೇತನಗಳೆಂಬವಾಗಿ, **ಶೇರಕ್ಕೊತ್ತದು** – ಪೋಣಿಸಿ ಎಂದರೆ ಜೋಡಿಸಿ ಹೇಳಿರುವದು. ಈ ಮೂರು ಅಚೇತನಗಳ್ಯಾವುವೆಂದರೆ ಹಿಂದೆಯೇ ಪ್ರಕೃತಿ, ಕಾಲ, ಶುದ್ಧಸತ್ವವೆಂದು ಅಪ್ಪಣೆ ಕೊಡಿಸಿರುತ್ತಾರೆ. ಆದರೆ ಧರ್ಮಭೂತಜ್ಞಾನವೂ ಅಚೇತನವಾದರೂ ಏಕೆ ನಾಲ್ಕು ಅಚೇತನವೆಂದು ಹೇಳಲಿಲ್ಲವೆಂಬುವದಕ್ಕೆ ಆತ್ಮನೊಂದಿಗೇನೇ ಯಾವಾಗಲೂ ಇರುವದಾಮದರಿಂದ ಅದರಲ್ಲೇ ಅಂತರ್ಭೂತವಾದುದರಿಂದ ಪ್ರತ್ಯೇಕಿಸಿ ಹೇಳಲಿಲ್ಲವು.

ಆದುದರಿಂದ ಅಚೇತನ ವಸ್ತುಗಳು ನಾಲ್ಕು :—

(1) ಪ್ರಕೃತಿ, (2) ಕಾಲ, ಇವೆರಡೂ ಜಡದ್ರವ್ಯಗಳು.

(3) ಧರ್ಮಭೂತಜ್ಞಾನ, (4) ಶುದ್ಧಸತ್ವವು, ಇವೆರಡೂ ಸ್ವಯಂಪ್ರಕಾಶವುಳ್ಳ ದ್ರವ್ಯಗಳು. ಆದುದರಿಂದ ಅಜಡ ದ್ರವ್ಯಗಳು.

ಹೀಗೆ ಈ ನಾಲ್ಕು ಅಚೇತನಗಳ ಸ್ವರೂಪವನ್ನು ಪದೇಶಿಸಿದರು. ಅನಂತರ ಅವುಗಳ ಸ್ಥಿತಿವಿಷಯವಾಗಿ ಹೇಳಬೇಕಾಗಿತ್ತು. ಆದರೆ ಹಿಂದೆಯೇ ನಿತ್ಯವಸ್ತುಗಳು ನಿತ್ಯಗಳಾಗಿರಬೇಕೆಂದು ಸರ್ವೇಶ್ವರನು ಸಜ್ಕಲ್ಪಿಸಿರುತ್ತಾನೆಂದು ಹೇಳಿದನಂತರ ಆ ಸಂದರ್ಭದಲ್ಲಿ ಇನ್ನೇನನ್ನೂ ಹೇಳತಕ್ಕದ್ದಿಲ್ಲವೆಂದು ಭಾವಿಸಿ, ಮುಂದೆ ಅವುಗಳ ಪ್ರವೃತ್ತಿಯನ್ನು ತಿಳಿಸುತ್ತಾರೆ.

ಇವ್ವಚೇತನಜ್ಗಳ್ ಮೂನ್ರುಕ್ಕುಮ್ – ಈ ಅಚೇತನಗಳಾದ ಮೂರಕ್ಕೂ ಎಂದರೆ ತ್ರಿಗುಣ, ಕಾಲ, ಶುದ್ಧಸತ್ವಗಳಿಗೆ, **ಪ್ರವೃತ್ತಿಯಾವುದು?** – ಪ್ರವೃತ್ತಿಯು ಯಾವದು? **ಈಶ್ವರಸಜ್ಕಲ್ಪಾನುರೂಪಜ್ಗಳಾನ** – ಸರ್ವೇಶ್ವರನ ಸಜ್ಕಲ್ಪಕ್ಕನುಗುಣವಾದ ವಿಚಿತ್ರವಾದ ಪರಿಣಾಮವೇ ಮೊದಲಾದವುಗಳು. ಅಚೇತನ ದ್ರವ್ಯವಾಯಿತಲ್ಲಾ ಅವಕ್ಕೆ ಪ್ರವೃತ್ತಿಯುಂಟೋ ಎಂದರೆ, ಸರ್ವೇಶ್ವರನ ಸಜ್ಕಲ್ಪಾನುಸಾರವಾಗಿ ಎಂದರೆ ಪರಿಣಾಮಗಳನ್ನು ಹೊಂದುವುದೇ ಪ್ರವೃತ್ತಿ ಎಂದು ವ್ಯಕ್ತಪಡಿಸುತ್ತಾರೆ. ಆ ಪರಿಣಾಮಗಳಾದರೋ ಬಹು ವಿಚಿತ್ರವಾದವು. ಹುಲ್ಲೇ ಹಾಲಾಗಿ ಅನಂತರ ಮೊಸರಾಗಿ, ಅದರ ಭಾಗಗಳು ಬೆಣ್ಣೆ ತುಪ್ಪವಾಗಿ ಹೀಗೆ ಇನೇ ಮೊದಲಾದ ಪರಿಣಾಮಗಳು ಬಹು ವಿಚಿತ್ರವಾದವೆಂಬ ಭಾವನೆ ಇಲ್ಲಿ ಆದಿಪದದಿಂದ ಇತರ ವಿಕಾರಗಳಾದ ಅವಸ್ಥೆಯ ವಿಕಾರಗಳು ಹೇಳಲ್ಪಟ್ಟವು. ವಿಕಾರಗಳು ಯಾವುವೆಂದರೆ, ಜಾಯತೇ, ನಶ್ಯತೇ, ಪರಿಣಮತೇ, ಅವತಿಷ್ಠತೇ, ಸಪ್ಯತಿ ಎಂದು ಹೇಳಿರುವ ಹಾಗೆ

ತ್ರಿಗುಣದ್ರವ್ಯಸ್ಯ ಸ್ವರೂಪಭೇದಕಥನಮ್.

ಇವಕ್ಕಿಲ್ ತ್ರಿಗುಣದ್ರವ್ಯತ್ತುಕ್ಕು ಸ್ವರೂಪಭೇದಂ ಗುಣತ್ರಯಾಶ್ರಯತ್ವಂ. ಸತತಪರಿಣಾಮಶೀಲಮಾನ ಇದ್ದ್ರವ್ಯತ್ತುಕ್ಕು ಸತ್ವರಜಸ್ತಮಸ್ಸುಕ್ಕಳಿನ್ಯೋನ್ಯಂ ಸಮಮಾನಪೋದು ಮಹಾಪ್ರಳಯಂ; ವಿಷಮಾನಪೋದು ಸೃಷ್ಟಿಸ್ಥಿತಿಗಳ್.

ಹುಟ್ಟುವದು, ವೃದ್ಧಿಹೊಂದುವದು, ಪರಿಣಾಮಹೊಂದುವದು, ಕ್ಷೀಣವಾಗುವದು ನಾಶಹೊಂದುವದು, ಈ ವಿಕಾರಗಳಿಲ್ಲಾ **" ಅಪಕ್ಷಯ ವಿನಾಶಾಭ್ಯಾಂ ಪರಿಣಾಮರ್ಧಿಜನ್ಮಭಿಃ "** ಎಂಬ ಶ್ಲೋಕಾರ್ಧದಲ್ಲಿ ಶ್ರೀ ಪರಾಶರರು ಸಙ್ಗ್ರಹಿಸಿರುತ್ತಾರೆ. ಇಲ್ಲಿ ನಾಶಹೊಂದುವದು ಎಂಬುವದರಿಂದ ಅವಸ್ಥಾನಾಶವೇ ವಿನಾ ದ್ರವ್ಯನಾಶವಿಲ್ಲವು. ಅಜೀತನದ್ರವ್ಯವೆಲ್ಲಾ ನಿತ್ಯವು. ಅವಸ್ಥೆಯು ಅನಿತ್ಯವೆಂದು ಹೇಳುವದಕ್ಕೆ ಬದಲಾಗಿ ಬೌದ್ಧನು ವಸ್ತುವು ಕ್ಷಣಿಕವೆಂದೂ, ಶಾಂಕರರು ಮಿಥ್ಯೆಯೆಂದೂ ಹೇಳಿದರು. ದ್ರವ್ಯವು ಸ್ಥಿರವು, ಅವಸ್ಥೆಯು ಅನಿತ್ಯವು.

ತ್ರಿಗುಣ ದ್ರವ್ಯದ ಸ್ವರೂಪ ಭೇದವು

ಇವಕ್ಕಿಲ್–ಈ ಮೂರು ಅಜೀತನಗಳಲ್ಲಿ, ತ್ರಿಗುಣದ್ರವ್ಯವಾದ ಪ್ರಕೃತಿ ಅಥವಾ ಪ್ರಧಾನವೆಂಬ ದ್ರವ್ಯಕ್ಕೆ, ಸ್ವರೂಪದಲ್ಲಿರುವ ಭೇದವು, **ಗುಣತ್ರಯಾಶ್ರಯತ್ವಂ**–ಮೂರು ಗುಣಗಳಾದ ಸತ್ವರಜಸ್ತಮೋ ಗುಣಗಳಿಗೆ ಆಶ್ರಯವಾಗಿರೋಣವು. ಹೀಗೆ ಈ ಪ್ರಕೃತಿ ಅಥವಾ ಪ್ರಧಾನದಲ್ಲಿ ಮೂರು ಗುಣಗಳಿರುವದರಿಂದಲೇ ಇದಕ್ಕೆ ತ್ರಿಗುಣವೆಂದೇ ಹೆಸರಾಯಿತು. ಶ್ರುತಿಯಲ್ಲೂ **"ಅಜಾಮೇಕಾಂ ಲೋಹಿತ ಶುಕ್ಲಕೃಷ್ಣಾಂ"** (ಶ್ವೇತಳ–೪) ಪ್ರಕೃತಿ ನಿತ್ಯವಾದುದೆಂದೂ, ಅದು ರಜಸ್ಸು, ಸತ್ವ ತಮೋಗುಣಯುಕ್ತವೆಂದೂ ಹೇಳಲ್ಪಟ್ಟಿರುತ್ತದೆ. ಹೀಗೆ ಪ್ರಕೃತಿಯಲ್ಲಿ ಮೂರು ಗುಣಗಳೂ ಉಂಟು, ಕಾಲದಲ್ಲಿ ಯಾವಗುಣವೂ ಇಲ್ಲವು, ಸತ್ವಗುಣ ಕೂಡವಿಲ್ಲವಾದದರಿಂದ **ಸತ್ವಶೂನ್ಯ** ವೆಂದೆನಿಸುತ್ತದೆ. ಶುದ್ಧಸತ್ವದಲ್ಲಿ ಒಂದೇ ಗುಣವು, ಅದು ವಿಲಕ್ಷಣವಾದ ಸತ್ವಗುಣವು ಏಕೆಂದರೆ ರಜಸ್ತಮೋಗುಣಗಳ ಹೇಯ ಸಂಬಂಧವೇ ಇಲ್ಲದಿರುವದು.

ಸತತ ಪರಿಣಾಮ ಶೀಲಮಾನ – " ಅಚೇತನಾ ಪರಾರ್ಥಾಚನಿತ್ಯಾ ಸತತ ವಿಕ್ರಿಯಾ" ಎಂಬ ಪ್ರಮಾಣದಲ್ಲಿ (೪೩೩ ನೇ ಪುಟ ನೋಡಿ) ಹೇಳಿರುವ ಹಾಗೆ ಯಾವಾಗಲೂ ಪರಿಣಾಮವನ್ನು ಹೊಂದುವ ಸ್ವಭಾವವುಳ್ಳ, **ಈ ದ್ರವ್ಯತ್ತು**

ಗುಣವೈಷಮ್ಯಮುಳ್ಳ ಪ್ರದೇಶತ್ತಿಲೆ ಮಹದಾದಿ ವಿಕಾರಜ್ಗಳ್.

ಇದಿಲ್ ವಿಕೃತಮಲ್ಲಾದ ಪ್ರದೇಶತ್ತೈಯುಮ್, ವಿಕೃತಮಾನ ಪ್ರದೇಶತ್ತೈಯುಮ್, ಕೂಡಪ್ರಕೃತಿ ಮಹದಹಂಕಾರ ತನ್ಮಾತ್ರ ಭೂ

ಕ್ಕು – ಈ ತ್ರಿಗುಣ ದ್ರವ್ಯಕ್ಕೆ, **ಸತ್ವರಜಸ್ತಮಸ್ಸುಕ್ಕಳ್ ಅನ್ಯೋನ್ಯಂ ಸಮಮಾನಪೋದು** – ಈ ಮೂರುಗುಣಗಳೂ ಪರಸ್ಪರ ಸಮಪರಿಣಾಮದಲ್ಲಿ ಸೇರಿರುವಾಗ, ಮಹಾಪ್ರಳಯವು ಪ್ರಾಪ್ತವಾಗುತ್ತದೆ, **ವಿಷಮಮಾನಪೋದು** – ಸೇರುವ ಪರಿಮಾಣದಲ್ಲಿ ಹೆಚ್ಚುಕಡಿಮೆಯುಂಟಾದಾಗ, **ಸೃಷ್ಟಿಸ್ಥಿತಿಗಳ್**–ಸೃಷ್ಟಿಸ್ಥಿತಿಗಳು ಪ್ರಾಪ್ತವಾಗುತ್ತವೆ.

ಗುಣವೈಷಮ್ಯಮುಳ್ಳ ಪ್ರದೇಶತ್ತಿಲೆ–ಯಾವ ಸ್ಥಳದಲ್ಲಿ ಗುಣವೈಷಮ್ಯ ಭಾವವು ಎಂದರೆ ಈ ಮೂರುಗುಣಗಳಿಗೆ ಹೆಚ್ಚುಕಡಿಮೆಯುಳ್ಳ ಭಾವವು ಸಂಭವಿಸುತ್ತದೋ ಆ ಸ್ಥಳದಲ್ಲಿ ಮಾತ್ರ, **ಮಹದಾದಿವಿಕಾರಜ್ಗಳ್** – ಪ್ರಕೃತಿ ಮಹತ್ತಾಗುವದು, ಮಹತ್ ಅಹಂಕಾರವಾಗುವದು, ಅಹಜ್ಕಾರದಿಂದ ತನ್ಮಾತ್ರೆ ಮುಂತಾದವು ಆಗುತ್ತವೆ ಎಂಬ ಭಾವವು.

ಮುಂದೆ ಈ ತ್ರಿಗುಣವು ಮಹದಾದಿ ಭೇದಗಳನ್ನು ಹೊಂದುವ ಕ್ರಮವನ್ನು ಜೋಧಿಸುತ್ತಾರೆ. ಸರ್ವೇಶ್ವರನ ಸಜ್ಕಲ್ಪಮಹಿಮೆಯಿಂದ ಸೃಷ್ಟಿಯಾಗುವ ಸಂದರ್ಭದಲ್ಲಿ ಈ ಗುಣಗಳ ಸಮಭಾವವು ಹೋಗಿ, ಯಾವುದಾದರೂ ಹೆಚ್ಚುಕಡಮೆಯಾಗಿ, ವಿಷಮಭಾವವನ್ನು ಹೊಂದಿದರೆ ಸೃಷ್ಟಿಯೂ, ಸ್ಥಿತಿಯೂ ಪ್ರಾಪ್ತವಾಗುತ್ತವೆ. ಈ ಸೃಷ್ಟಿಯಲ್ಲಿ ಪ್ರಕೃತಿ ಎಲ್ಲವೂ ಮಹತ್ತಾಗಿ, ಮಹತ್ತೆಲ್ಲವೂ ಅಹಂಕಾರವಾಗಿ, ಹೀಗೆ ಪರಿಣಾಮಗಳು ಪ್ರಾಪ್ತವಾದರೆ ೨೪ ತತ್ವಗಳು ಹೇಗಾಗುತ್ತವೆ ಎಂಬ ಸಂದೇಹಪರಿಹಾರಕ್ಕಾಗಿ, ಹಾಗೆ ಪ್ರಕೃತಿಯೆಲ್ಲವೂ ಮಹತ್ತಾಗುವದಿಲ್ಲವೆಂದೂ, ಅದರ ಒಂದು ಭಾಗಮಾತ್ರ ಮಹತ್ತಾಗುತ್ತದೆಂದೂ, ಹಾಗೆಯೇ ಮಹತ್ತಿನ ಎಲ್ಲಾ ಭಾಗವೂ ಅಹಂಕಾರವಾಗುವುದಿಲ್ಲವೆಂದೂ, ಆ ಮಹತ್ತಿನ ಒಂದು ಭಾಗ ಮಾತ್ರವೇ ಅಹಂಕಾರವಾಗುತ್ತದೆಂದೂ, ಹೀಗೆ ೨೪ ತತ್ವಗಳಾಗುತ್ತದೆಂದೂ ಅಪ್ಪಣೆ ಕೊಡಿಸುತ್ತಾರೆ.

ಇದಿಲ್ – ಈ ತ್ರಿಗುಣದಲ್ಲಿ, **ವಿಕೃತಮಲ್ಲಾದಪ್ರದೇಶತ್ತೈಯುಮ್**–ಹೀಗೆ ವಿಕಾರ ಹೊಂದದೇ ಇರುವ ಭಾಗವನ್ನೂ, ಅಂತಹವನ್ನೂ, **ವಿಕೃತಮಾನ ಪ್ರದೇಶತ್ತೈಯುಮ್** – ವಿಕಾರ ಹೊಂದಿದ ಭಾಗವನ್ನೂ ಎಂದರೆ ಪ್ರತಿಯೊಂದು ವಿಕಾರಹೊಂದಿದ ಭಾಗವನ್ನೂ ಒಂದು ಭಾಗವು ವಿಕಾರ ಹೊಂದದೆ ಇರುವ

ತೇಂದ್ರಿಯಜ್ಞಳೆನ್ರು ಇರುಪತ್ತುನಾಲು ತತ್ವಜ್ಞಳಾಕ ಶಾಸ್ತ್ರಜ್ಞಳ್ವಕುತ್ತು ಚ್ಯೊಲ್ಲುವ್.

ದಾಗಿಯೂ, ಇನ್ನೊಂದು ಭಾಗವು ವಿಕಾರ ಹೊಂದುವದರಿಂದಲೂ ಪ್ರಕೃತಿ, ಮಹತ್, ಅಹಂಕಾರ, ಪಂಚತನ್ಮಾತ್ರ, ಪಂಚಭೂತ, ಮನಸ್ಸೂ ಸೇರಿ, ಏಕಾದಶೇನ್ದ್ರಿಯಗಳು, ಹೀಗೆ ೨೪ ಅಚಿತ್ತತ್ವಗಳೆಂದು **ವಕುತ್ತು ಶೊಲ್ಲುವ್** – ಶಾಸ್ತ್ರಗಳು ವಿಭಾಗಿಸಿ ಹೇಳುವವು, ಪ್ರಕೃತಿಯೆಲ್ಲವೂ ಮಹತ್ತಾಗುವುದಿಲ್ಲವು, ಸ್ವಲ್ಪ ಭಾಗ ಪ್ರಕೃತಿಯಾಗಿದ್ದುಕೊಂಡೇ, ಸ್ವಲ್ಪಭಾಗ ಮಹತ್ತಾಗುತ್ತದೆ. ಆ ಮಹತ್ತಿನಲ್ಲಿ ಸ್ವಲ್ಪಭಾಗ ಮಹತ್ತಾಗಿಯೇ ಇದ್ದು ಮಿಕ್ಕ ಭಾಗ ಅಹಂಕಾರವಾಗುತ್ತದೆ. ಆದುದರಿಂದ ೨೪ ತತ್ವಗಳೆಂಬ ಸಂಖ್ಯೆಗೆ ಏನೊಂದೂ ನ್ಯೂನತೆಯಿಲ್ಲವೆಂಬ ಭಾವವು. ಈ ಅಭಿಪ್ರಾಯವನ್ನೇ ಶ್ರೀ ಪರಾಶರರು " **ಮಹೀಘಟತ್ವಂ ಘಟತಃ ಕಪಾಲಿಕಾ ಕಪಾಲಿಕಾ ಚೂರ್ಣರಜಸ್ತತೋಣುಃ** " (ವಿ. ಪು. 2. 12. 42) ಎಂಬ ಶ್ಲೋಕದಲ್ಲಿ ಉಪಪಾದಿಸಿರುತ್ತಾರೆ. ಎಲ್ಲಾ ಭೂಮಿಯು ಘಟವಾಗುವದಿಲ್ಲವು; ಅದರ ಸ್ವಲ್ಪಭಾಗದಿಂದ ಘಟಗಳಾಗುತ್ತವೆ. ಅವುಗಳಲ್ಲಿ ಕೆಲವು ಕಪಾಲಿಕಾವಾಗಬಹುದು. ಈ ಕಪಾಲಿಕಾ ಕೆಲವುಗಳಿಂದ ಚೂರ್ಣವು ಅಚೂರ್ಣದ ಸ್ವಲ್ಪಭಾಗದಿಂದ ರಜಸ್ಸೂ, ಅದರಿಂದ ಅಣುವೂ ಹೀಗೆ ಪರಿಣಾಮಗಳನ್ನು ಹೊಂದಬಹುದು. ಇವೆಲ್ಲವೂ ಇರುವದರಿಂದ ಆಯಾ ವ್ಯವಹಾರಗಳು ಲೋಕದಲ್ಲಿ ಉಂಟು. ಹಾಗೆಯೇ ಪ್ರಕೃತಿಯ ಸ್ವಲ್ಪಭಾಗವೂ ಮಹತ್ತಾಗಿಯೂ, ಮಹತ್ತಿನ ಸ್ವಲ್ಪಭಾಗವೂ ಅಹಜ್ಜಾತರವಾಗಿಯೂ ಹೀಗೆ ವಿಕಾರಹೊಂದುವದರಿಂದ ೨೪ ತತ್ವಗಳುಂಟೆಂಬ ಭಾವವು. ಅವು ಯಾವುವೆಂದರೆ :—

೧. ಪ್ರಕೃತಿ ೨. ಮಹತ್ತು. ೩. ಅಹಜ್ಜಾತರ, ಳ ರಿಂದ ಲ ಶಬ್ದ ಸ್ಪರ್ಶ ರೂಪ ರಸಗಂಧ, ತನ್ಮಾತ್ರೆಗಳಾದ ಪಞ್ಚತನ್ಮಾತ್ರೆಗಳು, ೧೪ ರಿಂದ ೧೮ ಚಕ್ಷುಸ್ಸು, ಶ್ರೋತ್ರ, ಜಿಹ್ವೆ, ನಾಸಿಕಾ, ತ್ವಕ್ ಎಂಬ ಪಞ್ಚಜ್ಞಾನೇಂದ್ರಿಯಗಳು, ೧೯ ರಿಂದ ೨೩ ಮುಖ, ಪಾದ, ಪಾಣಿ, ಪಾಯು, ಉಪಸ್ಥ ಎಂಬ ಪಞ್ಚ ಕರ್ಮೇನ್ದ್ರಿಯಗಳು ೨೪ ಮನಸ್ಸು. ಹೀಗೆ ೨೪ ತತ್ವಗಳು. ಪಞ್ಚ ಜ್ಞಾನೇನ್ದ್ರಿಯಗಳೂ ಪಞ್ಚ ಕರ್ಮೇನ್ದ್ರಿಯಗಳೂ ಮನಸ್ಸೂ ಸೇರಿ ಏಕಾದಶೇನ್ದ್ರಿಯಗಳೆಂಬ ವ್ಯವಹಾರವುಂಟು ಸಾಂಖ್ಯರು ಹೀಗೆ ಅಚಿತ್ತತ್ವಗಳು ೨೪ ಎಂದು ವಿಭಾಗಿಸಿ ಹೇಳಿರುತ್ತಾರೆ. ಅದರೆ ಕೆಲವು ಸ್ಥಳಗಳಲ್ಲಿ ಶ್ರುತಿಯು ಪ್ರಕೃತಿಭೇದಗಳನ್ನು ತಮಸ್ಸು, ಅಕ್ಷರ, ಅವ್ಯಕ್ತವೆಂಬದಾಗಿ ಹೇಳಿರುವದರಿಂದ ಅಚಿತ್ತತ್ವ ಸಂಖ್ಯೆಯನ್ನು ಹೆಚ್ಚಾಗಿಯೂ, ಇನ್ನು ಕೆಲವು ಸ್ಥಳಗಳಲ್ಲಿ ಕಮ್ಮಿಯಾಗಿಯೂ ಹೇಳಿರುತ್ತದೆ ಎಂದು ಹೇಳಿ ಅಂತಹ

ಶಿಲವಿವಕ್ಷಾ ವಿಶೇಷಜ್ಞಳಾಲೆ ಓರೋರು ವಿಡಜ್ಞಳಿಲೆ ತತ್ವಜ್ಞಳೈ ಯೇರವುಮ್ ಶುರಜ್ಞವುಮ್ ಶೊಲ್ಲಾನಿರ್ಕ್ಕುಮ್. ಇತ್ತತ್ವಜ್ಞಳಿಲ್ ಅವಾ ನ್ತರವಕುಪ್ಪುಕ್ಕುಳುಮ್ ಅವಟ್ರಿಲ್ ಅಭಿಮಾನ ದೇವತೈಗಳು ಮು

ಸಂಖ್ಯಾವ್ಯತ್ಯಾಸಗಳಿಗೆ ಪ್ರಕೃತಿ ಪ್ರಭೇದ ಹೇಳುವದೇ ಕಾರಣವೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.

ಶಿಲವಿವಕ್ಷಾ ವಿಶೇಷಜ್ಞಳಾಲೆ – ಕೆಲವು ವಿವೇಚನೆ ಮಾಡಿ ಹೇಳುವ ವಿಶೇಷದಿಂದ, **ಓರೋರು ವಿಡಜ್ಞಳಿಲೆ** – ಒಂದೊಂದು ಸ್ಥಳಗಳಲ್ಲಿ, **ಏರುವಮ್ ಶುರಜ್ಞವಮ್** – ಹೆಚ್ಚನ್ನೂ ಕಮ್ಮಿಯನ್ನೂ ಎಂದರೆ ೨೪ ತತ್ವಗಳಿಗಿಂತ ಹೆಚ್ಚು ಸಂಖ್ಯೆಯನ್ನೂ, ಅದಕ್ಕಿಂತ ಕಮ್ಮಿಸಂಖ್ಯೆಯನ್ನೂ, **ಶೊಲ್ಲಾನಿರ್ಕ್ಕುಮ್**– ಹೇಳುತ್ತಿರುವದು; ಹೇಗೆಂದರೆ **ಮಹಾನವ್ಯಕ್ತೆ ಲೀಯತೇ, ಅವ್ಯಕ್ತ ಮಕ್ಷರೇ ಲೀಯತೇ, ಅಕ್ಷರಂತಮಸಿಲೀಯತೇ** ಎಂಬ ಸ್ಥಳಗಳಲ್ಲಿ ಶ್ರುತಿಯು ಪ್ರಕೃತಿಯ ಸೂಕ್ಷ್ಮಾವಸ್ಥೆಯ ಪ್ರಭೇದಗಳನ್ನು ಹೇಳುವ ಸಂದರ್ಭಗಳುಂಟು. ಇವುಗಳನ್ನೆಲ್ಲಾ ಸೇರಿಸಿದರೆ ತತ್ವಗಳ ಸಂಖ್ಯೆಯು ಹೆಚ್ಚಬಹುದು. ಮತ್ತು **"ಆತ್ಮನಃ ಆಕಾಶ ಸಮ್ಭೂತಃ ಆಕಾಶಾದ್ವಾಯುಃ"** ಎಂಬಲ್ಲಿ ಆಕಾಶವನ್ನೇ ಮೊದಲು ಹೇಳಿರುವು ದರಿಂದ, ತತ್ವ ಸಂಖ್ಯೆಯು ಕಮ್ಮಿಯಾಗಬಹುದು. ಈ ಸಂದರ್ಭದಲ್ಲಿ ಪ್ರಕೃತಿಯು ಆಕಾಶಕ್ಕಿಂತ ಸೂಕ್ಷ್ಮವಾದ ಅವಸ್ಥೆಗಳನ್ನು ಪರಿಗಣಿಸಲಿಲ್ಲವೆಂಬ ತಾತ್ಪರ್ಯವೇ ಏನಾ, ತತ್ವಸಂಖ್ಯೆಯೇ ಕಮ್ಮಿ ಎಂಬ ಭಾವವಲ್ಲವು. ಸರಿಯಾಗಿ ಪರಿಶೀಲಿಸಿ ನೋಡಿದರೆ, ೨೪ ತತ್ವಗಳೆಂದು ಹೇಳುವವೇ ಯುಕ್ತವೆಂಬ ಭಾವವು.

ಇತ್ತತ್ವಜ್ಞಳಿಲ್ – ಈ ೨೪ ತತ್ವಗಳಲ್ಲಿ, **ಅವಾನ್ತರ ವಕುಪ್ಪುಕ್ಕು ಳುಮ್** – ತತ್ವಗಳು ಕ್ರಮಕ್ರಮವಾಗಿ ಹೊಂದುವ ವಿಕಾರ ಭೇದಗಳನ್ನೂ, **ಅವ ತ್ತಿಲ್ ಅಭಿಮಾನ ದೇವತೈಗಳುಮ್** – ಅವುಗಳ ಅಭಿಮಾನ ದೇವತೆಗ ಳನ್ನೂ **ಅವ್ವೋವುಪಾಸನಾಧಿಕಾರಿಗಳುಕ್ಕು** – ಆಯಾ ಉಪಾಸನಾಧಿಕಾರಿಗಳು **ಅರಿಯವೇಣುಮ್** – ತಿಳಿಯತಕ್ಕ ವಿಷಯವಾಗಿವೆ; ಎಂದರೆ ಇಲ್ಲಿ ಹೇಳತಕ್ಕ ಆವಶ್ಯಕವಿಲ್ಲವೆಂಬ ಭಾವವು. ಹಾಗಾದರೆ ತತ್ವಗಳು ೨೪ ಎಂದು ಇಲ್ಲಿ ಏಕೆ ಹೇಳಲ್ಪಟ್ಟಿತೆಂದರೆ, ಮುಂದಿನ ವಾಕ್ಯದಿಂದ ಅದಕ್ಕೆ ಸಮಾಧಾನವನ್ನು ಹೇಳು ತ್ತಾರೆ. ಎರಡು ಕಾರಣಗಳಿಂದ ಈ ತತ್ವಗಳು ೨೪ ಎಂದು ತಿಳಿಯುವುದು ಮುಖ್ಯವು. ಅವು ಯಾವುವೆಂದು ತಿಳಿಸುತ್ತಾರೆ. **ಆತ್ಮಾಕ್ಕಳುಕ್ಕು** – ಜೀವಾತ್ಮರಿಗೆ, **ಅವತ್ತಿಲ್ ಕಾಟ್ಟಿಲ್** – ಆ ೨೪ ತತ್ವಗಳಿಗಿಂತ, **ವ್ಯಾವೃತ್ತಿಯರಿಗೈ**– ವಿಲಕ್ಷಣ ಭಾವ ಉಂಟೆಂದು ತಿಳಿಯುವದು. ಹೀಗೆ ಕ್ರಮಕ್ರಮವಾಗಿ ವಿಕಾರಗ

ವ್ಯೋ ವುಪಾಸನಾಧಿಕಾರಿಗಳು ಕ್ಕರಿಯ ವೇಣುಮ್. ಆತ್ಮಾಕ್ಕಳುಕ್ಕು ಅವತ್ತಿಲ್ ಕಾಟ್ಪಲ್ ವ್ಯಾವೃತ್ತಿಯರಿಗೈ ಇಜಿಕ್ಕೀ ನಮುಕ್ಕು ಪ್ರಧಾನಮ್. ಇವೈ ಯೆಲ್ಲಾಮ್ ಸರ್ವೇಶ್ವರನುಕ್ಕು ಅಸ್ತ್ರ ಭೂಷಣಾದಿ ರೂಪಜ್ಞಾಯ್ ನಿರ್ಕುಂ ನಿಲೈಯೈ,

---

ಳನ್ನು ಹೊಂದುವ ಸ್ವಭಾವವು ಈ ತ್ರಿಗುಣಕ್ಕೆ ಉಂಟೇ ವಿನಾ, ಜೀವಾತ್ಮನಿಗೆ ಇಂತಹ ವಿಕಾರಾವಸ್ಥೆ ಇಲ್ಲೆಂದೂ, ಆತನು ನಿತ್ಯನು, ಪರಿಶುದ್ಧನು ಎಂದು ತಿಳಿಯುವದು **ಇಜಿಕ್ಕೀ ನಮುಕ್ಕು ಪ್ರಧಾನಮ್** – ಇಲ್ಲಿ ನಮಗೆ ಮುಖ್ಯವು. ಈ ಆತ್ಮನಿಗೆ ಎಲ್ಲಿಯವರಿಗೆ ಪ್ರಕೃತಿ ಸಂಬಂಧವಿರುತ್ತದೆಯೋ, ಅದುವರೆವಿಗೂ ಈತನಿಗೆ ದೇಹಾತ್ಮಭ್ರಮವೂ, ಸ್ವತಂತ್ರಾತ್ಮಭ್ರಮವೂ, ಜೀವೇಶ್ವೈಕ್ಯಭ್ರಮವೂ, ಸುಖದುಃಖಾದಿಭೋಗಗಳೂ, ಇನ್ನೂ ಸಮಸ್ತ ಅಜ್ಞಾನಗಳೂ ತಪ್ಪಿದ್ದಲ್ಲವು. **ಇಜಿಕ್ಕೀನಮುಕ್ಕು** ಎಂದು ಹೇಳಿರುವದರಿಂದ, ನಾವುಗಳಾದರೋ ಉಪಾಸನಾಧಿಕಾರಿಗಳಲ್ಲವು. ಅದಕ್ಕೆ ಅರಕ್ತರಾಗಿರುವ ಪ್ರಪದನಾನುಷ್ಠಾನ ಮಾಡಿದ ಮೋಕ್ಷಾರ್ಥಿಗಳು. ನಾವುಗಳು ಅವುಗಳಿಂದ ಬಿಡುಗಡೆಯನ್ನು ಹೊಂದಬೇಕಾದುದರಿಂದ ಅಂತಹ ಹೇಯವಾದ ಅಸಾರ ವಿಕಾರಿದ್ರವ್ಯಗಳಿಗಿಂತ ನಾವು ವಿಲಕ್ಷಣರೆಂದು ತಿಳಿದರೆ, ಅಂತಹ ಹೇಯ ಸಂಬಂಧವನ್ನು ಕಳಿದುಕೊಳ್ಳಲು ಸ್ವಪ್ರಯತ್ನವನ್ನೂ ಮಾಡುವೆವು ಎಂಬ ಭಾವವು. ಈ ಪ್ರಕೃತಿ ವಿಕಾರಗಳಿಂದ ಈ ಜೀವನು **ಸನ್ನಿರುದ್ಧ**ನಾಗಿ, ತಡೆಯಲ್ಪಟ್ಟವನಾಗಿ, ಆ ಪ್ರಕೃತಿಯೊಂದಿಗೆ ಮೋಹಿಸಿ ಭೋಗಿಸುತ್ತಾನೆಂದೂ, ಮುಕ್ತನಾದವನು ಇಂತಹ ಭ್ರಾಮಕದಿಂದ ಬಿಡುಗಡೆಯನ್ನು ಹೊಂದುವನೆಂದೂ, ಶ್ವೇತಾಶ್ವರದಲ್ಲಿ ಹೇಳಿರುತ್ತದೆ. ಇನ್ನೊಂದು ಮುಖ್ಯ ಕಾರಣವನ್ನು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. ಅರ್ಚಾವತಾರಿಯಾದ ಸ್ವಾಮಿಯು ಮುಮುಕ್ಷುವಿನಿಂದ ಮುಖ್ಯವಾಗಿ ಸೇವ್ಯನು. ಆತನು ತನಗೆ ಅಪೃಥಕ್ಸಿದ್ಧ ವಿಶೇಷಣಗಳಾದ ಈ ೨೪ ತತ್ವಗಳನ್ನೂ ೨೫ನೇ ತತ್ವವಾದ ಜೀವನನ್ನೂ ಅಸ್ತ್ರ ಭೂಷಣಾದಿಗಳನ್ನಾಗಿ ಧರಿಸಿ ನಮಗೆ ಸೇವೆಯನ್ನು **ಈಯುವನೆಂ**ದು ತಿಳಿಯುವದು ಮುಖ್ಯವು. ಆದುದರಿಂದಲೂ ಈ ತತ್ವಗಳನ್ನೆಲ್ಲಾ ತಿಳಿಯತಕ್ಕದ್ದಾವಶ್ಯವು. ಇದೂ ಅಲ್ಲದೆ ಜೀವಾತ್ಮನೇ ೨೫ನೇ ತತ್ವವು. ಆತನೂ ಈ ಅಸ್ತ್ರಭೂಷಣಾದಿಗಳಲ್ಲೊಬ್ಬನು;ಸರ್ವೇಶ್ವರನ ಕೌಸ್ತುಭರತ್ನನೇ ಜೀವತತ್ವವನ್ನು ಬೋಧಿಸುತ್ತದೆಂದು ಹೇಳಲ್ಪಡುತ್ತದೆ. ಈ ಅಭಿಪ್ರಾಯವು ಈ ಗ್ರಂಥದ ಮಜ್ಞಳಶ್ಲೋಕದಲ್ಲೂ ವಿದಿತವು.

ಇವೈಯೆಲ್ಲಾ – ಈ ತತ್ವಗಳೆಲ್ಲಾ ಸರ್ವೇಶ್ವರನಿಗೆ, ಅಸ್ತ್ರ ಭೂಷಣ ಮೊದಲಾದ ರೂಪಗಳಾಗಿ, ಇಲ್ಲಿ ಆದಿಶಬ್ದದಿಂದ ಶ್ರೀವತ್ಸ ಮೊದಲಾದವು ಹೇಳಲ್ಪಟ್ಟವು.

ಪುರುಡ್ಡ ಮಣಿವರವಾಕ, ಪೊನ್ನಾಮೂಲ । ಪಿರುಕಿರುತಿ ಮರು ವಾಕ, ವೂಱ್ ತಣ್ಡಾಕ । ತ್ತೆರುಣ್ ಮರುಳ್ ವಾಣ್ ಮರ್ಯೆವಾಕ, ವಾಂಕಾರಜ್ಞಳ್ । ಶಾಜ್ಞ್ಞಂ ಶಂಖಾಗ, ಮನಂ ತಿಗರಿಯಾಗ ॥ ಇರುಡೀ ಕಜ್ಞಳೀರೈನ್ದುಂ ಶರಜ್ಞಳಾಕ । ವಿರುಪೂತವಾಲೈ ವನ

ನಿರ್ಕುಂನಿಲೈಯೈ – ಇರುವ ಸ್ಥಿತಿಯನ್ನು, **ಪುರುಡ್ಡಮಣಿವರವಾಕ** ವೆಂಬ ಪಾಶುರದಲ್ಲಿ, **ಎಜ್ಞ್ಞಾರಕಟ್ಟಳೈಯಲೆ** – ತೋರಿಸಿರುವ ಕ್ರಮದಲ್ಲಿ, **ಅರಿಗೈಯು ಚಿತಂ** – ತಿಳಿಯತಕ್ಕದ್ದು, **ಉಚಿತಂ** – ವಿಧಾಯಕವು, ಯೋಗ್ಯವಾದುದು, ಯಾವ ಯಾವ ತತ್ವಗಳೂ ಯಾವ ಯಾವ ಅಸ್ತ್ರಗಳನ್ನಾಗಿಯೂ, ಭೂಷಣಗಳನ್ನಾಗಿಯೂ ಧರಿಸಿ ಅರ್ಚ್ಯಾವತಾರ ರೂಪದಲ್ಲಿ ತನ್ನ ಸೌಲಭ್ಯಾತಿಶಯದಿಂದ ಮನುಜರಿಗೆ ಸೇವೆಯನ್ನೀಯತ್ತಾನೆಂಬುವದು ಪುರುಡ್ಡ ಮಣಿವರವಾಕ ಎಂಬ ಪಾಶುರದಲ್ಲಿ ತಮ್ಮಿಂದ ಉಪಪಾದಿಸಲ್ಪಟ್ಟಿರುತ್ತದೆಂಬ ತಾತ್ಪರ್ಯವು.

ಪುರುಡ್ಡ – ಪುರುಷನು, ಜೀವತತ್ವವು, ಈ ದೇಹನೆಂಬ ಪುರಿಯಲ್ಲಿ ಮಲಗಿರುವನು, ಆದುದರಿಂದ ಪುರುಷನು ಎಂದರೆ ಶರೀರಿ ಎಂಬರ್ಥವು, **ಮಣಿವರವಾಗ** – ಮಣಿಶ್ರೇಷ್ಠವಾದ ಕೌಸ್ತುಭ ಮಣಿಯಾಗಲಾಗಿ, ಸರ್ವೇಶ್ವರನು ಜೀವತತ್ವವನ್ನೆಲ್ಲಾ ಶರೀರವಾಗಿ ಧರಿಸಿರುವನು, ಈ ಅರ್ಚ್ಯಾವತಾರ ರೂಪದಲ್ಲಾದರೋ ಅದನ್ನು ಕೌಸ್ತುಭ ಮಣಿರೂಪದಲ್ಲಿ ಧರಿಸಿರುವನೆಂಬ ಭಾವವು, **ಪೊನ್ನಾ** – ನಾಶರಹಿತವಾದ, ನಿತ್ಯವಾದ, **ಮೂಲ ಪಿರುಕಿರುತಿ** – ಮೂಲಪ್ರಕೃತಿಯು, **ಮರುವಾಗ** – ಚೆನ್ನೆಯಾದ ಶ್ರೀವತ್ಸವೆಂಬ ಮಚ್ಚೆಯಾಗಲು, **ವೂಱ್**–ಮಹತ್ತತ್ವವು, ಇವಕ್ಕೆ ಬುದ್ಧಿಯಿಂದ ವ್ಯವಹಾರ ಉಂಟು, **ತಣ್ಡಾಕ** – ತಣ್ಡು ಎಂದರೆ ದಂಡವು, ಎಂದರೆ ಗದೆಯಾಗಲು, **ತೆರುಳ್ ಮರುಳ್** – ಜ್ಞಾನವು ಮತ್ತು ಅಜ್ಞಾನವು, **ವಾಣ್ ಮುರ್ಕೈಯಾಗ** – ನನ್ಪಕನೆಂಬ ಕತ್ತಿಯೂ ಅವರ ಒರೆಯೂ, ಎಂದರೆ ಕತ್ತಿ ಕತ್ತಿಯನ್ನಿಡುವ ಕೋಶವೂ ಆಗಲು, **ಅಜ್ಞಾರಜ್ಞಳ್** – ಸಾತ್ವಿಕ ಅಹಜ್ಞಾರವು ಮತ್ತು ತಾಮಸ ಅಹಜ್ಞಾರಗಳು, **ಶಾಜ್ಞ್ಞಂ ಶಜ್ಞಾಗ** – ಶಾಜ್ಞ್ಞನೆಂಬಧನುಸ್ಸು ಶಂಖರೂಪವಕ್ರವಾಗಿ ಆಗಲಾಗಿ, ಇಲ್ಲಿ ರಾಜಸಾಹಜ್ಞಾರವು ಸಾತ್ವಿಕತಾಮಸಾಹಜ್ಞಾರಗಳಿಗೆ ಸಹಕಾರಿಯಾಗಿ ಇನ್ನೆರಡೂ ಪರಿಣಮಿಸುವಹಾಗೆ ಮಾಡುತ್ತವೆಯೇ ಏನಾ ತಾಸೀ ಪಾಕ್ಷಾತ್ತ್ಯಾಗಿ ಕಾರಣವಲ್ಲವೆಂದು ತಿಳಿಯತಕ್ಕದ್ದು **ಮನನ್ತಿಗರಿಯಾಗ** – ಮನಸ್ಸು ತತ್ವವು ಚಕ್ರವಾಗಲು, **ಈರೈನ್ದು** – ಎರಡು ಐದಾದ ಎಂದರೆ ಹತ್ತಾದ **ಇರುಡೀಕರಂಗಳುಂ** – ಹೃಷೀಕಗಳು, ಇಂದ್ರಿಯಗಳು, **ಶರಂಗಳಾಗ** – ಬಾಣಗಳಾಗಲು, **ಇರು** – ಎರಡಾದ, **ಭೂತವಾಲೈ** – ಭೂತಗಣವು

ವನಮಾಲೈಯಾಗ, ಕ್ಕರುಡ ನುರುವಾಮರ್ಯೈರ್ಕ ಪೊರೆಳಾಂ ಕ್ಕಣ್ಣ್ಕ
ಕರಿಗಿರಿ ಮೇಲ್ ನಿನ್ರನ್ನೈತ್ತುಂಕ್ಕಾಕ್ಕಿನ್ರಾನೇ ॥
ಎಙ್ಙಾರ ಕಟ್ಪಳೈ ಯಿಲೆ ಯರಿಗೈಯುಚಿತಂ.

ಯಾವುವೆಂದರೆ, ಸೂಕ್ಷ್ಮಸ್ಥೂಲ ಭೂತಗಣಗಳು, ಸೂಕ್ಷ್ಮಭೂತಗಳು ಪಂಚತನ್ಮಾತ್ರೆಗಳೂ ಸ್ಥೂಲಭೂತಗಳಾದ ಪೃಥಿವ್ಯಪ್ತೇಜೋ ವಾಯುರಾಕಾಶಗಳೂ ಇವುಗಳು **ವನಮಾಲೈಯಾಗ** – ವೈಜಯಸ್ತೀ ಎಂಬ ವನಮಾಲೆಯಾಗಲು, ಹೀಗೆತತ್ವಗಳನ್ನೆಲ್ಲಾ ಈ ಈ ರೂಪಗಳಿಂದ ಧರಿಸಿದವನಾಗಿ, **ಕರುಡ** – ಗರುಡನ, **ಉರುವಾಂ** – **"ವೇದಾತ್ಮಾ ವಿಹಗೇಶ್ವರಃ"** ಎಂದು ಹೇಳಿರುವಹಾಗೆ, ದೇಹವಾಗಿರುವ, **ಮರೈಯಿರ್** – ವೇದವ, **ಪೊರುಳಾಂ** – ಪೊರುಳ್ ಎಂದರೆ ಅರ್ಥವು, ಅದುದರಿಂದ, **ಪೊರುಳಾಂ** – ಪ್ರತಿಪಾದ್ಯನಾಗಿರುವ, **ಕಣ್ಣ** – ಶ್ರೀಕೃಷ್ಣನು, ಆತನೇ ಶ್ರೀ ವರದರಾಜ ರೂಪಿಯಾಗಿ, **ಕರಿಗಿರಿಮೇಲೆ** – **ಹ**ಸ್ತಗಿರಿ ಮೇಲೆ, **ನಿನ್ರು** – ನೆಲಸಿದವನಾಗಿ, ಹೇಗೆ ನೆಲಸಿದ್ದಾನೆಂದರೆ ರಕ್ಷ್ಯರಕ್ಷಕ ಭಾವವನ್ನವಲಂಬಿಸಿ ನಿಂತಿರುವವನು; ಜೀವಾತ್ಮನು ರಕ್ಷ್ಯವಸ್ತುವು, ತಾನು ರಕ್ಷಕನು ಎಂಬುವವನ್ನು ಪ್ರದರ್ಶನ ಮಾಡುವದಕ್ಕಾಗಿ ನೆಲಸಿದವನಾಗಿ, **ಅನೈತ್ತು** – ಜಗತ್ತೆಲ್ಲವನ್ನೂ, **ಕಾಕ್ಕಿನ್ರಾನೆ** – ರಕ್ಷಿಸುತ್ತಾನೆ, ಹೇಗೆ ರಕ್ಷಿಸುತ್ತಾನೆಂದರೆ ಅನಿಷ್ಟನಿವೃತ್ತಿ ಇಷ್ಟಪ್ರಾಪ್ತಿರೂಪದಲ್ಲಿ ಸಂರಕ್ಷಿಸುವನೆಂಬ ಭಾವವು.

ಸರ್ವತತ್ವಗಳೂ ಅಸ್ತ್ರಭೂಷಣಾದಿ ರೂಪದಿಂದ ತನ್ನ ಇಷ್ಟಾನುಸಾರ ತಾನು ವಿನಿಯೋಗಿಸುವ ಉಪಕರಣಗಳಾಗಿಯೂ, ಅದರಿಂದ ತಾನು ಸರ್ವೋತ್ಕೃಷ್ಟನಾಗಿರುವ ಅಂಶವನ್ನು ವೇದಗಳು ಹೇಳುವದನ್ನೇ ಉಪಪಾದಿಸಿ ಶ್ರೀ ಪರಾಶರರು ಶ್ರೀ ವಿಷ್ಣುಪುರಾಣದ ಪ್ರಥಮಾಂಶ ೨೨ನೆಯ ಅಧ್ಯಾಯದ ೬೭–೭೬ನೇ ಶ್ಲೋಕಗಳಲ್ಲಿ ಹೇಳಿರುವದೇ ಈ ಅಮೋಘಪಾಶುರಕ್ಕೆ ಪ್ರಮಾಣವಾಗಿರುತ್ತದೆ :—ಹೀಗೆ ಅಸ್ತ್ರಭೂಷಣಾದಿಗಳನ್ನು ಧರಿಸಿ ನಮಗೆ ಸೇವೆಯನ್ನೀಯುವದರಲ್ಲಿ ಸ್ವಾಮಿಯ ಅಭಿಮತವು ನಮಗೆಸರ್ವ ಶ್ರೇಯಸ್ಸನ್ನುಂಟುಮಾಡುವದಕ್ಕಾಗಿ ಎಂಬದಾಗಿ ಜ್ಞಾನಾಗ್ರೇಸರರಾದ ಪರಾಶರ ಮಹರ್ಷಿಗಳು ಹೇಳುತ್ತಾರೆ.

ನಮಸ್ಕೃತ್ವಾ ಪ್ರಮೇಯಾಯ ವಿಷ್ಣವೇ ಪ್ರಭವಿಷ್ಣವೇ ।
ಕಥಯಾಮಿ ಯಥಾಖ್ಯಾತಂ ವಸಿಷ್ಠೇನ ಮಮಾ ಭವತ್ ॥
ಆತ್ಮಾನ ಮಸ್ಯ ಜಗತೋ ನಿರ್ಲೇಪ ಮಗುಣಾಲಯಮ್ ।
ಬಿಭರ್ತಿ ಕೌಸ್ತುಭ ಮಣಿ ಸ್ವರೂಪಂ ಭಗವಾ ಹರಿಃ ॥೬೮॥

ಶ್ರೀವತ್ಸ ಸಂಸ್ಥಾನ ಪರ ಮನನ್ತೇಸ ಸಮಾಶ್ರಿತಂ ।
ಪ್ರಧಾನಂ ಬುದ್ಧಿ ರಧ್ಯಾಸ್ತೇ ಗದಾರೂಪೇಣ ಮಾಧವೇ ॥69॥
ಭೂತಾದಿಮಿಂದ್ರಿಯಾದಿಂಚದ್ರಿಧಾಹಂಕಾರಮಾಶ್ವರಃ।
ಬಿಭರ್ತಿ ಶಙ್ಖರೂಪೇಣ ಶಾರ್ಙ್ಗರೂಪೇಣ ಚ ಸ್ಥಿತಂ ॥70॥
ಚಲ ಸ್ವರೂಪ ಮತ್ಯನ್ತಂ ಜವೇನಾನ್ತರಿತಾ ನಿಲಂ ।
ಚಕ್ರ ಸ್ವರೂಪಂ ಚ ಮನೋ ಧತ್ತೇ ವಿಷ್ಣುಃ ಕರೇಸ್ಥಿ ತಮ್
ಪಞ್ಚರೂಪಾತು ಯಾ ಮೂಲಾ ವೈಜಯನ್ತೀ ಗದಾಭೃತಃ ।
ಸಾಭೂತ ಹೇತು ಸಜ್ಞಾತೋ ಭೂತಮೂಲಾಚ ವೈದ್ವಿಜ॥72
ಯಾನೀನ್ದ್ರಿಯಾಣ್ಯ ಶೇಷಾಣಿ ಬುದ್ಧಿ ಕರ್ಮಾತ್ಮಕಾನಿವೈ ।
ಶರ ರೂಪಾಣ್ಯ ಶೇಷಾಣಿ ತಾನಿಧತ್ತೇ ಜನಾರ್ದನಃ ॥73॥
ಬಿಭರ್ತಿ ಯಚ್ಚಾಸಿವರಮಚ್ಯುತೋತ್ಯನ್ತ ನಿರ್ಮಲಂ ।
ವಿದ್ಯಾಮಯಂತು ಯದ್ ಜ್ಞಾನ ಮವಿದ್ಯಾ ಚರ್ಮ ಸಂಸ್ಥಿತಂ॥
ಇತ್ಥಂ ಪುಮಾ ನ್ಪ್ರಧಾನಂಚ ಬುದ್ಧ್ಯಹಂಕಾರ ಮೇವಚ ।
ಭೂತಾನಿ ಚ ಹೃಷೀಕೇಶೇ ಮನ ಸ್ಸರ್ವೇನ್ದ್ರಿಯಾಣಿ ಚ॥
ವಿದ್ಯಾ ವಿದ್ಯೇಚ ಮೈತ್ರೇಯ ಸರ್ವಮೇತತ್ಸಮಾಶ್ರಿತಂ ॥75॥
ಅಸ್ತ್ರಭೂಷಣ ಸಂಸ್ಥಾನ ಸ್ವರೂಪಂ ರೂಪವರ್ಜಿತಃ ।
ಬಿಭರ್ತಿ ಮಾಯಾರೂಪೋಸೌ ಶ್ರೇಯಸೇ ಪ್ರಾಣಿನಾಂಹರಿಃ॥

ಇದರ ಅಭಿಪ್ರಾಯವೇನೆಂದರೆ :—

ಶ್ರೀ ಪರಾಶರ ಮಹರ್ಷಿಯು ಮೈತ್ರೇಯರಂ ಕುರಿತು ಹೇಳುತ್ತಾರೆ :—ವಸಿಷ್ಠ ರಿಂದ ಸಸಗೆ ಉಪದೇಶವಾಯಿತನ್ನು, ಆ ಅಸದೃಶನಾದ, ಸರ್ವವ್ಯಾಪಿಯಾದ, ಸಕ್ಷ ಮಾಶ್ರಯವಿಂದ ಸರ್ವಫಲಪ್ರದನಾದ ಶ್ರೀಮಹಾವಿಷ್ಣುವನ್ನು ನಮಸ್ಕರಿಸಿ ಸಿನಗೆ ಉಪದೇಶಿಸುವೆನು, ಬಾಲಕ. ಈ ಲೋಕಕ್ಕೆ ಸೇರಿದ ಜೀವಾತ್ಮನು (ಪ್ರಾತ್ಯೇಕ ವಚನವು) ಸ್ವತಃ ಮೂಲಗುಣರಹಿತನಾಗಿ ವರಿಶುದ್ಧನು. ಅತನನ್ನು ಶ್ರೀಹರಿಯು ಕೌಸ್ತುಭಮಣಿರೂಪದಲ್ಲಿ ಧರಿಸಿರುವನು. ಮೂಲಪ್ರಕೃತಿಯನ್ನು ಶ್ರೀವತ್ಸವೆಂಬ ಮಚ್ಛೆಯರೂಪದಲ್ಲಿ ತೊಂದಿರುವನು. ಶ್ರೀಮಹತತ್ತ್ವವು ಗದಾರೂ ಪದಲ್ಲಿ ಪ್ರತಿಷ್ಠಿತವಾಗಿರುತ್ತದೆ ತಾಮಸಾಹಂಕಾರವನ್ನೂ ಸಾತ್ವಿಕಾಹಂಕಾರವ ನ್ನೂ ಸಹ, ಶಂಖರೂಪದಿಂದಲೂ ಶಾರ್ಙ್ಗರೂಪದಿಂದಲೂ, ಧರಿಸಿರುತ್ತಾನೆ, ವಾ ಯು ವೇಗಕ್ಕಿಂತಲೂ ತೀವ್ರವಾಗಿ ಚಲಿಸುವ ಸ್ವಭಾವವುಳ್ಳ ಮನೋತತ್ತ್ವವನ್ನು ವಿಷ್ಣುವು ಚಕ್ರರೂಪದಿಂದ ಕೈಯಲ್ಲಿ ಧರಿಸಿರುವನು. ಗದಾಭೃತನಾದ ಸರ್ವೇಶ್ವರನು ಧರಿಸಿರುವ ಮೂಲಪ್ರಕೃತಿಯನ್ನು ಎಂಬ ವಸಮಾಲೆಯೋ, ಈ ಪಂಚ

ತನ್ಮಾತ್ರೆಗಳೂ ಪಂಚಭೂತಗಳಾಗಿವೆ. ಜ್ಞಾನೇಂದ್ರಿಯಗಳೈದು, ಕರ್ಮೇಂದ್ರಿಯಗಳೈದು ಇವುಗಳನ್ನು ಬಾಣಗಳ ರೂಪದಲ್ಲಿ ಜನಾರ್ದನೆನಿಸುವ ಸರ್ವೇಶ್ವರನು ಧರಿಸಿರುವನು. ವಿದ್ಯಾರೂಪವಾದ ಜ್ಞಾನವನ್ನು ಅಚ್ಯುತನುಕ್ಷ್ಮೇಪ್ಯವಾದ ಅತಿ ನಿರ್ಮಲವಾಗಿ ಪ್ರಜ್ವಲಿಸುವ ಕತ್ತಿಯನ್ನಾಗಿಯೂ, ಅವಿದ್ಯೆಯನ್ನು ಆ ಕತ್ತಿಯ ಒರೆಯನ್ನಾಗಿಯೂ ಧರಿಸಿರುವನು. ಹೀಗೆ ಜೀವತತ್ವವನ್ನೂ, ಮೂಲ ಪ್ರಕೃತಿಯನ್ನೂ ಅದರ ವಿಕಾರರೂಪಗಳಾದ ಬುದ್ಧಿ ಅಹಂಕಾರ ತತ್ವಗಳನ್ನೂ, ಪಂಚಭೂತಗಳನ್ನೂ, ಮನಸ್ಸಿನೊಂದಿಗೆ ಕೂಡಿ ಏಕಾದಶೇಂದ್ರಿಯಗಳಿಸಿಸುವಗಳನ್ನೂ, ವಿದ್ಯೆಯನ್ನೂ ಅವಿದ್ಯೆಯನ್ನೂ, ಎಲ್ಲವನ್ನೂ, ಇಂದ್ರಿಯಗಳಾಗತೀತನಾದ ಶ್ರೀಮಹಾವಿಷ್ಣುವು ಮೇಲೆ ಹೇಳಿದ ರೀತಿಯಲ್ಲಿ ಧರಿಸಿರುವನು, ಏನೊಂದೂ ರೂಪವಿಲ್ಲದೇ ಇರುವ ಮಾಯಾರೂಪಿಯಾದ ಶ್ರೀಮಹಾ ವಿಷ್ಣುವು ಹೀಗೆ ಅಸ್ತ್ರಭೂಷಣಾದಿಗಳನ್ನು ಧರಿಸಿ ಸೇವೆಯನ್ನಿಸಗುವದು ಪ್ರಾಣಿಗಳ ಸರ್ವಶ್ರೇಯಸ್ಸಿಗಾಗಿ ಎಂದು ಭಾವಿಸತಕ್ಕದ್ದು.

ಹೀಗೆ ಆ ತತ್ವಗಳೂ ಸರ್ವೇಶ್ವರನಿಗೆ ಅಪೃಥಕ್ಸಿದ್ಧವಿಶೇಷಣಗಳಾದುದರಿಂದ ಅವತಾರ ರೂಪದಲ್ಲಿರುವಾಗಲೂ ಅವುಗಳನ್ನು ಬಿಡದೆ, ಈ ಅಸ್ತ್ರ ಭೂಷಣಾದಿಗಳ ರೂಪದಲ್ಲಿ ಧರಿಸಿದವನಾಗಿ, ಲೋಕಾನುಗ್ರಹನಿರತನಾದ ಸ್ವಾಮಿ ವರದನು ನಮ್ಮಗಳಿಗೆ ಸರ್ವವಿಧ ಶ್ರೇಯಸ್ಸನ್ನುಂಟುಮಾಡುವನಾಗಿ ಹಸ್ತಗಿರಿಯಮೇಲೆ ನೆಲೆಯಾಗಿನಿಂತು, ನಮಗೆ ವ್ಯಗ್ರೋಚರನಾಗಿ, ತನ್ನ ಸೌಲಭ್ಯ ಸೌಶೀಲ್ಯಾದಿ ಕಲ್ಯಾಣಗುಣಗಳನ್ನು ಪ್ರಕಟಿಸಿ, ನಮ್ಮನ್ನು ರಕ್ಷಿಸುತ್ತಿದ್ದಾನೆಂಬುದಾಗಿ ಹೇಳುತ್ತಾರೆ. ಈ ಸ್ವಾಮಿಯು ಎಂಥವನೆಂದರೆ, ವೇದ ಪ್ರತಿಪಾದ್ಯನು; ಈ ವೇದವಾದರೋ, ನಿನಗೆ ವಾಹನ ಮೊದಲಾದ ಕೈಂಕರ್ಯಗಳಲ್ಲಿ ಸಕ್ತನಾದ ಗರುಡನಿಗೆ ಶರೀರವು. (1) "ವೇದಾತ್ಮನಿಹಗೇಶ್ವರ" ಮತ್ತು (2) "ವಾಸಸ್ತವಾವಾಹನಮಾಸನಂಧ್ವಜೋ ಯಸ್ತ್ವೇವಿತಾನಂ ವ್ಯಜನಂ ತ್ರಯೀಮಯ" ಎಂಬ ಶ್ರೀ ಯಾಮುನಾರ್ಯೋಕ್ತಿಗಳಿಂದ ಈ ಅಭಿಪ್ರಾಯವು ಉಪಪಾದಿತವಾಗಿರುತ್ತದೆ. ಶ್ರೀ ನಿಗಮಾಂತಮಹಾದೇಶಿಕರೇ ತಾವು ಅನುಗ್ರಹಿಸಿದ ಗರುಡಪಂಚಾಶತ್ತಿನಲ್ಲಿ ಶ್ರೀ ಗರುಡಾಳ್ವಾರ್ ವಿಷಯದಲ್ಲಿ ಬರೆದಿರುತ್ತಾರೇನೆಂದರೆ:—

ನೇತ್ರಂ ಗಾಯತ್ರ ಮೂಚೇ ತ್ರಿವೃದಿತಿಚ ಶಿರೋನಾಮ ಧೇಯಂ ಯಜೂಂಷಿ । ಛಂದಾಂಸ್ಯಂಗಾನಿ ಧಿಷ್ಣ್ಯಾತ್ಮಭಿ ರಜನಿ ಶಫೈಃ ವಿಗ್ರಹೋ ವಾಮದೇವ್ಯಂ ॥ ಯಸ್ಯಸ್ತೋಮಾತ್ಮನೋಸೌ ಬೃಹದಿತರ ಗರುತ್ತಾದ್ಯಶಾಮ್ನಾತ ಪುಚ್ಛಃ । ಸ್ವಾಚ್ಛಂದ್ಯಂ ನಃ ಪ್ರಸೂ

(1) ಶ್ರೀ ಚತುಶ್ಲೋಕೀ. (2) ಸ್ತೋತ್ರರತ್ನ.

ತಾಂ ಶ್ರುತಿಶತ ಶಿಖರಾಭೀಷ್ಟುತಾತ್ಮಾ ಗರುತ್ಮಾನ್ ॥

"ಸ್ತೋಮವೆನ್ನುವ ಸ್ತುತಿರೂಪವಾದ ಸಾಮವೇದವನ್ನು ಆತ್ಮವಾಗಿವುಳ್ಳ ಯಾವ ಗರುತ್ಮಾನವರಿಗೆ ಕಣ್ಣು ಗಾಯತ್ರೀ ಎಂಬ ಸಾಮವೋ, ಶಿರಸ್ಸು ತ್ರಿವೃತ್ತೆಂಬ ಸಾಮವೋ, ನಾಮಧೇಯವು ಯಜುರ್ವೇದವೋ, ಕೈಕಾಲು ಮೊದಲಾದ ಅಂಗಗಳು ಛಂದಸ್ಸುಗಳೋ, ಮಿಕ್ಕ ಶರೀರವೆಲ್ಲವೂ ವಾಮದೇವ್ಯವೆನ್ನುವ ಸಾಮವೋ, ನಖಗಳು ಧಿಷ್ಣ್ಯಸ್ವರೂಪವೋ, ರೆಕ್ಕೆಗಳು ಬೃಹತ್ಸಾಮ ರಥಾಂತರವೆಂಬ ಸಾಮಗಳೋ, ಬಾಲವು ಯಜ್ಞಾಯಜ್ಞೀಯವೆಂಬ ಸಾಮವೋ, ಹೀಗೆ ವೇದಪುರುಷನು ಯಾರನ್ನು ಕುರಿತು ಹೇಳಿದನೋ, ಅಂತಹ ಅನೇಕ ವೇದಾಂತ್ಯಗಳಲ್ಲಿ ಹೊಗಳಲ್ಪಟ್ಟ ಮಹಿಮೆಯುಳ್ಳ ಗರುಡಾಕ್ಷಾರವರು, ಅಲ್ಪರಿಗೆ ವಶವಲ್ಲದಿರುವ ಸ್ವತಂತ್ರಭಾವವನ್ನು ನನಗೆ ಉಂಟುಮಾಡಲೆಂದು ಸ್ತೋತ್ರಮಾಡಿರುತ್ತಾರೆ." ಆದುದರಿಂದ ವೈನತೇಯನು ವೇದಮಯ ಶರೀರನು. ಅಂತಹ ಗರುಡನಿಗೆ ಶರೀರವಾದ ವೇದಗಳಿಂದ ಪ್ರತಿಪಾದ್ಯನಾದ ಶ್ರೀಕೃಷ್ಣನು ಹಸ್ತಗಿರಿಯ ಮೇಲೆ ಸ್ಥಿರವಾಗಿ ನಿಂತು ಸಮಸ್ತರನ್ನೂ ರಕ್ಷಿಸುವನೆಂದು ಹೇಳಿರುತ್ತಾರೆ. ಸರ್ವೇಶ್ವರನು ಕೃಪಾಪಿಯೂಷ ಜಲನಿಧಿಯು; ತನ್ನ ಕೃಪಾಮಹಾತ್ಮ್ಯವನ್ನು ಪ್ರದರ್ಶನ ಮಾಡುವುದಕ್ಕಾಗಿ ಸರ್ವ ಕಾಲದಲ್ಲೂ ಸಮಸ್ತ ಜನಗಳೂ ತನ್ನನ್ನು ಮನದಣಿಯುವ ಹಾಗೆ ನೋಡುವದು, ತನ್ನ ಮಹಾತ್ಮ್ಯವನ್ನು ಕೇಳುವದು, ತನ್ನನ್ನು ಭಜನಮಾಡುವದು, ಸೇವಿಸುವದು, ಕೈಂಕರ್ಯವನ್ನೆಸಗುವುದು, ಉಪಾಸಿಸುವದು, ಇವೇ ಮೊದಲಾದವುಗಳಿಂದ ತನ್ನ ಪ್ರಸನ್ನತೆಯನ್ನು ಸಂಪಾದಿಸಿಕೊಂಡು ಬಾಳಲಿ ಎಂಬದಾಗಿ ಶ್ರೀಹಸ್ತಿ ಶೈಲದಲ್ಲಿ ಶ್ರೀವರದರಾಜನೆನಿಸಿ ಬಿಜಮಾಡಿಸಿದ್ದಾನೆಂಬ ಭಾವವು. ಹೀಗೆ ಹೇಳಲು ತಮಗೆ ಪ್ರಮಾಣ ಉಂಟೋ ಎಂದರೆ ವೇದವೇ ಪ್ರಮಾಣವೆಂಬ ಭಾವವು.

ಇಲ್ಲಿ ನಾವು ಗಮನಿಸತಕ್ಕ ಮುಖ್ಯಾಂಶವೇನೆಂದರೆ:—ಪಾಂಚರಾತ್ರಾದಿ ಆಗಮಗಳ ಪ್ರಕಾರ ಪ್ರತಿಷ್ಠಿತ ವಿಗ್ರಹದಲ್ಲಿ, ಸಂಸ್ಕಾರಮಹಿಮೆಯಿಂದ ವಿಗ್ರಹವು ಹೇಗಿದೆಯೋ ಹಾಗೆಯೇ, ದಿವ್ಯಮಙ್ಗಳ ವಿಗ್ರಹಯುಕ್ತನಾಗಿ, ಅವನ್ನೆಲ್ಲಾ ಪ್ರವೇಶಿಸಿ ಸರ್ವೇಶ್ವರನು ನಮಗೆ ಸೇವೆಯನ್ನೀಯುವನು. ಹಾಗೆ ಸೇವೆಯನ್ನೀಯುವಾಗ ಶಂಖ ಚಕ್ರಗದಾಸಿ ಮೊದಲಾದ ಆಯುಧಾಭರಣಾದಿಗಳಿಂದ ಸೇವೆಯನ್ನೀಯುವನು. ಇದರಿಂದ ಸಮಸ್ತ ಚೆಟಚಿತ್ತುಗಳೊಂದಿಗೆ ಸೇರಿರುವ ಭಾವವನ್ನೂ ಅವುಗಳಿಗೆಲ್ಲಾ ತಾನೇ ಅಭಿಮಾನ ದೇವತೆಯೆಂಬ ಭಾವವನ್ನೂ ತೋರ್ಪಡಿಸುತ್ತಾನೆಂಬ ಭಾವವು.

ವೇದಾಂತವಿಷಯದಲ್ಲಿ ಅಲ್ಪಪ್ರಜ್ಞರಾದ ಪಾಶ್ಚಾತ್ಯರೂ, ಅವರನ್ನು ಹಿಂಬಾಲಿಸಿರುವ ವಿವೇಕ ಶೂನ್ಯರಾದ ಕೆಲವ ಹಿಂದೂಗಳೂ ಕೂಡ ನಿಗ್ರಹಾರಾಧನವನ್ನ ಪರಿಹಾಸವೆಂದು ಹೇಳುವರು. ಇದು ಶಾಸ್ತ್ರಜ್ಞಾನದಿಂದ ಸಂಸ್ಕಾರ ಹೊಂದದ ಜ್ಞಾ

ಇರುಪತ್ತಿನಾಲು ತತ್ವಜ್ಞಳಕ್ಕು ಮನ್ಯೋನ್ಯಂ ಸ್ವರೂಪಭೇದ ಮುವ್ವೋ ಲಕ್ಷಣಂಗಳಾಲೆ ಸಿದ್ಧಮ್. ಇವತ್ತಿಲ್ ಕಾರ್ಯಮಾನ ವಿರಪತ್ತು ಮೂನ್ರು ತತ್ವಜ್ಞಳುಕ್ಕುಮ್ ಇವತ್ತಾಲಾರಭ್ದಜ್ಞಳಾನವತ್ತುಕ್ಕುಮ್

ನದ ನಿಬ್ಬಂಧನೆಯು. ಈ ಅಭಿಪ್ರಾಯವು ಸರಿಯಲ್ಲವೆಂದು ಮುಂದೆ ಅರ್ಥ್ಯವಿ ತಾರ ರೂಪವನ್ನು ಉಪಪಾದಿಸುವಾಗ ಹೇಳುತ್ತಾರೆ.

ಇರುಪತ್ತಿ ನಾಲು ತತ್ವಂಗಳುಕ್ಕುಂ–ಈ ಮೇಲೆ ಹೇಳಿದ ಇಪ್ಪತ್ತು ನಾಲ್ಕು ತತ್ವಗಳಿಗೂ ಇವನ. **ಅನ್ಯೋನ್ಯ ಸ್ವರೂಪಭೇದಂ**–ಪರಸ್ಪರ ಸ್ವರೂಪ ಭೇದವು. **ಅವ್ವೋಲಕ್ಷಣಂಗಳಾಲೆ**–ಅವುಗಳ ಪರಸ್ಪರ ಲಕ್ಷಣಗಳಿಂದ, **ಸಿದ್ಧಂ**–ವ್ಯಕ್ತವಾಗುತ್ತವೆ. ಇವುಗಳಿಗಿರುವ ಪರಸ್ಪರ ಲಕ್ಷಣ ಭೇದಗಳನ್ನೆಲ್ಲಾ ತಾವು ರಚಿಸಿರುವ ನ್ಯಾಯಸಿದ್ಧಾಂಜನದಲ್ಲಿ ಬಹುಸ್ಪುಟವಾಗಿ ಉಪಪಾದಿಸಿರುತ್ತಾರೆ, ಈ ತತ್ವಗಳ ಲಕ್ಷಣಗಳು ಯಾವುವೆಂದರೆ: ಸತ್ವರಜಸ್ತಮೋಗುಣಗಳ ಸಮಭಾವ ಉಳ್ಳದೇ ಮೂಲಪ್ರಕೃತಿಯು; ವಿಷಮಭಾವವುಳ್ಳದಾದರೆ ತಮಸ್ಸು; ಸತ್ವಗುಣವು ಯಥಾರ್ಥಜ್ಞಾನಕ್ಕೂ, ರಜೋಗುಣವು ಅನುರಾಗ ಆಶೆ ಮೊದಲಾದವುಗಳಿಗೂ ತಮೋಗುಣವು ಪ್ರಮಾದ ಮೋಹಗಳಿಗೂ ಕಾರಣವು; ಮಹತ್ತು ಅಧ್ಯವಸಾಯವೆಂದರೆ **ಸಜ್ಞಪ್ಪಕ್ಕೆ** ಕಾರಣವು; ಅಹಂಕಾರವು ಅಭಿಮಾನಕ್ಕೆ ಕಾರಣವು; ಸಾತ್ವಿಕಾಹಂಕಾರವು ಇಂದ್ರಿಯಗಳಿಗೂ, ತಾಮಸಾಹಂಕಾರವು ಶಬ್ದತನ್ಮಾತ್ರೆಗೂ ಕಾರಣವು: ರಾಜಸಾಹಂಕಾರವು ಮೇಲಿನೆರಡು ಅಹಂಕಾರಗಳಿಗೂ ಸಹಕಾರಿಯಾಗಿ ಪರಿಣಮಿಸುತ್ತವೆ; ಕಣ್ಣು ಬಣ್ಣವನ್ನು ಕಂಡುಹಿಡಿಯುವ ಶಕ್ತಿಯುಳ್ಳದ್ದು; ಶ್ರೋತ್ರವು ಶಬ್ದಜ್ಞಾನಕ್ಕೆ ಕಾರಣವು; ಹಾಗೆಯೇ ಮೂಗುಗಂಧಜ್ಞಾನಕ್ಕೂ ನಾಲಿಗೆ ರಸಜ್ಞಾನಕ್ಕೂ; ಕರ್ಮೇಂದ್ರಿಯಗಳು, ವಾಕ್ಕು, ಕಾರ್ಯ, ಚಲನ, ಮಲಮೂತ್ರವಿಸರ್ಜನ, ಗರ್ಭೋತ್ಪತ್ತಿ ಮುಂತಾದವುಗಳಿಗೆ **ಕಾರಣವು**; ಆಕಾಶವು ಶಬ್ದವನ್ನುಂಟುಮಾಡತಕ್ಕದ್ದು; ವಾಯುವು ಶಬ್ದಸ್ಪರ್ಶಗಳಿಗೆ ಕಾರಣವಾದುದು; ತೇಜಸ್ಸು ಉಷ್ಣಸ್ಪರ್ಶವುಳ್ಳದ್ದು; ಜಲವು ಶೀತಸ್ಪರ್ಶವುಳ್ಳದ್ದು; ಪೃಥಿವೀ ಗಂಧವುಳ್ಳದ್ದು; ಇಂಥಾವುಗಳೇ ತತ್ವಲಕ್ಷಣಗಳೆಂಬ ಭಾವವು. **ಇವತ್ತಿಲ್**–ಈ ಇಪ್ಪತ್ತು ನಾಲ್ಕುತತ್ವಗಳಲ್ಲಿ **ಕಾರ್ಯಮಾನ ಇರಪತ್ತುಮೂನ್ರು ತತ್ವಂಗಳುಕ್ಕುಂ**–ಆ ಮೂಲಪ್ರಕೃತಿಯು ಕಾರ್ಯರೂಪವಾದ ಮಿಕ್ಕ ೨೩ ತತ್ವಗಳಿಗೂ, **ಇವತ್ತಾಲಾರಭ್ದಜ್ಞಳಾನವತ್ತುಕ್ಕುಂ** – ಇವುಗಳಿಂದುಂಟಾದವುಗಳಿಗೂ, ಅವುಗಳು ಯಾವುವೆಂದರೆ:—ವ್ಯಷ್ಟಿಸೃಷ್ಟಿ ಎನ್ನಿಸಿಕೊಳ್ಳುವ ಅಂಡಗಳೂ, ಅವುಗಳಲ್ಲಿರುವ ಲೋಕಗಳೂ, ಬ್ರಹ್ಮಾದಿ ಸ್ತಂಬಪರ್ಯಂತವಾದ ಶರೀರಗಳೂ, ಆದುದರಿಂದ ಇವುಗ

ಸ್ಥಿತಿಯಿಲ್ಲವುಮ್ ಏತ್ತ ಚ್ಚುರಕ್ಕಜ್ಗಳ್ ಪುರಾಣಜ್ಗಳಿಲೇ ಪ್ರಸಿದ್ಧವಾನಪಡಿಯೇ ಕಣ್ಣುಕೊಳ್ವದು.

ಪ್ರಕೃತೇರಾನನ್ತ್ಯಮ್

(1) "ಸ್ವಸತ್ತಾ ಭಾಸಕಂ ಸತ್ವಂ ಗುಣಸತ್ತಾದ್ವಿಲಕ್ಷಣಂ",

ಗೂ **ಸ್ಥಿತಿಯಿಲ್ಲವುವಂ** – ಸ್ಥಿತಿಯಲ್ಲರುವ, **ಏತ್ತಚ್ಚುರಕ್ಕಜ್ಗಳ್** – ಹೆಚ್ಚು ಕಡಿಮೆಗಳು, **ಪುರಾಣಜ್ಗಳಿಲೇ** – ಅನೇಕ ಪುರಾಣಗಳಲ್ಲಿ, **ಪ್ರಸಿದ್ಧವಾನಪಡಿಯೇ** – ವ್ಯಕ್ತವಾಗಿ ಉಪಪಾದಿಸಿದ ರೀತಿಯಲ್ಲ, **ಕಣ್ಣುಕೊಳ್ವದು** – ತಿಳಿಯಪಡಿಸುವುದು. ಇಲ್ಲ ಮೂಲಪ್ರಕೃತಿಯ ಸ್ಥಿತಿ ಮೊದಲಾದವುಗಳು ಹೇಳಲ್ಪಟ್ಟಿವು. ಅದರ ಪರಿಣಾಮ ದ್ರವ್ಯಗಳ ಮತ್ತು ವ್ಯಷ್ಟಿ ಸೃಷ್ಟಿಗೆ ಸೇರಿದವುಗಳ ಸ್ಥಿತಿಯಲ್ಲರುವ ವ್ಯತ್ಯಾಸಗಳನ್ನು ಇಲ್ಲಿ ಉಪಪಾದಿಸುವದರಿಂದ ಗ್ರಂಥ ವಿಸ್ತರ ಉಂಟಾದೀತೆಂಬ ಭಯದಿಂದ ಇಲ್ಲಿ ಉಪಪಾದಿಸುವದಿಲ್ಲವು. ಇಷ್ಟವಿದ್ದವರು ಪುರಾಣಗಳನ್ನವಲೋಕಿಸಿ ಅವುಗಳ ಸ್ಥಿತಿಗಳಲ್ಲರುವ ಹೆಚ್ಚುಕಡಿಮೆಗಳನ್ನರಿಯಬಹುದು. ಅಲ್ಲ ಇವುಗಳೆಲ್ಲಾ ಪ್ರಸಿದ್ಧವಾಗಿ ಉಪಪಾದಿತವಾಗಿರುವದರಿಂದ ಅವುಗಳ ಮೂಲಕ ತಿಳಿಯಬಹುದೆಂಬ ಭಾವವು.

ಮುಂದಿನ ವಾಕ್ಯದಿಂದ ಪ್ರಕೃತಿ ದ್ರವ್ಯವೇನು ಪರಿಚ್ಛಿನ್ನವಾದುದೇ, ಅಪರಿಚ್ಛಿನ್ನವಾದುದೇ ಎಂಬ ಜಿಜ್ಞಾಸೆಯಲ್ಲ ಕೆಲವು ಪ್ರಮಾಣಗಳನ್ನು ದಾಹರಿಸಿ ಪ್ರಕೃತಿಯು ಅಪರಿಚ್ಛಿನ್ನವಾದುದಲ್ಲವು, ಏಕೆಂದರೆ ನಿತ್ಯವಿಭೂತಿಯಲ್ಲ ಪ್ರಕೃತಿ ಸಂಬಂಧವಿಲ್ಲವೆಂದು ತಿಳಿಸಿ, ನಿತ್ಯವಿಭೂತಿಯಲ್ಲದ ಪ್ರದೇಶವೂ ಕೂಡ ಆ ನಿತ್ಯವಿಭೂತಿಯ ಮೂರನೆಲ್ಲ ಒಂದು ಭಾಗದಷ್ಟಾದರೂ, ಇದೂ ಕೂಡ ತುಂಬಾ ವಿಸ್ತಾರವಾದುದರಿಂದ,ಪ್ರಕೃತಿಗೆ ಆನಂತ್ಯವು ಪ್ರಮಾಣಗಳಲ್ಲ ಹೇಳಲ್ಪಟ್ಟಿರುತ್ತದೆಂದು ತಿಳಿಸುತ್ತಾರೆ.

ಪ್ರಕೃತಿಗೆ ಆನನ್ತ್ಯೋಪಪಾದನೆಯು

(1) ಇದು ಪಾಂಚರಾತ್ರವಾಕ್ಯವು. "**ಸತ್ವಂ** – ಶುದ್ಧ ಸತ್ವವು, ನಿತ್ಯವಿಭೂತಿಯಲ್ಲರುವ ದ್ರವ್ಯವು, **ಸ್ವಸತ್ತಾಭಾಸಕಂ** – ಸ್ವಯಂ ಪ್ರಕಾಶವಾದುದು, **ಗುಣಸತ್ತಾದ್ವಿಲಕ್ಷಣಂ** – ಪ್ರಕೃತಿಯಲ್ಲರುವ ರಜಸ್ತಮೋಗುಣಗಳಿಂದ ಸೇರಿದ ಸತ್ವಗುಣಕ್ಕಿಂತಲೂ ವಿಲಕ್ಷಣವಾದುದು. ಪ್ರಕೃತಿಗಿಂತ ವಿಲಕ್ಷಣವಾಗಿ ಶುದ್ಧ ಸತ್ವದ್ರವ್ಯ ಉಂಟೆಂದು ಹೇಳಿದುದರಿಂದ, ಪ್ರಕೃತಿಯು ಅಪರಿಚ್ಛಿನ್ನವೇ ಪರಿಚ್ಛಿನ್ನವೇ? ಎಂಬ ಸಂದೇಹವಲ್ಲ, ಅಪರಿಚ್ಛಿನ್ನವೆಂದು ಹೇಳಲಾಗುವದಿಲ್ಲವೆಂಬ ಭಾ

(2) **ತಮಸಃ ಪರಮೋ ಧಾತಾ** (3) **"ಅಪ್ರಾಕೃತಂ ಸುರೈರ್ವಂದ್ಯಂ"**, **ಇತ್ಯಾದಿಗಳಾಲೆ ತಮಸ್ಸುಕ್ಕು ಮೇಲಾನ ದೇಶವಿಶೇಷಂ ಸಿದ್ಧಿಕ್ಕೆಕ್ಕ ಯಾಲೇ,** (4) **"ಅನನ್ತಸ್ಯ ನತಸ್ಯಾನ್ತ ಸ್ಸಂಖ್ಯಾನಂ ವಾಪಿವಿದ್ಯತೇ."**

ವವ. ಪಾಗೆ ಅಪರಿಚ್ಛಿನ್ನವಾದುದಾದರೆ, ನಿತ್ಯ ವಿಭೂತಿಯಲ್ಲೂ ಇರಬೇಕಾಗಿತ್ತು. ಪಾಗೆ ಅಲ್ಲಿ ಇಲ್ಲದುದರಿಂದ ಪರಿಚ್ಛಿನ್ನವಾದುದೆಂಬ ಭಾವವು.

(2) ಇದು ಶ್ರೀಮದ್ರಾಮಾಯಣ ಯುದ್ಧಕಾಂಡ ಶ್ಲೋಕವು. 114-115 "**ತಮಸಃ** – ಪ್ರಾಕೃತ ಮಂಡಲಕ್ಕಿಂತಲೂ, **ಪರಮಃ** – ಅಪ್ರಾಕೃತ ದಿವ್ಯ ವೈಕುಂಠವಾಸಿಯಾಗಿರುವದರಿಂದ ಶ್ರೇಷ್ಠನು, **ಧಾತಾ** – ಸರ್ವ ಜಗತ್ಸೃಷ್ಟಿಕರ್ತಾ ವಾಗಿ ತವುಗಳನ್ನು ಧರಿಸಿರುವನು ಅಥವಾ ಪೋಷಿಸಿರುವವನು. ಇಂತಹ ಶ್ರೀ ಮನ್ನಾ ರಾಯಣನೇ ಶ್ರೀ ರಾಮನು ಎಂದು ರಾವಣ ವಧಾನಂತರ ಮಂದೋದರಿಯು ಪೇಳುತ್ತಾಳೆ. ಈ ಶ್ಲೋಕದ ಉತ್ತರಾರ್ಧವು :— **ಶ್ರೀವತ್ಸವಕ್ಷಾನಿತ್ಯ ಶ್ರೀ ರಜಯ್ಯಃ ಶಾಶ್ವತೋ ಧ್ರುವಃ**" ಎಂಬದಾಗಿ.

(3) ವಿಷ್ಣು. ತ. ೨೭. **ಅಪ್ರಾಕೃತಂ ಸುರೈರ್ವಂದ್ಯಂ ಅಯುತಾರ್ಕ ಸಮಪ್ರಭಂ** – ಎಂಬುದು ಶ್ಲೋಕದ ಉತ್ತರಾರ್ಧವು. **ವಾಪೀ ಕೂಪ ತಟಾಕಾದಿ ಪೃಷ್ಟಷಂಡೈಶ್ಚ ಮಂಡಿತಂ**–ಎಂಬುದು ಪೂರ್ವಾರ್ಧವು. **ಅಪ್ರಾಕೃತಂ** – ಪ್ರಕೃತಿ ಸಂಬಂಧವಿಲ್ಲದೇ ಇರುವ, **ಸುರೈರ್ವಂದ್ಯಂ** – ದೇವತೆಗಳಿಂದ ಸ್ತೋತ್ರವಾಡಲ್ಪಟ್ಟ, ಮತ್ತು **ಅಯುತಾರ್ಕಸಮಪ್ರಭಂ** – ಕೋಟಿ ಸೂರ್ಯರಿಗೆ ಸಮನಾದ ಪ್ರಕಾಶವುಳ್ಳ ವೈಕುಂಠಲೋಕವನ್ನು ಎಂಬ ಭಾವವು. ಎರಡನೇ ಪ್ರಮಾಣದಲ್ಲಿ ತಮಸ್ಸಿಗಿಂತಲೂ ವಿಲಕ್ಷಣವಾದುದು ಸರ್ವೇಶ್ವರನ ದಿವ್ಯಮಂಗಳ ವಿಗ್ರಹವೆಂದೂ, ಮೂರನೇ ಪ್ರಮಾಣದಲ್ಲಿ ಆ ದಿವ್ಯ ಪರಮಪದವು, **ಅಪ್ರಾಕೃತಂ**–ಪ್ರಕೃತಿಗಿಂತಲೂ ವಿಲಕ್ಷಣವೆಂದೂ ಹೇಳಲ್ಪಟ್ಟಿತು. ಆದುದರಿಂದ ಪ್ರಕೃತಿಯಲ್ಲಿರುವ ಪ್ರದೇಶಗಳಿರುವದರಿಂದಪ್ರಕೃತಿಯು ಅಪರಿಚ್ಛಿನ್ನವಾದುದಲ್ಲವೆಂಬುದು ನಮ್ಮ ವ್ಯಕ್ತಪಡುತ್ತದೆ.

ಇತ್ಯಾದಿಗಳಾಲೆ – ಈ ಮೇಲಿನ ಮೂರು ಪ್ರಮಾಣಗಳೇ ಮೊದಲಾದವುಗಳಿಂದ, **ತಮಸ್ಸುಕ್ಕು ಮೇಲಾನ** – ಪ್ರಕೃತಿಗಿಂತ ಬೇರೆಯಾಗಿ ವಿಲಕ್ಷಣವಾಗಿ ಶ್ರೇಷ್ಠವಾಗಿರುವ, **ದೇಶವಿಶೇಷಂ** – ಪ್ರದೇಶವಾದ ನಿತ್ಯವಿಭೂತಿಯು, **ಸಿದ್ಧಿಕ್ಕೆಕ್ಕಯಾಲೆ** – ಉಂಟೆಂದು ಸ್ಥಾಪಿತವಾಗಿರುವದರಿಂದ (ಪ್ರಕೃತಿಯು ದೇಶ ಪರಿಚ್ಛಿನ್ನವಾದುದೆಂಬ ಭಾವವು)

(4) ವಿ. ಪು. ೨. ೭, ೫೫. **ಅನನ್ತಸ್ಯ** – ಅನಂತವಾದ, **ತಸ್ಯ** – ಆ

(5) **"ತದನನ್ತಮಸಂಖ್ಯಾತ ಪ್ರಮಾಣಂಚಾಪಿನೈಯತಃ" ಇತ್ಯಾದಿಗಳಿಲ್ ನಿತ್ಯವಿಭೂತಿಯಾಲೇ ಅವಚ್ಛಿನ್ನ ಮಲ್ಲಾದ ಪ್ರದೇಶತ್ತಾಲೇ ಮೂಲಪ್ರಕೃತಿಕ್ಕಾನನ್ತ್ಯಂ ಶೊಲ್ಲುಗಿನ್ರನ.**

ಪ್ರಕೃತಿಗೆ, **ಅನ್ತಃ** – ಕಾಲಮೂಲಕವಾಗಿ ಕೊನೆಯು ಎಂದರೆ ನಾಶವು, **ನ** – ಇಲ್ಲವು. **ಸಂಖ್ಯಾನಂವಾಪಿ** – ಸಂಖ್ಯೆಮಾಡುವುದೂ ಕೂಡ, **ನವಿದ್ಯತೇ** – ಇಲ್ಲವು ಎಂದರೆ ಸಾಧ್ಯವಲ್ಲವು." ಎಂದೂ,

(೫) ವಿ. ಪು. ೨. ೭. ೨೬. "**ಯತಃ** – ಯಾವ ಕಾರಣದಿಂದ, **ತತ್** – ಆ ಪ್ರಕೃತಿಯು, **ಅನನ್ತಂ**–ನಾಶವಿಲ್ಲದೇ ಇದೆಯೋ, ಮತ್ತು **ಅಸಂಖ್ಯಾತಪ್ರಮಾಣಂಚ** – ಲೆಕ್ಕಮಾಡಲು ಸಾಧ್ಯವಲ್ಲವ ಪ್ರಮಾಣವುಳ್ಳದೋ. **"ಹೇತು ಭೂತಮಶೇಷಸ್ಯ ಪ್ರಕೃತಿಸ್ತ್ವಾಪರಾಮುನೇ"** ಎಂದು ಮುಂದೆ ಇರುತ್ತದೆ, ಆ ಕಾರಣದಿಂದ, ಓ ಮುನಿಯೇ, ಆ ಪ್ರಕೃತಿಯು ಎಲ್ಲಾ ಅಚಿದ್ವಸ್ತುಗಳಿಗೂ ಕಾರಣಭೂತವಾಗಿದೆ." **ಇತ್ಯಾದಿಗಳಿಲ್** – ಇವೇ ಮೊದಲಾದ ಪ್ರಮಾಣಗಳಲ್ಲಿ, **ನಿತ್ಯವಿಭೂತಿಗಳಾಲೆ** – ಸೃಷ್ಟಿಕ್ರಮ ಲಯಾದಿಗಳಿಗೆ ಸೇರದೇ ಇರುವದರಿಂದ ಶುದ್ಧ ಸತ್ವಮಯವಾದ ನಿತ್ಯವಿಭೂತಿವಸ್ತುಗಳಿಂದ, **ಅವಚ್ಛಿನ್ನಮಲ್ಲಾದ** – ಆಕ್ರಮಿಸದೇ ಇರುವ, **ಪ್ರದೇಶತ್ತಾಲೆ** – ಪ್ರದೇಶವನ್ನು ಆಕ್ರಮಿಸಿರುವದರಿಂದ, ಅಂತಹ ಪ್ರದೇಶವೂ ಕೂಡ ಅತಿ ವಿಪುಳವಾಗುದರಿಂದ, **ಮೂಲಪ್ರಕೃತಿಕ್ಕು**– ಮೂಲಪ್ರಕೃತಿಗೆ, **ಆನನ್ತ್ಯಂ** – ಅನನ್ತ್ಯವು, **ಶೊಲ್ಲುಗಿರನ** – ಹೇಳಲ್ಪಟ್ಟಿರುತ್ತದೆ. ಪ್ರಕೃತಿ, ಏನು ಪರಿಚ್ಛಿನ್ನವೇ, ಅಥವಾ ಅಪರಿಚ್ಛಿನ್ನವೇ ಎಂಬ ಶಂಕೆಗೆ ಸಮಾಧಾನವೇನೆಂದರೆ :—ನಿತ್ಯವಿಭೂತಿಯಿರುವ ಸ್ಥಳದಲ್ಲಿ ಪ್ರಕೃತಿಯಿಲ್ಲವು; ನಿತ್ಯ ವಿಭೂತಿಯು ತ್ರಿಪಾದ್ವಿಭೂತಿಯು, ಲೀಲಾ ವಿಭೂತಿಯು ಮೂರನೆಪ್ಪು ದೊಡ್ಡದು; ನಮ್ಮ ಪೃಥಿವೀ ಮೊದಲಾದ ಲೋಕಗಳೆಲ್ಲಾ ಸೇರಿದ ಲೀಲಾ ವಿಭೂತಿಯು ಏಕಪಾದ್ವಿಭೂತಿಯು. ಈ ಲೀಲಾ ವಿಭೂತಿಗೆ ಸೇರಿದವು ಅನೇಕ ಅಂಡಗಳಾಗಿರುವದರಿಂದ, ಅನೆಲ್ಲಾ ಪ್ರಕೃತಿ ಪರಿಣಾಮಗಳಾಗುವದರಿಂದ ಪ್ರಕೃತಿಯು ಅನನ್ತವಾಗುವೆಂದು ವಿಷ್ಣು ಪುರಾಣಾದಿಗಳಲ್ಲಿ ಹೇಳಲ್ಪಟ್ಟಿರುತ್ತದೆ. ಆದರೆ ಅನನ್ತವೆಂದು ಹೇಳುವುದರಿಂದ ಅಪರಿಚ್ಛಿನ್ನವೆಂಬರ್ಥವಾಗುವುದಿಲ್ಲವು. ಏಕೆಂದರೆ ನಿತ್ಯವಿಭೂತಿಯಿರುವ ಪ್ರದೇಶದಲ್ಲಿ ಪ್ರಕೃತಿಯು ಇಲ್ಲವು. ಅದೂ ಅಲ್ಲದೆ ನಿತ್ಯವಿಭೂತಿ ಲೀಲಾ ವಿಭೂತಿಗಳ ಮಧ್ಯೆ ವಿರಜಾ ನದಿಯು ಇದೆಯೆಂಬ ಶಾಸ್ತ್ರಪ್ರಮಾಣವಿದೆ. ಜೀವಾತ್ಮನು ಲೀಲಾವಿಭೂತಿಯನ್ನು ಬಿಟ್ಟು ನಿತ್ಯವಿಭೂತಿಗೆ ಹೋಗುವಾಗ ವಿರಜಾನದಿಯಲ್ಲಿ ಪ್ರಕೃತಿಸಂಬಂಧವನ್ನು ನೀಗಿಕೊಳ್ಳು

ತ್ರಿಗುಣ ದ್ರವ್ಯಸ್ಯ ಪ್ರವೃತ್ತಿಭೇದಃ

ತ್ರಿಗುಣದ್ರವ್ಯತ್ತುಕ್ಕು ಪ್ರವೃತ್ತಿಭೇದವುಮ್, ಬದ್ಧಚೇತನರುಡೈಯ ಭೋಗಾಪವರ್ಗಜ್ಞಳುಕ್ಕುಮ್, ಈಶ್ವರನುಡೈಯ ಲೀಲಾರಸತ್ತುಕ್ಕು ಮಾಕ ಸಮುಮಾಕವುಮ್, ವಿಷಮುಮಾಕವುಮ್, ಪರಿಣಾಮ ಸನ್ತತಿ

ತ್ತಾನೆಂಬ ಪ್ರಮಾಣವೂ ಉಂಟು. ಆದುದರಿಂದ ದೇಶತಃ ಪ್ರಕೃತಿಯು ಪರಿಚ್ಛಿನ್ನವು; ಆದರೆ ಕಾಲತಃ ಅಪರಿಚ್ಛಿನ್ನವು. ಏಕೆಂದರೆ ಇದು ಅನಾದಿಯಾಗಿ ಎಲ್ಲಾ ಕಾಲದಲ್ಲೂ ನಿತ್ಯವಾಗಿರುತ್ತದೆ. ಶ್ರುತಿಯೂ "ಅಜಾಮೇಕಾಂ" ಎಂಬ ವಾಕ್ಯ ಮೂಲಕ ನಿತ್ಯವಾದುದೆಂದು ಹೇಳುತ್ತದೆ.

ಪ್ರಕೃತಿಯ ಪ್ರವೃತ್ತಿ ಭೇದವು.

ತ್ರಿಗುಣದ್ರವ್ಯತ್ತುಕ್ಕು – ಪ್ರಕೃತಿಗೆ, ಪ್ರವೃತ್ತಿಯಲ್ಲಿ ಭೇದವೇನೆಂದರೆ:— ಬದ್ಧಚೇತನರ, **ಭೋಗಾಪವರಜ್ಞಳುಕ್ಕುಮ್** – ಐಹಿಕಭೋಗ ಮತ್ತು ದೇಹಾವಸಾನಾನನ್ತರ ಆಮುಷ್ಮಿಕವಾದ ಮೋಕ್ಷಪ್ರಾಪ್ತಿಗೂ, ಮತ್ತು **ಈಶ್ವರನುಡೈಯ ಲೀಲಾರಸತ್ತುಕ್ಕುಮಾಕ** – ಸ್ವತನ್ತ್ರನಾಗಿ ಪೂರ್ಣಕಾಮನಾಗಿರುವ ಸರ್ವೇಶ್ವರನ ಲೀಲಾ ವಿನೋದಾರ್ಥವಾಗಿಯೂ, **ಸಮುಮಾಕವುಮ್** – ಪ್ರಳಯಕಾಲದಲ್ಲಿ ಪ್ರಕೃತಿಯ ಮೂರುಗುಣಗಳು ಸಮವಾಗಿಯೂ, **ವಿಷಮುಮಾಕವುಮ್** – ಸೃಷ್ಟಿಕಾಲದಲ್ಲಿ ವಿಷಮವಾಗಿಯೂ, **ಪರಿಣಾಮ ಸನ್ತತಿಯುಡೈತ್ತಾಯ್** – ತದನನ್ತರ ಪರಿಣಾಮ ಸಮೂಹವನ್ನು ಹೊಂದಿದುದಾಗಿ, **ದೇಹೇನ್ದ್ರಿಯಾದಿ ರೂಪತ್ತಾಲೆ** – "ವಿಚಿತ್ರಾ ದೇಹಸಂಪತ್ತಿಃ" ಎಂದು ಹೇಳಿಸಿಕೊಳ್ಳುವ ಹಾಗೆ ಶರೀರ ಇನ್ದ್ರಿಯ ಮೊದಲಾದ ರೂಪಗಳಿಂದ, **ಅವ್ವೋವ್ಯಾಪಾರಜ್ಞಳೈಯುಮ್** – ಅವುಗಳ ತಮ್ಮ ತಮ್ಮ ವ್ಯಾಪಾರಗಳನ್ನು, **ಪಣ್ಣುಗೈ** – ಮಾಡೋಣವು. ಪ್ರಕೃತಿಯ ಪ್ರವೃತ್ತಿಯು ಈ ಬದ್ಧ ಚೇತನರುಗಳ ಭೋಗಕ್ಕಾಗಿ ಎಂದರೆ ಕರ್ಮಫಲಾನುಗುಣವಾಗಿ ಸುಖದುಃಖೋಪ ಭೋಗಗಳಿಗಾಗಿ ಎಂದು ಸರ್ವೇಶ್ವರನು ಸಙ್ಕಲ್ಪಿಸಿರುತ್ತಾನೆ. ಈ ಪ್ರಕೃತಿಯ ಪ್ರವೃತ್ತಿಯೇ ಈ ಬದ್ಧಚೇತನನಿಗೆ ಕರಣ ಕಳೇಬರಯೋಗವನ್ನು ಸರ್ವೇಶ್ವರ ಸಙ್ಕಲ್ಪಾನುಸಾರ ಉಂಟುಮಾಡಿ, ಆ ಇಂದ್ರಿಯಗಳನ್ನು ದುರುಪಯೋಗಪಡಿಸದೆ **"ಜಿಹ್ವೇಕೀರ್ತಯ ಕೇಶವಂ ಮುರರಿಪುಂ"** (ಮುಕುಂದ) ಎಂಬ ಶ್ಲೋಕದಲ್ಲಿ ಹೇಳಿರುವ ಹಾಗೆ, ಸರಿಯಾದ ಮಾರ್ಗದಲ್ಲಿ ವಿನಿಯೋಗಿಸಿದರೆ, ಈತನು "ಪುಣ್ಯಪಾಪೇ ವಿಧೂಯ" ಪುಣ್ಯಪಾಪಕರ್ಮಗಳನ್ನೆಲ್ಲಾ ಶರಣಾಗತಿಯ ಮೂಲಕ, ಕಳೆದುಕ್ಕೊಂಡು ಮೋಕ್ಷ ಸುಖವನ್ನು ಹೊಂದಲು, ತನ್ನ ಪ್ರವೃತ್ತಿ ಮೂಲಕ ಅನುಕೂಲಪಡಿಸಿಕೊಡುತ್ತದೆ. ಹೀಗೆ ಈ ಚೇತ

ಯೈಯುಡೈ ತ್ತಾಯ್, ದೇಹೇನ್ದ್ರಿಯಾದಿ ರೂಪತ್ತಾಲೆ ಅವ್ವೋ ವ್ಯಾಪಾರಂಗಳೈಯುಮ್ ಪಣ್ಣುಗೈ. ಇದು ರಜಸ್ತಮಸ್ಸುಕ್ಕಳೈ ಯಿಟ್ಟುಬದ್ಧರ್ಕ್ಕ ತತ್ವಜ್ಞಳಿಲುಣ್ಮೈಯೈಮರೈತ್ತು ವಿಪರೀತ ಜ್ಞಾನತ್ತೈ ಯುಣ್ಣಾಣ್ಣಿಕ್ಕರದು ಭೋಗಾರ್ಥಮಾಕ. ಇದು ತಾನೇ ಯುಪವರ್ಗಾ

ನನು ಇಹದಲ್ಲಿ ಭೋಗಿಸುವದೂ, ಪರದಲ್ಲಿ ಸರ್ವೇಶ್ವರನಿಗೆ ನಿತ್ಯ ಕೈಙ್ಕರ್ಯವನ್ನೆಸಗುತ್ತಾ ನಿರತಿಶಯಾನಂದ ಹೊಂದುವದೂ, ಇವೇ ಮೊದಲಾದ ಪ್ರಕೃತಿಯ ಪ್ರವೃತ್ತಿಗಳು ಸ್ವಾಮಿಗೆ ಲೀಲೆಯು. ಪ್ರಳಯವೂ ಸೃಷ್ಟಿಯೂ ಸಹ ಆತನಿಗೆ ಲೀಲೆಯು. ಪ್ರಳಯದಲ್ಲಿ ಪ್ರಕೃತಿಯ ಪ್ರವೃತ್ತಿಯು ಹೇಗೆಂದರೆ, ಅದರ ಮೂರು ಗುಣಗಳೂ ಸಮ ಭಾವದಲ್ಲಿರುವದು; ಹಾಗೆ ಸಮಭಾವದಲ್ಲಿರುವತನಕ ಸೃಷ್ಟಿಯಿಲ್ಲವು; ಯಾವಾಗ ಅವು ಸಮವಾಗಿರದೆ ವಿಷಮಭಾವವನ್ನು ಹೊಂದುತ್ತವೋ ಆಗ ಸೃಷ್ಟಿಯೂ, ತದನಂತರ ಪರಿಣಾಮ ಸಂತತಿಗಳೂ ಉಂಟಾಗುತ್ತವೆ. ಹೀಗೆ ಪ್ರಕೃತಿಯ ಪ್ರವೃತ್ತಿಯು ಇಂತಹ ಪರಿಣಾಮಗಳಿಂದ ಭಿನ್ನಭಿನ್ನವಾಗಿರುತ್ತದೆ. ಈ ಅಭಿಪ್ರಾಯಗಳೆಲ್ಲಾ ಹಿಂದೆಯೇ ಶರಣಾಗತ ದೀಪಿಕಾ ಶ್ಲೋಕವಾದ **"ಭೋಗ್ಯಂ ಮುಕುನ್ದ ಗುಣಭೇದಂ"** ಎಂಬ ಶ್ಲೋಕದಲ್ಲಿ ಉಪಪಾದಿತವಾಗಿರುತ್ತದೆಂದು ಹೇಳಲ್ಪಟ್ಟಿರುತ್ತದೆ. ಳಿಃ ನೇ ಪುಟ ನೋಡಿ. ಆದರೆ ಪ್ರಕೃತಿಯ ಪ್ರವೃತ್ತಿಭೇದದಿಂದ ಈ ಬದ್ಧಜೀತನನಿಗೆ ಐಹಿಕಭೋಗವೂ, ತದ್ವಿರುದ್ಧವಾದ ಮೋಕ್ಷಸಾಧನೆಯೂ ಸಹ, ಹೇಗೆ ಉಂಟಾದೀತೆಂಬ ಶಙ್ಕಾನವನ್ನು ನಿರಾಕರಿಸಿ, ಪ್ರಕೃತಿಯ ಪ್ರವೃತ್ತಿಯು ಹೇಗೆ ಭೋಗ ಮೋಕ್ಷಗಳೆರಡಕ್ಕೂ ಸಾಧನವೆಂಬುವದನ್ನು ಎರಡು ವಾಕ್ಯಗಳ ಮೂಲಕ ವ್ಯಕ್ತಪಡಿಸುತ್ತಾರೆ. **ಇದು** – ಈ ಪ್ರಕೃತಿಯ ಪ್ರವೃತ್ತಿಯು, **ರಜಸ್ತಮಸ್ಸುಕ್ಕಳೈಯಿಟ್ಟು** – ತನ್ನಲ್ಲಿರುವ ರಜೋಗುಣ ತಮೋಗುಣಗಳ ಮೂಲಕವಾಗಿ, ಬದ್ಧಜೀತನರಿಗೆ, **ತತ್ವಜ್ಞಳಿಲ್** – ತತ್ವಹಿತ ಪುರುಷಾರ್ಥಗಳಲ್ಲ, **ಉಣ್ಮೈಯೈ ಮರೈತ್ತು**-ಯಾಥಾತ್ಮ್ಯವನ್ನು ಮರಿಸಿ, **ಭೋಗಾರ್ಥಮಾಕ**–ಸುಖಮಾತ್ರಾನುಭವರೂಪ ಐಹಿಕ ಸ್ವರ್ಗಾದಿ ಭೋಗಕ್ಕಾಗಿ, **ವಿಪರೀತಜ್ಞಾನತ್ತೈ**–ಸರಿಯಾದುದನ್ನು ವ್ಯತ್ಯಸ್ತವಾಗಿ ಭಾವಿಸುವ ಭ್ರಮ ರೂಪಜ್ಞಾನವನ್ನು, ಇದು ಅಜ್ಞಾನ, ಅಸ್ಪಷ್ಟ ಜ್ಞಾನಗಳಿಗೂ ಉಪಲಕ್ಷಣವು. **ಉಣ್ಣಾಣ್ಣಿಕ್ಕರದು** – ಉಂಟುಮಾಡುತ್ತದೆ. **ಇದುತಾನೇ** – ಹೀಗೆ ತತ್ವಹಿತ ಪುರುಷಾರ್ಥಗಳನ್ನು ಮರಿಸಿ ವಿಪರೀತ ಜ್ಞಾನವನ್ನುಂಟುಮಾಡಿ ಐಹಿಕ ಸುಖಮಾತ್ರಾನುಭವಗಳಲ್ಲಿ ಅಭಿರುಚಿಯನ್ನುಂಟುಮಾಡುವ ಪ್ರಕೃತಿಯ ಪ್ರವೃತ್ತಿಯೇ, **ಅಪವರ್ಗಾರ್ಥಮಾಕ** – ನಿರತಿಶಯ ಮೋಕ್ಷಪುರುಷಾರ್ಥಕ್ಕಾಗಿ. **ಸತ್ವವಿವೃದ್ಧಿಯಾಲೇ** – ಸತ್ವಗುಣಾಧಿಕ್ಯವನ್ನುಂ

ರ್ಥವಾಕ ಸತ್ವ ವಿವೃದ್ಧಿಯಾಲೇತತ್ವಜ್ಞಳೈ ಯಥಾವತ್ಪ್ರಕಾಶಿಪ್ಪಿಕ್ಕಿರದು.

ಟುಮಾಡುವದರ ಮೂಲಕ, **ತತ್ವಜ್ಞಳೈ** – ತತ್ವಹಿತ ಪುರುಷಾರ್ಥಗಳನ್ನು, **ಯಥಾವತ್** – ಯಥಾವತ್ತಾಗಿ, ಅವುಗಳ ಮಹಿಮಾನುಗುಣವಾಗಿ, **ಪ್ರಕಾಶಿಪ್ಪಿಕ್ಕಿರದು** –ಪ್ರಕಾಶಗೊಳಿಸುತ್ತದೆ. ಈ ಅಭಿಪ್ರಾಯಗಳೇ ಭಗವದ್ಗೀತೆಯಲ್ಲಿ ದೈವೀ ಮತ್ತು ಆಸುರೀ ಸ್ವಭಾವವುಳ್ಳ ಚೇತನರ ವಿಷಯವನ್ನುಪಪಾದಿಸುವ ಸಂದರ್ಭದಲ್ಲಿ ಹೇಳಲ್ಪಟ್ಟಿವೆ. ಗೀ ೧೪–೧೭. ೧೫. ೧೪.

ಲೋಭಃ ಪ್ರವೃತ್ತಿರಾರಂಭಃ ಕರ್ಮಣಾಮಶಮಃ ಸ್ಪೃಹಾ ।
ರಜಸ್ಯೇತಾನಿ ಜಾಯನ್ತೇ ವಿವೃದ್ಧೇ ಭರತರ್ಷಭ

ಚೇತನನಲ್ಲಿ ರಜೋಗುಣವು ತಲೆ ಎತ್ತಿದರೆ, ಸಂಪಾದಿಸಿದುದನ್ನು ಇತರರಿಗೆ ಕೊಡಕೂಡದೆಂಬ ಲೋಭ ಬುದ್ಧಿಯೂ, ಭೋಗಗಳಿಗಾಗಿ ಕರ್ಮಗಳಲ್ಲಿ ಪ್ರವೃತ್ತಿಯೂ, **ಅಶಮಃ** – ಇಂದ್ರಿಯಗಳನ್ನು ವಶಮಾಡಿಕೊಳ್ಳದಿರೋಣವೂ, **ಸ್ಪೃಹಾ** – ವಿಷಯ ಸುಖಗಳಲ್ಲಿ ಆಶೆಯೂ ಉಂಟಾಗುತ್ತವೆ.

ಅಪ್ರಕಾಶೋ ಪ್ರವೃತ್ತಿಶ್ಚ ಪ್ರಮಾದೋಮೋಹ ಏವಚ।
ತಮಸ್ಯೇತಾನಿ ಜಾಯನ್ತೇ ವಿವೃದ್ಧೇ ಕುರುನಂದನ ।

ಓ ಕುರುವಂಶೋತ್ಪನ್ನನಾದ ಅರ್ಜುನನೇ, ತಮೋಗುಣವು ತಲೆ ಎತ್ತಿದರೆ, ಜ್ಞಾನವಿಕಾಸವಿಲ್ಲದಿರೋಣವೂ, ಒಳ್ಳೆಯ ಕೆಲಸಗಳಲ್ಲಿ ಪ್ರವೃತ್ತಿ ಇಲ್ಲದಿರೋಣವೂ, ವಿಪರೀತಫಲವನ್ನು ಕೊಡುವ ಕಾರ್ಯಮಾಡುವದರಲ್ಲಿ ಬುದ್ಧಿಯೂ, ಭ್ರಾಂತಿಯಿಂದ ಯಥಾರ್ಥಜ್ಞಾನವಿಲ್ಲದಿರುವಿಕೆಯೂ, ಇವೆಲ್ಲವೂ ಉಂಟಾಗುತ್ತವೆ.

ಯದಾಸತ್ವೇ ವಿವೃದ್ಧೇತು ಪ್ರಳಯಂ ಯಾತಿದೇಹಭೃತ್
ತದೋತ್ತಮ ವಿದಾಂ ಲೋಕಾನಮಲಾ ಪ್ರತಿಪದ್ಯತೇ॥

ಯಾವಾಗ ಸತ್ವಗುಣವು ಅಭಿವೃದ್ಧಿಯನ್ನು ಹೊಂದುತ್ತದೋ, ಆಗ ಚೇತನನು ದೇಹಾವಸಾನವನ್ನು ಹೊಂದಿದ ಬಳಿಕ ಜ್ಞಾನವಿಕಾಸ ಹೊಂದಿದವರ ಮಧ್ಯದಲ್ಲಿ ಹುಟ್ಟಿ, ಅನಂತರ **"ಸತ್ವಾತ್ಸಂಜಾಯತೇಜ್ಞಾನಂ"** ಎಂದು ಹೇಳಿರುವ ಹಾಗೆ ಜ್ಞಾನವನ್ನು ಸಂಪಾದಿಸಿಕ್ಕೊಂಡು **"ಊರ್ಧ್ವಂ ಗಚ್ಛನ್ತಿಸತ್ವಸ್ಥಾಃ"** ಎಂದು ಹೇಳಿರುವಹಾಗೆ ಮೋಕ್ಷಸಾಮ್ರಾಜ್ಯವನ್ನು ಹೊಂದುತ್ತಾನೆ. ಹಾಗೆಯೇ ಈ ಗೀತಾ ೧೪ ನೇ ಅಧ್ಯಾಯದಲ್ಲೇ, ಈ ಅಭಿಪ್ರಾಯಗಳನ್ನೇ ಉಪಪಾದಿಸುವ ಇನ್ನೂ ಅನೇಕ ಶ್ಲೋಕಗಳಿವೆ, ಪರಾಂಬರಿಸಬಹುದು. ಆದರೆ

ಇವೈಯೆಲ್ಲಾ ಮೀಶ್ವರನುಕ್ಕುಲೀಲಾರಸಾವಹಮಾಯಿರುಕ್ಕುಮ್.

ಶುದ್ಧ ಸತ್ವ ನಿರೂಪಣಂ.

ಶುದ್ಧಸತ್ವತ್ತುಕ್ಕು ಸ್ವರೂಪಭೇದಮ್ ರಜಸ್ತಮಸ್ಸುಗಳೋಡು

"ತತ್ರ ಸತ್ವಂ ನಿರ್ಮಲತ್ವಾ ತ್ಪ್ರಕಾಶಕ ಮನಾಮಯಂ ।
ಸುಖಸಂಗೇನ ಬಧ್ನಾತಿ ಜ್ಞಾನ ಸಂಗೇನ ಚಾನಘ" ॥

ಎಂಬ ಶ್ಲೋಕವಲ್ಲ ಸತ್ವಗುಣವು ಸುಖಸಂಗದ ಮೂಲಕ ಬಂಧ ಹೇತುವಾಗುವ್ದರೂ, ಯಾವಾಗ ಅದು ಆಧಿಕ್ಯವನ್ನು ಹೊಂದಿತೋ, ಆಗ ಅದು ಮೋಕ್ಷಪ್ರಾಪ್ತಿಗೆ ಹೇತುಭೂತವಾದ ಜ್ಞಾನಪ್ರಾಪ್ತಿಗೂ ಕಾರಣವಾಗುತ್ತದೆಂಬಭಿಪ್ರಾಯದಿಂದ ಇಲ್ಲ **ಸತ್ವವಿವೃದ್ಧಿಯಾಲೇ** ಎಂದು ಪ್ರಯೋಗಸಿರುತ್ತಾರೆ.

ಇವೈಯೆಲ್ಲಾಮ್ – ಈ ಮೇಲೆ ಹೇಳಿದ ಪ್ರಕೃತಿಯ ಪ್ರವೃತ್ತಿ ಭೇದದಿಂದ, ಜೀವನು ಕರಣ ಕಳೇಬರಾದಿಗಳನ್ನು ಹೊಂದಿ, ಐಹಿಕ ಭೋಗಗಳಲ್ಲೇ ಮಗ್ನನಾಗಿ ಅವುಗಳನ್ನನುಭವಿಸುವದೂ, ಅಥವಾ ಅವುಗಳು ತುಚ್ಛವಾದುವೆಂದೆಣಿಸಿ, ಆ ಕರಣ ಕಳೇಬರಗಳ ಮೂಲಕವಾಗಿಯೇ ಯಥಾರ್ಥಜ್ಞಾನವನ್ನು ಪಡೆದು ಮೋಕ್ಷವನ್ನು ಹೊಂದುವದೂ, ಇವೆಲ್ಲವೂ, **ಈಶ್ವರನುಕ್ಕು ಲೀಲಾರಸಾವಹನಾಯಿರುಕ್ಕುಮ್** – ಈಶ್ವರನಿಗೆ ಲೀಲಾ ರಸನನ್ನುಂಟುಮಾಡುವಂಥಾವುಗಳು

ಶುದ್ಧ ಸತ್ವ ನಿರೂಪಣವು

ಪ್ರಕೃತಿಯ ಸಾಧಾರಣ ಧರ್ಮಗಳನ್ನು ಹಿಂದೆ ಹೇಳಿ, ಈಗ ಶುದ್ಧ ಸತ್ವದ ಸ್ವರೂಪ ಸ್ಥಿತಿ ಪ್ರವೃತ್ತಿಗಳನ್ನು ಹೇಳಲು ಹೊರಟು, ಪ್ರಥಮತಃ ಅದರ ಸ್ವರೂಪ ವೈಲಕ್ಷಣ್ಯವನ್ನು ತಿಳಿಸುತ್ತಾರೆ. ಈ ಪ್ರಕೃತಿ ಮಂಡಲದಲ್ಲಿರುವ ಬದ್ಧರೇಮೊದಲಾದವುಗಳಲ್ಲಿರುವ ಸತ್ವವು ರಜಸ್ತಮೋಗುಣಗಳಿಂದ ಕಲುಷಿತವಾದುದು. ನಿತ್ಯವಿಭೂತಿಯ ಶುದ್ಧಸತ್ವವಾದರೋ ರಜಸ್ತಮೋ ಗುಣಗಳಿಂದ ಸೇರದೇ ದಿವ್ಯವಾಗಿರುವದರಿಂದ "ಅಪ್ರಾಕೃತನೆಂ" ದೆನಿಸುತ್ತದೆಂದು ಹೇಳುತ್ತಾರೆ. **ಶುದ್ಧಸತ್ವತ್ತುಕ್ಕು** – ಶುದ್ಧ ಸತ್ವಕ್ಕೆ, ಸ್ವರೂಪದಲ್ಲಿರುವ ಭೇದವು. **ರಜಸ್ತಮಸ್ಸುಗಳೋಡು**–ರಜಸ್ತಮೋ ಗುಣಗಳೊಂದಿಗೆ, **ಕಲಶಾದ** – ಸೇರದೇ ಇರುವ. **ಸತ್ವಗುಣಾಶ್ರಯವಾಯಿರುಕ್ಕ್ಕುಮ್** – ಸತ್ವಗುಣಕ್ಕೆ ಆಶ್ರಯವಾಗಿರೋಣವು. ಶುದ್ಧ ಸತ್ವವೆಂಬ. ಅದರ ಹೆಸರೇ ಮೇಲಿನ ಅಭಿಪ್ರಾಯವನ್ನು ಸೂಚಿಸುತ್ತದೆ. ಶುದ್ಧ ಸತ್ವವೆಂದರೇನೇ ರಜಸ್ತಮಸ್ಸುಗಳಿಂದ ಸೇರದೇ ಇರುವ ಸತ್ವವು ಎಂಬಭಿಪ್ರಾಯ ಉಂಟಾಗುತ್ತದೆ.

ಕಲಶಾದ ಸತ್ವಗುಣಾಶ್ರಯ ಮಾಯಿರುಕ್ಕೈ. ಇರ್ದಿ ಸ್ಥಿತಿ ಭೇದಮ್ ನಿತ್ಯಮಾನ ಮಂಟಪ ಗೋಪುರಾದಿಗಳಿಲುಮ್, ಈಶ್ವರನುಡೈಯವುಮ್ ನಿತ್ಯರುಡೈಯವುಮ್ ವಿಗ್ರಹ ವಿಶೇಷಜ್ಞಳಿಲುಮ್, ನಿತ್ಯಮಾಯಿರುಕ್ಕುಮ್. ನಿತ್ಯರುಡೈಯವುಮ್, ಮುಕ್ತರುಡೈಯವುಮ್, ಈಶ್ವರನುಡೈಯವುಮ್, ಅನಿತ್ಯೇಚ್ಛೈಯಾಲೇ ವನ್ದವಿಗ್ರಹಾದಿಗಳಿಲ್ ಅನಿತ್ಯಮಾಯಿರುಕ್ಕುಮ್.

ಇರ್ದಿ ಪ್ರವೃತ್ತಿ ಭೇದಮ್ ಇವರ್ಗಳುಡೈಯ ಇಚ್ಛೈಕ್ಕೇಡಾಗ

ಮುಂದೆ ಶುದ್ಧ ಸತ್ವಸ್ಥಿತಿ ಎಂಥಾದ್ದು, ಅದೇನು ನಿತ್ಯವಾದುದೇ ಅನಿತ್ಯವಾದುದೇ ಎಂದು ಚರ್ಚಿಸುತ್ತಾರೆ. ಅದು ನಿತ್ಯವಾಗಿಯೂ, ಅನಿತ್ಯವಾಗಿಯೂ ಇರಬಹುದೆಂದು ತೋರ್ಪಡಿಸುತ್ತಾರೆ.

ಇರ್ದಿ ಸ್ಥಿತಿಭೇದಮ್ – ಈ ಶುದ್ಧಸತ್ವದ ಸ್ಥಿತಿಯಲ್ಲಿರುವ ಭೇದವೇನೆಂದರೆ :—**ನಿತ್ಯಮಾನಮಂಟಪ ಗೋಪುರಾದಿಗಳಿಲುಮ್** – ನಿತ್ಯವಾದ, ಮಂಟಪ ಗೋಪುರ ಮೊದಲಾದವುಗಳಲ್ಲೂ, **ಈಶ್ವರನುಡೈಯವುಮ್ ನಿತ್ಯರುಡೈಯವುಮ್ ವಿಗ್ರಹವಿಶೇಷಜ್ಞಳಿಲುಮ್** – ಈಶ್ವರನ ಮತ್ತು ನಿತ್ಯರ ದಿವ್ಯ ಮಙ್ಗಳ ವಿಗ್ರಹಗಳಲ್ಲೂ, ನಿತ್ಯವಾಗಿರುತ್ತದೆ. ಆದರೆ ನಿತ್ಯರ ಮುಕ್ತರ ಈಶ್ವರನ, **ಅನಿತ್ಯೇಚ್ಛೈಯಾಲೇ** – ಅನಿತ್ಯವಾದ ಸಙ್ಕಲ್ಪಗಳಿಂದ, **ವನ್ದ** – ಪ್ರಾಪ್ತವಾದ, **ವಿಗ್ರಹಾದಿಗಳಿಲ್** – ಶರೀರಗಳಲ್ಲಿ, **ಅನಿತ್ಯಮಾಯಿರುಕ್ಕುಂ** – ಅನಿತ್ಯವಾಗಿರುತ್ತದೆ. ಹಿಂದೆಯೇ **ನಿತ್ಯಜ್ಞಳ್ ನಿತ್ಯೇಚ್ಛಾಸಿದ್ಧಜ್ಞಳ್, ಅನಿತ್ಯಜ್ಞಳ್ ಅನಿತ್ಯೇಚ್ಛೈಯಾಲೆ ಉತ್ಪನ್ನಂಗಳ್** ಎಂದು ಹೇಳಿರುವುದರಿಂದ,ದಿವ್ಯವೈಕುಂಠದಲ್ಲಿ ಈಶ್ವರ ನಿತ್ಯ ಮುಕ್ತರುಗಳಿಗೆ ಇರುವ ಶರೀರ ವಿಶೇಷಗಳೆಲ್ಲಾ ಸರ್ವೇಶ್ವರನ ನಿತ್ಯೇಚ್ಛೆಯಿಂದ ಸಿದ್ಧವಾದವುಗಳಾದುದರಿಂದ, ಶುದ್ಧಸತ್ವಸ್ಥಿತಿಯು ಈ ಸಂದರ್ಭಗಳಲ್ಲಿ ನಿತ್ಯವಾದವುಗಳು.ಆದರೆಸರ್ವೇಶ್ವರನು ಕೆಲವು ಕಾಲದವರಿವಿಗೆ ಮಾತ್ರವೇ ಅವತಾರಗಳಲ್ಲಿ ಶರೀರವನ್ನು ಧರಿಸುವಿಕೆಯು, ಹಾಗೆಯೇ ನಿತ್ಯ ಸೂರಿಗಳು ಆಳ್ವಾರಾಚಾರ್ಯರುಗಳಾಗಿ ಅವತರಿಸಿದಾಗ ಶರೀರವನ್ನು ಹೊಂದಿರೋಣವೂ ಸಹ, ಅಲ್ಪಕಾಲಮಾತ್ರವಿರುವದಾಗಿ ಅನಿತ್ಯೇಚ್ಛೆಯಿಂದುಂಟಾದುದರಿಂದ ಅನಿತ್ಯವಾದವು ಎಂಬ ಭಾವವು. ಶ್ರುತಿಯಲ್ಲಿ "ಕಾಮಚಾರೋಭವತಿ" ಎಂದು ಮುಕ್ತನ ವಿಷಯದಲ್ಲಿ ಛಾಂದೋಗ್ಯದಲ್ಲಿ ಹೇಳಿರುವಹಾಗೆ, ಪಿತೃಲೋಕ ಭೂಲೋಕ ಸಂಚಾರಗಳಿಗೆ ಅನುಕೂಲವಾದವಿಗ್ರಹಗಳು, ಅವರ ಅನಿತ್ಯ ಸಙ್ಕಲ್ಪದಿಂದುಂಟಾಗುವದರಿಂದ ಅನಿತ್ಯವಾದವುಗಳು ಎಂಬ ಭಾವವು.

ಪರಿಣಾಮಾದಿಗಳಾಲೇ ಶೇಷಿಕ್ಕು ಭೋಗೋಪಕರಣ ಮಾಯುಮ್, ಶೇಷಭೂತನುಕ್ಕು ಕೈಂಕರ್ಯೋಪಕರಣ ಮಾಯುಮ್, ನಿರ್ಕ್ಕೈ.

ಕಾಲ ನಿರೂಪಣಂ.

ಕಾಲತ್ತುಕ್ಕು ಸ್ವರೂಪ ಭೇದಮ್ ಜಡಮಾಯ್ ವಿಭುವಾಯಿರುಕ್ಕ್ಕ. ಇದಿಕ್ಕಿಸ್ಥಿತಿ. ಕಾಲಾವಚ್ಛೇದ ಮಿಲ್ಲಾಮ್ಮೈಯಾಲೆ ನಿತ್ಯೈಯಾ

ಇದಿಕ್ಕ ಪ್ರವೃತ್ತಿ ಭೇದಮ್ – ಈ ಶುದ್ಧಸತ್ವದ ಪ್ರವೃತ್ತಿಯಲ್ಲಿರುವ ವೈಲಕ್ಷಣ್ಯವೇನೆಂದರೆ :—ಇವರ್ಗಳುಡೈಯ – ಎಂದರೆ ಈಶ್ವರ ನಿತ್ಯಮುಕ್ತರುಗಳ, ಇಚ್ಛೈಕ್ಕೀಡಾಗ – ಸಙ್ಕಲ್ಪಾನುಸಾರವಾಗಿ, ಪರಿಣಾಮಾದಿಗಳಾಲೇ – ಪರಿಣಾಮ ಮೊದಲಾದವುಗಳನ್ನು ಹೊಂದಿ, ಇಲ್ಲಿ ಆದಿಶಬ್ದದಿಂದ ಚಲನವೇ ಮೊದಲಾದ ಕ್ರಿಯೆಗಳು ಹೇಳಲ್ಪಟ್ಟವು ; ಶೇಷಿಕ್ಕು ಭೋಗೋಪಕರಣಮಾಯುಮ್ – ಶೇಷಿಯಾದ ಸರ್ವೇಶ್ವರನಿಗೆ ಭೋಗೋಪಕರಣಗಳಾಗಿಯೂ, ಶೇಷಭೂತನುಕ್ಕು ಕೈಂಕರ್ಯೋಪಕರಣಮಾಯುಮ್ – ಶೇಷಭೂತರಾದ ನಿತ್ಯಮುಕ್ತರುಗಳಿಗೆ, ಸರ್ವೇಶ್ವರನಿಗೆ ಕೈಙ್ಕರ್ಯಮಾಡುವ ಸಾಮಗ್ರಿಗಳಾಗಿಯೂ ನಿರ್ಕ್ಕೈ – ಇರೋಣಪು, ಇಲ್ಲಿ ಶುದ್ಧ ಸತ್ವದ ಪರಿಣಾಮಗಳು, ಪ್ರಕೃತಿಯ ಪರಿಣಾಮಗಳಾಗೆ ಜೀವನ ಕರ್ಮಮೂಲಗಳಾಗಿ ಅಲ್ಲವೆಂದು ತಿಳಿಸುವದಕ್ಕಾಗಿ, ಇವರ್ಗಳುಡೈಯ ಇಚ್ಛೈಕ್ಕೀಡಾಗ – ಎಂದು ಪ್ರಯೋಗಿಸಿರುತ್ತಾರೆ. ಪ್ರಕೃತಿಯಾದರೋ ಬದ್ಧರ ಇಚ್ಛಾಧೀನವಾಗಿ ಪರಿಣಾಮಹೊಂದಿ ಯಾವಾಗಲೂ ಶೇಷಿಗೆ ಕೈಙ್ಕರ್ಯಸಾಮಗ್ರಿಯಾಗುವುದಿಲ್ಲ. ಏಕೆಂದರೆ ಬದ್ಧರು ಕರ್ಮಾಧೀನರು. ಈ ಶುದ್ಧ ಸತ್ವವಾದರೋ ಹಾಗಲ್ಲ. ಇದು ಇಚ್ಛಾಧೀನ ಪರಿಣಾಮವನ್ನು ಹೊಂದಿ, ನಿತ್ಯಮುಕ್ತರಿಗೆ ಕೈಙ್ಕರ್ಯೋಪಕರಣವಾಗಿಯೂ ಶೇಷಿಯಾದ ಸರ್ವೇಶ್ವರನಿಗೆ ಭೋಗೋಪಕರಣವಾಗಿಯೂ ಆಗುತ್ತದೆಂದು ಹೇಳುತ್ತಾರೆ ಈ ಪರಿಣಾಮಗಳು, ಪ್ರಕೃತಿಯಲ್ಲಾಗೆ ಕಾಲಕ್ಕೆ ಅಧೀನವಾಗುವದಿಲ್ಲವು; ಆದರೆ ಅವರುಗಳ ಇಚ್ಛೆಗೆ ಮಾತ್ರ ಅಧೀನವಾಗುವದು. **"ನಕಾಲಸ್ತತ್ರವೈಪ್ರಭುಃ"** ಎಂದು ಹೇಳಲ್ಪಟ್ಟಿರುತ್ತದೆ.

ಮುಂದೆ ಕಾಲದ ಸ್ವರೂಪ ಸ್ಥಿತಿ ಪ್ರವೃತ್ತಿಗಳು ಹೇಳಲ್ಪಡುತ್ತವೆ

ಕಾಲತ್ತುಕ್ಕು ಸ್ವರೂಪಭೇದಮ್ – ಕಾಲಕ್ಕೆ ಸ್ವರೂಪ ವೈಲಕ್ಷಣ್ಯವೇನೆಂದರೆ :—ಜಡಮಾಯ್ ವಿಭುವಾಯಿರುಕ್ಕ್ಕ – ಜ್ಞಾನಾನುಪಲಬ್ಧಿಯೂ

ಯಿರುಕ್ಕುಮ್. (ಇದಿ) ಪ್ರವೃತ್ತಿಭೇದಮ್ ಕಲಾಕಾಷ್ಠಾದಿ ವಿಭಾಗತ್ತಾಲೆ ಸೃಷ್ಟ್ಯಾದಿಗಳುಕ್ಕು ಉಪಕರಣ ಮಾಯಿರುಕ್ಕಿರ ಪಡಿಯಿಲೆ ಕಣ್ಡುಕೊಳ್ವದು.

ಎಲ್ಲಾಕಡೆಯಲ್ಲೂ ವ್ಯಾಪಿಸಿರೋಣವೂ. ಇಲ್ಲಿ ಕಾಲಸ್ವರೂಪಕ್ಕೆ ಲಕ್ಷಣ ಹೇಳುವದರಲ್ಲಿ ವಿಭುತ್ವವು ಕಾಲಕ್ಕೆ ಇರುವಹಾಗೆ ಸರ್ವೇಶ್ವರನಿಗೂ ಉಂಟು. ಸರ್ವೇಶ್ವರನಲ್ಲಿ ಅನ್ವಯಿಸಬೇ ಇರುವದಕ್ಕಾಗಿ **ಜಡಮಾಯ್** ಎಂದು ಹೇಳಲ್ಪಟ್ಟಿತು. ಸರ್ವೇಶ್ವರನು ಜಡವಲ್ಲವು. ವಿಭುವೆಂದು ಹೇಳಿದುದರಿಂದ ವಿಭುವಲ್ಲದ ಪ್ರಕೃತಿಗಿಂತ ವಿಲಕ್ಷಣವಾದುದೆಂದು ಊಹಿಸಬಹುದು.

ಇದಿ ಸ್ಥಿತಿ – ಈ ಕಾಲದ ಸ್ಥಿತಿಯು, **ಕಾಲಾವಚ್ಛೇದಮಿಲ್ಲಾಮೆಯಾಲೇ** – ಕಾಲಕ್ಕೆ ಪರಿಮಿತಿ ಯಿಲ್ಲದುದರಿಂದ, **ನಿತ್ಯೈಯಾಯಿರುಕ್ಕುಮ್** – ನಿತ್ಯವಾಗಿರುತ್ತದೆ. ಕಾಲತತ್ವವಿಲ್ಲದ ಸಮಯವೇ ಇಲ್ಲವಾದುದರಿಂದ ಅದು ನಿತ್ಯವು ಎಂಬ ಭಾವವು.

ಇದಿ ಪ್ರವೃತ್ತಿಭೇದಮ್ – ಈ ಕಾಲದ ಪ್ರವೃತ್ತಿಯಲ್ಲಿರುವ ಭೇದವೇನೆಂದರೆ, **ಕಲಾಕಾಷ್ಠಾದಿ ವಿಭಾಗತ್ತಾಲೆ** – ಕಲಾ ಕಾಷ್ಠಾ ಮೊದಲಾದ ವಿಭಾಗಗಳಿಂದ, **ಸೃಷ್ಟ್ಯಾದಿಗಳುಕ್ಕು ಉಪಕರಣಮಾಯಿರುಕ್ಕಿರ ಪಡಿಯಿಲೆ** – ಸರ್ವೇಶ್ವರನ ಜಗತ್ಸೃಷ್ಟಿ ಮೊದಲಾದವುಗಳಿಗೆ ಸಹಾಯವಾಗಿರುವಹಾಗೆ, **ಕಣ್ಡುಕೊಳ್ವದು** – ತಿಳಿದುಕೊಳ್ಳುವದು. ಇಲ್ಲಿ ಕಾಷ್ಠೆ ಎಂದರೆ **"ಅಷ್ಟಾದಶ ನಿಮೇಷಾಸ್ತು ಕಾಷ್ಠಾ"** ಎಂದು ಹೇಳಿರುವ ಮೇರೆಗೆ ಸಲ ಕಣ್ಣುರೆಪ್ಪೆಯಾಡಿಸುವ ಕಾಲ. **ಕಲಾ** ಎಂದರೆ ಅಂತಹ ೩೦ ಕಾಷ್ಠೆಗಳು, ೩೦ ಕಲೆಗಳಿಗೆ ಒಂದು ಕ್ಷಣ, ೧೨ ಕ್ಷಣಕ್ಕೆ ಒಂದು ಮುಹೂರ್ತ. ಹೀಗೆಯೇ ಕಾಲವಿಭಾಗಗಳಾದ ರಾತ್ರಿ ಹಗಲು, ವಾರ, ಪಕ್ಷ, ಮಾಸ, ಋತು,ಸಂವತ್ಸರ ಮೊದಲಾದ ಕಾಲ ವಿಭಾಗಗಳು **"ಆದಿ"** ಪದದಿಂದ ಸಂಗ್ರಹಿಸಲ್ಪಟ್ಟವು. ಸೃಷ್ಟ್ಯಾದಿ ಎಂಬಲ್ಲಿರುವ **ಆದಿ** ಪದದಿಂದ ಸ್ಥಿತಿಲಯಗಳೂ ಸಹ ಊಹಿಸಲ್ಪಟ್ಟವು.

ಆದರೆ ಮೇಲೆ ಹೇಳಿದುದರಲ್ಲಿ ಕೆಲವು ಶರೀರಗಳು ನಿತ್ಯವಾದವೆಂದೂ, ಕೆಲವು ಅನಿತ್ಯವೆಂದೂ ಹೇಳಲ್ಪಟ್ಟವು. ಪರಮ ಪದದಲ್ಲಿ ನಿತ್ಯಮುಕ್ತರೇ ಮೊದಲಾದವರ ಶರೀರಗಳು ನಿತ್ಯವಾದವು. ಬದ್ಧರ ಶರೀರಗಳೆಲ್ಲಾ ಅನಿತ್ಯಗಳು. ಇಲ್ಲಿ ಅನಿತ್ಯವೆಂದರೆ ಸ್ವರೂಪನಾಶವೆಂಬಭಿಪ್ರಾಯವಲ್ಲವು. ಹಾಗೆ ಸ್ವರೂಪನಾಶವನ್ನು ಹೇಳಿದರೆ ಅಸತ್ಕಾರ್ಯವಾದವೆಂದರೆ ಕಾರ್ಯವು ಕಾರಣದಲ್ಲಿಲ್ಲದೆ ಹೊಸದಾಗಿ ಉತ್ಪನ್ನವಾಯಿತೆಂಬ ತಾರ್ಕಿಕನ ವಾದವು ಪ್ರಾಪ್ತವಾಗುತ್ತದೆ. ಇದು ಅಪಸಿದ್ಧಾಂತ

ಇದ್ದ್ರವ್ಯಜ್ಞಳೆಲ್ಲಾಂ ಸ್ವರೂಪೇಣ ನಿತ್ಯಜ್ಞಳಾಯಿರುಕ್ಕುಮ್. ನಾಮಾನ್ತರ ಭಜನಾರ್ಹಾವಸ್ಥಾ ವಿಶೇಷ ವಿಶಿಷ್ಟತಯೈಯಿಟ್ಟು ಶಿಲವ ತ್ತೈ ಅನಿತ್ಯಜ್ಞಳೆಜ್ಞ್ರದು. ಅಳಿನ್ದದೋಡು ಸಜಾತೀಯಜ್ಞಳಾನ ಅವ

ವೆಂದು ಶ್ರೀ ಭಾಷ್ಯಕಾರರು **"ತದನನ್ಯತ್ವಂ ಆರಮ್ಭಣಶಬ್ದಾದಿಭ್ಯಃ"** ಎಂಬ ಬ್ರಹ್ಮಸೂತ್ರಕ್ಕೆ ಭಾಷ್ಯವನ್ನು ಬರೆಯುವಾಗ ವಿಶದವಾಗಿ ತೋರಿಸಿರುತ್ತಾರೆ. ಆದುದರಿಂದ ಅನಿತ್ಯವೆಂದರೆ ಬೇರೆಯವಸ್ಥೆಯನ್ನು ಹೊಂದುವಿಕೆಯು. ಸ್ವೇಚ್ಛೆಯಿಂದಲೇಯಾಗಲಿ ಅಥವಾ ಹಾಗಲ್ಲದೇಯಾಗಲಿ ಅನೇಕ ಸಂದರ್ಭಗಳಲ್ಲಿ ಇಂತಹ ಅವಸ್ಥಾಂತರವು ಉಂಟಾಗಬಹುದಾದುದರಿಂದ ನಿತ್ಯಾನಿತ್ಯ ವಿವೇಚನೆಗೇನೇ ಮಾರ್ಗವಿಲ್ಲದಂತಾಗುತ್ತದೆ. ಅದೂ ಅಲ್ಲದೆ **ಸರ್ವಂದ್ರವ್ಯಂನಿತ್ಯಂ** ಎಂಬ ಸಿದ್ಧಾಂತದೊಂದಿಗೆ ವಿರೋಧಿಸುತ್ತದೆ. ಆದುದರಿಂದ ದ್ರವ್ಯವೆಲ್ಲಾ ಸ್ವರೂಪತಃ ನಿತ್ಯವೆಂದು ಹೇಳುತ್ತಾರೆ.

ಇದ್ದ್ರವ್ಯಜ್ಞಳೆಲ್ಲಾಂ – ಈ ಅಚೇತನ ರೂಪದ್ರವ್ಯವೆಲ್ಲಾ, **ಸ್ವರೂಪೇಣ** – ಸ್ವರೂಪ ಮೂಲಕವಾಗಿ, **ನಿತ್ಯಂಗಳಾಯಿರುಕ್ಕುಂ** – ನಿತ್ಯವಾಗಿರುತ್ತವೆ, **ನಾಮಾನ್ತರಭಜನಾರ್ಹಾವಸ್ಥಾವಿಶೇಷ ವಿಶಿಷ್ಟತಯೈ** – ಬೇರೆ ಹೆಸರನ್ನು ಹೊಂದಲು ಯೋಗ್ಯವಾದ ಬೇರೆ ಅವಸ್ಥಾವಿಶೇಷದಿಂದ ಕೂಡಿರುವಿಕೆಯನ್ನು, **ಯಿಟ್ಟು** – ಮೂಲಮಾಡಿಕ್ಕೊಂಡು, **ಶಿಲವತ್ತೈ** – ಕೆಲವು ಪದಾರ್ಥಗಳನ್ನು, **ಅನಿತ್ಯಜ್ಞಳೆಜ್ಞ್ರದು** – ಅನಿತ್ಯಗಳೆಂದು ಹೇಳುವದು. ಇವುಗಳಲ್ಲಿ ಕೆಲವು ದ್ರವ್ಯಗಳು ಪರಿಣಾಮವನ್ನು ಹೊಂದಿ ಬೇರೆ ಅವಸ್ಥೆಗಳನ್ನು ಪಡೆದು, ಅದರಿಂದ ಬೇರೆ ಹೆಸರನ್ನು ಹೊಂದುವದರಿಂದ, ಅವು ಅನಿತ್ಯಗಳೆಂದು ಹೇಳಿಸಿಕೊಳ್ಳುವವು. ಆದರೆ ಅವೂ ಕೂಡ ನಿತ್ಯವಾದವೇ, ಆದುದರಿಂದ ಅವುಗಳಿಗೆ ಪ್ರವಾಹತಃ ನಿತ್ಯತ್ವವನ್ನು ಹೇಳುತ್ತಾರೆ. ಆದರೆ ದ್ರವ್ಯಕ್ಕೆ ಸ್ವರೂಪತಃ ನಿತ್ಯತ್ವವೇ ಇರುವಾಗ ಪ್ರವಾಹತಃ ನಿತ್ಯತ್ವವನ್ನು ಏಕೆ ಹೇಳಬೇಕೆಂದರೆ ಸಮಾಧಾನವನ್ನು ಹೇಳುತ್ತಾರೆ. **ಅಳಿನ್ದದೋಡು** – ಕಳೆದು ಹೋವ ಅವಸ್ಥೆಯೊಂದಿಗೆ, **ಸಜಾತೀಯಜ್ಞಳಾನ** – ಆ ಜಾತಿಗೇನೇ ಸೇರಿ ಪ್ರಾಪ್ತವಾಗುವ ಎಂದರೆ ವಿಷಮವಲ್ಲದೆ ಸಮಾನವಾದ, **ಅವಸ್ಥಾನ್ತರಜ್ಞಳ್ ಮೇಲುಮ್** – ಬೇರೆ ಇತರ ಅವಸ್ಥೆಗಳು ಉತ್ತರೋತ್ತರ, **ಮುಳಕ್ಕವರುಗೈಯಾಲೆ** – ಯಾವಾಗಲೂ ಬರುವದರಿಂದ ಎಂದರೆ ಉಂಟಾಗುವದರಿಂದ, ಅವುಗಳನ್ನು, **ಪ್ರವಾಹನಿತ್ಯಂಗಳೆಜ್ಞ್ರದು** – ಪ್ರವಾಹನಿತ್ಯಗಳನ್ನು ಹೇಳುವದು, ಹಾಗೆ ಹೇಳಲ್ಪಡುವವು ಎಂಬ ಭಾವವು. **ಪ್ರವಾಹನಿತ್ಯ** ವೆಂಬುವದಕ್ಕೆ **ವಿಸದೃಶಾವಸ್ಥಾನಾಂತರಿತ ಸುಸದೃಶಾವಸ್ಥಾಭಾಕ್ತ್ವಂ** – ಎಂಬದಾ

ಸ್ಥಾನ್ತರಜ್ಞಳ್ ಮೇಲುಮ್ ಮುಳಕ್ಕವರುಗೈಯಾಲೇ ಪ್ರವಾಹನಿತ್ಯ ಜ್ಞಳೆನ್ರು ಶೊಲ್ಲುಕಿರದು.

ಸ್ವಾಧೀನ ಶಬ್ದಾರ್ಥನಿರೂಪಣಂ

ಇಪ್ಪದಾರ್ಥಜ್ಞಳೆಲ್ಲಾ ವ[illegible]ನುಡೈಯುಮ್ ಸ್ವರೂಪಸ್ಥಿತಿ ಪ್ರವೃ

ಗಿ ಸಾರಪ್ರಕಾಶಿಕಾ ಸಾರನಿವರಣೆ ವಾಖ್ಯಾತೃಗಳಾದ ಶ್ರೀಮದ್ಭಾರದ್ವಾಜ ಶ್ರೀನಿವಾಸಾಚಾರ್ಯರೂ ಶ್ರೀಶೈಲ ಶ್ರೀನಿವಾಸಾಚಾರ್ಯರವರೂ ಸಹ ಲಕ್ಷಣವನ್ನು ಹೇಳಿರುತ್ತಾರೆ. ಅನನ್ಯಗಳು ವಿಸದೃಶ ಸಜಾತೀಯ ವೆಂದರೆ ವಿಷಮ, ಸಮಾನವೆಂದು ಎರಡು ವಿಧವು. ಹಾಲು ನೊಸರಾಗುವದು ವಿಷಮಾವಸ್ಥೆಯು; ದೀಪವು ಉರಿಯುತ್ತಿರುವಾಗ ಅನೇಕ ಪರಿಣಾಮಗಳನ್ನು ಹೊಂದುತ್ತವೆ, ಅವೆಲ್ಲಾ ಸುಸದೃಶ ಅಥವಾ ಸಮಾನಾವಸ್ಥೆಗಳು. ಹಾಗೆ ಸಮಾನಾವಸ್ಥೆಯನ್ನು ಹೊಂದುವದಕ್ಕೆ ಪ್ರವಾಹತಃ ನಿತ್ಯವೆಂದು ಹೇಳಲ್ಪಡುವದು. **ಮುಳಕ್ಕ್ವರುಗೈಯಾಲೆ** – ಎಂದರೆ ಯಾವಾಗಲೂ ಉಂಟಾಗುತ್ತದೆ ಎಂಬದಾಗಿ ಹೇಳಿರುವದರಿಂದ **"ಧಾತಾಯಥಾ ಪೂರ್ವ ಮಕಲ್ಪಯತ್"**, ಕಲ್ಪಕಲ್ಪಕ್ಕೂ ಪೂರ್ವದಲ್ಲಿನ ಹಾಗೆ ಸೃಷ್ಟಿರೂಪ ಪರಿಣಾಮ ಕ್ರಮವು ಜರಗುತ್ತದೆಂಬ ಶ್ರುತ್ಯರ್ಥವು ಉಪಪಾದಿಸಲ್ಪಟ್ಟಿತು.

ಶ್ರೀ ಭಾಷ್ಯಕಾರರವರು ಶ್ರೀರಙ್ಗ ಗದ್ಯದಲ್ಲಿ **"ಸ್ವಾಧೀನತ್ರಿವಿಧಚೇತನಾಚೇತನ ಸ್ವರೂಪ ಸ್ಥಿತಿ ಪ್ರವೃತ್ತಿ ಭೇದ"** ವೆಂಬ ವಚನದಿಂದ ಪ್ರಾರಂಭಿಸಿರುವದರಿಂದ, ಅದನ್ನು ಶ್ರೀ ನಿಗಮಾನ್ತ ದೇಶಿಕರವರು ಮನಸ್ಸಿನಲ್ಲಿಟ್ಟವರಾಗಿ, ಮೂರು ವಿಧ ಚೇತನರೇನು, ಮೂರು ವಿಧ ಅಚೇತನವೇನು, ಇವುಗಳ ಸ್ವರೂಪ ಸ್ಥಿತಿ ಪ್ರವೃತ್ತಿಗಳನ್ನು ವಿಶದವಾಗಿ ತೀರಿಸಿ, ಅನಂತರ ಇವುಗಳೆಲ್ಲಾ ಈಶ್ವರನಿಗೆ ಸ್ವಾಧೀನವಾದುವು ಎಂಬದಾಗಿ ಹೇಳಲುಪಕ್ರಮಿಸಿ, **ಆ ಸ್ವಾಧೀನ** ಶಬ್ದಾರ್ಥವನ್ನು ವ್ಯಕ್ತಪಡಿಸುತ್ತಾರೆ.

"ಸ್ವಾಧೀನ" ವೆಂಬ ಶಬ್ದದ ಅರ್ಥನಿರೂಪಣೆಯು

ಇಪ್ಪದಾರ್ಥಜ್ಞಳೆಲ್ಲಾವ[illegible]ನುಡೈಯುಮ್–ಈ ಮೇಲೆ ಹೇಳಿದ ಎಲ್ಲಾ ಪದಾರ್ಥಗಳ ಎಂದರೆ ತ್ರಿವಿಧ ಚೇತನಾಚೇತನ ರೂಪ ಸಮಸ್ತ ವ್ಯವ್ಯಗಳ, ಸ್ವರೂಪ ಸ್ಥಿತಿ ಪ್ರವೃತ್ತಿಭೇದಗಳೂ, **ಈಶ್ವರನುಕ್ಕು ಸ್ವಾಧೀನಜ್ಞಳಾಯಿರುಕ್ಕ್ಕ, ಯಾವದು** – ಸರ್ವೇಶ್ವರನಿಗೆ ಸ್ವಾಧೀನಗಳಾಗಿ ಇವೆ ಎಂದರೇನು? **ಈಶ್ವರಸತ್ತೈಯುಮ್** – ಸರ್ವೇಶ್ವರನ ಸತ್ತೆಯೂ ಮತ್ತು **ಈಶ್ವರೇಚ್ಛೈಯೈ**

ತ್ರಿಭೇದಸ್ಥಳ ಈಶ್ವರನುಕ್ಕು ಸ್ವಾಧೀನಪ್ಪಟ್ಟಿರುಕ್ಕೈ ಯಾವದು ? ಈಶ್ವರ ಸತ್ತೈಯುಮ್ ಈಶ್ವರೇಚ್ಛೈಯೈಯು ನೊಳಿಯ ವಿವಗ್ರಕ್ಕು ಸತ್ತಾದಿಗಳ್ ಕೂಡಾದೊಳಿಗೈ. ಆಕ್ಕೈಯಾಲ್ ಇನ್ನಮುಸ್ತ ವಸ್ತುಗಳುಕ್ಕುಮ್ ಸ್ವಭಾವಸಿದ್ಧಾನುಕೂಲ್ಯಂ ಈಶ್ವರೇಚ್ಛಾಯತ್ತಂ.

ಯುಮ್ – ಆ ಸತ್ಯಸಙ್ಕಲ್ಪನ ಸಙ್ಕಲ್ಪವೂ, **ಒಳಿಯ** – ಇಲ್ಲದೆ, **ಇವಗ್ರಕ್ಕುಕ್ಕು ಸತ್ತಾದಿಗಳ್**– ಈ ಎಲ್ಲಾ ಪದಾರ್ಥಗಳ ಸತ್ತೆ ಮೊದಲಾದವುಗಳು, **ಕೂಡಾದೊಳಿಗೈ** – ಬಂದಿರಲಾಗದೆ ಇರುವಿಕೆಯು. ಸರ್ವೇಶ್ವರನ ಸ್ವರೂಪ ಸಙ್ಕಲ್ಪಗಳ ಸಂಬಂಧವಿಲ್ಲದೆ ಇತರ ಪದಾರ್ಥಗಳಿಗೆಲ್ಲಾ ಸತ್ತೆ ಮೊದಲಾದವುಗಳು ಎಂದರೆ ಸ್ವರೂಪ ಸ್ಥಿತಿಪ್ರವೃತ್ತಿಗಳೊಂದೂ ಇಲ್ಲದೆ ಹೋಗುತ್ತವೆಂಬ ಭಾವವು. ಕೋಽ್ಯೇವಾನ್ಯಾತ್ (ತೈ. ಉ. ೨. ೭. ೧.) ಇವೇ ಮೊದಲಾದ ಶ್ರುತಿಗಳಲ್ಲಿ ಭಗವಂತನಲ್ಲದೆ ಇನ್ಯಾರಿಗೂ ಪದಾರ್ಥಗಳಿಗೆ ಸತ್ತೆಯನ್ನೀಯುವ ಶಕ್ತಿ ಇರುವುದಿಲ್ಲವೆಂದು ಉಪಪಾದಿಸಲ್ಪಟ್ಟಿರುತ್ತದೆ. ಇಲ್ಲಿ **ಆದಿ** ಪದದಿಂದ ಸ್ವರೂಪಸ್ಥಿತಿ ಪ್ರವೃತ್ತಿಗಳ ಕಾರ್ಯಕಾರಣತ್ವವು ಹೇಳಲ್ಪಟ್ಟಿತು. ಹೀಗೆ ಎಲ್ಲಾ ವಸ್ತುಗಳ ಸ್ವರೂಪಸ್ಥಿತಿ ಪ್ರವೃತ್ತಿಗಳೆಲ್ಲಾ ಈಶ್ವರ ಸ್ವರೂಪ ಸಙ್ಕಲ್ಪಗಳಿಗೆ ಅಧೀನವಾದುದಾದರೆ, ಅದರ ವಿನಿಯೋಗವು ಸ್ವಯೋಚನೆಯೇನೆಂಬುವುದನ್ನು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. ಹಾಗೆ ಅಧೀನವಾಗಿರುವದರಿಂದ, ಸ್ವಭಾವಸಿದ್ಧವಾದ ಅನುಕೂಲವಾಗಿರುವಿಕೆಯು ಪ್ರಾಪ್ತವಾಗುತ್ತದೆಂದು ಹೇಳುತ್ತಾರೆ.

ಆಕ್ಕೈಯಾಲ್–ಹೀಗೆ ಈಶ್ವರಸ್ವರೂಪಸಙ್ಕಲ್ಪಗಳ ಸಂಬಂಧವಿಲ್ಲದೆ ಯಾವ ವಸ್ತುಗಳಿಗೂ ಸ್ವರೂಪಸ್ಥಿತಿ ಪ್ರವೃತ್ತಿಗಳುಂಟಾಗಲಾರದುದರಿಂದ, **ಈ ಸಮಸ್ತ ವಸ್ತುಗಳಿಗೂ, ಸ್ವಭಾವಸಿದ್ಧಾನುಕೂಲ್ಯಂ** – ಸ್ವಭಾವ ಸಿದ್ಧವಾದ ಅನುಕೂಲವಾಗಿರುವ ಸ್ಥಿತಿಯೂ ಕೂಡ, ಸರ್ವೇಶ್ವರಸಙ್ಕಲ್ಪಕ್ಕೆ ಅಧೀನವಾದುದು; ಎಂದರೆ, ಈಶ್ವರ ಸಙ್ಕಲ್ಪದಿಂದಲೇ ಸಮಸ್ತವೂ ಸಮಸ್ತರಿಗೂ ಅನುಕೂಲವಾಗಿಯೇ ಇದೆ ಎಂದು ಭಾವ. **"ಸಮಾ ವಿಷಮವಿನಂಪಶ್ಯ ನ್ನೀಶಂ ಮುನ್ಯನ ಏನಂ ಸಿಜಾನನ ನ್ಮತ್ಪರತಿರಾತ್ಮಕ್ರೀಡ ಆತ್ಮಮಿಥುನ ಆತ್ಮಾನಂದಃ, ಸಸ್ವರಾಡ್ಭವತಿ. ತಸ್ಯ ಸರ್ವೇಷುಲೋಕೇಷು ಕಾಮಚಾರೋ ಭವತಿ, ಅಥ ಯೇಽನ್ಯಥಾತೋವಿದುರನ್ಯರ ಜಾನಸ್ತೇ ಕ್ಷಯ್ಯಲೋಕಾಭವನ್ತಿ".** (ಛಾ. ೭. ೨೫. ೨) ಎಂಬುದೇ ಮೊದಲಾದ ಶ್ರುತಿಗಳಿಂದ, ಶುದ್ಧ ನಿರತಿಶಯ ಆನಂದ ರೂಪವಾದ ಪರಿವಾಹ್ಯದೇ ಸರ್ವಕ್ಕೂ ತನಗೂ ಪರ ಆತ್ಮನೆಂದು ತಿಳಿದವನಿಗೆ ಸ್ವಾಧೀನವಾಗುವಂತೆಯೂ, ಅನ್ಯಾಧೀನವಾಗುವಂತೆಯೂ ಸ್ವೀಯವಿಂದುಂಟಾ

ಇತ್ತಾಲೇ (ಈಶ್ವರೇಚ್ಛೈಯಾಲೆ) ಸ್ವಭಾವಸಿದ್ಧಾನುಕೂಲ್ಯ ಮು

ಗುವ, ಮತ್ತು ವಿಭೂತಿಯಿಂದುಂಟಾಗುವ ಸರ್ವವಿಧ ಆನಂದವೂ ಪರಮಾತ್ಮನೇ ಎಂದೂ, ಅಂಥಾವನು, ಅಕರ್ಮವಶ್ಯನಾಗುವದರಿಂದ ಸ್ವತಃ ರಾಜಾವೆಂದೂ, ಸತ್ಯ ಸಜ್ಕಲ್ಪಯುಕ್ತನಾಗುವನೆಂದೂ ಸಮಸ್ತ ಲೋಕಗಳ ಆನಂದವನ್ನೂ ಅನುಭವಿಸಿದರೆ ಹೇಗೆ ತೃಪ್ತನಾಗುವನೋ ಹಾಗಾಗುವನೆಂದೂ, ಹಾಗೆ ತಿಳಿಯದವನಿಗೆ ಅಂತಹ ಆನಂದವಿಲ್ಲವೆಂದೂ' ತೋರಿಬರುವದರಿಂದ,ಹೀಗೆ ಸರ್ವಕ್ಕೂ ಪರಮಾತ್ಮಾ ಎಂದು ತಿಳಿದವನಿಗೆ ಸ್ವತಃ ಸಮಸ್ತವೂ ಅನುಕೂಲವೆಂಬುವದು ಸಿದ್ಧವು. **"ನವಾ ಅರೇ ಸರ್ವಸ್ಯಕಾಮಾಯ ಸರ್ವಂಪ್ರಿಯಂಭವತಿ, ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂಭವತಿ** (ಬೃ. ೬. ೫. ೬) ಎಂದರೆ ಸಮಸ್ತರ ಇಷ್ಟಾನುಸಾರ ಸಮಸ್ತರೂ ಪ್ರಿಯವಾಗುವುದಿಲ್ಲವು, ಪರಮಾತ್ಮನ ಇಷ್ಟಾನುಸಾರ ಸಮಸ್ತರೂ ಪ್ರಿಯರಾಗುವರು, ಎಂದು ಹೇಳಿರುವದರಿಂದ, ಸಮಸ್ತವೂ ಸ್ವಾಭಾವಿಕವಾಗಿ ಅನುಕೂಲವಾಗಿರೋಣವೂ ಭಗವತ್ಸಜ್ಕಲ್ಪಸಿದ್ಧವಾದುದೆಂಬುವದೂ ವ್ಯಕ್ತಪಡುತ್ತದೆ. ಆದುದರಿಂದಲೆ ಈಸಮಸ್ತ ವಸ್ತುಗಳಿಗೂ ಅನುಕೂಲ್ಯವು ಸ್ವಭಾವಸಿದ್ಧವಾದುದೆಂದೂ, ಅಂತಹಅನುಕೂಲ್ಯವು ಈಶ್ವರ ಸಜ್ಕಲ್ಪಾಯತ್ತವಾದುದೆಂದೂ ಇಲ್ಲಿ ಆಚಾರ್ಯರು ಉಪದೇಶಿಸಿರುತ್ತಾರೆ.

ಹೀಗೆ ಸಮಸ್ತವೂ ಸ್ವಭಾವಸಿದ್ಧವಾಗಿ ಅನುಕೂಲವಾಗಿದ್ದರೆ. ನಿತ್ಯಮುಕ್ತರಿಗೆ ಈ ಈಶ್ವರಸಜ್ಕಲ್ಪದಿಂದೇನುಪ್ರಯೋಜನವು? ಅದರ ಅವಶ್ಯಕತೆಯು ಕಾಣುವದಿಲ್ಲವಲ್ಲಾ ಎಂಬುವದೊಂದು ಆಕ್ಷೇಪಣೆಯು. ಎಲ್ಲರಿಗೂ ಸ್ವಭಾವಸಿದ್ಧ ಅನುಕೂಲ್ಯ ಉಂಟೆಂದು ಹೇಳಿದರೆ, ಬದ್ಧರಿಗೆ ಅಲ್ಪಾನುಕೂಲವಾಗಿಯಾಗಲಿ, ಪ್ರತಿಕೂಲವಾಗಿಯಾಗಲಿ ತೋರುತ್ತುದಲ್ಲಾ ಎಂಬುವದು ಎರಡನೇ ಆಕ್ಷೇಪಣೆಯು. **ಇವು**ಗಳ ಸಮಾಧಾನಾರ್ಥವಾಗಿ ಮುಂದೆ ಎರಡು ವಾಕ್ಯಗಳನ್ನು ಹೇಳುತ್ತಾರೆ.

ಇತ್ತಾಲೆ ಎಂಬುವದಕ್ಕೆ ಈಶ್ವರೇಚ್ಛೈಯಾಲೆ ಯೆಂದು ಪಾಠಾಂತರವಾದುದರಿಂದ, ಈಶ್ವರೇಚ್ಛೈಯಿಂದ ಎಂಬರ್ಥವು; **ಸ್ವಭಾವಸಿದ್ಧಾನುಕೂಲ್ಯಮುಣ್ಣಾಕ್ಕೈಯಾಲೆ** – ಸಮಸ್ತಕ್ಕೂ ಸ್ವಭಾವ ಸಿದ್ಧವಾದ ಅನುಕೂಲ್ಯವು ಪ್ರಾಪ್ತವಾಗುವದರಿಂದ ಈಶ್ವರನಿಗೂ, (ಇದರಲ್ಲಿ ಈಶ್ವರಿಯೂ ಅಂತರ್ಗತಳು) ನಿತ್ಯರಿಗೂ ಮುಕ್ತರಿಗೂ ಸಹ, **ಸರ್ವಮುಮ್ ಅನುಕೂಲವಾಯಿರುಕ್ಕುಮ್** – ಸಮಸ್ತವೂ ಅನುಕೂಲವಾಗಿಯೇ ಇರುತ್ತವೆ. ಈಶ್ವರನಿಗೆ ಎಲ್ಲವೂ ವಿಭೂತಿಯಾದುದರಿಂದ ತನಗೆ ಅನುಕೂಲವಾಗಿರಬೇಕೆಂದೇ ಅಸತ್ಯಸಜ್ಕಲ್ಪನ ಸಜ್ಕಲ್ಪವಾದುದರಿಂದ ಎಲ್ಲವೂ ಆತನಿಗೆ ಅನುಕೂಲವೇ. ತನಗೆ ಪ್ರತಿಕೂಲವಾಗಿರಬೇಕೆಂದು

ಸ್ವಾಮ್ಯೈಯಾಲೆ ಈಶ್ವರನುಕ್ಕುಮ್, ನಿತ್ಯರುಕ್ಕುಮ್, ಮುಕ್ತರುಕ್ಕುಮ್, ಸರ್ವಮುಮ್ ಅನುಕೂಲಮಾಯಿರುಕ್ಕುಮ್. ಬದ್ಧರುಕ್ಕು ಕರ್ಮಾನುರೂಪಮಾಕ ಪುರುಷಭೇದತ್ತಾಲುಮ್, ಕಾಲಭೇದತ್ತಾಲುಮ್,

ಎಂದಿಗೂ ಸಙ್ಕಲ್ಪಿಸಲಾರನಷ್ಟೆ, ನಿತ್ಯರು ಯಾವಾಗಲೂ ನಿತ್ಯರಾಗಿರಬೇಕೆಂದು ಯಾವಾಗ ಸಙ್ಕಲ್ಪಿಸಿದನೋ ಅದರೊಂದಿಗೆ ಎಲ್ಲವೂ ಇವರಿಗೆ ಅನುಕೂಲವಾಗಿರಬೇಕೆಂದೇ ಸರ್ವೇಶ್ವರನ ಸಙ್ಕಲ್ಪವೆಂಬ ಭಾವವು. ಮುಕ್ತರೂ ಸ್ವಾಮಿಗೆ ಪರಮ ಪ್ರಿಯರಾದುದರಿಂದಲೂ, ಕರ್ಮವಿಮುಕ್ತರಾದುದರಿಂದಲೂ, ಅಂಥಾವರಿಗೂ ಸಹ ಸರ್ವೇಶ್ವರನ ಸಙ್ಕಲ್ಪವು ಸರ್ವವೂ ಅನುಕೂಲವಾಗಿರಬೇಕೆಂದು ತಿಳಿಯತಕ್ಕದ್ದು. ಆದರೆ ಬದ್ಧರಿಗೆ ಕರ್ಮಸಂಬನ್ಧದಿಂದ ವಿಪರೀತವಾಗಿ ಪರಿಣಮಿಸಬಹುದೆಂದು ಮುಂದೆ ಹೇಳುತ್ತಾರೆ.

ಬದ್ಧರುಕ್ಕು – ಬದ್ಧರಿಗೆ ಮಾತ್ರ; **ಕರ್ಮಾನುರೂಪಮಾಕ** – ಕರ್ಮಾನುಗುಣವಾಗಿ, ಪುರುಷಭೇದದಿಂದಲೂ, ಕಾಲಭೇದದಿಂದಲೂ, **ಇವತ್ತಿಲ್** – ಈ ಲೀಲಾವಿಭೂತಿಯ ಪದಾರ್ಥಗಳ ಸ್ವರೂಪಸ್ಥಿತಿ ಪ್ರವೃತ್ತಿಗಳಲ್ಲಿ, ಎಂದರೆ ಅವುಗಳ ಮೂಲಕ ಪ್ರಾತಿಕೂಲ್ಯಗಳೂ, ಅಲ್ಪಾನುಕೂಲ್ಯಗಳೂ, **ನಡವಾನಿರ್ಕ್ಕುಮ್** – ನಡೆಯುತ್ತಲಿರುತ್ತವೆ. ಎಲ್ಲವೂ ಸ್ವಾಭಾವಿಕವಾಗಿ ಅನುಕೂಲವಾಗಿರಬೇಕೆಂಬದಾಗಿಯೇ ಸರ್ವೇಶ್ವರನ ಸಂಕಲ್ಪವಾಗಿದ್ದರೂ, ಕರ್ಮಾನುಗುಣ ಫಲಭೋಗಕ್ಕಾಗಿ ಕೆಲವರಿಗೆ ಅಲ್ಪಾನುಕೂಲವಾಗಿಯೂ ಇನ್ನು ಕೆಲವರಿಗೆ ಪ್ರತಿಕೂಲವಾಗಿಯೂ ಪರಿಣಮಿಸುತ್ತವೆ. ಇಲ್ಲಿ ಕೆಲವರಿಗೆ ಅನುಕೂಲವಾಗಿ ತೋರುತ್ತವೆಂದು ಅಪ್ಪಣೆ ಕೊಡಿಸಲಿಲ್ಲವು, ಏಕೆಂದರೆ ಐಹಿಕವೆಲ್ಲಾ, ಮೊದಲಿಗೆ ಅನುಕೂಲವಾಗಿ ತೋರಿದರೂ, ಪರಿಣಾಮದಲ್ಲಿ ಪ್ರತಿಕೂಲವಾಗಿ ತೋರಿಬಂದೀತಾಗಿ ತ್ಯಾಜ್ಯವೇ ಸರಿ ಎಂದು ಮುಂದೆ ಹೇಳಲ್ಪಡುತ್ತದೆ.

ಸಂಸಾರ ಸರ್ಪ ದಷ್ಟಾನಾಂ ಭೋಗ್ಯಾಸ್ಸ ರ್ಕ್ಕಂದನಾದಯಃ ।
ಮೋಹೇನ ಮಧುರಾಯನ್ತೇ ನಿಸರ್ಗಾ ನ್ನಿಂಬ ಸನ್ನಿಭಾಃ॥

ಭೋಗ್ಯವಸ್ತುವೆಲ್ಲವೂ ಮೋಹದಿಂದ ಮಧುರವಾಗಿ ತೋರುತ್ತವೆ. ಸರಿಯಾಗಿ ನೋಡಿದರೆ ಬೇವಿನಕಾಯಿಗೆ ಸಮಾನವಾದವು ಎಂದು ಹೇಳಲ್ಪಟ್ಟಿರುತ್ತದೆ. ಆದರೆ ಪರನೈಕಾಂತಿಯಾದ ಪ್ರಪನ್ನನು ಇವುಗಳಲ್ಲಿ ಲಿಪ್ತನಾಗದೇ ಇರುವದರಿಂದ ಅಲ್ಪಾನುಕೂಲ ಪ್ರಾತಿಕೂಲ್ಯಗಳೇನೂ ಖೇದವನ್ನುಂಟುಮಾಡದ ಪ್ರಯುಕ್ತ, ಅಂಥಾವನಿಗೆ ಒಂದು ವಿಧವಾಗಿ ಅನುಕೂಲನೆಂದೇ ಹೇಳಬಹುದು. ಆದರೆ ಅಂಥಾವರು ತುಂಬಾ ವಿರಳರು. ಒಂದೇ ಪದಾರ್ಥವು ಪ್ರತಿಕೂಲವಾಗಿಯೂ

ಇವತ್ತಿಲ್ ಪ್ರಾತಿಕೂಲ್ಯಜ್ಞಳುಮ್, ಅಲ್ಪಾನುಕೂಲಜ್ಞಳುಮ್, ನಡವಾನಿರ್ಕ್ಕುಮ್.

ಬದ್ಧರ್ತ್ತಜ್ಞಳುಕ್ಕುಮ್ ಸ್ವಾತ್ಮಸ್ವರೂಪಂ ಸರ್ವದಾನುಕೂಲಮಾಕ ಈಶ್ವರೇಚ್ಛಾಸಿದ್ಧಮ್. ಇಪ್ಪಡಿಯನುಕೂಲವಾನ ಆತ್ಮಸ್ವರೂಪತ್ತೋಡೆ ಏಕತ್ವ ಭ್ರಮತ್ತಾಲುಮ್ ಕರ್ಮವಶತ್ತಾಲು ಮಿರೆ ಹೇಯವಾನ ಶರೀರಂ ಜ್ಞಾನ ಹೀನರುಕ್ಕು ಅನುಕೂಲಮಾಯ್ತೋತ್ತುಕರದು. ಇವತ್ತುಕ್ಕು ಕರ್ಮೋಪಾಧಿಕವಾನ ಪ್ರತಿಕೂಲ,

---

ಅಲ್ಪಾನುಕೂಲವಾಗಿಯೂ, ಅನುಕೂಲವಾಗಿಯೂ ಹೀಗೆಲ್ಲಾ ಇರಬಹುದೋ ಎಂದರೆ, ಅವಕ್ಕಾಗಿಯೇ ಪುರುಷಭೇದದಿಂದಲೂ ಕಾಲಭೇದದಿಂದಲೂ ಹಾಗೆ ಪರಿಣಮಿಸಬಹುದೆಂದು ಹೇಳಿರುತ್ತಾರೆ. ಒಬ್ಬನಿಗೆ ಅನ್ನವು ಬಹು ರುಚಿಕರವು. ಕರ್ಮಗುಣಾಕದಿಂದ ಅಜೀರ್ಣದಿಂದ ಪೀಡಿತನಾದವನಿಗೆ ಅನ್ನವು ರುಚಿಸದು. ಬಿಸಿಲು ಕಾಲದಲ್ಲಿ ತಣ್ಣೀರು ಸ್ನಾನವು ಆಪ್ಯಾಯನವು; ಛಳಿಗಾಲದಲ್ಲಿ ಕ್ಲೇಶಕರವು. ಬದ್ಧವಿಷಯಲ್ಲಿ ಪ್ರಾತಿಕೂಲ್ಯವು ಅನೇಕವೆಂದು ತೋರಿಸುವುದಕ್ಕಾಗಿ ಪ್ರಾತಿಕೂಲ್ಯಜ್ಞಳುಮ್, ಅಲ್ಪಾನುಕೂಲ್ಯಜ್ಞಳುಮ್ ಎಂಬಪಾಗಿ ಬಹುವಚನವನ್ನು ಪ್ರಯೋಗಿಸಿರುತ್ತಾರೆ. ಇನ್ನು ಕೆಲವು ವಸ್ತುಗಳು ಅನುಕೂಲವೂ ಅಲ್ಲವೆಯೂ ಪ್ರತಿಕೂಲವಲ್ಲವೆಯೂ ಇರಬಹುದು; ಅಂಥಾವುಗಳು ಇಲ್ಲಿ ಹೇಳಲ್ಪಡಲಿವಲ್ಲಾ ಎಂದರೆ ಅಲ್ಪಾನುಕೂಲ್ಯಗಳಲ್ಲೇ ಅವುಗಳೂ ಅಂತರ್ಗತವೆಂದು ಭಾವಿಸತಕ್ಕದ್ದು. ಹೀಗೆಯೇ ಪ್ರಳಯವಿವರಿವಿಗೂ ಬದ್ಧರಿಗೆ ಪ್ರತಿಕೂಲಾವಿಗಳು ನಡೆಯುತ್ತಿರುತ್ತವೆ ಎಂದು ತಿಳಿಸುವದಕ್ಕಾಗಿ **ನಡವಾನಿರ್ಕ್ಕುಮ್** ಎಂಬ ಪ್ರಯೋಗವು. ಸರ್ವವೂ ಅನುಕೂಲವಾಗಿಯೇ ಇರಬೇಕೆಂದು ಸರ್ವೇಶ್ವರ ಸಙ್ಕಲ್ಪವಿದ್ದರೂ ಕರ್ಮದ ಬಲದಿಂದ ಹೇಗೆ ಪ್ರತಿಕೂಲವಾಗಿ ಪರಿಣಮಿಸುತ್ತದೋ, ಹಾಗೆಯೇ ಆತ್ಮಸ್ವರೂಪವೂ ಕೂಡ ಎಂದು ತಿಳಿಸುತ್ತಾರೆ.

ಬದ್ಧರ್ತ್ತಜ್ಞಳಕ್ಕು – ಬದ್ಧರಿಗೂ ಕೂಡ, **ಸ್ವಾತ್ಮಸ್ವರೂಪಮ್** – ತಮ್ಮ ತಮ್ಮ ಆತ್ಮಸ್ವರೂಪವು, **ಸರ್ವದಾನುಕೂಲವಾಕ** – ಯಾವಾಗಲೂ ಅನುಕೂಲವಾಗಿಯೇ ಇರಬೇಕೆಂಬುದು, **ಈಶ್ವರೇಚ್ಛಾಸಿದ್ಧಮ್** – ಸರ್ವೇಶ್ವರನ ಸಙ್ಕಲ್ಪದಿಂದ, ಸಿದ್ಧವು. **ಇಪ್ಪಡಿಯನುಕೂಲವಾನ ಆತ್ಮಸ್ವರೂಪತ್ತೋಡೆ** – ಹೀಗೆ ಅನುಕೂಲವಾದ ಆತ್ಮಸ್ವರೂಪದೊಂದಿಗೆ, **ಏಕತ್ವಭ್ರಮತ್ತಾಲುಮ್** – ಒಂದೇ ಎಂಬ ಭ್ರಮದಿಂದಲೂ, **ಕರ್ಮವಶತ್ತಾಲುಮಿರೆ** – ಕರ್ಮಕ್ಕೆ ಅಧೀನವಾಗಿರುವದರಿಂದಲೂ, ಹೇಯವಾದ ಶರೀರವು, ಜ್ಞಾನವಿಲ್ಲದವರಿಗೆ, **ಅನುಕೂಲಮಾಯ್ತೋತ್ತುಕ್ಕಿರದು** – ಅನುಕೂಲವಾಗಿ ತೋರು

ರೂಪತ್ತಾಲೆ ಮುಮುಕ್ಷುವ್ಯಪತ್ತ ತ್ಯಾಜ್ಯತ್ವಮ್ ; ಸ್ವಾಭಾವಿಕಮಾನ ಅನುಕೂಲ ಸ್ವರೂಪತ್ತಾಲೆ ಮುಕ್ತನೈಪತ್ತ ವನೈತನಕ್ಕೇ ಉಪಾದೇ

ತ್ತದೆ: ಸುಯಾಗಿ ನೋಡಿದರೆ, ಅನುಕೂಲವಿಲ್ಲದಿದ್ದರೂ ಅನುಕೂಲವೆಂದು ಭಾವಿಸುವನು. ಏಕೆಂದರೆಲ್ಲಾ "ಭಯ ನಿದಾನ"ವಾವವು, ಮೋಕ್ಷಪ್ರತಿಬಂಧಕಗಳಾಗಿ ತ್ಯಾಜ್ಯವು ; ಏಕೆಂದರೆಲ್ಲಾ ಅನುಕೂಲವೆಂದು ಭಾವಿಸಿದರೆ ಪುನಃಪುನಃ ಸಂಸಾರ ಪ್ರಾಪ್ತಿಯೇ ಎಂಬ ಭಾವವು. ಹಾಗೆ ಏಕೆಂದೆಲ್ಲಾ ಅನುಕೂಲವೆಂದು ಭಾವಿಸುವುದಕ್ಕೆ **ಕಾರಣವು** ಕರ್ಮಾಧೀನವಾಗಿರೋಣವು, ಅದರಿಂದಲೇ ಆತ್ಮವಲ್ಲದೇ ಇರುವ ದೇಹದಲ್ಲಿ ಆತ್ಮವೆಂಬ ಭ್ರಮವು, ಅಥವಾ ಶರೀರ, ಆತ್ಮಾ ಎರಡೂ ಒಂದೇ ಎಂಬ ಭ್ರಮವು ಎಂಬ ಭಾವವು. ಏಕೆಂದರೆ ಭೋಗಾಸಕ್ತನಾದ ಬುಭುಕ್ಷುವು ಹೀಗೀಗ ಭಾವಿಸುವನು. ಮೋಕ್ಷಾರ್ಥಿಯಾದ ಮುಮುಕ್ಷುವಿಗೋ ಎಂದರೆ ಇವೆಲ್ಲಾ ಆತನಿಗೆ ತ್ಯಾಜ್ಯವೆಂದು ಅಪ್ಪಣೆ ಕೊಡಿಸುತ್ತಾರೆ. **ಇವತ್ತುಕ್ಕು** – ಶರೀರ ಮೊದಲಾದ ಇತರ ಭೋಗ್ಯವಸ್ತುಗಳಿಗೆ, **ಕರ್ಮೋಪಾಧಿಕಮಾನ** – ಕರ್ಮವೇ ಬಾಧೆಯಾಗಿ ಉಳ್ಳ, ಪ್ರತಿಕೂಲರೂಪದ ದೆಸೆಯಿಂದ, **ಮುಮುಕ್ಷುವೈಪತ್ತ** – ಮೋಕ್ಷಾರ್ಥಿಯ ವಿಷಯದಲ್ಲಿ, **ತ್ಯಾಜ್ಯತ್ವಂ** – ತ್ಯಾಜ್ಯ ಭಾವವು. ಸ್ವಾಭಾವಿಕವಾದ, **ಅನುಕೂಲಸ್ವರೂಪತ್ತಾಲೆ**–ಅನುಕೂಲವಾದ ಸ್ವರೂಪವು ಅವುಗಳಿಗೆ ಇರುವದರಿಂದ **ಮುಕ್ತನೈಪತ್ತ** – ಮುಕ್ತನ ವಿಷಯದಲ್ಲಿ, **ಅವೈತನಕ್ಕೆ** – ಆ ತ್ಯಾಜ್ಯವಾದುವಕ್ಕೆ, **ಉಪಾದೇಯತ್ವಂ** – ಗ್ರಾಹ್ಯವಾಗಿರುವ ಭಾವವು. ಶರೀರ ಮತ್ತು ಭೋಗ್ಯವಸ್ತುಗಳು ಮೋಕ್ಷಪ್ರಾಪ್ತಿಗೆ ಪ್ರತಿಬಂಧಕಗಳಾಗಿ ಪರಿಣಮಿಸಬಹುದಾದುದರಿಂದ, ಮೋಕ್ಷಾರ್ಥಿಗೆ ಅವುಗಳು ತ್ಯಾಜ್ಯಗಳು. ಆದರೆ ಮುಕ್ತನಿಗೆ, ಆ ತ್ಯಾಜ್ಯವಾದವುಗಳೇ ಸ್ವಾಭಾವಿಕವಾಗಿ ಅನುಕೂಲ್ಯವನ್ನು ಹೊಂದಿರುವದರಿಂದ, ಗ್ರಾಹ್ಯವಾದವುಗಳೇ ಎಂಬ ತಾತ್ಪರ್ಯವು. ದೇಹ ಮೊದಲಾದ ಪ್ರಕೃತಿಯಲ್ಲಿರುವ ವಸ್ತುವೆಲ್ಲಾ ಎವನು ಅನುಕೂಲವಾಗಿರುವ ಹಾಗೆ ಭಾವಿಸುವನು. ಮೋಕ್ಷಾರ್ಥಿಗಾದರೋ, ಈ ಭೋಗ್ಯವಸ್ತುವೆಲ್ಲಾ ಕರ್ಮವಶಾತ್ ತಿರೋಹಿತ ಅನುಕೂಲ್ಯವುಳ್ಳವುಗಳಾದುದರಿಂದ, ತ್ಯಾಜ್ಯವು ಮುಕ್ತನಿಗೆ ಕರ್ಮಲೇಷವೇ ಇಲ್ಲದುದರಿಂದ ಅವುಗಳಲ್ಲಿ ಸ್ವಾಭಾವಿಕವಾದ ಅನುಕೂಲ್ಯತೆಯೇ ತೋರಿಬರುವದರಿಂದ ಅವುಗಳೆಲ್ಲಾ ಗ್ರಾಹ್ಯವಾದವುಗಳೇ. ಆದುದರಿಂದ ಕಾಲಭೇದದಿಂದ ಒಬ್ಬ ಪುರುಷನಿಗೇನೇ ಒಂದೇ ವಸ್ತುವು ಪ್ರತಿಕೂಲವಾಗಿಯೂ, ಅನುಕೂಲವಾಗಿಯೂ, ಪರಿಣಮಿಸಬಹುದು. ಹೀಗೆ ಒಂದೇ ವಸ್ತುವಿಗೆ ಎರಡು ವಿಧ ವಿಕಾರ ಉಂಟಾಗಬಹುದು :—ಸ್ವಾಭಾವಿಕ ಅನುಕೂಲ್ಯತೆಯೂ, ಕರ್ಮವಶಾತ್ ಉಂಟಾಗಬಹುದಾದ ಪ್ರಾತಿಕೂಲ್ಯತೆಯೂ ಈ

ಯತ್ವಂ. ಅಹಜ್ಞಾರ ಮನುಕಾರ ಯುಕ್ತಾನಾಯ್ ಕ್ಕೊಂಡು ತೆನಕ್ಕೆ ನ್ರು ಸ್ವೀಕರಕ್ಕುಮವೈ ಯೆಲ್ಲಾಮ್ ಪ್ರತಿಕೂಲಜ್ಞಾಮ್. ಸ್ವರೂಪ ಜ್ಞಾನಮ್ ಪಿರನ್ದು ಸ್ವಾಮಿಶೇಷನೆನ್ರು ಕಾಣಪ್ಪುಕ್ಕಾಲ್ ಯೆಲ್ಲಾಮ್ ಅನುಕೂಲಮ್. ಇವ್ವರ್ಥಂ ಪರಿಪೂರ್ಣಬ್ರಹ್ಮಾನುಭವಮ್ ಶೊಲ್ಲುಮಿಡತ್ತಲೆ ಪರಕ್ಕಚ್ಚೊಲ್ಲಕ್ಕಡವೋಮ್.

ಅಭಿಪ್ರಾಯಗಳನ್ನೇ ಮುಂದಿನ ಎರಡು ವಾಕ್ಯಗಳಿಂದ ಅನುವಾದ ಮಾಡಿ ಹೇಳುತ್ತಾರೆ. **ಅಹಜ್ಞಾರ ಮನುಕಾರಯುಕ್ತನಾಗಿ** ಎಂದರೆ, ತಾನು, ತನ್ನದು, ಎಂಬ ಅಭಿಮಾನವುಳ್ಳವನಾಗಿ, **ತನಕ್ಕೆನ್ರು ಸ್ವೀಕರಕ್ಕುಮವೈಯೆಲ್ಲಾಂ**–ತನಗೇನೇ ಎಂದು ಪರಿಗ್ರಹಿಸುವುದೆಲ್ಲಾ, **ಪ್ರತಿಕೂಲಜ್ಞಾಮ್** – ಪ್ರತಿಕೂಲವಾದವುಗಳಾಗುತ್ತವೆ. ಹಾಗಲ್ಲದೆ **ಸ್ವರೂಪಜ್ಞಾನಮ್ ಪಿರನ್ದು** – ತನಗೆ ತನ್ನ ಸ್ವರೂಪ ಜ್ಞಾನವು ಹುಟ್ಟಿ, **ಸ್ವಾಮಿಶೇಷಮೆನ್ರು** – ಸರ್ವೇಶ್ವರನಿಗೆ ಸರ್ವವು ಶೇಷಭೂತವಾದುದೆಂದು, **ಕಾಣಪ್ಪುಕ್ಕಾಲ್** –– ತೋರಿದ ಸಂದರ್ಭದಲ್ಲಿ, **ಯೆಲ್ಲಾಮ್ ಅನುಕೂಲಮ್** – ಎಲ್ಲವೂ ಅನುಕೂಲವಾದವುಗಳೇ. ದೇಹಾತ್ಮಭ್ರಾಂತಿ, ಸ್ವತಂತ್ರಾತ್ಮಭ್ರಾಂತಿಗಳಿಂದ ಬದ್ಧನು ಐಹಿಕ ವಸ್ತುಗಳಲ್ಲಿ ಭೋಗ್ಯಭಾವವನ್ನಿಟ್ಟು ಅವುಗಳಲ್ಲೇ ಸಕ್ತನಾದನೆ, ಆಗ ಅವೆಲ್ಲವೂ ಪರಿಣಾಮದಲ್ಲಿ ಪ್ರತಿಕೂಲಗಳಾಗುತ್ತವೆ. ಹಾಗಲ್ಲದೆ, ತಾನು ಸರ್ವೇಶ್ವರನಿಗೆ ಶೇಷಭೂತನು, ಮತ್ತು ಸಮಸ್ತ ಭೋಗ್ಯವಸ್ತುವೂ ಆತನಿಗೆ ಶೇಷಭೂತವಾದುದು, ಎಂಬ ಜ್ಞಾನವು ಯಾವಾಗ ಅಂಕುರಿಸಿತೋ, ಆಗ ಸಮಸ್ತವೂ ಅನುಕೂಲವೇ ವಿನಾ ಪ್ರತಿಕೂಲವಾಗಿ ಪರಿಣಮಿಸಲಾರದೆಂಬ ಭಾವವು. ಇಂತಹ ಪ್ರಸನ್ನ ದೆಸೆಯು ಮನುಷ್ಯನಿಗೆ ದೊರೆಯುವುದು ಪರಮ ದುಸ್ತರವು. ಆದರೆ ಋಷಿಗಳೂ, ಮುನಿಗಳೂ, ನಮ್ಮಾಳ್ವಾರ್ ಪ್ರಭೃತಿಗಳೂ ದೈವಾನುಗ್ರಹದಿಂದ ಅಂತಹ ದೆಸೆಗೆ ಪಾತ್ರರಾಗಿದ್ದರು. ನಿತ್ಯರಿಗೂ ಮುಕ್ತರಿಗೂ ಸಹ ಇಂತಹ ದೆಸೆಯು ಸರ್ವದಾ ಉಂಟು. **ಇವ್ವರ್ಥಂ** – ಈ ಅಭಿಪ್ರಾಯವು, ಐಹಿಕದಲ್ಲಿ ಲಿಪ್ತನಾಗಿದ್ದರೆ ಪ್ರತಿಕೂಲನೆಂಬ, ಹಾಗಿಲ್ಲದೆ ತನ್ನ ಸ್ವರೂಪ ಜ್ಞಾನ ಉಂಟಾದರೆ ಅನುಕೂಲನೆಂಬ ಅಭಿಪ್ರಾಯವು, ಪರಿಪೂರ್ಣ ಬ್ರಹ್ಮಾನುಭವವನ್ನು **ಶೊಲ್ಲುಮಿಡತ್ತೆಲೆ** – ಹೇಳುವ ಸ್ಥಳದಲ್ಲಿ ಪರಿಪೂರ್ಣ ಬ್ರಹ್ಮಾನುಭವಾಧಿಕಾರದಲ್ಲಿ, **ಪರಕ್ಕ** – ವಿಸ್ತಾರವಾಗಿ ಎಂದರೆ ದೃಷ್ಟಾಂತ, ಉಪಪಾದನೆಗಳೊಂದಿಗೆ, **ಶೊಲ್ಲಕ್ಕಡವೋಮ್** – ಹೇಳುವೆವು. ಅದು ಸರಿಯಾದ ಪ್ರಕರಣವಾದುದರಿಂದ ಅಲ್ಲಿ ಹೇಳುವುದೇ ಯುಕ್ತವೆಂಬ ಭಾವವು.

"ಸ್ವಾಧೀನತ್ರಿವಿಧಚೇತನಾಚೇತನ ಸ್ವರೂಪಸ್ಥಿತಿ ಪ್ರವೃತಿಭೇದ"

ಈಶ್ವರತತ್ತ್ವ ನಿರೂಪಣಂ

ಇಪ್ಪಡಿ ಸ್ವಾಧೀನ ಸರ್ವಸತ್ತಾದಿಗಳೈಯುಡೈವನಾಯಿರುಕ್ಕಿರ ಈ

ವುಳ್ಳವನು ಸರ್ವೇಶ್ವರನೆಂದು ಶ್ರೀ ಭಾಷ್ಯಕಾರರವರು ನಿತಗದ್ಯ, ವೈಕುಂಠಗದ್ಯ, ಗಳಲ್ಲಿ ಹೇಳಿದ ಸಮಾಸಪದವನ್ನೇ ಮನಸ್ಸಿನಲ್ಲಿಟ್ಟು, ಅದಕ್ಕೆ ಇದುವರೆವಿಗೂ ವಿಶದವಾಗಿ ಅರ್ಥಹೇಳಿದರು. ಮೂರು ವಿಧ ಚೇತನರ, ಮತ್ತು ಮೂರು ವಿಧ ಅಚೇತನರ ಸ್ವರೂಪಸ್ಥಿತಿ ಪ್ರವೃತ್ತಿಗಳಿಗಿರುವ ಪರಸ್ಪರ ಭೇದಗಳನ್ನೆಲ್ಲಾ ನಿಪುಣತರವಾಗಿ ತಿಳಿಸಿ, ಅವುಗಳೆಲ್ಲಾ ಹೇಗೆ ಸರ್ವೇಶ್ವರನ ಸ್ವರೂಪ ಸಙ್ಕಲ್ಪಗಳಿಗೆ ಅಧೀನವೆಂಬುವದನ್ನು ಪದೇಶಿಸಿದರು. ಈ ಸಮಾಸಪದವು ಬಹುಪ್ರೀತಿಯುಕ್ತವಾಗಿರುವದರಿಂದ ಚೇತನಾಚೇತನಗಳಿಗಿಂತಲೂ ವಿಲಕ್ಷಣನಾಗಿ ಅನ್ಯನು ಎಂಬುವದು ಏರ್ಪಡುತ್ತದೆ. ಈ ಅಭಿಪ್ರಾಯವೇ ಗೀತೆಯಲ್ಲಿ

ಕ್ಷರಸ್ಸರ್ವಾಣಿ ಭೂತಾನಿ ಕೂಟಸ್ಥೋಕ್ಷರ ಉಚ್ಯತೇ
ಉತ್ತಮಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ।
ಯಸ್ಮಾತ್ ಕ್ಷರಮತೀತೋಹ ಮಕ್ಷರಾದಪಿ ಚೋತ್ತಮಃ
ಅತೋಸ್ಮಿ ಲೋಕೇ ವೇದೇಚ ಪ್ರಥಿತಃ ಪುರುಷೋತ್ತಮಃ॥

ಎಂಬ ವಾಕ್ಯಗಳ ಮೂಲಕ ಸರ್ವೇಶ್ವರನು ಇತರ ಆತ್ಮರುಗಳಿಗಿಂತ,ಬದ್ಧಮುಕ್ತ ನಿತ್ಯರುಗಳಿಗಿಂತ ವಿಲಕ್ಷಣನಾಗಿ ಜೀರೆಯಾದವನೆಂದು ಹೇಳಲ್ಪಟ್ಟಿರುತ್ತದೆ. ಯಾವಾಗ ಇತರ ಚೇತನರುಗಳಿಗಿಂತ ವಿಲಕ್ಷಣನೆಂದಾಯಿತೋ, ಕೈಮುತಿಕನ್ಯಾಯ ಪ್ರಕಾರ ಅಚಿತ್ತುಗಳಿಗಿಂತಲೂ ವಿಲಕ್ಷಣನು ಎಂಬುವದು ಸಿದ್ಧವಾಯಿತು. ಹೀಗೆ ಅವುಗಳಿಗಿಂತ ಜೀರೆಯಾದವರೂ ಅವುಗಳೊಂದಿಗೇನೆ ಯಾವಾಗಲೂ ಇರುವದರಿಂದ, ಚಿದಚಿತ್ತುಗಳು ಸರ್ವೇಶ್ವರನಿಗೆ ಶೇಷಣವೂ, ಸರ್ವೇಶ್ವರನು ಶೇಷ್ಯನೂ ಎಂಬ ಶೇಷಶೇಷಿಭಾವವೂ ಈ ಸಮಾಸಪದದಿಂದಲೇ ತೋರಿಬರುತ್ತದೆ. ಈಶ್ವರನು ಹೀಗೆ ಸವಿಶೇಷಣನಾಗುವದರಿಂದ ನಿರ್ವಿಶೇಷಚಿನ್ಮಾತ್ರವು ಪರಬ್ರಹ್ಮನೆಂಬ ಶಾಂಕರವಾದವು ಸಲ್ಲುವದಿಲ್ಲವೆಂಬುವದೂ ವ್ಯಕ್ತಪಡುತ್ತದೆ. ಇವನ್ನು ಮುಂದಿನ ವಾಕ್ಯದಲ್ಲಿ ವಿವರಿಸುತ್ತಾನೆ. ಚಿದಚಿತ್ತುಗಳಿಂದಿಗೇ ಯಾವಾಗಲೂ ಸರ್ವೇಶ್ವರನು ಇರುತ್ತಾನೆ. ಆದುದರಿಂದ ಸತ್ಯವಸ್ತುಗಳಲ್ಲೂ ಈ ಮೂರೂ ತತ್ವಗಳು ತತ್ವತ್ರಯವು ಉಂಟೆಂಬುವದು ಶಾಸ್ತ್ರಸಮ್ಮತ ಸಿದ್ಧಾಂತವು.

ಈಶ್ವರತತ್ವ ನಿರೂಪಣವು.

ಇಪ್ಪಡಿ – ಹೀಗೆ ಎಂದರೆ ಮೇಲೆ ವಿಶದವಾಗಿ ಉಪಪಾದಿಸಲ್ಪಟ್ಟ ರೀತಿ

ಶ್ವರನುಡೈಯ ಸ್ವರೂಪಂ ಸತ್ಯತ್ವಾದಿಗಳಾ ರ ಸ್ವರೂಪನಿರೂಪಕ ಧರ್ಮಜ್ಞಾಲೇ ಸತ್ಯಮಾಯ್, ಜ್ಞಾನಮಾಯ್, ಅನನ್ತಮಾಯ್, ಆನನ್ದಮಾಯ್, ಅಮುಲಮಾಯಿರುಕ್ಕುಮ್.

ಯುಳ್ಳ, **ಸ್ವಾಧೀನಸರ್ವಸತ್ತಾದಿಗಳೈಯುಡೈವನಾಯಿರುಕ್ಕಿರ** – ಸಮಸ್ತ ಚಿದ ಚಿದ್ವಸ್ತುಗಳ ಸತ್ತೈಯನ್ನೂ ತನ್ನ ಸ್ವಾಧೀನವಾಗಿ ಮಾಡಿಕೊಂಡಿರುವ, **ಈಶ್ವರನುಡೈಯ ಸ್ವರೂಪಂ** – ಪರಮೇಶ್ವರನ ಸ್ವರೂಪವು, **ಸತ್ಯತ್ವಾದಿಗಳಾಗಿರಸ್ವರೂಪನಿರೂಪಕ ಧರ್ಮಜ್ಞಾನಾಲೆ** – ಸತ್ಯತ್ವವೇ ಮೊದಲಾದ ಸ್ವರೂಪವನ್ನು ಪೋಷಿಸುವ ಧರ್ಮಗಳಿಂದ, **ಸತ್ಯವಾಗಿಯೂ, ಜ್ಞಾನವಾಗಿಯೂ, ಅನನ್ತವಾಗಿಯೂ, ಆನಂದವಾಗಿಯೂ, ಅಮುಲವಾಗಿಯೂ** ಎಂದರೆ ಹೇಯಪ್ರತ್ಯನೀಕವಾಗಿ ಮಹಾ ಪರಿಪೂರ್ಣವಾಗಿಯೂ, ಇರುತ್ತದೆ. **ಸ್ವಾಧೀನಸರ್ವಸತ್ತಾದಿಯುಳ್ಳವನೆಂಬ** ಇಲ್ಲಿ ಹೇಳಿರುವದರಿಂದ, ಇತನ ಸ್ವರೂಪ ಸತ್ತಾದಿಗಳು ಯಾರಿಗೂ ಅಧೀನವಾದವನೆಂಬ ಭಾವವು ತೋರಿಬರುತ್ತದೆ ಇಲ್ಲಿ **" ಸತ್ಯತ್ವಾದಿ "** ಎಂಬಲ್ಲಿರುವ **ಆದಿ** ಪದದಿಂದ, **" ಸತ್ಯಂಜ್ಞಾನಮನಂತಂಬ್ರಹ್ಮ "** ಎಂಬ ತೈತ್ತಿರೀಯದ ಸ್ವರೂಪನಿರೂಪಕವಾಕ್ಯದಲ್ಲಿ ಪೋಷಿತವಾದ ಈ ಸತ್ಯ ಅನಂತತ್ವಾದಿಗಳು ಹೇಳಲ್ಪಟ್ಟವು. ಈ ವಾಕ್ಯದ ಅರ್ಥವನ್ನೇ ಇಲ್ಲಿ ಬಿಸದೀಕರಿಸುತ್ತಾರೆ. ಸತ್ಯತ್ವ, ಜ್ಞಾನತ್ವ, ಅನನ್ತತ್ವ, ಆನಂದತ್ವ, ಅಮಲತ್ವಗಳು ಸ್ವರೂಪನಿರೂಪಕ **ಧರ್ಮಜ್ಞಾ**ವೆಂದು ಪೋಷಿಸಿರುವದರಿಂದ. ಇವುಗಳು ವಿಶೇಷಣಗಳಿಂದೂ, ಈಶ್ವರನು ಸವಿಶೇಷಣನೇ ವಿನಾ. ಶ್ರೀಮಚ್ಛಂಕರಾಚಾರ್ಯರ ಅಭಿಪ್ರಾಯವೆ ಹಾಗೆ ನಿರ್ವಿಶೇಷ ಚಿನ್ಮಾತ್ರವಲ್ಲವೆಂದ ತೋರಿದಂತಾಯಿತು. ಶ್ರೀಮಚ್ಛಂಕರಾಚಾರ್ಯರು ಸತ್ಯಮಿತ್ಯಲ್ಲಿ ಸತ್ಯತ್ವವಲ್ಲವೆಂಬ ಅರ್ಥ ಹೇಳಿದೆ, **ಅಸತ್ಯದ್ವಾವೃತ್ತೈಂ,** ಅಸತ್ಯವಲ್ಲದ್ದೆಂದೂ, **ಜ್ಞಾನಂ** ಎಂದರೆ ಅಜ್ಞಾನವಲ್ಲವೆಂದೂ ಹೀಗೆಲ್ಲಾ ಅರ್ಥವಿಶೇಷ ನಿರ್ಣಯವಾದವನ್ನು ಸಮರ್ಥನೆಮಾಡಿರುತ್ತಾರೆ. ಶ್ರೀ ಭಾಷ್ಯಕಾರರು ಹಾಗೆ ಅರ್ಥ ಹೇಳುವದು ಸರಿಯಲ್ಲವೆಂದೂ, ಒಂದುವೇಳೆ ಹಾಗೆ ಹೇಳಿದರೂ ಅದು ಕೂಡ ಧರ್ಮವನ್ನು ಹೇಳುವ ಹಾಗೆ ಆಗುತ್ತದೆಂದೂ ತೋರ್ಪಡಿಸಿರುತ್ತಾರೆ. ಈ ಅಭಿಪ್ರಾಯಗಳನ್ನೆಲ್ಲಾ ಸೂಚಿಸುವದಕ್ಕಾಗಿಯೇ **ಸ್ವರೂಪನಿರೂಪಕ ಧರ್ಮಜ್ಞಾ**ವೆಂಬವಾಗಿ ಸ್ವಾಮಿ ದೇಶಿಕರವರು ಪ್ರಯೋಗಿಸಿರುತ್ತಾರೆ. ಅದೂ ಅಲ್ಲದೆ **ಸ್ವರೂಪನಿರೂಪ ಧರ್ಮಜ್ಞಾಲೆ** ಎಂದು ಹೇಳಿರುವದರಲ್ಲಿ ಇನ್ನೊಂದು ಅಭಿಪ್ರಾಯವೂ ತೋರಿಬರುತ್ತದೆ. ನಮ್ಮಗಳ ಸಿದ್ಧಾನ್ತದಲ್ಲಿ ಒಂದು ವಸ್ತುವಿನ ಸ್ವರೂಪವು ಅದರ ಧರ್ಮಗಳಿಂದಲೇ ಗೋಚರವೇ ವಿನಾ ಅನ್ಯಥಾ ಅಲ್ಲವು. ಲೋಕದೃಷ್ಟಾಂತವಲ್ಲೂ ಹಾಗೆಯೇ ಇರುತ್ತದೆ.

ಅದರೆ ಶ್ರೀ ಶಂಕರಾಚಾರ್ಯರವರ ಅಭಿಪ್ರಾಯವು ಸ್ವರೂಪವನ್ನು ತಿಳಿಯಲು ಧರ್ಮಗಳ ಜ್ಞಾನ ಬೇಕಾಗಿಲ್ಲವೆಂಬುವದಾಗಿರುತ್ತದೆ. ಈಶ್ವರನು **ಸತ್ಯನು** ಎಂದರೆ ಯಾವಾಗಲೂ ಒಂದೇ ರೀತಿಯಾಗಿರುವವನು, ವಿಕಾರರಹಿತನು, ಉಪಾಧಿಯಿಲ್ಲದ ಸತ್ತೆಯುಂದ ಕೂಡಿರುವನು ಎಂಬರ್ಥವು. **ಜ್ಞಾನ** ಸ್ವರೂಪನೆಂದರೆ ಅಜಡನು, ಯಾವಾಗಲೂ ಅನಪಾಯಿತ ಜ್ಞಾನಸ್ವರೂಪನು ಎಂಬ ಭಾವವು. ಸರ್ವೇಶ್ವರನ ಸ್ವರೂಪವೂ ಜ್ಞಾನವು, ಚಿತನ ಗುಣವೂ ಜ್ಞಾನವೇ ; ಹೇಗೆಂದರೆ ಸೂರ್ಯನಿಗೆ ಸ್ವರೂಪವೂ ತೇಜಸ್ಸೂ, ಕಿರಣಗಳೂ ತೇಜಸ್ಸೂ ಹೇಗೋ ಹಾಗೆ ಎಂದು ತಿಳಿಯತಕ್ಕದ್ದು. ಸರ್ವೇಶ್ವರನ ಗುಣರೂಪಜ್ಞಾನವು ಚಿತನ ಧರ್ಮಭೂತಜ್ಞಾನವೆಂದು ಹೇಳಲ್ಪಡುತ್ತದೆ. ಅದುದರಿಂದ ಜ್ಞಾನತ್ವ, ಸತ್ಯತ್ವ, ಆನಂದತ್ವಾದಿಗಳು ಸ್ವರೂಪಸಾರೂಪಕ ಧರ್ಮಗಳೂ ಮತ್ತು ನಿರೂಪಿತ ಸ್ವರೂಪ ವಿಶೇಷಣಗಳೂ ಹೌದು. ಈ ಪದಗಳ ಅರ್ಥವು ಹಿಂದೆ ವಿವರಿಸಲ್ಪಟ್ಟಿದೆ (ನೋ ಪುಟ ನೋಡಿ.) **ಅನಂತ**ನೆಂದರೆ ದೇಶಕಾಲ ವಸ್ತು ಪರಿಚ್ಛಿನ್ನ ರಹಿತನು ; ಕೆಲವು ದೇಶ, ಕಾಲ, ವಸ್ತುಗಳಿದ್ದು, ಇನ್ನು ಕೆಲವು ದೇಶ ಕಾಲ ವಸ್ತುಗಳಿಲ್ಲವು ಎಂದಲ್ಲವು, ಸಮಸ್ತ ದೇಶಕಾಲ ವಸ್ತುಗಳಲ್ಲೂ ಇರುವವನು ಎಂಬರ್ಥವು, ಎಲ್ಲಾ ವಸ್ತುಗಳಲ್ಲಿರುವದರಿಂದಲೇ ಎಲ್ಲಾ ವಸ್ತು ಸಾಮಾನ್ಯಾಧಿಕರಣ್ಯವನ್ನು ಹೇಳಲು ಅರ್ಹವಾದ ರೂಪವುಳ್ಳವನು. ಶ್ರೀ ಶಂಕರಾಚಾರ್ಯರವರು ಹೀಗೆ ಅರ್ಥ ಬೇರೆಪಡಿಸಿ, ಸ್ವರೂಪಕ್ಕೆ ಹೇಳಿ ಸಾಮಾನಾಧಿಕರಣ್ಯವನ್ನು ಹೊರಪಡಿಸಿದರು. ಘನವಾದ ಅರ್ಥವುಳ್ಳ ಪದಗಳಿಗೀಗ ಸಾಮಾನಾಧಿಕರಣ್ಯವನ್ನು ಬೇಕಾದಷ್ಟು. ಸ್ವರೂಪೈಕ್ಯವುಳ್ಳ ವಸ್ತುಗಳಿಗೆ ಹೇಳಬಾಗುವದಿಲ್ಲವು. ಹೀಗೆ ತಪ್ಪು ಅರ್ಥವನ್ನು ಬಿಟ್ಟು, ಜೀವಾತ್ಮನೂ ಕೂಡ ಅವಿದ್ಯಾಗ್ರಹೀತನಾದ ಪರಮನಾಥನೆಂದು ಹೊರಪಡಿಸಿದರು. ಕರ್ಮವಶ್ಯನಾಗಿ, ಮಿಥ್ಯಾಕ್ಕಾಗಿ, ದಾಸಭೂತನಾಗಿರುವ ಜೀವಾತ್ಮನೂ ಪರಮಾತ್ಮನೇ ಎಂದು ಹೇಳುವದೂ ಕೂಡ ಕರ್ಮವಶ್ಯವಾಕ್ಯಗಳಿಗೆ ವಿರುದ್ಧವಾಗಿದೆ. ವೇದವನ್ನು ಹೊರಪಡುವ ಅನೇಕ ಶ್ರುತಿ ಸ್ಮೃತಿ ಇತಿಹಾಸಗಳಿಗೆ ವಿರುದ್ಧವಾಗುವದು. " ಸತ್ಯಂ ಜ್ಞಾನಮನಂತಂ ಬ್ರಹ್ಮ " ಎಂಬ ವಾಕ್ಯವನ್ನು ಬ್ರಹ್ಮವು ಕಾರಣವಸ್ತುವಾದದ್ದರಿಂದಲೂ, ಗುಣದಿಂದಲೂ, ಬೃಹತ್ವಾದದರಿಂದ ಈ ರೀತಿಯೆಂದು ಹೊರಪಡುತ್ತದೆ. **ಸಾಂತಂ ಕ್ಷಣಾನಾಂ ಗಚ್ಛಂತಿ ತೇಷಾಮನಾತ್ಮೀಯ ಮುಚ್ಯತೇ** ಎಂದರೆ ಈತನು ಕಲ್ಪಾಗಗುವವರೆಗೂ ಇದ್ದು ಮಾಯಾ ಅನೇಕ ಅನಂತಾದಿ ಗುಣಗಳಿಗೆ ಆಶ್ರಯನೇ ಇದ್ದಾನೆಂದು ಅನಂತವಲ್ಲಿಯಲ್ಲಿ ಅನಂತಾಶ್ರಯತ್ವವೆಂಬುದೂ, **ಅನಂತ**ನೆಂದು ಹೇಳಿಕೊಳ್ಳುವದು ಇದರಿಂದ ಕಲ್ಪಾಗಗಾಕಾಶಕ್ಕಿಂತ ಅಧಿಕವಿಸ್ತಾರವುಳ್ಳವನೆಂದು ಹೇಳುವುದಾದ್ದರಿಂದ,ಎರಡೂ ವ್ಯಾಪಕತ್ವ ಗುಣವಿದ್ದಾಗ ವಿಶಾಲತ್ವಾಸ್ಪದವಲ್ಲಿ ಶ್ರೀ ಭಾಷ್ಯಕಾರರು ಉಪಯೋಗಿಸಿರುವುದೂ ಹೇಳಲ್ಪಟ್ಟಿದೆಯೆಂದು ಭಾವಿಸಲಾಗುವದು. ಇನ್ನು **ಆನಂದ** ರೂಪವು

ಇವ್ವರ್ಥತ್ತೈ (೧) **"ನನ್ಪಾವಿಳಕ್ಕೇ ಯಳತ್ತರ್ಕರಿಯಾಯ್"** ಎನ್ನು

ರಸೋವೈಸಃ ಎಂಬ ಶ್ರುತಿವಾಕ್ಯಾನುಸಾರ ಸ್ವರೂಪತಃ ಗುಣತಃ ಸಹ **ಆನಂದ** ನೆಂದು ಬೋಧಿಸುತ್ತದೆ.

ಮುಂದಿನ ವಾಕ್ಯದಿಂದ, ಆಳ್ವಾರುಗಳೂ ಕೂಡ ಪರಬ್ರಹ್ಮಸ್ವರೂಪವನ್ನು ಮೇಲೆ ವಿವರಿಸಿದ ರೀತಿಯಲ್ಲೇ ಅನುಸಂಧಾನಮಾಡಿರುತ್ತಾರೆಂದು ಹೇಳುತ್ತಾರೆ.

ಇವ್ವರ್ಥತ್ತೈ – ಈ ಅಭಿಪ್ರಾಯವನ್ನು ಎಂದರೆ ಸರ್ವೇಶ್ವರನ ಸ್ವರೂಪ ನಿರೂಪಕ ಧರ್ಮಗಳು ಸತ್ಯತ್ವ, ಜ್ಞಾನತ್ವ, ಅನಂತತ್ವ, ಆನಂದತ್ವ, ಅಮಲತ್ವಗಳು ಎಂಬುವವನ್ನು, ಮುಂಪೆ ಕಾಣಿಸಿರುವ ವಾಕ್ಯಗಳ ಮೂಲಕ **ಅಳ್ವಾರ್‌ಗಳ್ ಅನುಸಂಧಿತ್ತಾರ್‌ಗಳ್** ಎಂದು ಮುಂಪೆ ಇರುತ್ತದೆ.

(೧) ಇದು ತಿರುಮಜ್ಜೈಯಾಳ್ವಾರವರು ರಚಿಸಿದ ಪೆರಿಯ ತಿರುಮೊಳಿಯ ೨-೪-೧ನೇ ಪಾಶುರವು. **ನನ್ಪಾವಿಳಕ್ಕೇ** – ನಾಶವಿಲ್ಲದ ಜ್ಞಾನದೀಪ್ತಿಯುಳ್ಳವನೇ, ಇದರಿಂದ ಜ್ಞಾನಸ್ವರೂಪವು ಬೋಧಿತವಾಯಿತು ; **ಅಳತ್ತರ್ಕರಿಯಾಯ್** – ಅಳತೆಮಾಡಲು ಗೊತ್ತಾಗದವನಾಗಿ, ಎಂದರೆ ಅಪರಿಚ್ಛೇದ್ಯನಾಗಿ, ಅನಂತನು ಎಂಬ ಭಾವವು.

ನನ್ಪಾವಿಳಕ್ಕೇ ಯಳತ್ತರ್ಕರಿಯಾಯ್ ನರನಾರಣನೇ ಕರುಮಾ ಮುಗಿಲ್‌ಪೋಲ್
ಎನ್ಪಾಯ್, ಎಮಕ್ಕೇ ಯರುಳಾಯೆನ ನಿನ್ರಿಮ್ಮೈಯೋರ್ ಪರವು ಮಿಡಂ, ಎತ್ತಿಶ್ಶೈಯುಂ
ಕನ್ಪಾರಮನ್ದೇ ನಿಶೈ ಪಾಡ ಮಾಡೇ ಕಳಿವಣ್ಡು ಮಿಳಿರ್ನ್ದು ನಿಳಲ್ ತುದ್ದೈನ್ದ,
ಮನ್ಪಾರನಿನ್ರು ಮಣನುಲ್ಗು ನಾಜ್ಗರ್ ಮಣಿಮಾಡಕ್ಕೋಯಿಲ್ ವಣಙ್ಗ್ಗ ವನಸ್ರೇ॥

ಎಂಬುವದು ಪೂರಾ ಶ್ಲೋಕವು. ಇದರ ಅರ್ಥವೇನೆಂದರೆ :— **ನನ್ಪಾವಿಳಕ್ಕೇ** – ನಿತ್ಯವಾದ ಸ್ವಯಂಪ್ರಕಾಶವಾದ ಜ್ಞಾನವನ್ನೇ ಸ್ವರೂಪವಾಗಿ ಉಳ್ಳವನೇ, **ಅಳತ್ತರ್ಕರಿಯಾಯ್** – ಇಷ್ಟೆಂದು ಅಳತೆ ಮಾಡಲು ಅಶಕ್ಯನಾದವನೇ, **ನರನಾರಾಯಣಾವತಾರವನ್ನೆತ್ತಿದವನೇ, ಕರುಮಾಮುಗಿಲ್ ಪೋಲ್ ಎನ್ಪಾಯ್** – ಕಪ್ಪಾದ ಮಹಾಮೇಘದ ಹಾಗೆ ಕಾಯಕೋಭೆಯುಳ್ಳ ನನ್ನ ಸ್ವಾಮಿಯೇ, **ಎಮಕ್ಕೇ** – ಅನುಕೂಲವಾಗಿ ಅನನ್ಯ ಶರಣರಾದ ನಮಗೆ, **ಅರುಳಾಯೆನ** – ಅನುಗ್ರಹಮಾಡಿ ದಯಪಾಲಿಸಬೇಕು ಎಂದು, **ಇನ್ರಿಮ್ಮೈಯೋರ್** –

ಮ್, (೨) "ಉಣರ್ ಮುಳನಲ" ಎನ್ನುಮ್, (೩) "ಶೂೞ್ನ್ದ ತನಿ

ದೇವತೆಗಳು, **ನಿನ್ರು** – ಭೂಮಿಯಲ್ಲಿ ಬಂದುನಿಂತು, **ಪರವುಮ್ ಇಡಂ** – ಸ್ತೋತ್ರಮಾಡಿ ಆಶ್ರಯಿಸುವ ಸ್ಥಾನವಾಗಿ, **ಅಮ್ದೇ** – ಸೊಗಸಾದ ಜೇನು ನೊಣಗಳು, **ಎತ್ತಿಶೈಯುಂ** – ಎಲ್ಲಾ ದಿಕ್ಕುಗಳಲ್ಲೂ, **ಕನ್ದಾರಮಿಶೈಪಾಡ** – ಗಾನ್ದಾರಿರಾಗವನ್ನು ಹಾಡಲಾಗಿ, **ಕಳಿವಣ್ಡು** – ಮಧುಪಾನದಿಂದ ಮದಿಸಿದ ಭ್ರಮರಗಳು, **ಮೂಡೆಮಿಳಿರ್ನ್ದು** – ಚಪ್ಪರದಲ್ಲಿ ಬರಮಾಡಿಕ್ಕೊಂಡು, **ನಿಳಲ್ತು ದೈನ್ದ** – ಆ ಭ್ರಮರಗಳಿಗೆ, ನೆಳಲನ್ನು ಕೊಟ್ಟ, **ಮನ್ದಾರನಿನ್ರಮಣಮ್ ಮಲ್ಕುಮ್** – ಮನ್ದಾರವೃಕ್ಷಗಳು ಎಲ್ಲಾ ಕಾಲದಲ್ಲೂ ಪುಷ್ಪಿಸಿ, ಪರಿಮಳ ಸಮೃದ್ಧಿಯುಳ್ಳದ್ದಾಗಿ ನಿಲ್ಲುವ, **ನಾಜ್ಗೂರ್**–ತಿರುನಾಜ್ಗೂರಲ್ಲಿರುವ, **ಮಣಿಮಾಡಕ್ಕೋವಿಲ್**–ಮಣಿಮಾಡ ದೇವಸ್ಥಾನವನ್ನು, **ಎನ್ಮನಸೇ– ನನ್ನ** ಮನಸ್ಸೇ **ವಣಙ್ಗು** – ಆಶ್ರಯಿಸು.

(2) **ಉಣರ್ಮುಳನಲ ಎನ್ನುಂ** – ಪರಿಪೂರ್ಣ ಜ್ಞಾನಾನಂದ ಸ್ವರೂಪನು **ಎಂದೂ**, ಇದು ನಮ್ಮಾೞ್ವಾರ್ ತಿರುವಾಯ್‌ಮೊೞಿಯ 1, 1, 2ನೇ ಪಾಶುರದಲ್ಲಿ ಹೇಳಿರುತ್ತದೆ.

ಮನನಗ ಮಲಮರ ಮಲರ್ಕ್ಕೈ ಯೆಳುದರುಮ್,
ಮನಗುಣ ರ್ವಳವಿರ್ಪ ಪೂರಿಯುಣ ರ್ವೈಯಿರ್ಪ,
ಇನನುಣರ್ ಮುಳನಲ ಮೆದಿರ್ನಿಕೞ್ ಕಳಿವಿನುಮ್,
ಇನನಿಲ ನೆನನುಯಿರ್ ಮಿಗುನರೈ ಯಿಲನೇ ॥

ಎಂಬುನದು ಪೂರಾ ಪಾಶುರವು. ಇದರರ್ಥವೇನೆಂದರೆ :—ಮನಸ್ಸಿನ ಮಲಗಳಾದ ರಾಗದ್ವೇಷಾದಿಗಳು ಕಳೆದುಹೋಗಲಾಗಿ, ಅದರಿಂದ ವಿಕಸತೆಯನ್ನು ಹೊಂದಿ, ಮೇಲೆ ವೃದ್ಧಿಹೊಂದುವ ಮನಸ್ಸಿನ ಜ್ಞಾನದ ಯೋಗಬಲದಿಂದಲೂ ಕೂಡ ಪರಿಚ್ಛೇದಿಸಲು ಅಸಾಧ್ಯನಾದ, ಚಕ್ಷುರಾದಿ ಬಾಹ್ಯೇಂದ್ರಿಯಗಳ ಮೂಲಕ ತಿಳಿಯುವ, ಪ್ರಾಕೃತವಸ್ತುವಿನ ಹಾಗಲ್ಲದವನಾದ, ಹೀಗೆ ವಿಲಕ್ಷಣನಾವ, ಸಂಪೂರ್ಣ ಜ್ಞಾನಾನಂದ ಸ್ವರೂಪನಾದ **ಭವಿಷದ್ವರ್ತ್ತಮಾನ** ಭೂತಕಾಲವನ್ನೆಯೂ ಸಹ, ತನಗೆ ಸಮಾನನೂ ಅಧಿಕನೂ ಇಲ್ಲದವನಾವ ಸರ್ವೇಶ್ವರನು ನನಗೆ ಸತ್ತಾದಿಗಳನ್ನೀಯುವ ಪ್ರಾಣಭೂತನು.

(3) **ಶೂೞ್ನ್ದ** – ವ್ಯಾಪಿಸಿರುವ ಯಾವದನ್ನು ಎಂದರೆ ಕಾರ್ಯವರ್ಗವಾದ ಪ್ರಕೃತಿ ಪರಿಣಾಮಗಳನ್ನೆಲ್ಲಾ ವ್ಯಾಪಿಸಿರುವ, ಮತ್ತು ಆ ಪ್ರಕೃತಿ ತತ್ವವನ್ನೆಲ್ಲಾ ತನ್ನ ಧರ್ಮಭೂತ ಜ್ಞಾನಮೂಲಕ ವ್ಯಾಪಿಸಿರುವದರಿಂದ ಅದಕ್ಕೂ ವಿಲಕ್ಷಣವಾಗಿ

ರ್ಪೆರಿಯ ಶುಡರ್ ಜ್ಞಾನಮೇ ವಿನ್ಪಂ" ಯೆನ್ನುಮ್, (೪) "ಅಮಲನ್" ಎನ್ನುಮಿತ್ಯಾದಿಗಳಾಲೇ ಆಳ್ವಾರ್‌ಗಳನು ಸನ್ಥಿತ್ತಾರ್‌ಗಳ್.

ಶ್ರೇಷ್ಠವಾದ ಆತ್ಮವನ್ನೂ ಕೂಡ ವ್ಯಾಪಿಸಿರುವ, ಆದುದರಿಂದ **ಅದಿನಿಪ್ಪೆರಿಯ** – ಅವೆರಡಾದ ಪ್ರಕೃತಿ ಪುರುಷರಗಿಂತಲೂ ದೊಡ್ಡವಾದ ಎಂದರೆ ವಿಲಕ್ಷಣವಾಗಿ ಶ್ರೇಷ್ಠವಾದ, **ಶುಡರ್‌ಜ್ಞಾನ ಮಿನ್ಪಮೀಯೋ** – ಉಜ್ವಲವಾದ ಜ್ಞಾನಾನಂದ ಸ್ವರೂಪನೇ ಎಂದರ್ಥವು.

ಶೂಳ್ನ್ದ ಗನ್ರಾಳ್ನುಯರ್ನ್ದ ಮುಡವಿಲ್ ಪೆರುಮ್ಬಾಳೇಯೋ।
ಶೂಳ್ನ್ದ ದನಿಲ್ ಪೆರಿಯ ಪರ ನನ್ಮಲರ್ ಚ್ಚೋದಿಯೋ,।
ಶೂಳ್ನ್ದ ದನಿಲ್ ಪೆರಿಯ ಶುಡರ್ ಜ್ಞಾನ ವಿನ್ಪಮೇಯೋ,।
ಶೂಳ್ನ್ದ ದನಿಲ್ ಪೆರಿಯ ನೆನ್ನ ವಾವರ ಚ್ಚೊಳ್ನಾಯೇ ॥

ಎಂಬುವದು ಪೂರಾ ಪಾಶುರವು, " ಮೂಲಪ್ರಕೃತಿಯು ಕಾರ್ಯವರ್ಗಗಳ ವಾದ ವಿಷಯಾದಿಗಳನ್ನು ಕೆಳಗೂ ಮೇಲೂ ಹೀಗೆ ದಶದಿಕ್ಕುಗಳಲ್ಲೂ ವ್ಯಾಪಿಸಿರುವ ದರಿಂದ ದೊಡ್ಡದೆಂದೆನಿಸುತ್ತದೆ. ಅವನ್ನೆಲ್ಲಾ ವ್ಯಾಪಿಸಿ ಅವುಗಳಿಗೆ ಆತ್ಮಾವಾದ ವನೇ. ಆ ಮೂಲಪ್ರಕೃತಿಯನ್ನೂ ಮತ್ತು ಅವರ ಕಾರ್ಯಮಾರ್ಗವಾದ ಮಹದಾ ದಿಗಳೆಲ್ಲವನ್ನು ವ್ಯಾಪಿಸಿರುವ ಆತ್ಮವರ್ಗವು ಇನ್ನೂ ದೊಡ್ಡದು, ಅಂಥಾವುಗಳ ನ್ನೂ ಕೂಡ ವ್ಯಾಪಿಸಿ ಅವುಗಳಿಗೆ ಆತ್ಮಾವಾದವನೇ : ಹೀಗೆ ಇವೆರಡನ್ನೂ ವ್ಯಾ ಪಿಸಿ, ಅವುಗಳಿಗೆ ನಿರ್ವಾಹಕನಾಗಿ, ಪರಂಜ್ಯೋತಿಸ್ವರೂಪಿಯಾಗಿ, ಜ್ಞಾನಾನಂದಮೂರ್ತಿಯಾಗಿ ಹೀಗೆ ಎಲ್ಲಾದಕ್ಕೂ ದೊಡ್ಡವನಾದ ಪರಮಾತ್ಮನೇ : ಅದಕ್ಕೂ ಕೂಡ ದೊಡ್ಡದಾ ಯಿದು ನನ್ನ ಅಭಿನಿವೇಶವು : ಅದು ತೀರುವಹಾಗೆ ಅದಕ್ಕೂ ದೊಡ್ಡದಾದ ನಿನ್ನ ಅಭಿನಿವೇಶವನ್ನು ತೋರಿ ನಮ್ಮೊಂದಿಗೆ ಸಂಶ್ಲೇಷವನ್ನು ಹೊಂದಿರುತ್ತೀಯೇ, ಇದು ಎಂತಹ ಅತಿಶಯವೊ ? ಎಂಬುವದು ಈ ಅಮೋಘ ಪಾಶುರಾರ್ಥವು.

(4) ಇದು ತಿರುಪ್ಪಾಣಾಳ್ವಾರ್ ಅನುಗ್ರಹಿಸಿದ **ಅಮಲನಾದಿಪಿರಾ** ಎಂಬ ಹತ್ತು ಪಾಶುರದಲ್ಲಿನ ಮೊದಲನೇ ಶ್ಲೋಕವು :—

ಅಮಲನಾದಿ ಪಿರಾ ನಡಿಯಾರ್ಕ್ಕೆನ್ನೈಯಾಳ್ ಪಡುತ್ತ
ವಿಮಲ ವಿಣ್ಣವರ್ ಕೋಕ್ಕ ವಿರೈಯಾರ್ ಪೊಳಿಲ್ ವೇಜ್ಗಡವ
ನಿಮಲ ನಿನ್ಮಲ ನೀದಿವಾನವನ್ ನೀಣ್ ಮದಿಳ ರಜ್ಗತ್ತ
ವ್ಮ್ಮಾ, ತಿರು
ಕ್ಕಮಲ ಪಾದಮ್ ವನ್ದೆ ಕಣ್ಣಿನುಳ್ಳನ ವೊಕ್ಕಿನ್ರದೇ ॥೧॥

ಮುಂಬಾಳ್ಗುಣಜ್ಞಳುಮ ದಿವ್ಯಮಜ್ಞಳ ವಿಗ್ರಹಾದಿಗಳುಮೆಲ್ಲಾಮ್ ಈಶ್ವರನುಕ್ಕ ನಿರೂಪಿತ ಸ್ವರೂಪ ವಿಶೇಷಣಜ್ಞಳಾಯಿರುಕ್ಕುಮ್. ಇ

ಅಮಲನ್–ಅಖಿಲಹೇಯ ಪ್ರತ್ಯನೀಕನಾಗಿರುವದರಿಂದ ತುಂಬಾ ಪರಿಶುದ್ಧನು, **ಆದಿಪಿರಾನ್**–ಜಗತ್ಕಾರಣನಾದ ಸ್ವಾಮಿಯು, **ಅಡಿಯಾರ್ಕು**–ತನ್ನ ಭಕ್ತರಾದ ಭಾಗವತೋತ್ತಮರಿಗೆ, **ಎನ್ನೈ ಆಳ್ಪಡುತ್ತ ವಿನುಲ**– ನನ್ನನ್ನು ದಾಸಭೂತನಾಗಿ ಮಾಡಿದ ಪರಿಶುದ್ಧ ಸ್ವರೂಪನು, **ವಿಣ್ಣವರ್ಕೋ**– ನಿತ್ಯಸೂರಿಗಳಿಗೆ ಸ್ವಾಮಿಯು, **ವಿರೈಯಾರ್ಪೊಳಿಲ್** – ಪರಿಮಳದಿಂದ ತುಂಬಿದ ಉದ್ಯಾನವನಗಳುಳ್ಳ, **ವೇಜ್ಗಡವ**– ತಿರುಮಲೆಯಲ್ಲಿ ಬಿಜಮಾಡಿಸಿರುವ ಶ್ರೀನಿವಾಸನು, **ನಿಮಲ**– ಪ್ರಕಾಶಿಸುವವನು, **ನಿನ್ಮಲನ್ ನೀತಿವಾನವನ್**– ಸ್ವಯಂಪ್ರಕಾಶವಾದ ನಿತ್ಯವಿಭೂತಿಯುಳ್ಳವನು, **ನೀಳ್ಮದಿಳ್ ಅರಜ್ಗತ್ತ ಮಾ**– ವಿಸ್ತಾರವಾದ ಪ್ರಾಕಾರಗಳುಳ್ಳ ಶ್ರೀರಜ್ಗಕ್ಷೇತ್ರದ ಸ್ವಾಮಿಯು, ಇಂಥಾವನ, **ತಿರುಕ್ಕಮಲಪಾದಂ**– ಶ್ರೇಷ್ಠವಾದ ಪಾದಕಮಲವು **ಎಕಣ್ಣಿಲ್ ಉಳ್ಳ ನ**– ನನ್ನ ಕಣ್ಣಿಗೆ ಗೋಚರವಾಯಿತು, **ಒಕ್ಕಿನ್ರದೇ**– ಇದು ನಮ್ಮಿಬ್ಬರಿಗೂ ಯೋಗ್ಯವಾಯಿತಲ್ಲವೇ, ಇಂತಹ ಪರತ್ವವನ್ನು ಹೊಂದಿರುವವನು ಇಂತಹ ದಾಸಭೂತನಿಗೆ ದೃಗ್ಗೋಚರವಾಗಿರುವದು ನಿನ್ನ ಮಾಹಾತ್ಮ್ಯಕ್ಕೆ ಅನುಗುಣವಾದ ಸೌಲಭ್ಯಯುಕ್ತವೇ ಹೌದಾದರೂ, ದಾಸಭೂತನಾದ ನಾನು ನಿನ್ನನ್ನಾಶ್ರಯಿಸಿದ ದೋಷಭಾವಕ್ಕೂ ಸಹಯುಕ್ತವಾಗುವದೆಂಬ ತಾತ್ಪರ್ಯವು. **ಎನ್ರು ಮಿತ್ಯಾದಿಗಳಾಲೇ**– ಎಂಬವೇ ಮೊದಲಾದವುಗಳಿಂದ, **ಆಳ್ವಾರ್ಗಳನುಸನ್ಧಿತ್ತಾರ್ಗಳ್**–ತಿರುಮಳಿಶೈಯಾಳ್ವಾರ, ನಮ್ಮಾಳ್ವಾರ್, ತಿರುಪ್ಪಾಣಾಳ್ವಾರ್ ಮೊದಲಾದ ಆಳ್ವಾರುಗಳು, ಪುನಃಪುನಃ ಜ್ಞಾಪಕಕ್ಕೆ ತಂದುಕೊಂಡರು. ಹೀಗೆ ಮೊದಲು ಸರ್ವೇಶ್ವರನ ಸ್ವರೂಪನಿರೂಪಕ ಧರ್ಮಗಳನ್ನು ಹೇಳಿ, ನಿರೂಪಿತ ಸ್ವರೂಪ ಗುಣಗಳು ಯಾವುವೆಂದು ತಿಳಿಸುತ್ತಾರೆ.

ಮುಂಬಾಳ್ಗುಣಜ್ಞಳುಮ್ – ನಿಕ್ಕ ಎಲ್ಲಾ ಗುಣಗಳೂ, ಅವು ಯಾವುವೆಂದರೆ ಜ್ಞಾನಬಲೈಶ್ವರ್ಯಾದಿಗಳು, ದಿವ್ಯ ಮಜ್ಗಳವಿಗ್ರಹಗಳೂ, ಮತ್ತು **ಎಲ್ಲವೂ ಎಲ್ಲಾಮ್** ಎಂಬುವದರಿಂದ ಉಭಯ ವಿಭೂತಿಗಳೂ ಪರಿಗ್ರಹಿಸಲ್ಪಟ್ಟವು; ಸರ್ವೇಶ್ವರನಿಗೆ ನಿರೂಪಿತ ಸ್ವರೂಪ ವಿಶೇಷಣಗಳೆಂದು ಭಾವಿಸತಕ್ಕದ್ದು. **ಮತ್ತುಳ್ಳ ಗುಣಜ್ಞಳುಮ್** ಎಂಬುವದರಿಂದ ಮೇಲ್ಹೇಳದ ಸತ್ಯತ್ವ, ಜ್ಞಾನತ್ವ, ಅನಂತತ್ವಾದಿಗಳಲ್ಲದೆ ನಿಕ್ಕ ಎಲ್ಲಾ ಕಲ್ಯಾಣಗುಣಗಳನ್ನೆಲ್ಲ ಶ್ರೀ ಭಾಷ್ಯಕಾರರು ಉಪಪಾದಿಸಿದ ಗುಣಗಳು ಇಲ್ಲಿ ಪರಿಗ್ರಹಿಸಲ್ಪಟ್ಟವೆಂದು ತಿಳಿಯತಕ್ಕದ್ದು. ಹಾಗೆಯೇ ಸರ್ವೇ

ಗ್ಗುಣಜ್ಞಳಿಲ್ ಜ್ಞಾನ ಬಲೈಶ್ವರ್ಯ ವೀರ್ಯ ಶಕ್ತಿ ತೇಜಸ್ಸುಕ್ಕಳೆನ್ನು ಆರುಗುಣಜ್ಞಳ್ ಪರತ್ವೋಪಯುಕ್ತಜ್ಞಳಾಯಿರುಕ್ಕುಮ್. ಸೌಶೀಲ್ಯ

ಶ್ವರನ ದಿವ್ಯಮಜ್ಞಳ ವಿಗ್ರಹಗಳೂ, ನಿತ್ಯಮುಕ್ತರ ದಿವ್ಯಮಜ್ಞಳ ವಿಗ್ರಹಗಳೂ ಕೂಡ ಸರ್ವೇಶ್ವರನಿಗೆ ವಿಶೇಷಣಗಳು. ಮತ್ತು **"ಎಲ್ಲಾಮ್"** ಎಂಬುವದರಿಂದ ಉಭಯ ವಿಭೂತಿಗೂ ಸೇರಿದ ಸರ್ವ ಚಿದಚಿತ್ತುಗಳೂ ಸರ್ವೇಶ್ವರನಿಗೆ ವಿಶೇಷಣ ಗಳೆಂದು ಹೇಳಲ್ಪಟ್ಟಿತು. **ಇಗ್ಗುಣಜ್ಞಳಿಲ್** – ಶರಣಾಗತಿಗದ್ಯದಲ್ಲಿ ಹೇಳಲ್ಪಟ್ಟ ಈ ಗುಣಗಳಲ್ಲಿ, ಜ್ಞಾನ, ಬಲ, ಐಶ್ವರ್ಯ, ವೀರ್ಯ, ಶಕ್ತಿ, ತೇಜಸ್ಸುಗಳೆಂಬ ಆರು ಗುಣಗಳು, **ಪರತ್ವೋಪಯುಕ್ತಜ್ಞಳಾಯಿರುಕ್ಕುಮ್** – ಸರ್ವೇಶ್ವರನ ಪರತ್ವವನ್ನು ಎಲ್ಲಾ ಚೇತನಾಚೇತನಕ್ಕಿಂತಲೂ ಸರ್ವೋತ್ಕೃಷ್ಟತೆಯನ್ನು ಸ್ಥಾಪಿ ಸಲು ಉಪಯೋಗವಾದವುಗಳಾಗಿರುತ್ತವೆ. **ಸೌಶೀಲ್ಯವೇ, ವಾತ್ಸಲ್ಯವೇ** ಮೊದ ಲಾದ ಗುಣಗಳು, **ಸೌಲಭ್ಯೋಪಯುಕ್ತಜ್ಞಳಾಯಿರುಕ್ಕುಮ್** –ಸರ್ವೇಶ್ವರನು ಮೋಕ್ಷಾರ್ಥಿಯು ವಿಷಯದಲ್ಲಿ ಬಹು ಸುಲಭನೆಂದು ತೋರಿಸಲು ಉಪಯೋಗಕರ ಗಳಾಗಿರುತ್ತವೆ. ಇಲ್ಲಿ ಜ್ಞಾನಸ್ವರೂಪನಾದ ಭಗವಂತನಿಗೆ ಜ್ಞಾನವು ನಿರೂಪಿತ ಸ್ವರೂಪ ವಿಶೇಷಣವೆಂದೂ ಹೇಳಲ್ಪಟ್ಟಿರುತ್ತದೆ. **ಜ್ಞಾನ**ವೆಂದರೆ, **"ಯಸ್ಸರ್ವಜ್ಞಸ್ಸರ್ವವಿತ್"** ಎಂದು ಶ್ರುತಿಯಲ್ಲಿ ಹೇಳಿರುವ ಹಾಗೆ ಸಮಸ್ತವನ್ನೂ ಸದಾ ಸಾಕ್ಷಾತ್ಕರಿಸೋಣವು. ಈ ಅಭಿಪ್ರಾಯವನ್ನು ಶ್ರೀಮನ್ನಾಥ ಮುನಿಗಳು, ತಾವು ಅನು ಗ್ರಹಿಸಿದ ನ್ಯಾಯತತ್ವದ ಪ್ರಥಮ ಶ್ಲೋಕದಲ್ಲಿ **"ಯೋವೇತ್ತಿ ಯುಗಪತ್ಸರ್ವಂ ಪ್ರತ್ಯಕ್ಷೇಣ ಸದಾ ಸ್ವತಃ"** ಎಂದರೆ ಏಕಕಾಲದಲ್ಲೇ ಸದಾ ತಾನಾಗಿಯೇ, ಪ್ರತ್ಯ ಕ್ಷವೋಪಾದಿಯಲ್ಲಿ ಸಮಸ್ತವನ್ನೂ ಸಾಕ್ಷಾತ್ಕರಿಸೋಣವೆಂದು ವ್ಯಕ್ತಪಡಿಸಿರು ತ್ತಾರೆ. **ಬಲ**ವೆಂದರೆ "**ವಿಷಸೇತುರ್ವಿಧರಣಃ**" ಎಂಬ ಶ್ರುತಿಯಲ್ಲೂ, **"ದ್ಯಾಸ್ಸಚ ನ್ದ್ರಾರ್ಕ ನಕ್ಷತ್ರಂ ಖಂದಿಶೋ ಭೂರ್ಮಹೋದಧಿಃ। ವಾಸುದೇವಸ್ಯ ವೀರ್ಯೇಣ ವಿಧೃತಾನಿ ಮಹಾತ್ಮನಃ"** ಎಂಬುವದರಲ್ಲೂ, ಉಪಪಾದಿತವಾಗಿ ರುವಹಾಗೆ, ಸ್ವಲ್ಪವೂ ಆಯಾಸವಿಲ್ಲದೆ ಎಲ್ಲವನ್ನೂ ಧಾರಣಮಾಡುವ ಸಾಮರ್ಥ್ಯವು, **ಐಶ್ವರ್ಯ** ವೆಂದರೆ ಈಶ್ವರಭಾವವು, ಎಲ್ಲವೂ ತನ್ನ ಸ್ವತ್ತಾಗಿ, ತಾನು ಎಲ್ಲಾದಕ್ಕೂ ಆತ್ಮವಾಗಿ, ಎಲ್ಲವನ್ನೂ ನಿಯಮಿಸುವ ಶಕ್ತಿಯು ; **"ಅನ್ತರೋಯಮಯತಿ"** ಮತ್ತು **"ಭೋಕ್ತಾ ಭೋಗ್ಯಂ ಪ್ರೇರಿತಾರಂಚ ಮತ್ವಾ"** ಇತ್ಯಾದಿ ಶ್ರುತಿಗ ಳಲ್ಲಿ ಈ ನಿಯಮನ ಶಕ್ತಿಯು ಉಪದೇಶಿಸಲ್ಪಟ್ಟಿರುತ್ತದೆ. **ವೀರ್ಯ**ವೆಂದರೆ, ಸರ್ವೇ ಶ್ವರನು ಸಮಸ್ತಕ್ಕೂ ಉಪಾದಾನಕಾರಣನಾಗಿ, ಸಮಸ್ತವನ್ನೂ ವ್ಯಾಪಿಸಿ, ಧರಿಸಿ, ನಿಯಮಿಸುವವನಾಗಿದ್ದರೂ, ವಿಕಾರರಹಿತನಾಗಿರುವಿಕೆಯು. **ಶಕ್ತಿ** ಎಂದರೆ ಸರ್ವೇಶ್ವ

ವಾತ್ಸಲ್ಯಾದಿಗಳ್ ಸೌಲಭ್ಯೋಪಯುಕ್ತಜ್ಞಳಾಯಿರುಕ್ಕುಮ್.

ನ ಅಘಟಿತಘಟನಾ ಸಾಮರ್ಥ್ಯವು; ಅಥವಾ ಎಲ್ಲವನ್ನೂ ನಿರ್ವಹಿಸುವ ಶಕ್ತಿಯು. **ತೇಜಸ್ಸು** ಎಂದರೆ ಇತರ ಸಹಾಯಾಪೇಕ್ಷೆ ಇಲ್ಲದೇನೆ ನಿರ್ವಹಿಸುವ ಶಕ್ತಿಯು.

ಲೋಕದಲ್ಲಿ ಒಬ್ಬನಿಗೆ ತನ್ನ ವಿಭೂತಿಯ ಮಹಿಮೆಯೇ ತಿಳಿಯದೇ ಇರಬಹುದು. ಒಂದು ವೇಳೆ ತಿಳಿದಿದ್ದರೂ, ಅದನ್ನು ಧರಿಸುವ ಸಾಮರ್ಥ್ಯವಿರಲಾರದು. ಒಂದುವೇಳೆ ತಿಳಿದು ಧರಿಸಿದರೂ ನಿಯಮಿಸುವ ಸಾಮರ್ಥ್ಯವಿರಲಾರದು, ಅಥವಾ ಹೀಗೆ ಧರಿಸಿ ನಿಯಮಿಸೋಣದರಿಂದ ಆಯಾಸವಾಗಬಹುದು. ಅಥವಾ ಆಯಾಸವಾಗದಿದ್ದರೂ ಇತರ ಸಹಾಯಾಪೇಕ್ಷೆಯಿಂದಲೇ ನಿರ್ವಹಿಸಬೇಕಾದೀತು. ಸರ್ವೇಶ್ವರನ ಈ ಷಾಡ್ಗುಣ್ಯವು ಮೇಲೆ ಹೇಳಿದರೀತಿಯಲ್ಲಿ ಅಲ್ಲದೆ, ಎಲ್ಲವನ್ನೂ ಏಕ ಕಾಲದಲ್ಲೇ ಸಾಕ್ಷಾತ್ಕರಿಸಿ, ಧಾರಣಮಾಡಿ, ನಿಯಮಿಸಿ, ನಿರ್ವಾಹಮಾಡಿ, ವಿಕಾರವನ್ನುಂಟುಮಾಡದೆ, ಯಾವ ಸಹಕಾರಿಯಪೇಕ್ಷೆಯನ್ನೂ ನಿರೀಕ್ಷಿಸದೆ, ಇರುವದರಿಂದ ಸರ್ವೇಶ್ವರನಿಗೆ ಪರತ್ವವನ್ನು ಸ್ಥಾಪಿಸಲು ಉಪಯುಕ್ತಗಳಾಗಿವೆ ಎಂದು ಅಪ್ಪಣೆ ಕೊಡಿಸಿರುತ್ತಾರೆ. ಈ ಆರುಗುಣಗಳಿಂದಲೇ ಸರ್ವೇಶ್ವರನಿಗೆ ಷಾಡ್ಗುಣ್ಯಪರಿಪೂರ್ಣನೆಂದೂ ಭಗವಚ್ಛಬ್ದವಾಚ್ಯನೆಂದೂ ಹೇಳಲ್ಪಡುವನು. ಶ್ರೀಪರಾಶರರು ವಿಷ್ಣುಪುರಾಣದಲ್ಲಿ **"ತೇಜೋಬಲೈಶ್ವರ್ಯ ಮಹಾವಬೋಧ ಸುವೀರ್ಯಶಕ್ತ್ಯಾದಿ ಗುಣೈಕರಾಶಿಃ"** ಎಂದುಸರ್ವೇಶ್ವರನನ್ನು ಸ್ತೋತ್ರಮಾಡಿರುತ್ತಾರೆ, **ಸೌಶೀಲ್ಯವಾತ್ಸಲ್ಯಾದಿಗಳ್** ಎಂಬಲ್ಲಿರುವ **ಆದಿ** ಪದದಿಂದ ಮಾರ್ದವ, ಆರ್ಜವ, ಸೌಹಾರ್ದ್ರ, ಸಾಮ್ಯ, ಕಾರುಣ್ಯ, ಮಾಧುರ್ಯ, ಗಾಂಭೀರ್ಯ, ಔದಾರ್ಯ, ಚಾತುರ್ಯ, ಸ್ಥೈರ್ಯ, ಧೈರ್ಯ, ಶೌರ್ಯ, ಪರಾಕ್ರಮ, ಸತ್ಯಕಾಮ, ಸತ್ಯಸಙ್ಕಲ್ಪ, ಕೃತಿತ್ವ, ಕೃತಜ್ಞತ್ವಾದಿ ಅನೇಕ ಗುಣಗಳು ಸೂಚಿಸಲ್ಪಟ್ಟವು. **ಸೌಶೀಲ್ಯ**ವೆಂದರೆ, ಶೋಭನವಾದ ಶೀಲವನ್ನು ಹೊಂದಿರುವಿಕೆಯು; ಮಹಾವೈಭವವಿರುವವನು ನೀಚಭಕ್ತರೊಂದಿಗೆ ಸೇರಿರುವಿಕೆಯು. ಈ ಸಂದರ್ಭದಲ್ಲಿ,

ನಿಷಾದಾನಾಂ ನೇತಾ ಕಪಿಕುಲಪತಿಃ ಕಾಪಿ ಶಬರೀ । ಕುಚೇಲಃ ಕುಬ್ಜಾ ಸಾವಾಲ್ಯಕೃದಿತಿ । ಅಮೀಷಾಂ ನಿಮ್ನತ್ವಂ ವೃಷಗಿರಿಪತೇ ರುನ್ನತಿರಪಿ । ಪ್ರಭೂತೈಸ್ಸ್ನೇಹೋಭಿಃ ಪ್ರಸಭಮನುಕಂಪೇ ಸಮಯಸಿ ॥ (ದಯಾಶತಕ) ಎಂಬ ಶ್ಲೋಕವನುಸಂದೇಯವು.

ಜೀವತಭಪತಿಯಾದ ಗುಹನು, ಕಪಿರಾಜನಾದ ಸುಗ್ರೀವನು, ಯಾವಳೋ ಒಬ್ಬ ಸ್ತ್ರೀಯಾದ ಶಬರಿಯು, ಮಹಾದಾರಿದ್ರ್ಯಪೀಡಿತನಾದ ಕುಚೇಲನು, ಅಷ್ಟಾವಕ್ರನಾದ ತರೀರವಳ್ಳ ಕುಬ್ಜೆಯು, ಯಾವನೋ ಒಬ್ಬ ಹೀನಾಚಿಗನು,

ಇಗ್ಗುಣಜ್ಞಳೆಲ್ಲಾಮ್ ಸರ್ವಕಾಲತ್ತಿಲುಮ್ ಸ್ವರೂಪ ಶ್ರಿತಜ್ಞಳಾಯಿರುಕ್ಕುಮ್.

ಇವರೇ ಮೊದಲಾದವರ ನೀಚಭಾವವನ್ನೂ ತಿರುನೇಜ್ಞಡಮುಡೈಯಾನನ ಮಹೋನ್ನತಿ ಭಾವವನ್ನೂ, ಓ ಶ್ರೀನಿವಾಸನ ದಯೆಯೇ ನಿನ್ನ ಪ್ರವಾಹದಿಂದ, ನೀರಿನ ಪ್ರವಾಹವು ಬೆಟ್ಟವನ್ನೂ ಹಳ್ಳವನ್ನೂ ಸಮವಾಗಿ ತೋರುವಹಾಗೆ, ಸಮವಾಗಿ, ಮಾಡಿರುತ್ತೀಯೇ ಎಂಬ ತಾತ್ಪರ್ಯವು. ಹಾಗೆಯೇ ಗಜೇಂದ್ರ ಮೋಕ್ಷವೂ, ಜಟಾಯುವಿಗೆ ಔರ್ಧ್ವದೇಹ ಕ್ರಿಯೆಯೂ, ಅರ್ಜುನಸಾರಥ್ಯವೂ, ಇವೇ ಮೊದಲಾದವುಗಳೂ ಸಹ ಆತನ ಸೌಶೀಲ್ಯದ ಮಹಿಮೆಯು. **ವಾತ್ಸಲ್ಯ**ವೆಂದರೆ, ಆಕಳಿಗೆ ತನ್ನ ವತ್ಸವಾದ ಕರುವಿನಲ್ಲಿ ಯಾವ ನಿರತಿಶಯ ಪ್ರೀತಿಯುಂಟೋ, ಅಂತಹಪ್ರೀತಿಯು; ಇದು ತಾನು ಪ್ರೀತಿಸುವವರಲ್ಲಿ ದೋಷವಿದ್ದರೂ ಅದನ್ನು ಪರಿಗಣಿಸದೆ ಪ್ರೀತಿಸುವ ಸ್ವಭಾವವು. **"ದೋಷೋಯದ್ಯಪಿ ತಸ್ಯಸ್ಯಾತ್ಸತಾ ಮೇತದ ಗರ್ಹಿತಂ"** ಎಂಬ ಶ್ರೀ ರಾಮೋಕ್ತಿಯು ಇದನ್ನು ಉಪಪಾದಿಸಿರುತ್ತದೆ. ಈ ವಾತ್ಸಲ್ಯಮಹಿಮೆಯಿಂದಲೇ ಕಾಕಾಸುರನು ರಕ್ಷಿಸಲ್ಪಟ್ಟನು. ಹೀಗೆ ವಾತ್ಸಲ್ಯವಿರುವದರಿಂದಲೇ ಸಕಲ ಪಾಪಿಷ್ಠರ ನಯನಕ್ಕೂ ವಿಷಯನಾಗಿ ಅರ್ಚ್ಯಾವತಾರಿಯಾಗಿ ಸೇವೆಯನ್ನೀಯುತ್ತಾನೆ.

ಇಗ್ಗುಣಜ್ಞಳೆಲ್ಲಾಮ್ – ಪರತ್ವವನ್ನು ಸಾಧಿಸುವ ಜ್ಞಾನಬಲಾದಿ ಈಐರು ಗುಣಗಳೂ ಮತ್ತು ಸೌಲಭ್ಯಸೂಚಕವಾದ ಸೌಶೀಲ್ಯ, ವಾತ್ಸಲ್ಯಾದಿ ಗುಣಗಳೂ ಇವುಗಳೆಲ್ಲಾ **ಸರ್ವಕಾಲತ್ತಿಲುಮ್** – ಸಮಸ್ತಕಾಲದಲ್ಲೂ, **ಸ್ವರೂಪಾಶ್ರಿತಜ್ಞಳಾಯಿರುಕ್ಕುಮ್** – ಆತನ ಸ್ವರೂಪವನ್ನಾಶ್ರಯಿಸಿದವುಗಳಾಗಿರುತ್ತವೆ. ಹೀಗೆ ಹೇಳಲು ಕಾರಣವೇನೆಂದರೆ:—ಕೆಲವು ಉಪಾಸನೆಗಳಲ್ಲಿ, ಉಪಾಸ್ಯನಾದ ಪರಬ್ರಹ್ಮವು ಕೆಲವು ಮುಖ್ಯಗುಣಗಳಿಂದ ಯುಕ್ತನಾಗಿರುವ ಹಾಗೆ ಉಪಾಸಿಸಲ್ಪಡುವನು ಆಗ ಸರ್ವೇಶ್ವರನು ಆ ಗುಣಗಳಿಂದ ಮಾತ್ರವೇ ಯುಕ್ತನೆಂದು ಹೇಳಲಾದೀತೇ? ಇತರ ಗುಣಗಳು ಅಂತಹ ಉಪಾಸ್ಯನಾದ ಪರಬ್ರಹ್ಮನಲ್ಲಿ ಇಲ್ಲವೇ? ಅಮದರಿಂದ ಹಾಗಲ್ಲವೆಂದು ತಿಳಿಸುವುದಕ್ಕಾಗಿ ಎಲ್ಲಾ ಗುಣಗಳೂ ಸರ್ವೇಶ್ವರನಲ್ಲಿ ಸರ್ವದಾ ಸ್ವರೂಪವನ್ನಾಶ್ರಯಿಸಿರುತ್ತವೆ ಎಂದು ಹೇಳುತ್ತಾರೆ. ಎಲ್ಲಾ ಉಪಾಸನೆಗಳಲ್ಲೂ ಕಲ್ಯಾಣಗುಣಗಣ ಪರಿಪೂರ್ಣನಾದ ಪರಬ್ರಹ್ಮನೇ ಉಪಾಸ್ಯನು. ಆದರೆ ಕೆಲವು ಉಪಾಸನೆಗಳಲ್ಲಿ ಕೆಲವು ಗುಣಗಳನ್ನೇ ಮುಖ್ಯವಾಗಿ ಪರಬ್ರಹ್ಮ ಸಾಕ್ಷಾತ್ಕಾರಕ್ಕೆ ಅನುಕೂಲವೆಂದು ಭಾವಿಸಿ, ಅಂತಹ ಪರಮಾತ್ಮನೇ ಉಪಾಸಿಸಲ್ಪಡುತ್ತಾನೆ. ಈ ಅಭಿಪ್ರಾಯವನ್ನುಪಪೆಶಿಸುವದಕ್ಕಾಗಿ ಮುಂದಿನ ವಾಕ್ಯದಲ್ಲಿ ಸರ್ವೇ

ಪರ ವ್ಯೂಹಾದಿ ವಿಭಾಗಜ್ಞಳಿಲ್ ಗುಣ ನಿಯಮುಮ್ ಶೊಲ್ಲುಗಿರದೆ ಲ್ಲಾಮ್ ಅವ್ವೋರೂಪಜ್ಞಳೈ ಯಿಟ್ಟು ಅನುಸನ್ಧಿಪ್ಪಾರ್ಕ್ಕು ಸರ್ವೇಶ್ವರ ಆವಿಷ್ಕರಿಕ್ಕುಮ್ ಗುಣವಿಶೇಷಜ್ಞಳ್ ಶೊಲ್ಲುಗೈಕ್ಕಾಕವತ್ತನ್ಮೈ.

ಪರವ್ಯೂಹಾದಿ ಪಞ್ಚವಿಧ ಭಗವದ್ರೂಪ ನಿರೂಪಣಮ್

ಔಪನಿಷದ ವಿದ್ಯಾವಿಶೇಷಜ್ಞಳ್ತೋರುಮ್ ಅನುಸನ್ಧೇಯಗುಣ ವಿಶೇಷಜ್ಞಳ್ ನಿಯತಜ್ಞಳಾನಾರ್ಪ್ಪೋಲೆ ಭಗವಚ್ಛಾಸ್ತ್ರೋಕ್ತಮಾನ ರೂಪವಿಶೇಷಾನುಸನ್ಧಾನತ್ತುಕ್ಕುಂ ಗುಣವಿಶೇಷಜ್ಞಳ್ ನಿಯತಜ್ಞಳ್.

ಶ್ವರನಲ್ಲಿ ಇತರ ಗುಣಗಳಿಲ್ಲವೆಂದು ತಿಳಿಯತಕ್ಕದ್ದಲ್ಲವೆಂದು ತಿಳಿಸುತ್ತಾರೆ. ಉಪಾ ಸನಾರೂಪ ಬ್ರಹ್ಮವಿದ್ಯೆಗಳಲ್ಲಿ ಗುಣಗಳು ಹೇಗೆ ನಿಯತವಾದವೋ, ಹಾಗೆಯೇ ಪಾಂಚರಾತ್ರ ಶಾಸ್ತ್ರಪ್ರಕಾರ ಅರ್ಚ್ಯಾವತಾರ ದಿವ್ಯಮಙ್ಗಳವಿಗ್ರಹಗಳ ಅನುಸನ್ಧಾನ ದಲ್ಲೂ ಗುಣವಿಶೇಷಗಳು ನಿಯತವಾದುವೆಂದೂ ತಿಳಿಸುತ್ತಾರೆ,

ಪರವ್ಯೂಹಾದಿ ವಿಭಾಗಜ್ಞಳಿಲ್ – ಪರವ್ಯೂಹ ಮೊದಲಾದ ವಿಭಾಗಗಳಲ್ಲಿ ಇಲ್ಲಿ ಆದಿ ಶಬ್ದದಿಂದ ವಿಭವ, ಅಂತರ್ಯಾಮಿ, ಅರ್ಚ್ಯಾವತಾರರೂಪಗಳು ಜ್ಞೋಧಿಸ ಲ್ಪಟ್ಟವು, **ಗುಣನಿಯಮುಮ್ ಶೊಲ್ಲುಗಿರದೆಲ್ಲಾಮ್** – ಆಯಾ ರೂಪಗಳಿಗೆ ಆಯಾ ಗುಣಗಳು ಪ್ರಧಾನವೆಂದು ಹೇಳುವ ಗುಣನಿಯಮಗಳೆಲ್ಲಾ, **ಅವ್ವೋ ರೂಪಜ್ಞಳೈಯಿಟ್ಟು ಅನುಸನ್ಧಿಪ್ಪಾರ್ಕ್ಕು** – ಆಯಾ ರೂಪಗಳನ್ನು ಕುರಿತು ಅನು ಸನ್ಧಾನ ಮಾಡುವವರಿಗೆ, ಎಂದರೆ ಉಪಾಸಕರಿಗೆ, **ಸರ್ವೇಶ್ವರನ್ ಆವಿಷ್ಕರಿಕ್ಕುಮ್** – ಸರ್ವೇಶ್ವರನು ಸಾಕ್ಷಾತ್ಕಾರವನ್ನು ಕೊಡುವಾಗ ಪ್ರಕಾಶಿಸುವ, **ಗುಣ ವಿಶೇಷಜ್ಞಳ್ ಶೊಲ್ಲುಗೈಕ್ಕಾಕವತ್ತನ್ಮೈ** – ಗುಣವಿಶೇಷಗಳನ್ನು ಹೇಳುವದ ಕ್ಕಾಗಿ ಮಾತ್ರವೇ ವಿನಾ ಹೇರಿಪುಚ್ಚವು, ಎಂದರೆ ಇತರ ಗುಣಗಳು, ಸರ್ವೇಶ್ವರನಲ್ಲಿ ಆಗ ಇಲ್ಲವೆಂಬ ಭಾವವಲ್ಲವು.

ಔಪನಿಷದ ವಿದ್ಯಾ ವಿಶೇಷಜ್ಞಳ್ ತೋರುಮ್ – ಉಪನಿಷತ್ತುಗಳಲ್ಲಿ ಪ್ರತಿಪಾದಿಸಲ್ಪಟ್ಟ ಯಾ ಉಪಾಸನಾರೂಪ ಬ್ರಹ್ಮವಿದ್ಯೆಗಳಲ್ಲಿ ಪ್ರತಿ ಒಂದರಲ್ಲೂ, **ಅನುಸನ್ಧೇಯ ಗುಣ ವಿಶೇಷಜ್ಞಳ್** – ಉಪಾಸಿಸುವ ಗುಣವಿಶೇಷಗಳು, **ನಿಯತಜ್ಞಳಾನಾರ್ಪ್ಪೋಲೆ** – ಆಯಾಯ ಉಪಾಸನೆಗಳಿಗೆ ಆಯಾಯ ಗುಣಗಳೆಂ ದು ಶಾಸ್ತ್ರದಲ್ಲಿ ನಿಶ್ಚಯಿಸಲ್ಪಟ್ಟ ಹಾಗೆ, **ಭಗವಚ್ಛಾಸ್ತ್ರೋಕ್ತಮಾನ** – ಪಾಂಚ ರಾತ್ರಶಾಸ್ತ್ರದಲ್ಲಿ ಹೇಳಿದ, **ರೂಪ ವಿಶೇಷಾನುಸನ್ಧಾನತ್ತುಕ್ಕುಮ್** – ದಿವ್ಯ

ಪರವ್ಯೂಹರೂಪಜ್ಞಳ್

ಅವ್ವಿಡತ್ತಿಲ್ ಪರರೂಪತ್ತಿಲ್ ಜ್ಞಾನಾದಿ ಗುಣಜ್ಞಳಾರುಮ್ ವೇದ್ಯಜ್ಞಳ್. ವ್ಯೂಹಜ್ಞಳ್ ನಾಲೆನ್ರುಮ್. ಮೂನ್ರೆನ್ರುಮ್, ಶಾಸ್ತ್ರಜ್ಞಳ್ ಶೊಲ್ಲುಂ. ನಾಲುವ್ಯೂಹ ಮುಣ್ಣಾಯಿರುಕ್ಕ, ವ್ಯೂಹವಾಸುದೇವ ರೂಪ

ಮಜ್ಞಳವಿಗ್ರಹ ವಿಶೇಷವ ಅನುಸನ್ಧಾನಕ್ಕೂ ಸಹ, **ಗುಣವಿಶೇಷಜ್ಞಳ್ ನಿಯತಜ್ಞಳ್** – ಗುಣವಿಶೇಷಗಳು ನಿಯತವಾದವು.

ಪರರೂಪವು

ಅವ್ವಿಡತ್ತಿಲ್ – ಆಸಂದರ್ಭದಲ್ಲಿ, ಎಂದರೆ ಪ್ರತಿಯೊಂದು ರೂಪದಲ್ಲೂ ಗುಣಗಳು ನಿಯತವಾಗಿರುವ ಸಂದರ್ಭದಲ್ಲಿ, **ಪರರೂಪತ್ತಿಲ್** – ದಿವ್ಯ ವೈಕುಂಠದಲ್ಲಿ ನಿತ್ಯಮುಕ್ತರುಗಳಿಗೆ ಸೇವೆಯುಸ್ನೀಯುವ ಪರರೂಪದಲ್ಲಿ, **ಜ್ಞಾನಾದಿಗುಣಜ್ಞಳಾರುಮ್** – ಜ್ಞಾನವೇ ಮೊದಲಾದ ಆರು ಗುಣಗಳೂ, ಎಂದರೆ ಜ್ಞಾನ, ಬಲ, ಐಶ್ವರ್ಯ, ವೀರ್ಯ, ತೇಜಸ್ಸುಗಳು ಆರೂ, **ವೇದ್ಯಜ್ಞಳ್** – ಉಪಾಸಿಸಲು ಅರ್ಹವಾದವು, ಹಿಂದೆ ಪ್ರತಿಯೊಂದು ಉಪಾಸ್ಯರೂಪಕ್ಕೂ ಗುಣಗಳು ನಿಯತವೆಂದು ಹೇಳಿದುದನ್ನು ದೃಷ್ಟಾಂತ ಮುಖಾಂತರ ಸ್ಥಾಪಿಸಲು ಯತ್ನಿಸಿದವರಾಗಿ ಪರರೂಪದಲ್ಲಿ ಜ್ಞಾನಾದಿ ಆರು ಗುಣಗಳೂ ಉಪಾಸ್ಯರೂಪದಲ್ಲಿರುವ ಹಾಗೆ ಉಪಾಸಿಸತಕ್ಕ ವೆಂದುಪದೇಶಿಸಿದರು.

ವ್ಯೂಹರೂಪಗಳು

ವ್ಯೂಹಜ್ಞಳ್ – ವ್ಯೂಹರೂಪಗಳು, **ನಾಲೆನ್ರುಮ್** – ನಾಲ್ಕೆಂಬದಾಗಿಯೂ, **ಮೂನ್ರೆನ್ರುಮ್** – ಮೂರೆಂಬವಾಗಿಯೂ, ಶಾಸ್ತ್ರಗಳು ಹೇಳುವುವು. ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂದು ನಾಲ್ಕು ವ್ಯೂಹಗಳು. ಆದರೆ ವಾಸುದೇವವ್ಯೂಹರೂಪಕ್ಕೂ, ಪರರೂಪಕ್ಕೂ ಏನೊಂದೂ ವ್ಯತ್ಯಾಸವಿಲ್ಲದೇ ಇರುವದರಿಂದ, ವಾಸುದೇವರೂಪವು ಪರರೂಪದಲ್ಲೇ ಸೇರಿತು ಎಂಬ ಭಾವದಿಂದ ಕೆಲವು ಶಾಸ್ತ್ರಗಳು ಮೂರು ವ್ಯೂಹಗಳೆಂದು ಹೇಳುತ್ತವೆ ಎಂದು ಅಪ್ಪಣೆ ಕೊಡಿಸುತ್ತಾರೆ. **ನಾಲುವ್ಯೂಹಮುಣ್ಣಾಯಿರುಕ್ಕ**–ಸರಿಯಾಗಿ ನೋಡಿದರೆ ವ್ಯೂಹಗಳು ನಾಲ್ಕೆಂದು ಸಿದ್ಧವಾಗಿಸುವಾಗ, **ವ್ಯೂಹವಾಸುದೇವರೂಪತ್ತುಕ್ಕು** – ವ್ಯೂಹಗಳಲ್ಲಿ ಪ್ರಥಮ ಮೂರ್ತಿಯಾದ ವಾಸುದೇವರೂಪಕ್ಕೆ, **ಪರರೂಪತ್ತಿರ್ಕಟ್ಟ**

ತ್ತುಕ್ಕು ಪರರೂಪತ್ತಿರ್ಕ್ಕಾಟ್ಟಿಲ್ ಅನುಸನ್ಧೇಯ ಗುಣಭೇದಮಿಲ್ಲಾಮ್ಮೈ ಯಾಲೆ ತ್ರಿವ್ಯೂಹನಿಜ್ಞ್ಗಿರದು. ಇಪ್ಪಡ್ಡತ್ತೈ

"ಗುಣೈಷ್ಪಡ್ಭಿಸ್ತೈರೇತೈಃ ಪ್ರಥಮತರ ಮೂರ್ತಿಸ್ತವ ಬಭೌ
ತತಸ್ತಿಸ್ರಸ್ತೇಷಾಂ ತ್ರಿಯುಗ ಯುಗಳೈ ರ್ಹಿತ್ರಿಭಿರಭುಃ।"

ಲ್ – ಪರರೂಪಕ್ಕಿಂತಲೂ, **ಅನುಸಂಧೇಯ ಗುಣಭೇದಮಿಲ್ಲಾಮ್ಮೈಯಾಲೆ** – ಉಪಾಸನೆಮಾಡತಕ್ಕ ಗುಣಭೇದವೇನೂ ಇಲ್ಲದಿರುವದರಿಂದ, **ತ್ರಿವ್ಯೂಹಮೆಜ್ಞ್ಗಿರದು** – ವ್ಯೂಹಗಳು ಮೂರೇ ಎಂದು ಹೇಳಲ್ಪಡುವುದು. ಶ್ರೀ ನಿಗಮಾನ್ತವೇದಿಕರವರ ಅಭಿಪ್ರಾಯವು ವ್ಯೂಹಗಳು ನಾಲ್ಕೆಂಬದಾಗಿ. ಆದುದರಿಂದಲೇ **"ನಾಲುವ್ಯೂಹಮುಣ್ಟಾಯಿರುಕ್ಕ"** ಎಂದು ಪ್ರಯೋಗಿಸಿರುತ್ತಾರೆ, ಪರರೂಪದಲ್ಲೂ ಈ ಆರು ಗುಣಗಳುಳ್ಳ, ಪರಮಾತ್ಮನು **ಉಪಾಸ್ಯನು.** ಹಾಗೆಯೇ ಶ್ರೀ ವಾಸುದೇವವ್ಯೂಹರೂಪದಲ್ಲೂ ಈ ಆರು ಗುಣಗಳುಳ್ಳವನೆಂದೇ ಉಪಾಸನೆಯು. ಆದುದರಿಂದಲೇ ವ್ಯೂಹಗಳು ಮೂರು ಎಂದು ಹೇಳೋಣವು. **ಇಪ್ಪಡ್ಡತ್ತೈ** – ವ್ಯೂಹಗಳು ನಾಲ್ಕು ಎಂಬ ಪಕ್ಷವನ್ನು, **"ಗುಣೈಷ್ಪಡ್ಭಿಃ" ಎಜ್ಞ್ಗಿರ ಶ್ಲೋಕತ್ತಿಲೆ** – "ಗುಣೈಷ್ಪಡ್ಭಿಃ" ಎಂಬ ಶ್ಲೋಕದಲ್ಲಿ, **ಸಜ್ಞ್ಗ್ರಹಿತ್ತಾರ್ಗಳ್**- ಸಜ್ಞ್ಗ್ರಹಿಸಿ ಹೇಳಿದರು. ಇಲ್ಲಿ ಕರ್ತೃಪದವನ್ನು ಹೇಳದಿರುವದು, ತುಂಬಾ ಪ್ರಸಿದ್ಧಿಹೊಂದಿದ ಪಞ್ಚಸ್ತವಗಳನ್ನು ರಚಿಸಿದ ಶ್ರೀ ಕೂರತ್ತಾಳ್ವಾರವರ ದಿವ್ಯ ಸೂಕ್ತಿಯು ಸರ್ವರಿಗೂ ವಿದಿತವಾದ ವಿಷಯವಾದುದರಿಂದ, ಅದನ್ನು ವ್ಯಕ್ತಪಡಿಸುವದು ಅನಾವಶ್ಯಕವೆಂಬಭಿಪ್ರಾಯದಿಂದಿರಬಹುದು. ಅಥವಾ, ಶ್ರೀಕೂರೇಶಾಳ್ವಾರ್ರವರು ಆಚಾರ್ಯಕೋಟಿಗೆ ಸೇರಿ ಮಹಾಪೂಜ್ಯರಾದುದರಿಂದ, ಅಂಥಾವರ ವಿಷಯದಲ್ಲಿ ನಾಮೋಚ್ಚಾರಣೆ ಮಾಡದಿರುವದು ಗೌರವಾರ್ಥಕವಾಗಿ ಎಂದು ತಿಳಿಯಬಹುದು. ಈ ಶ್ಲೋಕದ ಅರ್ಥವೇನೆಂದರೆ:—**ತವ**–ಭಕ್ತರಲ್ಲಿ ಪರಿಪೂರ್ಣಕೃಪೆಯುಳ್ಳ ನಿನ್ನ **ಪ್ರಥಮತರಮೂರ್ತಿಃ**–ನಾಲ್ಕು ವ್ಯೂಹಗಳಲ್ಲಿ ಮೊದಲನೆಯದಾದ ವಾಸುದೇವರೂಪವು, **ಏತೈಃ ಗುಣೈಷ್ಪಡ್ಭಿಃ**–ಈ ಆರು ಗುಣಗಳಿಂದ, **ಬಭೌ**–ಪ್ರಕಾಶಿಸಿತು. **ಹೇ ತ್ರಿಯುಗ** – ತ್ರಿಯುಗನೆಂದರೆ ಆರು, ಆದುದರಿಂದ ಓ ಷಾಡ್ಗುಣ್ಯಸಂಪನ್ನನೇ, ಎಂಬರ್ಥವು. ಅಥವಾ **"ಅಂಭಸ್ಯಪಾರೇ ಭುವನಸ್ಯಮಧ್ಯೇ ನಾಕಸ್ಯ ಪೃಷ್ಠೇ"** ಎಂದು ಶ್ರುತಿಯಲ್ಲಿ ಹೇಳಿರುವಹಾಗೆ ಕ್ಷೀರಸಮುದ್ರ, ಲೀಲಾವಿಭೂತಿ ನಿತ್ಯವಿಭೂತಿಗಳಾವ, ಮೂರು ಸ್ಥಾನಗಳುಳ್ಳವನೇ, **ತತಃ** – ಅನಂತರದಲ್ಲಿ, **ತಿಸ್ರಃ** – ಮಿಕ್ಕ ಮೂರಾದ ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ರೂಪಗಳು, ಮೇಲೆ **ಪ್ರಥಮತರಮೂರ್ತಿಃ** ಎಂಬಲ್ಲಿ ಮೂರ್ತಿ ಶಬ್ದವಿರುವದರಿಂದ, **ತ್ರಿಸ್ರಃ**–

ಎಜ್ಞ್ಞರ ಶ್ಲೋಕತ್ತಿಲೆ ಸಜ್ಞ್ಞಹಿತ್ತಾರ್‌ಗಳ್. ಇಪ್ಪರವ್ಯೂಹಜ್ಞಳಿಲ್ ಗುಣಕ್ರಿಯಾ ವಿಭಾಗಜ್ಞಳ್,

ಷಾಡ್ಗುಣ್ಯಾದ್ವಾಸುದೇವಃ ಪರ ಇತಿ ಸಭವಾ೯ ಮುಕ್ತಭೋಗ್ಯೋ, ಬಲಾಢ್ಯಾತ್
ಬೋಧಾತ್ಸಂಕರ್ಷಣಸ್ತ್ವಂಹರಸಿ ವಿತನುಷೇ ಶಾಸ್ತ್ರ, ಮೈಶ್ವರ್ಯ ವೀರ್ಯಾತ್।

ಎಂಬುವದಕ್ಕೆ ಮುಂದೆ **ಮೂರ್ತಯಃ** ಎಂದರೆ ಮೂರ್ತಿಗಳು ಎಂದು ಇಟ್ಟುಕೊಳ್ಳ ತಕ್ಕದ್ದು. **ತೇಷಾಂ** – ಆ ಆರು ಗುಣಗಳ, **ತ್ರಿಭಿಃ** – ಮೂರಾದ, **ಯುಗಳೈಃ** – ಎರಡೆರಡು ಗುಣಗಳಿಂದ, **ಅಭುಃ** – ಪ್ರಕಾಶಿಸಿದುವು. ಈ ಆರು ಗುಣಗಳಲ್ಲಿ ಸಂಕರ್ಷಣರೂಪದಲ್ಲಿ ಎರಡು ಗುಣಗಳನ್ನೂ, ಪ್ರದ್ಯುಮ್ನರೂಪದಲ್ಲಿ ಎರಡು ಗುಣಗಳನ್ನೂ, ಅನಿರುದ್ಧರೂಪದಲ್ಲಿ ಎರಡು ಗುಣಗಳನ್ನೂ, ಹೊಂದಿರುವ ಹಾಗೆ ಭಾವಿಸಿ ಈ ವ್ಯೂಹರೂಪಗಳು ಉಪಾಸ್ಯವೆಂದು ತಾತ್ಪರ್ಯವು. ಇದು ವರದರಾಜ ಸ್ತವದ ೧೬ನೇ ಶ್ಲೋಕವು. ಮುಂದೆ ಈ ನಾಲ್ಕು ವ್ಯೂಹಮೂರ್ತಿಗಳಲ್ಲೂ ಯಾವ ಯಾವ ಗುಣಗಳ ಪ್ರಾಚುರ್ಯವುಂಟೆಂಬುವದನ್ನೂ, ಆ ವ್ಯೂಹಮೂರ್ತಿಗಳ ವ್ಯಾಪಾರಗಳೇನೆಂಬುವದನ್ನೂ, ಶ್ರೀ ಪರಾಶರಭಟ್ಟರ ಸೂಕ್ತಿಯ ಮೂಲಕ ವ್ಯಕ್ತಪಡಿಸುತ್ತಾರೆ.

ಇಪ್ಪರ ವ್ಯೂಹಂಗಳಿಲ್ ಗುಣಕ್ರಿಯಾ ವಿಭಾಗಜ್ಞಳ್ – ಈ ಪರರೂಪ ವ್ಯೂಹರೂಪಗಳಲ್ಲಿ ತೋರಿಬರುವ ಗುಣವಿಭಾಗಗಳೂ ಮತ್ತು ವ್ಯಾಪಾರವಿಭಾಗಗಳೂ, ಶ್ರೀರಜ್ಞರಾಜಸ್ತವದ ಉತ್ತರಶತಕದ ೫ನೇದಾದ **"ಷಾಡ್ಗುಣ್ಯಾದ್ವಾಸುದೇವಃ" ಎಜ್ಞ್ಞರ ಶ್ಲೋಕತ್ತಿಲೆ**–ಎಂಬುವ ಶ್ಲೋಕದಲ್ಲಿ, **ಸಜ್ಞ್ಞಹಿಕ್ಕಪ್ಪಟ್ಟ್ರನ**–ಸಜ್ಞ್ಞಹಿಸಲ್ಪಟ್ಟಿರುತ್ತವೆ. ಈ ಶ್ಲೋಕದ ಅರ್ಥವೇನೆಂದರೆ:—**ಹೇ ರಂಗಾಧಿರಾಜ**–ಓ ರಂಗಸಾರ್ವಭೌಮನೇ, **ಷಾಡ್ಗುಣ್ಯಾತ್**–ಈ ಆರು ಗುಣಗಳಿಂದಲೂ, **ವಾಸುದೇವಃ**–ವಾಸುದೇವನೆನಿಸಿ, **ವ್ಯೂಹ್ಯ**–ವ್ಯೂಹಾವತಾರಮಾಡಿ, **ಪರ ಇತಿ**– ಪರರೂಪನಾಗಿರುವ, ಪರವಾಸುದೇವನಾಗಿರುವ, **ಸಭವಾ೯** – ಅಂತಹ ನೀನು, **ಮುಕ್ತಭೋಗ್ಯಃ** – ಮುಕ್ತರಿಗೆ ಭೋಗ್ಯಭೂತನಾಗಿರುವೆ; **ಬಲಾಢ್ಯಾತ್** – ಬಲಸಹಿತವಾದ, **ಬೋಧಾತ್**– ಜ್ಞಾನದಿಂದಲೂ, ಎಂದರೆ ಜ್ಞಾನಬಲವೆಂಬೀ ಎರಡು ಗುಣಗಳಿಂದಲೂ ಕೂಡಿ, **ವ್ಯೂಹ್ಯ**–ವ್ಯೂಹಾವತಾರಿಯಾಗಿ, **ತ್ವಂ**–ನೀನು, **ಸಂಕರ್ಷಣಃ**–ಸಂಕರ್ಷಣನೆನಿಸಿ, **ಹರಸಿ** – ಜಗತ್ತನ್ನೆಲ್ಲಾ ಸಂಹರಿಸು

ಪ್ರದ್ಯುಮ್ನ ಸ್ಸರ್ಗಧರ್ಮೌ ನಯಸಿಚ ಭಗವ, ಶಕ್ತಿ ತೇಜೋ ನಿರುದ್ಧೋ
ಬಿಭ್ರಾಣಃ ಪಾಸಿತತ್ವಂ ಗಮಯಸಿಚ ತಥಾವ್ಯೂಹ್ಯ ರಂಗಾಧಿರಾಜ॥
ಎಜ್ಜಿರ ಶ್ಲೋಕತ್ತಿಲೆ ಸಜ್ಜಿಹಿಕ್ಕಪ್ಪಟ್ಟನ.

ತ್ತೀಯೇ ಎಂದರೆ ಪ್ರಳಯವನ್ನು ಹೊಂದುವ ಹಾಗೆ ಮಾಡುತ್ತೀಯೆ, ಮತ್ತು **ಶಾಸ್ತ್ರಂ ವಿತನುಷೇ**–ಶಾಸ್ತ್ರವನ್ನು ವಿಸ್ತರಿಸುತ್ತೀಯೆ. **ಐಶ್ವರ್ಯವೀರ್ಯಾತ್**–ಐಶ್ವರ್ಯವೀರ್ಯಗುಣಗಳಿಂದ, **ಪ್ರದ್ಯುಮ್ನಇತಿವ್ಯೂಹ್ಯ**–ಪ್ರದ್ಯುಮ್ನನೆಂದ ವತರಿಸಿ, **ಸರ್ಗಧರ್ಮೌ**–ಜಗತ್ಸೃಷ್ಟಿ ಮತ್ತು ಧರ್ಮಪ್ರವರ್ತನೆಯನ್ನೂ, – **ಹೇ ಭಗವನ್**–ಓ ಷಾಡ್ಗುಣ್ಯ ಪರಿಪೂರ್ಣನಾಗಿಯೂ, ಹೇಯಪ್ರತ್ಯನೀಕನಾಗಿಯೂ, ಇರುವವನೇ, **ನಯಸಿಚ**–**ನಡಿಸುತ್ತೀಯೇ. ತಥಾ**–ಹಾಗೆಯೇ, **ಶಕ್ತಿತೇಜೋಬಿಭ್ರಾಣಃ**–ಶಕ್ತಿ ತೇಜೋಗುಣಗಳನ್ನು ಹೊಂದಿದವನಾಗಿ, **ಅನಿರುದ್ಧ ಇತಿವ್ಯೂಹ್ಯ** – ಅನಿರುದ್ಧಾವತಾರಿಯಾಗಿ. **ಪಾಸಿ**–ಜಗದ್ರಕ್ಷಕನಾಗಿರುವೆ, ಮತ್ತು **ತತ್ವಂ ಗಮಯಸಿಚ**–ತತ್ವವನ್ನು ಬೋಧಿಸುತ್ತೀಯೆ.

ವ್ಯೂಹರೂಪವು	**ಉಪಾಸ್ಯಗುಣಗಳು**	**ವ್ಯಾಪಾರಗಳು**
1. ವಾಸುದೇವಮೂರ್ತಿಯು.	ಆರು ಗುಣಗಳೂ.	ಮುಕ್ತರಿಗೆ ಭೋಗ್ಯಭೂತನಾಗಿರುವದು.
2. ಸಂಕರ್ಷಣಮೂರ್ತಿಯು.	ಜ್ಞಾನಬಲಗಳು..	ಜಗತ್ಪ್ರಳಯ ಮತ್ತು ಶಾಸ್ತ್ರಕರಣ.
3. ಪ್ರದ್ಯುಮ್ನಮೂರ್ತಿಯು.	ಐಶ್ವರ್ಯವೀರ್ಯಗಳು.	ಸೃಷ್ಟಿಕರಣ ಮತ್ತು ಧರ್ಮಪ್ರವರ್ತನ.
4. ಅನಿರುದ್ಧಮೂರ್ತಿಯು.	ಶಕ್ತಿತೇಜಸ್ಸುಗಳು	ಜಗತ್ಪಾಲನ ಮತ್ತು ತತ್ತ್ವೋಪದೇಶ.

ಹೀಗೆ ಹಿಂದಿನ ಶ್ಲೋಕದ ಮೂಲಕ ನಾಲ್ಕು ವ್ಯೂಹಗಳಲ್ಲೂ ಉಪಾಸ್ಯಗುಣಗಳನ್ನೂ, ವ್ಯಾಪಾರಗಳನ್ನೂ ಉಪದೇಶಿಸಿ, ಮುಂದಿನ ಶ್ಲೋಕದ ಮೂಲಕ ವ್ಯೂಹಪ್ರಭೇದಗಳನ್ನು ಬೋಧಿಸುತ್ತಾರೆ. ಇಲ್ಲಿ ವ್ಯಾಪಾರ ವಿಷಯಗಳನ್ನು ತಿಳಿಸಲು ಕಾರಣವುಂಟು. ಶ್ರೀಪಾಂಚರಾತ್ರದಲ್ಲಿ "**ಸರ್ವಕ್ರಿಯಾವಿನಿರ್ಮುಕ್ತಮೂರ್ತಂ ಪರಮಸಾರ್ಥತಃ। ಚಾತುರಾತ್ಮ್ಯಂ ತದಾದ್ಯಂನೈ**" ಎಂಬುವದರ ಮೂಲಕ ವ್ಯೂಹಗಳು ವ್ಯಾಪಾರರಹಿತವಾದವುಗಳೆಂದು ಹೇಳಿರುವದರಿಂದ ಇವಕ್ಕೂ, ಶ್ರೀವೈಕುಂಠ ಪಾಂಚರಾತ್ರಗಳಲ್ಲಿ ವ್ಯಾಪಾರಗಳುಂಟೆಂದು ಹೇಳಿರುವದರಿಂದ, ಆ

ಜಾಗ್ರದಾದಿ ಪದ ಭೇದಜ್ಞಳಿ (ಭೇದಜ್ಞಳಾ ಮುವಂಗಿ)ಲುಳ್ಳ ವಿಶೇಷಜ್ಞಳೆಲ್ಲಾಮ್

"ಜಾಗ್ರತ್ಸ್ವಪ್ನಾ ತ್ಯಲಸ ತುರೀಯು ಪ್ರಾಯುಧ್ಯಾತೃ ಕ್ರಮುವದು ಪಾಸ್ಯಃ। ಸ್ವಾಮಿಂ ಸ್ತತ್ತದ್ಗುಣ ಪರಿಬರ್ಹಶ್ಚಾತುರೂಪ್ಯಹಂ(ಹ್ಯಂ) ವಹಸಿ ಚತುರ್ಥಾ ॥"

ಎನ್ರು ಸಙ್ಗ್ರಹೀತಜ್ಞಳಾಯಿಂದ್ರ

ಶ್ಲೋಕಕ್ಕೂ ಪರಸ್ಪರ ವಿರೋಧ ಉಂಟಾಗಲಿಲ್ಲವೇ ಎಂದರೆ ವಿರೋಧವೇನೂ ಇಲ್ಲವು; ಶ್ರೀಸಾತ್ವತವಚನವು ವ್ಯೂಹಾಸ್ತರಗಳನ್ನು ಕುರಿತು ಹೇಳಿದುದೆಂದು ತೋರ್ಪಡಿಸುತ್ತಾರೆ.

ಜಾಗ್ರದಾದಿ ಪದಭೇದಂಗಳಿಲುಳ್ಳ – ಜಾಗ್ರದಾದಿ ಸ್ಥಾನಭೇದಗಳನ್ನು ಹೊಂದಿರುವ, **ವಿಶೇಷಜ್ಞಳೆಲ್ಲಾಮ್** – ವಿಶೇಷಗಳೆಲ್ಲವನ್ನೂ, "ಜಾಗ್ರತ್ಸ್ವಪ್ನ" **ಎನ್ರು ಜಾಗ್ರತ್ಸ್ವಪ್ನ** ಎಂಬ ಶ್ಲೋಕಮೂಲಕ, **ಸಙ್ಗ್ರಹೀತಂಗಳಾಯಿಂದ್ರ** – ಸಂಗ್ರಹಿಸಲ್ಪಟ್ಟವು. ಇದು ಶ್ರೀರಙ್ಗರಾಜಸ್ತವದ (2) 40ನೇ ಶ್ಲೋಕವು. ಈ ಶ್ಲೋಕಾಭಿಪ್ರಾಯವೇನೆಂದರೆ :—**ಹೇ ಸ್ವಾಮಿನ್** – ಎಲ್ಲಾ ಜೀವ ನಾಚೇತನಗಳಿಗೂ ಸ್ವಾಮಿಯಾದ ಶ್ರೀರಙ್ಗನಾಥನೇ, **ಜಾಗ್ರತ್ಸ್ವಪ್ನಾತ್ಯಲಸ ತುರೀಯಪ್ರಾಯ ಧ್ಯಾತೃಕ್ರಮುವತ್. ಜಾಗ್ರತ್** – ಎಚ್ಚರವಾಗಿರುವ ವಿಧ, ಎಂದರೆ ಇಂದ್ರಿಯಗಳು ವಿಷಯಗಳಲ್ಲಿ ವ್ಯಾಪಿಸಿಕೊಂಡಿದ್ದರೂ ಭಗವದುಪಾಸನೆಯನ್ನು ಮಾಡುವಿಕೆ, **ಸ್ವಪ್ನ** – ಸ್ವಪ್ನವೆಂದರೆ ಅಲ್ಪಸ್ವಲ್ಪ ವಿಷಯಾಂತರ ಸಂಚಾರವಿದ್ದರೂ ಭಗವತ್ಸ್ಮರಣ ಬಾಹುಳ್ಯವುಳ್ಳ ಅವಸ್ಥೆಯು, **ಅತ್ಯಲಸ** – ಸುಷುಪ್ತಿ ವಿಧವು, ವಿಷಯಗಳಲ್ಲಿ ಸಂಚಾರವಿಲ್ಲದಿದ್ದರೂ, ಆ ಸುಷುಪ್ತ್ಯವಸ್ಥೆಯಲ್ಲಿ ಹೇಗೆ ಯಾರಾದರೂ ಹೊಡೆದರೆ ವೇದನಾನುಭವ ಉಂಟಾಗುತ್ತದೋ, ಹಾಗೆಯೇ ಸುಖದುಃಖಗಳಿಂದ ಸ್ವಲ್ಪ ಪೀಡಿಸಲ್ಪಟ್ಟರೂ ಭಗವತ್ಸ್ಮರಣೆಯುಳ್ಳ ಅವಸ್ಥೆಯು; **ತುರೀಯ**ವೆಂದರೆ ನಾಲ್ಕನೆಯ ಅವಸ್ಥೆಯು, ಅದು ಯಾವುದೆಂದರೆ, ಮೂರ್ಛಾವಸ್ಥೆಯು, ಸ್ಮೃತಿಲೋಪ ತೈಲಧಾರೆಯಹಾಗೆ ಅವಿಚ್ಛಿನ್ನವಾಗಿ ಭಗವತ್ಸ್ಮರಣೆಯಲ್ಲಿ ಮಗ್ನನಾಗಿರುವಿಕೆಯು; ಇಂತಹ ಅವಸ್ಥೆಗಳುಳ್ಳವರಿಗೆ, **ಪ್ರಾಯ** – ಸದೃಶವಾದ, ಸಮಾನವಾದ, **ಧ್ಯಾತೃ** – ಧ್ಯಾನಮಾಡುವವರ, **ಕ್ರಮುವತ್** – ಕ್ರಮದೋಪಾದಿಯಲ್ಲಿ, ಎಂದರೆ ಅಂತಹ ಉಪಾಸಕರ ಕ್ರಮವನ್ನನುಸರಿಸಿ, **ಉಪಾಸ್ಯಃ** – ಧ್ಯಾನಮಾಡಿಸಿಕೊಳ್ಳುವವನಾದ, ನೀನು ಎಂದು ಇಟ್ಟುಕೊಳ್ಳತಕ್ಕದ್ದು, **ತತ್ತದ್ಗುಣಪರಿಬರ್ಹಃ** – ಆಯಾಯ ವಿಧದ ರೂಪಗಳಿಗೆ ಉಚಿತವಾದ ಗುಣ

ಗಳೇನು ಮತ್ತು ಆಯುಧ, ವರ್ಣ, ಆಭರಣಾದಿ ರಾಜಯೋಗ್ಯ ಪ್ರಧಾನವಸ್ತುಗಳನ್ನುಳ್ಳವನಾಗಿ, **ಚಾತುರ್ವ್ಯೂಹಂ** – ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧವೆಂಬ ನಾಲ್ಕು ವ್ಯೂಹರೂಪವನ್ನು, ಚಾತುರ್ವ್ಯೂಹ್ಯಂ ಎಂಬ ಪಾಠಾಂತರವುಂಟು. ಆಗ ಚಾತುರ್ವ್ಯೂಹ ಭಾವವೆಂಬರ್ಥವು. **ಚತುರ್ಥಾ** – ಜಾಗ್ರತ್, ಸ್ವಪ್ನ, ಸುಷುಪ್ತಿ, ಮೂರ್ಛಾದೆಸೆಯ ರೂಪವಾಗಿ, ಎಂದರೆ ಒಂದೊಂದು ವ್ಯೂಹವನ್ನು ಹೀಗೆ ನಾಲ್ಕು ವಿಧವಾಗಿ, **ವಹಸಿ** – ಹೊಂದಿರುತ್ತೀಯೆ. ಈ ಶ್ಲೋಕದಿಂದ ಒಂದೊಂದು ವ್ಯೂಹವೂ ನಾಲ್ಕು ವಿಧವೆಂದು ತಿಳಿಸುತ್ತಾರೆ. ಈ ವಿಷಯಗಳಿಗೆ ಶಾಸ್ತ್ರಪ್ರಮಾಣಗಳುಂಟೋ ಎಂದರೆ ಶ್ರೀ ಲಕ್ಷ್ಮೀ ತಂತ್ರ ಶ್ರೀ ಸಾತ್ವತ ವಾಕ್ಯಗಳನ್ನು ಪ್ರಮಾಣವಾಗಿ ವಾಖ್ಯಾತೃಗಳು ಉದಾಹರಿಸಿರುತ್ತಾರೆ. ಅಲ್ಲಿ ಹೇಳಿರುವಪೇನೆಂದರೆ :—ದಿವ್ಯ ವೈಕುಂಠದಲ್ಲಿ, ಕರಚರಣಾದಿಗಳೊಂದೂ ಇಲ್ಲದೆ ಅಪ್ರಾಕೃತವಾದ ಶುದ್ಧಸತ್ವಮಯದ, ಸ್ಥೂಲರೂಪದ, ವಿಶಾಖಯೂಪವೆಂಬ ಹೆಸರಿನ ಒಂದು ಭಗವದ್ರೂಪ ಉಂಟೆಂದು ಹೇಳಲ್ಪಟ್ಟಿರುತ್ತದೆ. ಆ ಸ್ತಂಭದಲ್ಲಿ ಜಾಗ್ರತ್ಸ್ವಪ್ನ ಸುಷುಪ್ತಿ ಮೂರ್ಛಾ ಸಂಜ್ಞೆಗಳುಳ್ಳ ನಾಲ್ಕು ಸ್ಥಾನಗಳುಂಟು. ಸ್ತಂಭದ ಸುಮಾರು ಮಧ್ಯಭಾಗದಲ್ಲಿ ಜಾಗ್ರತ್ಸ್ಥಾನವೂ, ಅದರಮೇಲೆ ಸ್ವಪ್ನಸ್ಥಾನವೂ, ಅದರಮೇಲೆ ಸುಷುಪ್ತಿಸ್ಥಾನವೂ, ಅದರಮೇಲೆ ಮೂರ್ಛಾಸ್ಥಾನವೂ ಇವೆ. ಇವು ಒಂದೊಂದು ಸ್ಥಾನದಲ್ಲೂ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರೆಂಬ ಭಗವಂತನ ವ್ಯೂಹರೂಪಗಳುಂಟು. ಅವುಗಳಲ್ಲಿ ಜಾಗ್ರದ್ದೆಶೆಯಲ್ಲಿರುವ ವಾಸುದೇವಾದಿ ವ್ಯೂಹಗಳ ವ್ಯಾಪಾರವು :—ಜಗತ್ತಿನ ವಿಶೇಷ ಸೃಷ್ಟಿಸ್ಥಿತಿ ಲಯಗಳು ; ಕಪ್ಪು, ಕೆಂಪು ಮೊದಲಾದವುಗಳಾದ ಉತ್ಕೃಷ್ಟ ವರ್ಣಗಳುಂಟು. ಸಮಸ್ತ ಆಯುಧ, ಆಭರಣ ಮೊದಲಾದವುಗಳನ್ನು ಹೊಂದಿರೋಣವು. ಸ್ವಪ್ನಸ್ಥಾನದ ನಾಲ್ಮಾವ ವಾಸುದೇವಾದಿ ವ್ಯೂಹಗಳಿಗೆ ವ್ಯಾಪಾರವು ಇಚ್ಛಾಮಾತ್ರವೇ. ತಾವಾಗಿಯೇ ಏನೂ ನಡಿಸುವುದಿಲ್ಲವು. ಜಾಗ್ರದ್ವ್ಯೂಹಗಳಿಗೆ ಕಾರಣಭೂತವಾಗಿರುವಿಕೆ ಈ ವ್ಯೂಹಗಳ ಮುಖ್ಯ ವಿಶೇಷವು. ಕಪ್ಪು ಕೆಂಪು ಮೊದಲಾದ ವರ್ಣಗಳು ಜಾಗ್ರದವಸ್ಥೆಯಲ್ಲಿರುವಷ್ಟು ಉತ್ಕೃಷ್ಟವಾದವುಗಳಲ್ಲವು. ಆಯುಧ, ಧ್ವಜ ಮೊದಲಾದವುಗಳಿಲ್ಲದಿರೋಣವು.

ಸುಷುಪ್ತಿಸ್ಥಾನದಲ್ಲಿಯೂ ಹಾಗೆಯೇ ನಾಲ್ಕು ವ್ಯೂಹಗಳಿವೆ ; ಇವುಗಳಲ್ಲಿ ಸೃಷ್ಟಿಸ್ಥಿತ್ಯಾದಿಗಳಲ್ಲಿ ಇಚ್ಛೆ ಕೂಡಾ ಇಲ್ಲವು ; ಸ್ವಾನಂದಾನುಭವ ಮಾತ್ರ ಉಂಟು, ಅದರಲ್ಲಿ ಪೂರ್ವಭಾಗದಲ್ಲಿರುವ ವಾಸುದೇವ ವ್ಯೂಹಕ್ಕೆ ಕರಚರಣಾದಿ ಮೊದಲಾದವುಗಳಿಂದ ಕೂಡಿದ ದಿವ್ಯಾನುಭವ ವಿಗ್ರಹವಿಲ್ಲವು; ಯೋಗಮಾತ್ರದಿಂದ ಕಾರ್ಯಗಳನ್ನು ಪ್ರಕಾಶಪಡಿಸುವ ಶಕ್ತಿಯುಂಟು; ದಕ್ಷಿಣ ಪಶ್ಚಿ

ಕೇಶವಾದಿಗಳಾನ ಪನ್ನಿರಣ್ಡು ರೂಪಜ್ಗಳುಮ್ ವ್ಯೂಹಾನ್ತರಜ್ಗಳ್.

ನೋತ್ತರ ಭಾಗಗಳಲ್ಲಿರುವ ಸಂಕರ್ಷಣ, ಪ್ರದ್ಯುಮ್ನಾನಿರುದ್ಧರೂಪಗಳಿಗೆ ಕರಚರಣಾದಿಯುಕ್ತ ಶರೀರವಿದ್ದರೂ ಆಯುಧಾದಿಗಳಿಲ್ಲವು. ಆದರೆ ಕರತಲಗಳಲ್ಲಿ ರೇಖಾರೂಪದಲ್ಲಿ ಶಂಖಾದ್ಯಾಯುಧ ಚಿಹ್ನೆಗಳುಂಟು. ಸಿತರಕ್ತ ಮೊದಲಾದ ವರ್ಣಭೇದಗಳಿಲ್ಲವು.

ನಾಲ್ಕನೆಯದಾದ ಮೂರ್ಛಾವಸ್ಥೆಯಲ್ಲಿರುವ ನಾಲ್ಕು ವ್ಯೂಹಗಳ ದಿವ್ಯಮಙ್ಗಳ ವಿಗ್ರಹಗಳಿಗೂ ಕರಚರಣಾದಿಗಳೊಂದೂ ಇಲ್ಲವು. ಸುಷುಪ್ತಿ ವಾಸುದೇವಮೂರ್ತಿಗೆ ಸಮಾನವಾದ ದಿವ್ಯಮಙ್ಗಳ ವಿಗ್ರಹವುಂಟು. ಆದುದರಿಂದ ಚೇತನ ವ್ಯಾಪಾರ ಚಿಹ್ನೆಯೇ ಇಲ್ಲವು.

ಲೋಕ ದೃಷ್ಟಾಂತ ರೀತ್ಯಾ ಜಾಗ್ರದವಸ್ಥೆಯಲ್ಲಿ ವ್ಯಾಪಾರ ಬಾಹುಳ್ಯವೂ, ಸ್ವಪ್ನ ಸುಷುಪ್ತಿಗಳಲ್ಲಿ ಅಲ್ಪ ವ್ಯಾಪಾರವೂ, ಮೂರ್ಛಾವಸ್ಥೆಯಲ್ಲಿ ನಿರ್ವ್ಯಾಪಾರವೂ ತೋರುವುದರಿಂದ, ಈ ವ್ಯೂಹಗಳಿಗೂ ಅಂತಹ ವ್ಯಾಪಾರ ಭೇದದಿಂದ ಜಾಗ್ರದಾದಿ ಸಂಜ್ಞೆಗಳು. ಇಲ್ಲಿ ಮುಖ್ಯವಾಗ ತಿಳಿಯತಕ್ಕ ಅಂಶವೇನೆಂದರೆ:—ಜಾಗ್ರತ್ಪ್ರಾಯರಾಗಿಯಾಗಲಿ ಅಥವಾ ಸ್ವಪ್ನಸುಷುಪ್ತಿಮೂರ್ಛಾವಸ್ಥಾಯುಕ್ತರಾಗಿರುವ ಹಾಗೆಯಾಗಲಿ, ಯಾರು ಅಂತಹ ಅವಸ್ಥಾಪೊಂದಿರುವಹಾಗೆ ತನ್ನ ಆತ್ಮವನ್ನು ಉಪಾಸಿಸುತ್ತಾರೋ, ಅಂಥಾವರುಗಳಿಗೆ ಆಯಾ ಉಪಾಸ್ಯನಾದ ಭಗವಂತನು, ಉಪಾಸಕನು ಭಾವಿಸಿದ ಗುಣಯುಕ್ತನಾಗಿ, ಆಯಾ ಜಾಗ್ರದಾದಿ ಅವಸ್ಥೆಯುಳ್ಳ ವಾಸುದೇವ ಸಂಕರ್ಷಣಾದಿ ವ್ಯೂಹಾವತಾರಿಯು ಉಪಾಸ್ಯನಾಗುತ್ತಾನೆಂಬುವದು ಮುಖ್ಯ ತಾತ್ಪರ್ಯವು.

ಕೇಶವಾದಿಗಳಾನ ಪನ್ನಿರಣ್ಡು ರೂಪಜ್ಗಳುಮ್ – ಕೇಶವ ನಾರಾಯಣ ಮೊದಲುಗೊಂಡು ದಾಮೋದರ ನಾಮದ ವರೆವಿಗೂ ಇರುವ ಹನ್ನೆರಡು ರೂಪಗಳೂ, **ವ್ಯೂಹಾನ್ತರ**ಗಳೆಂದು ಭಾವಿಸತಕ್ಕದ್ದು. ಮೇಲೆ ಹೇಳಿದ ಜಾಗ್ರದಾದಿ ತೆರೆಯ ವ್ಯೂಹಗಳು ವ್ಯೂಹಾಕಾರವನ್ನನುಸರಿಸಿರುವದರಿಂದ ವ್ಯೂಹಭೇದಗಳೆನಿಸುತ್ತವೆ. ಆ ವ್ಯೂಹರೂಪಗಳಿಂದ ಉತ್ಪನ್ನವಾವ ರೂಪಗಳು ವ್ಯೂಹಾನ್ತರಗಳೆನಿಸುತ್ತವೆ. ಈ ನಾಲ್ಕು ವ್ಯೂಹರೂಪಗಳಿಂದಲೂ ಮೂರು ಮೂರು ರೂಪಗಳುಂಟಾಗಿ ಕೇಶವಾದಿ ದ್ವಾದಶರೂಪಗಳಾದ ವ್ಯೂಹಾನ್ತರಗಳುಂಟಾದನೆಂದು ಭಾವಿಸತಕ್ಕದ್ದು. ಹೀಗೆಯೇ ವಿಭವಾವತಾರದಲ್ಲೂ ವಿಭವಭೇದಗಳೂ ವಿಭವಾನ್ತರರೂಪಗಳೂ ಉಂಟು. ವಿಭವಾವತಾರಗಳನ್ನನುಸರಿಸಿ ಬಂದ ರೂಪಗಳು ವಿಭವಭೇದಗಳೆಂದೂ, ಈ ವಿಭವರೂಪಗಳಿಂದ ಉತ್ಪನ್ನವಾದ ರೂಪಗಳಿಗೆ ವಿಭವಾನ್ತರ ರೂಪಗಳೆಂದೂ ಹೆಸರು.

ವಿಭವಾವತಾರ ರೂಪ ಕಥನಮ್

ವಿಭವಜ್ಞಳಾವನ? ಪದ್ಮನಾಭಾದಿಗಳಾನ ಮುಪ್ಪತ್ತು ಚ್ಟಿ (ನ್ನಮ್)

ವಿಭವಾವತಾರ ರೂಪಗಳು

ವಿಭವಜ್ಞಳಾವನ?–ವಿಭವರೂಪಗಳು ಯಾವುವು? **ಮುಪ್ಪತ್ತುಚ್ಟಿನ್ನಂ**–ಮೂವತ್ತಿಗಿಂತ ಸ್ವಲ್ಪ ಹೆಚ್ಚಾಗಿ **ಮುಪ್ಪತ್ತುಚ್ಟಿಲ್ವಾನಮ್** ಎಂದರೆ ಮೂವತ್ತು ಚಿಲ್ಲರೆ; ಕೆಲವರು ೩೬ ಅವತಾರಗಳೆಂದೂ ಇನ್ನೂ ಕೆಲವರು ೩೯ ಎಂದೂ ಹೇಳುತ್ತಾರೆಂಬ ಭಾವವು. **ವಿಷ್ವಕ್ಸೇನ ಸಂಹಿತೆಯಲ್ಲಿ** ಮೂವತ್ತಾರೆಂದೂ, **ಅಹಿರ್ಬುಧ್ನ್ಯ ಸಂಹಿತೆಯಲ್ಲಿ** ಮೂವತ್ತೊಂಬತ್ತೆಂದೂ, ವಿಭವಾವತಾರಗಳ ಸಂಖ್ಯೆಯು ಹೇಳಲ್ಪಟ್ಟಿರುತ್ತದೆ. ವಿಷ್ವಕ್ಸೇನ ಸಂಹಿತೆಯಲ್ಲಿ,

"ಪದ್ಮನಾಭಾದಿಕಾಸ್ಸರ್ವೇ ವೈಭವೀಯಾ ಸ್ತಥೈವಚ।
ಷಟ್ತ್ರಿಂಶತ್ಸಂಖ್ಯಾ ಸಂಖ್ಯಾತಾಃ ಪ್ರಾಧಾನ್ಯೇನ ಗಣೇಶ್ವರ।" ಎಂದೂ,

ಅಹಿರ್ಬುಧ್ನ್ಯ ಸಂಹಿತೆಯಲ್ಲಿ,

"ವಿಭವಾಃ ಪದ್ಮನಾಭಾದ್ಯಾಸ್ತ್ರಿಂಶಚ್ಚನವಚ್ಚೈವಹಿ" ಎಂದೂ ಹೇಳಲ್ಪಟ್ಟಿರುತ್ತದೆ. ಅವತಾರಕಗಳೂ, ಷಡರ್ಥಗಳೂ ಎಂದೂ, ತತ್ವತ್ರಯ **ತತ್ವಚ** ಶುಷ್ಮವೆಂದೂ ಹೇಗೆ ಹೇಳಲ್ಪಟ್ಟಿರುತ್ತದೋ, ಹಾಗೆಯೇ ಇಲ್ಲಿಯೂ ಎಂದು ಭಾವಿಸತಕ್ಕದ್ದು. ಕೆಲವು ಅವತಾರ ಭೇದಗಳನ್ನು ಸೇರಿಸಿ ೩೬ ಅಥವಾ ೩೯ ಎಂದು ಹೇಳುತ್ತಾರೆಂಬ ಭಾವವು. ಈ ಎರಡು ಪ್ರಮಾಣಗಳನ್ನೂ ಅಭಿಮಾನಿಸಿ ಹೇಳುವದಕ್ಕಾಗಿಯೇ **ಮುಪ್ಪತ್ತು (ಚ್ಟಿನ್ನಂ) ಚಿಲ್ವಾನಮ್** ಎಂಬ ಪ್ರಯೋಗವು. ೩೯ ಅವತಾರಗಳು,

ಪದ್ಮನಾಭೋ ಧ್ರುವೋನಂತಶ್ಚ್ಯುತ್ಯಾತ್ಮಾ ಮಧುಸೂದನಃ।
ವಿದ್ಯಾದಿದೇನಃ ಕಪಿಲೋ ವಿಶ್ವರೂಪೋ ವಿಹಙ್ಗಮಃ।
ಕ್ರೋಡಾತ್ಮಾ ಬಡಬಾ ವಕ್ತ್ರೋ ಧರ್ಮೋ ಷಾಗೀಶ್ವರಸ್ತಥಾ।
ದೇವ ವಿಕಾರ್ಣವ ಶಯಃ ಕೂರ್ಮಃ ಪಾತಾಳಧಾರಕಃ।
ವರಾಹೋ ನಾರಸಿಂಹಶ್ಚಾಸ್ಯಸ್ಮೃತಾಹರಣಶ್ಚೈವೈ।
ತ್ರೀಪತಿರ್ನ್ಯದೇಹೋಥ ಕಾನ್ತಾತ್ಮಾ ಸ್ಮೃತಧಾರಕಃ।
ರಾಹುಚಿತ್ಕಾಲನೇಮಿಘ್ನಃ ಪಾರಿಜಾತಹರಸ್ತಥಾ।
ಲೋಕನಾಥಸ್ತು ಶಾನ್ತಾತ್ಮಾ ದತ್ತಾತ್ರೇಯೋ ಮಹಾಪ್ರಭುಃ।
ನಗ್ನೋಥಶಾಯೀ ಭಗವಾ ನೇಕ ಶೃಙ್ಗತನುಸ್ತತಃ।

ಲ್ವಾನವು ರೂಪಜ್ಞಳ್. ಇವ್ಞಲ್ ಮತ್ಸ್ಯಕೂರ್ಮಾದಿಗಳಾನ ವವ
ತಾರಜ್ಞಳ್ ಒರುಪ್ರಯೋಜನ ವಶತ್ತಾಲೆ ವಿಶೇಷಿತ್ತು ಚೊಲ್ಲಪಟ್ಟನ.
ಇವ್ವಿಭವಜ್ಞಳಿ ಲೀಶ್ವರನವ್ವೋ ಕಾರ್ಯವಿಶೇಷಜ್ಞಳು ಕ್ಕೇಡಾಗ ತ್ತಾ

ದೇವೋ ವಾಮನ ದೇಹಸ್ತು ಸರ್ವವ್ಯಾಪೀ ತ್ರಿವಿಕ್ರಮಃ।
ನರೋ ನಾರಾಯಣಶ್ಚೈವ ಹರಿಃ ಕೃಷ್ಣಸ್ತಥೈವಚ।
ಜ್ವಲತ್ಪರುಶ ಧೃಗ್ರಾಮೋ ರಾಮುಶ್ಚಾನ್ಯೋ ಧನುರ್ಧರಃ।
ವೇದವಿದ್ಭಗವಾ ಕಲ್ಕೀ ಪಾತಾಳ ಶಯನಪ್ರಭುಃ॥"

ಎಂಬೀ ಶ್ಲೋಕಗಳಲ್ಲಿ ಉಸಪಾದಿಸಲ್ಪಟ್ಟಿವೆ. ಆದರೆ ದಶಾವತಾರಗಳೆಂಬದಾಗಿ ಅವತಾರಗಳ ಸಂಖ್ಯೆಯು ಹತ್ತೆಂಬ ಲೋಕರೂಢಿಯಿರುವಾಗ ಈ ಅವತಾರಗಳೆಂ ಬುವದು ಸರಿಯೋ ಎಂಬ ಶಂಕಾ ಬಂದೀತಾಗಿ ಭಾವಿಸಿ, ಅದಕ್ಕೆ ಸಮಾಧಾನವ ನ್ನು ಹೇಳುತ್ತಾರೆ. **ಇವ್ಞಲ್**–ಈ ಈ ಅವತಾರಗಳಲ್ಲಿ, ಮತ್ಸ್ಯ ಕೂರ್ಮವೇ ನೊದಲಾದ ದಶಾವತಾರಗಳು, **ಒರು ಪ್ರಯೋಜನ ವಶತ್ತಾಲೆ**– ಒಂದೊಂದು ಮುಖ್ಯ ಪ್ರಯೋಜನಾಂತರಕ್ಕಾಗಿ. ಎಂದರೆ ಆಶ್ರಯಿಸಲು ಬಹು ಸೌಲಭ್ಯವುಳ್ಳವ ನೆಂದೋ, ಭಕ್ತ ಪರಿಪಾಲನೆಂದೋ, ಶರಣಾಗತ ರಕ್ಷಣೆಯಲ್ಲಿ ದೀಕ್ಷಾವಹನೆಂದೋ ತೋರಿಸುವದಕ್ಕಾಗಿ. **ವಿಶೇಷಿಸಿ**– ದಶಾವತಾರಗಳು ಮುಖ್ಯವಾದವೆಂದು ವಿಶೇ ಷಿಸಿ, **ಚೊಲ್ಲಪಟ್ಟನ**– ಹೇಳಲ್ಪಟ್ಟವು. **"ಮತ್ಸ್ಯಃ ಕೂರ್ಮೋ ವರಾಹಶ್ಚ ನಾರಸಿಂಹಶ್ಚ ವಾಮನಃ। ರಾಮೋ ರಾಮುಶ್ಚ ರಾಮುಶ್ಚ ಕೃಷ್ಣಃ ಕಲ್ಕೀತಿ ತೇ ದಶ"** ಎಂಬ ಶ್ಲೋಕದಲ್ಲಿ ದಶಾವತಾರಗಳು ಯಾವುವೆಂಬುವದು ನಿರ್ದೇಶಿಸ ಲ್ಪಟ್ಟಿವೆ. **"ವಿಮಾನಾಕೃತೇ ಕಮಠ ಕೋಲ ನೃಸಿಂಹ ವರ್ಣಿ ಸ್ವಾಮಿನ್ ಪರಿಶ್ವಥ ತಪೋಧನ ರಾಮಭದ್ರ। ಶೇಷಾಂಶರಾಮ ಯದುನಂದನ ಕ ಲ್ಕ್ಯಾರೂಪ"** ಎಂಬುವದರಲ್ಲೂ ಈ ದಶಾವತಾರಗಳು ಹೇಳಲ್ಪಟ್ಟಿವೆ ಈ ಗ್ರಂಥ ಕರ್ತರ **ದಶಾವತಾರಸ್ತೋತ್ರ**ದಿಂದಲೂ ಗ್ರಹಿಸಬಹುದು.

ವ್ಯೂಹಾವತಾರಗಳಿಗೂ ವಿಭವಾವತಾರಗಳಿಗೂ ಸ್ವಲ್ಪ ವೈಲಕ್ಷಣ್ಯ ಉಂಟು. ವ್ಯೂಹಾವತಾರಗಳಲ್ಲಿ ಗುಣನಿಯಮವುಂಟು. ಎಂದರೆ ಆ ಅವತಾರ ರೂಪಗಳು ನಿಯತವಾದ ಕಲ್ಯಾಣಗುಣಗಳುಳ್ಳವು. ಈ ವಿಭವಾವತಾರಗಳಲ್ಲಾದರೋ ಹಾಗ ಲ್ಲವು. ಈ ಅವತಾರಗಳೆಲ್ಲ ಆಯಾ ಅವಸರಗಳಿಗುಚಿತವಾದ ಗುಣಗಳನ್ನು ಮಾತ ಪ್ರಕಾಶಪಡಿಸಿಕ್ಕೊಂಡು ವಿಕ್ಕವುಗಳನ್ನು ಮರಿಸುವ ಸ್ವಭಾವವುಳ್ಳವುಗಳು ಎಂದು ಮುಂದೆ ತಿಳಿಯಪಡಿಸುತ್ತಾರೆ.

ಇವ್ವಿಭವಜ್ಞಳಿಲ್– ಈ ವಿಭವಾವತಾರಗಳಲ್ಲಿ **ಈಶ್ವರ**–ಸರ್ವೇಶ್ವರನು,

ವೇಣ್ಟಿನ ಗುಣಜ್ಞಳೈ ವೇಣ್ಟಿನಪೋದು ಮರೈತ್ತುಮ್, ವೇಣ್ಟಿನ ಪೋದು ಪ್ರಕಾಶಿಪ್ಪಿತ್ತುಮ್ ನಡತ್ತುಮ್.

ಅವ್ವೋಕಾರ್ಯವಿಶೇಷಜ್ಞಳಕ್ಕೀಡಾಗ–ಆಯಾಯ ಅವತಾರಕಾಲಗಳಲ್ಲಿ ನಡಿಸ ಬೇಕಾದ ಕಾರ್ಯವಿಶೇಷಗಳಿಗೆ ಅನುಗುಣವಾಗಿ, **ತಾಂ ವೇಣ್ಟಿನ ಗುಣಜ್ಞಳೈ**– ಸತ್ಯಸಙ್ಕಲ್ಪನಾದ ತಾನು ಅಪೇಕ್ಷಿಸಿದ ಗುಣಗಳನ್ನು **ಮರೈತ್ತುಮ್**– ಪ್ರಕಾಶಪಡಿಸದೆಯೂ, **ವೇಣ್ಟಿನಪೋದು ಪ್ರಕಾಶಿಪ್ಪಿತ್ತುಮ್** – ತಾನು ಅಪೇಕ್ಷಿಸಿದಾಗ ಅವುಗಳನ್ನು ಪ್ರಕಾಶಪಡಿಸಿಯೂ, **ನಡತ್ತುಮ್** – ನಿರ್ವಹಿಸುವನು, ಯಾವುಗಳನ್ನು ನಡಿಸುವನು ಎಂದರೆ, **ಅವ್ವೋಕಾರ್ಯವಿಶೇಷಜ್ಞಳೈ**–ಎಂದು ಇಟ್ಟುಕೊಳ್ಳತಕ್ಕದ್ದು; ಶಿಷ್ಟಪರಿಪಾಲನ,ದುಷ್ಟನಿಗ್ರಹ, ಧರ್ಮಸಂಸ್ಥಾಪನ ರೂಪಕಾರ್ಯವಿಶೇಷಗಳನ್ನು ಎಂಬ ಭಾವವು. ಇದಕ್ಕೆ ಅನೇಕ ನಿದರ್ಶನಗಳುಂಟು. ಕೆಲವನ್ನು ಮಾತ್ರ ಸೂಚಿಸುವೆವು. ನಾರಸಿಂಹಾವತಾರದಲ್ಲಿ ದುಷ್ಟ ಹಿರಣ್ಯಕಶಿಪುವಿನ ವಿಷಯದಲ್ಲಿ ವಾತ್ಸಲ್ಯವನ್ನು ಮರೆಸಿ, ತಾನು ಶಾಸ್ತಾ ಎಂಬ ಭಾವವನ್ನೂ ಕಾರ್ಯವನ್ನೂ ಪ್ರಕಟಿಸಿ ತನ್ನ ಪ್ರಹ್ಲಾದನ ವಿಷಯದಲ್ಲಿ ಪರಮ ವಾತ್ಸಲ್ಯಯುಕ್ತನೆಂದೂ, ಕರುಣಾಮೂರ್ತಿಯೆಂದೂ ತೋರ್ಪಡಿಸಿಕೊಂಡನು. ಹಾಗೆಯೇ ವಾಮನಾವತಾರದಲ್ಲಿ ತನ್ನ ಪರತ್ವವನ್ನೆಲ್ಲಾ ಮರೆಸಿಕೊಂಡು, ಅನಂತರ ತ್ರಿವಿಕ್ರಮನಾವತಾರಿಯಾಗಿ, ಸರ್ವವ್ಯಾಪಕತ್ವವೆ ತನ್ನ ಪರತ್ವವನ್ನು ಪ್ರಕಟನೆಮಾಡಿರುತ್ತಾನೆ. ಹಾಗೆಯೇ ಎಲ್ಲರಿಗೂ ತನ್ನ ಪಾವನ ಕಮಲವನ್ನು ಅನುಗ್ರಹಿಸಿ ತನ್ನ ನಿರ್ಹೇತುಕ ಕೃಪೆಯನ್ನು ಪ್ರಕಾಶಪಡಿಸಿರುತ್ತಾನೆ. ಹಾಗೆಯೇ ಸರ್ವೇಶ್ವರನು ತನ್ನ ಪರತ್ವವನ್ನು ಪೂರಾ ಮರೆಸಿಕೊಂಡು, ರಾಮಾವತಾರದಲ್ಲಿ "**ಆತ್ಮಾನಂ ಮಾನುಷಂ ಮನ್ಯೇ**" ತಾನು ಮನುಷ್ಯನೆಂದೂ, ಕೃಷ್ಣಾವತಾರದಲ್ಲಿ"**ಅಹಂ ವೋ ಬಾಂಧವಃ**"ತಾನು ನಿಮ್ಮಗಳ ನೆಂಟನೆಂದೂ,ಹೇಳಿಕೊಂಡನು. ಇನ್ನೊಂದು ಸಮಯದಲ್ಲಿ, ಅಹಲ್ಯೆಯ ಶಿಲಾರೂಪವನ್ನು ತಪ್ಪಿಸಿ, ಜೀವಾಳುಗಳಿಗೆ ಮೋಕ್ಷವನ್ನು ಕೊಟ್ಟು ತನ್ನ ಪರತ್ವವನ್ನು ಪ್ರಕಾಶಪಡಿಸಿದನು. ಇನ್ನೊಂದು ಸಂದರ್ಭದಲ್ಲಿ ಕೃಷ್ಣನೇ ಇಲ್ಲದವನ ಹಾಗೆ, "**ಚಾಪಮಾನಯ ಸೌಮಿತ್ರೇ ಶರಾಂಶ್ಚಾತೀವ ವಿಷೋಪಮಾನ್। ಸಾಗರಂ ಶೋಷಯಿಷ್ಯಾಮಿ, ಪದ್ಭ್ಯಾಂ ಯಾಂತು ಪ್ಲವಙ್ಗಮಾಃ**" ಓ, ಲಕ್ಷ್ಮಣನೇ, ಬಾಣವನ್ನು ತೆಗೆದುಕೊಂಡು ಬಾ, ಸಮುದ್ರವನ್ನು ಶೋಷಿಸಿಬಿಡುವೆನೆಂದು ರೌದ್ರಾವೇಶವನ್ನು ತೋರಿದವನ ಹಾಗೆ ನಟಿಸಿದನು ರಾಕ್ಷಸನಾದ ವಿಭೀಷಣನ ವಿಷಯದಲ್ಲಿ ಪರಮ ಕೃಪೆಯನ್ನು ವ್ಯಕ್ತಪಡಿಸಿ. "**ಆನಯೈನಂ ಹರಿಶ್ರೇಷ್ಠ ದತ್ತಮಸ್ಯಾಭಯಂ ಮಯಾ**" "ಅತನನ್ನು ಕರೆದುಕೊಂಡುಬಾ, ಅಭಯವನ್ನಿತ್ತಿರುವೆನು"ಎಂದುಹೇಳಿ

ಇವಕ್ಕೆ ಅವಾನ್ತರ ಭೇದಜ್ಞಳ್ [1] "ಕೃಷ್ಣರೂಪಾಣ್ಯಸಂಖ್ಯಾನಿ" ಇತ್ಯಾದಿಗಳಿರ್ ಪಡೀಯೇ ಯನನ್ತಜ್ಞಳ್.

ಪರಮಕೃಪೆಯಿಂದ, "**ಲೋಚನಾಭ್ಯಾಂಪಿಬನ್ನಿವ**" ಕಣ್ಣುಗಳಿಂದೇನಾದರೂ ಪಾನಮಾಡುವನೋ ಎಂಬಹಾಗೆ ತೋರ್ಪಡಿಸಿಕೊಂಡನು. ಹಾಗೆಯೇ ಶ್ರೀಕೃಷ್ಣಾವತಾರದಲ್ಲಿ ಚಿಕ್ಕಾರ ಹಿರ್ಯರುನಾದಿಗಳಿಗೆ ತನ್ನ ಪರತ್ವವನ್ನೂ, ವಿಶ್ವರೂಪಾದಿಗಳನ್ನೂ, ಪ್ರಕಾರಗೊಳಿಸಿದನು. ಕಂಸ, ದುರ್ಯೋಧನ, ದುಶ್ಶಾಸನ, ಅರ್ಜುನಾದಿಗಳಿಗೆ ವ್ಯಕ್ತಪಡಿಸಲಿಲ್ಲವು. ಹಾಗೆಯೇ, ಜರಾಸಂಧಾದಿ ಯುದ್ಧಗಳಲ್ಲಿ ಫಲಾಯನನೇ ಮೊದಲಾದವಗಳಿಂದ ಸಾಮಾನ್ಯನಾಗಿ ತೋರ್ಪಡಿಸಿಕೊಂಡನು. ಪೂತನಾ,ಶಕಟಾಸುರರ ಮೊದಲುಗೊಂಡು ಶಿಶುಪಾಲಾದಿ ಅನೇಕ ಅಸುರ ನಾಶಗಳಿಂದಲೂ, ವತ್ಸಾಪಹಾರ ಪ್ರಕರಣದಿಂದಲೂ, ಬ್ರಾಹ್ಮಣನಿಗೆ ಮೃತಪುತ್ರರನ್ನು ತಂದುಕೊಟ್ಟದುದರಿಂದಲೂ ಅತಿಮಾನುಷನೆಂದು ತೋರ್ಪಡಿಸಿಕೊಂಡನು. ಮುಂದೆ ವಿಭವಾವತಾರಗಳಲ್ಲೂ ಅವಾನ್ತರ ಭೇದಗಳುಂಟೆಂದು ತಿಳಿಸುತ್ತಾರೆ. ವ್ಯೂಹರೂಪಗಳಿಗೆ ಹೇಗೆ ಅವಾನ್ತರಭೇದಗಳುಂಟೋ, ಹಾಗೆಯೇ ವಿಭವಾವತಾರಗಳಿಂದುಂಟಾದ ರೂಪಭೇದಗಳುಂಟೆಂದೂ, ಅವುಗಳು ವಿಭವಾವತಾರ ಅವಾನ್ತರಭೇದಗಳೆಂದು ಹೇಳಿಸಿಕೊಳ್ಳುವನೆಂದೂ ಮುಂದೆ ತಿಳಿಸುತ್ತಾರೆ **ಇವಕ್ಕೆಲ್**–ಈ ವಿಭವಾವತಾರಗಳಲ್ಲಿ, **ಅವಾನ್ತರಭೇದಜ್ಞಳ್**– ಮುಖ್ಯವಲ್ಲದ ಜನ್ಮನಗಳಾಗುವ ರೂಪಭೇದಗಳು, **ಕೃಷ್ಣರೂಪಾಣ್ಯಸಂಖ್ಯಾನಿ**– ಕೃಷ್ಣನ ದಿವ್ಯಮಂಗಳ ವಿಗ್ರಹಗಳು ಅಸಂಖ್ಯೇಯವಾದವುಗಳು, **ಇತ್ಯಾದಿಗಳಿರ್ಪಡಿಯೇ**–ಎಂಬಿವೇ ಮೊದಲಾದ ಪ್ರಮಾಣಗಳಲ್ಲಿ ಹೇಳಿರುವ ಹಾಗೆ, **ಅನನ್ತಜ್ಞಳ್**–ಅಂತ್ಯವೇ ಇಲ್ಲದವಗಳು ಎಂದರೆ ಅನೇಕವಾದುವು ಎಂಬ ಭಾವವು. ಸಾರದೀಪಿಕೆ ವ್ಯಾಖ್ಯಾನದಲ್ಲಿ "**ಅವಾನ್ತರಭೇದಜ್ಞಳ್**"– ಎಂಬುವದಕ್ಕೆ "ಲಕ್ಷ್ಮೀನೃಸಿಂಹ, ಯೋಗಾನಂದ ನೃಸಿಂಹ, ಚತುರ್ಬಾಹ್ವಧೋಜ್ಞ ನೃಸಿಂಹ, ಇತ್ಯಾದಿರೂಪೇಣಾಪಿ, ಮದನ ಗೋಪಾಲ, ಚತುರ್ಭುಜಗೋಪಾಲ, ಇತ್ಯಾದಿರೂಪತ್ವಾಲುಮ್ ಅನನ್ತಜ್ಞಳ್" ಎಂದು ವ್ಯಾಖ್ಯಾನ ಬರೆದಿರುತ್ತಾರೆ. ಇದೂ ಅಲ್ಲದೆ ವತ್ಸಾಪಹಾರಕಾಲದಲ್ಲಿ ಶ್ರೀಕೃಷ್ಣನು ಅನೇಕ ಗೋಪಾಲಬಾಲಕರ, ಅನೇಕ ಆಕಳುಗಳ, ಅನೇಕ ವತ್ಸಗಳರೂಪಗಳನ್ನು ತಾಳಿದನು. ಅನೇಕ ಗೋಪಿಯರಿಗೆ ಬೇರೆಬೇರೆ ಕೃಷ್ಣನಾಗಿ ತೋರಿದನು. ಹಾಗೆಯೇ ದುರ್ಯೋಧನನ ಸಭೆಯಲ್ಲಿ ಅನೇಕ ಸಭಿಕರು ಕೃಷ್ಣನ ಹಾಗೆ ತೋರುವ ಹಾಗೆ ಮಾಡಿದನು: ಚಿಕ್ಕಾರ,

1 ಶ್ರೀ ಪಾಞ್ಚರಾತ್ರಂ.

ಇಪ್ಪಡಿಯೇ ವಿಭವಾನ್ತರಜ್ಞಳುಮ್ ಕಣ್ಣುಕೊಳ್ವದು. ತಿಲಜೀವರುಗಳೈ ವಿಗ್ರಹ ವಿಶೇಷತ್ತಾಲುಮ್, ಶಕ್ತಿ ವಿಶೇಷತ್ತಾಲುಮ್, ಅಧಿಷ್ಠಿತ್ತು ಅತಿಶಯಿತಕಾರ್ಯಜ್ಞಳೈ ನಡೈತ್ತುಕಿರದುವುಮ್ ವಿಭವ ಭೇದಮುಮ್.

ಅವ್ಯವ, ಅರ್ಜುನಾದಿಗಳಿಗೆ ತನ್ನ ವಿಶ್ವರೂಪವನ್ನು ತೋರಿದನು. ಈ ಅಭಿಪ್ರಾಯ ದಿಂದಲಾಗಲಿ "ಕೃಷ್ಣರೂಪಾಣ್ಯನಂತಾನಿ" ಎಂದು ಹೇಳಬಹುದು.

ಇಪ್ಪಡಿಯೇ – ಈ ಮೇರಿಗೆ ಎಂದರೆ ವಿಭವಾವತಾರದ ಅವಾನ್ತರಭೇದ ಗಳು ಹೇಗೆ ಅನನ್ತವೋ, ಹಾಗೆಯೇ ವಿಭವಾನ್ತರುಗಳೂ ಕೂಡ, ಅನನ್ತವೆಂದು ಹೇಳುತ್ತಾರೆ. **ವಿಭವಾನ್ತರಜ್ಞಳುಮ್** – ವಿಭವಾನ್ತರುಗಳನ್ನೂ ಕೂಡ, **ಕಣ್ಣುಕೊಳ್ವದು**–ತಿಳಿಯಿಕೊಳ್ಳುವದು ; ಎಂದರೆ ವಿಭವಾನ್ತರಗಳೂ ಕೂಡ ಅನಂತವೆಂದು ತಿಳಿದುಕೊಳ್ಳುವದೆಂಬ ಭಾವವು. ಇಲ್ಲಿ ವಿಭವದ ಅವಾನ್ತರ ಭೇದಗಳೂ, ವಿಭವಭೇದಗಳಾದ ವಿಭವಾನ್ತರಗಳೂ ಅನೇಕವೆಂದು ಹೇಳಲ್ಪಟ್ಟಿವೆ. ವಿಭವಾವತಾರದ **ಅವಾನ್ತರಭೇದ**ವೆಂದರೆ, ವಿಭವಾವತಾರದಲ್ಲಿ ಉತ್ಪನ್ನಗಳಾದ ರೂಪಗಳಿಗೆ ಪೆಸರು ; **ವಿಭವಾನ್ತರ**ವೆಂದರೆ, ವಿಭವಾವತಾರರೂಪದಲ್ಲಿ ಸ್ವಭೇದವು. ಮುಂಬೆ ಅನುಪ್ರವೇಶಾವತಾರಗಳೂ ವಿಭವಾವತಾರ ಭೇದಗಳೆಂದು ಹೇಳುತ್ತಾರೆ. **ತಿಲಜೀವರುಗಳೈ** – ಕೆಲವು ಚೇತನರನ್ನು, **ವಿಗ್ರಹವಿಶೇಷತ್ತಾಲುಮ್**–ತನ್ನ ವಿಶ್ವಮಜ್ಞಳವಿಗ್ರಹ ಮೂಲಕವಾಗಿಯಾಗಲಿ, ಅಥವಾ, **ಶಕ್ತಿ ವಿಶೇಷತ್ತಾಲುಮ್** – ತನ್ನ ಶಕ್ತಿಮಾಪಾತ್ಮಿಯ ಮೂಲಕವಾಗಿಯಾಗಲಿ, **ಅಧಿಷ್ಠಿತ್ತು** – ಆ ಚೇತನರುಗಳ ಶರೀರದಲ್ಲಿ ಅನುಪ್ರವೇಶಮಾಡಿ ಅವರಲ್ಲಿ ನೆಲಸಿ, **ಅತಿಶಯಿತಕಾರ್ಯಜ್ಞಳೈ** – ಮಹತ್ತಾದ ಕಾರ್ಯಗಳನ್ನೂ, **ನಡೈತ್ತುಕಿರದುವುಮ್** – ನಡಿಸಿಕೊಂಡುವುದೂ ಕೂಡ, **ವಿಭವಭೇದಮುಮ್** – ವಿಭವಾವತಾರ ಭೇದ ಮೂಲಕವಾಗಿ ಎಂದು ತಿಳಿಯತಕ್ಕದ್ದು. **ತಿಲಜೀವರ್‌ಗಳ್** – ಇವರು ಯಾರೆಂದರೆ :—ಚತುರ್ಮುಖಬ್ರಹ್ಮ ರುದ್ರೇಂದ್ರಾದಿಗಳೂ, ವ್ಯಾಸ ಪರಾಮದಗ್ನ್ಯಾದಿಗಳೂ ಸರ್ವೇಶ್ವರನು ಅನುಪ್ರವೇಶವನ್ನು ಎರಡು ವಿಧದಿಂದ ನಡಿಸುವನೆಂದು ಹೇಳುತ್ತಾರೆ :—ತನ್ನ ವಿಶ್ವಮಜ್ಞಳವಿಗ್ರಹ ವಿಶೇಷ ಮೂಲಕ ವಿಶಿಷ್ಟಾನವನ್ನು ನಡಿಸಬಹುದು ಅಥವಾ ತನ್ನ ಶಕ್ತಿಯ ಮೂಲಕವಾಗಲಿ ನಡಿಸಬಹುದು. ಚತುರ್ಮುಖ ರುದ್ರಪುರನ್ದ್ರಾದಿ ರೂಪಗಳೆಲ್ಲಾ ಸರ್ವೇಶ್ವರನ ಮುಖ್ಯಾವತಾರಗಳಲ್ಲವೆಂದೂ, ಗೌಣವಾದ ಅನುಪ್ರವೇಶಾವತಾರಗಳೆಂದೂ ಶ್ರೀ ಪೌಷ್ಕರಪಲ್ಲಿ ಹೇಳಿರುತ್ತದೆಂಬವಾಗಿ ಶ್ರೀಮದಾಚಾರ್ಯರೆಲ್ಲರು ಅವರು ರಚಿಸಿದ ಸಮಸ್ತಗ್ರಂಥಗಳಲ್ಲಿ " **ಹಿರಣ್ಯಗರ್ಭರುದ್ರ**

ಬುದ್ಧಾದಿ ಕ್ಷೇತ್ರಜ್ಞರ್‌ಗಳ್ ವಿದ್ಯಾಧಿ ದೇವಾದಿ ಪ್ರಾದುರ್ಭವಜ್ಞಳಾಲೆ ಯಧಿಷ್ಠಿತರ್ ” ಎಂದು ಅಪ್ಪಣೇ ಕೊಡಿಸಿರುತ್ತಾರೆ. ಹೀಗೆ ಅನುಪ್ರವೇಶ ಮಾಡುತ್ತೇನೆಂದು ಸರ್ವೇಶ್ವರನು ತಾನೇ “ **ಸೃಷ್ಟಿಂತತಃ ಕರಿಷ್ಯಾಮಿ ತ್ವಾಮಾವಿಶ್ಯ ಪ್ರಜಾಪತೇ**” ಎಂದು ಹೇಳಿಕೊಂಡಿರುತ್ತಾನೆ. ಚತುರ್ಮುಖನನ್ನು ಅನುಪ್ರವೇಶ ಮಾಡಿ ವ್ಯಷ್ಟಿ ಸೃಷ್ಟಿರೂಪ ಮಹತ್ಕಾರ್ಯವನ್ನೂ ಹಾಗೆಯೇ ರುದ್ರನನ್ನು ಅನುಪ್ರವೇಶಮಾಡಿ ಲಯರೂಪ ಮಹತ್ತಾತ್ಪರ್ಯವನ್ನೂ ನಡಿಸುವೆನೆಂಬಭಿಪ್ರಾಯವು. ಆದುದರಿಂದ **ಅತಿಶಯಿತಕಾರಜ್ಞಳೈನಡೈತ್ತು** ಎಂಬ ಪ್ರಯೋಗವು. ವಿಗ್ರಹವಿಶೇಷ ಮೂಲಕ ಅಧಿಷ್ಠಾನವೆಂದರೆ, ಆಯಾಯ ಜೀವಶರೀರಗಳನ್ನು ಅನುಪ್ರವೇಶಮಾಡಿದ ದಿವ್ಯಮಜ್ಞಳವಿಗ್ರಹಯುಕ್ತನಾಗಿ ಆಯಾಯ ಜೀವರುಗಳನ್ನು ನಿಯಮಿಸೋಣವು. **ಶಕ್ತಿವಿಶೇಷಮೂಲಕವಧಿಷ್ಠಾನ**ವೆಂದರೆ ತನ್ನ ಶಕ್ತಿಮಾತ್ರ ಮೂಲಕವಾಗಿ ನಿಯಮಿಸೋಣವು. ಇವುಗಳಲ್ಲಿ ಬ್ರಹ್ಮರುದ್ರಬುದ್ಧಾದಿ ಅನುಪ್ರವೇಶಾವತಾರಗಳು, ದಿವ್ಯಮಜ್ಞಳವಿಗ್ರಹಮೂಲಕವಾಗಿ ಎಂದೂ, ವ್ಯಾಸಜಾಮದಗ್ನ್ಯಾದಿಗಳು ಶಕ್ತಿಮೂಲಕವಾಗಿಯೂ ಎಂದೂ ತಿಳಿಯತಕ್ಕದ್ದು. ವ್ಯಾಸಮಹರ್ಷಿಯಮೂಲಕ ವೇದವಿಭಾಗ, ಬ್ರಹ್ಮಸೂತ್ರನಿರ್ಮಾಣ, ಪಞ್ಚಮವೇದವೆಂಬ ಮಹಾಭಾರತರಚನೆ, ಭಗವದ್ಗೀತೆ, ಶ್ರೀವಿಷ್ಣುಸಹಸ್ರನಾಮ, ಶ್ರೀಮದ್ಭಾಗವತಾದಿಗಳನ್ನು ಅನುಗ್ರಹಿಸೋಣವು, ಇವೆಲ್ಲವೂ ಶ್ರೀಮಹಾವಿಷ್ಣುವ ವ್ಯಾಸಮಹರ್ಷಿಯಲ್ಲಿ ಅನುಪ್ರವೇಶಾವತಾರವಾವಿಶ ವೈಭವವೆಂದು ಭಾವಿಸತಕ್ಕದ್ದು. ಆದುದರಿಂದಲೇ, **“ವ್ಯಾಸಾಯ ವಿಷ್ಣುರೂಪಾಯ ವ್ಯಾಸರೂಪಾಯ ವಿಷ್ಣವೇ”** ಎಂಬ ಪ್ರಯೋಗವು. ಈ ನಿಗಮಾನ್ತದೇಶಿಕರವರೇ ಗುರುಪರಂಪರಾಸಾರದಲ್ಲಿ “[1] **ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪ್ರಭುಂ । ಕೋಹ್ಯನ್ಯೋ ಭುವಿ ಮೈತ್ರೇಯ ಮಹಾಭಾರತಕೃದ್ಭವೇತ್** ॥ ಎನ್ನುಂ ಹೊಲ್ಲುಗಿರಪಡಿ ನಿರ್ಣಿರ ವ್ಯಾಸಾದಿಗಳೈ ಅನುಪ್ರವೇಶಿತ್ತು ಮಹಾಭಾರತ ಶಾರೀರಾದಿಗಳೈ ಪ್ರವರ್ತಿಪ್ಪಿತ್ತುಮ್” ಎಂದೂ, **ಪೂರ್ವೋತ್ಪನ್ನೇಷು**[2] **ಭೂತೇಷು ತೇಷು ತೇಷು ಕಲೌ ಪ್ರಭುಃ ಅನುಪ್ರವಿಶ್ಯ ಕುರುತೇ ಯತ್ಸಮೀಹತಮಚ್ಯುತಃ** ಎಜ್ಞರಪಡಿಯೇ ಪರಾಙ್ಕುಶಪರಕಾಲಾದಿ ರೂಪತ್ತಾಲೆ ಅಭಿನವಮಾಕ ಒರು ದಶಾವತಾರಂ ಪಣ್ಣಿ” ಎಂದೂ ಸಹ, ಹೇಳಿರುತ್ತಾರೆ. (ಗುರುಪರಂಪರಾಸಾರ 56, 62ನೇ ಪುಟಗಳನ್ನು ನೋಡಿ). ಇಂತಹ ಅನುಪ್ರವೇಶಾವತಾರಗಳೆಲ್ಲಾ ವಿಭವ ಭೇದಗಳೆಂದು ಭಾವಿಸತಕ್ಕದ್ದೆಂಬುವದು ಮುಖ್ಯತಾತ್ಪರ್ಯವು.

(1) ವಿ. ಪು. 3. 4. 5. (2) ವಿ. ಧ. 108. 50.

ಅರ್ಚಾವತಾರ ಸ್ವರೂಪಕಥನಂ.

ಪರವ್ಯೂಹಾದಿ ರೂಪಜ್ಞಳ್ ತಾನೇ ಆಶ್ರಿತರ್ಕ್ಕ ಅವರ್‌ಗಳ್ ಅಪೇಕ್ಷಿತ್ತಪಡಿಯಿಲೆ "ಬಿಂಬಾಕೃತ್ಯಾತ್ಮನಾ ಬಿಂಬೇ ಸಮಾಗತ್ಯಾವತಿಷ್ಠತೇ" ಎಜ್ಞ್ಞರ ಪಡಿಯೇ ನಿಲ್ಕ್ಕಿರ ನಿಲೈ ಅರ್ಚಾವತಾರಮ್.

ಅರ್ಚಾವತಾರ ಸ್ವರೂಪವು

ಸರ್ವೇಶ್ವರನು ದಿವ್ಯ ಮಜ್ಞಳ ವಿಗ್ರಹಯುಕ್ತನಾಗಿರುವದು ಐದು ವಿಧವೆಂದು ಹೇಳಲ್ಪಟ್ಟಿತು. ಇದುವರೆವಿಗೂ ಇವುಗಳಲ್ಲಿ ಮೂರು ವಿಧಗಳಾದ ಪರ, ವ್ಯೂಹ, ವಿಭವರೂಪಗಳನ್ನು ಕುರಿತು ಹೇಳಲ್ಪಟ್ಟಿತು. ಇನ್ನು ಎರಡು ವಿಧಗಳಾದ ಅರ್ಚಾರೂಪ, ಹಾರ್ದರೂಪಗಳ ಸ್ವರೂಪವೆಂಥಾದ್ದೆಂಬುವದನ್ನು ತಿಳಿಸುತ್ತಾರೆ. ಕೆಲವರು ಹೀಗೆ ಐದು ವಿಧರೂಪಗಳನ್ನು ಹೇಳದೆ, ಮೂರು ವಿಧಗಳಾದ ಪರ, ವ್ಯೂಹ, ವಿಭವಗಳನ್ನು ಮಾತ್ರವೇ ಹೇಳುತ್ತಾರೆ. ಆ ಸಂದರ್ಭದಲ್ಲಿ ಈ ಎರಡು ರೂಪಗಳು ಎಂಥಾವುಗಳೆಂಬುವದನ್ನೂ ತಿಳಿಸುತ್ತಾರೆ. **ಪರವ್ಯೂಹಾದಿರೂಪಜ್ಞಳ್ತಾನೇ** - ಪರ, ವ್ಯೂಹ, (ಆದಿಶಬ್ದದಿಂದ) ವಿಭವರೂಪಗಳೇ, **ಆಶ್ರಿತರ್ಕ್ಕ**-ತನ್ನನ್ನು ಆಶ್ರಯಿಸಿದವರಿಗೆ, **ಅವರ್ಗಳ್ ಅಪೇಕ್ಷಿತಪಡಿಯಿಲೇ**- ಅವರುಗಳು ಅಪೇಕ್ಷಿಸಿದ ರೀತಿಯಲ್ಲಿ, **"ಬಿಂಬಾಕೃತ್ಯಾತ್ಮನಾ**- ಬಿಂಬದ ಆಕೃತಿಯ ಹಾಗೆ ಆಕೃತಿಯು ಯಾರಿಗೋ, ಆತನು ಬಿಂಬಾಕೃತಿಯು; ಆ ಬಿಂಬಾಕೃತಿಯೇ ಆತ್ಮಾ ಎಂದರೆ ಶರೀರ ಅಥವಾ ದಿವ್ಯ ಮಜ್ಞಳ ವಿಗ್ರಹವು, ಎಂದರೆ ಬಿಂಬಕ್ಕೆ ಸಮಾನವಾದ ದಿವ್ಯಮಜ್ಞಳ ವಿಗ್ರಹದಿಂದ ಎಂಬ ತಾತ್ಪರ್ಯವು; **ಸಮಾಗತ್ಯ**-ಬಂದು, **ಬಿಂಬೇ**-ಆ ಸುವರ್ಣ, ಪೆಳ್ಳ, ಲೋಹ, ಕಲ್ಲು, ಮರ ಮುಂತಾದವುಗಳಿಂದ ರಚಿಸಲ್ಪಟ್ಟ ಪ್ರತಿಮೆಯಲ್ಲಿ ಅಥವಾ ವಿಗ್ರಹದಲ್ಲಿ, **ಅವತಿಷ್ಠತೇ**- ಇರುತ್ತಾನೆ," **ಎಜ್ಞ್ಞರಪಡಿಯೇ**-ಎಂದು ಹೇಳಿರುವ ಹಾಗೆ, **ನಿಲ್ಕ್ಕಿರನಿಲೈ** - ಸರ್ವೇಶ್ವರನು ಇರುವ ಸ್ಥಿತಿಯೇ, **ಅರ್ಚಾವತಾರಮ್**- ಅರ್ಚಾವತಾರವೆನಿಸುತ್ತದೆ. ಇಲ್ಲಿ ನಾವು ಮುಖ್ಯವಾಗಿ ಗ್ರಹಿಸತಕ್ಕ ಅಂಶವೆಂದರೆ:—ಈ ಸುವರ್ಣ ರಜತ ಶಿಲಾ ಮೊದಲಾದವುಗಳಿಂದ ರಚಿಸಲ್ಪಟ್ಟ ವಿಗ್ರಹಗಳನ್ನು ಪಾಂಚರಾತ್ರಾದಿ ಆಗಮಗಳ ರೀತ್ಯಾ ಪ್ರತಿಷ್ಠೆ ಮಾಡಿದರೆ, ಆ ಸಂಸ್ಕಾರದ ಮಾಹಾತ್ಮ್ಯೆಯಿಂದ ಸರ್ವೇಶ್ವರನ ದಿವ್ಯಮಜ್ಞಳ ವಿಗ್ರಹವು ಆ ಬಿಂಬಾಕೃತಿಯ ರೂಪವನ್ನೇ ತೊಂಬತ್ತದೆ. ಇದರಿಂದ ಆ ಸುವರ್ಣ ರಜತ ಶಿಲೆಗಳೇ ಸರ್ವೇಶ್ವರನ ದಿವ್ಯಮಜ್ಞಳ ವಿಗ್ರಹವೆಂದು ಭಾವಿಸಕೂಡದು. ಕಣ್ಣಿಗೆ ಕಾಣದೇ ಇರುವ ನಿತ್ಯವಾಗಿರುವ ದ್ರವ್ಯವೊಂದು ನೀರೂ ಕ್ಷೀರವೂ ಕಲೆತ ತೆರದಿ ಆ ಸುವರ್ಣ ರಜತ ಶಿಲಾದಿ

ವಿಗ್ರಹಗಳೊಂದಿಗೆ ಬಂದು ಸೇರುತ್ತದೆ. ಆದರೆ ನೀರೂ ಕ್ಷೀರವೂ ಸಹ ಬೆರತರೆ ಪ್ರಮಾಣ ಮತ್ತು ಭಾರಗಳು ಹೆಚ್ಚುತ್ತವೆ. ಈ ಸರ್ವೇಶ್ವರನ ದಿವ್ಯ ಮಜ್ಗಳ ವಿಗ್ರಹ ರೂಪವ್ಯವು ಸೇರಿದರೆ ಪ್ರಮಾಣ ಮತ್ತು ಭಾರ ಸಹ ಹೆಚ್ಚುವದಿಲ್ಲವು. ಗೃಹದಲ್ಲಿರುವ ವಿಗ್ರಹಗಳನ್ನೇಯಾಗಲಿ, ದೇವಾಲಯಗಳ ಅರ್ಚಾಮೂರ್ತಿಗಳನ್ನಾಗಲಿ ಸೇವಿಸುವಾಗ ಹೀಗೀಗ ನಮ್ಮಗಳ ಭಾವನೆ ಇರಬೇಕಾದುದು. ಕಲ್ಲು ಮುಂತಾದವುಗಳೇ ದಿವ್ಯಮಜ್ಗಳವಿಗ್ರಹವ್ಯವಲ್ಲವು. ಇಂತಹ ಭಾವನೆಯಿಲ್ಲದ ಅಜ್ಞಾನಿಗಳೀಗ ವಿಗ್ರಹಾರಾಧನೆಯನ್ನು ಖಂಡಿಸುವವರು. ಮೇಲೆ ಹೇಳಿದ ರೀತಿಯುಳ್ಳ ಭಾವನೆಯುಳ್ಳವರು ವಿಗ್ರಹಾರಾಧನೆಯನ್ನು ಎಂದಿಗೂ ಖಂಡಿಸರು. ಈ ಮೇಲಿನ ಸಾತ್ವತ ಸಂಹಿತಾ (6. 22) ವಾಕ್ಯವು ಈ ಅಭಿಪ್ರಾಯವನ್ನು ಬಹು ನಿಪುಣತರವಾಗಿ ತಿಳಿಸುವದಕ್ಕಾಗಿಯೇ, **ಬಿಂಬಾಕೃತ್ಯಾತ್ಮನಾ** ಎಂಬ ಪ್ರಯೋಗವುಳ್ಳದ್ದಾಗಿರುತ್ತದೆ. ಈ ಅಭಿಪ್ರಾಯವಿಲ್ಲದಿದ್ದರೆ ಬಿಂಬಾಕೃತಿಗೆ ಸಮಾನವಾದ ದಿವ್ಯಮಜ್ಗಳವಿಗ್ರಹವೆಂದು ಹೇಳಬೇಕಾದ ಆವಶ್ಯಕವಿರಲಿಲ್ಲವು. ಸುಮ್ಮನೆ **ಬಿಂಬೇ ಅವತಿಷ್ಠತಿ** ಎಂದು ಇಷ್ಟು ಮಾತ್ರ ಹೇಳಿದ್ದರೆ ಸಾಕಾಗಿತ್ತು, ಶಾಸ್ತ್ರಗಳ ಸುಜ್ಞಾನವಿಲ್ಲದೆ, ಅಜ್ಞಾನ ವಿಜೃಂಭಣೆಯಿಂದ ವಿಗ್ರಹಾರಾಧನವನ್ನು ದೂಷಿಸುವದು ಕಲಿಪುರುಷನ ಮಾಹಾತ್ಮ್ಯವು.

ಸರ್ವೇಶ್ವರನು ಹಾಗೆ ಅಂತಹ ಬಿಂಬಗಳಲ್ಲಿ ಬಿಂಬವತ್ ನೆಲಸಿರುವದು, ಭಕ್ತಮನೋರಥಪೂರ್ತಿಗಾಗಿ ಎಂದು ತಿಳಿಸುವದಕ್ಕಾಗಿ **ಆಶ್ರಿತರಾಕ್ಷಕ** ಎಂಬ ಪ್ರಯೋಗವು. ಭಕ್ತ ಮನೋರಥಪೂರ್ಣನೇ ಆ ದಯಾಸಾಗರನ **ಉಪ್ಪೇಶ್ಯವಾ**ದುದರಿಂದ **ಅಪೇಕ್ಷಿತ್ತಪಡಿಯಿಲೆ** ಎಂದು ತಿಳಿಸಿರುತ್ತಾರೆ. ಹೀಗೆ ಬಿಂಬದಲ್ಲಿ ನೆಲಸಿರುವದರಿಂದ, ಸರ್ವೇಶ್ವರನು ಸರ್ವರ ಮಾಂಸ ಚಕ್ಷುಸ್ಸುಗಳಿಗೂ ಗೋಚರನಾಗಿ ಐಹಿಕಾಮುಷ್ಮಿಕ ಫಲಗಳನ್ನು ಕೊಡುವದರಿಂದ ತನ್ನ ದಯಾ ಸೌಲಭ್ಯಾದಿ ಗುಣಗಳನ್ನು ವ್ಯಕ್ತಪಡಿಸಿಕೊಂಡಿರುತ್ತಾನೆ. ಆ ಬಿಂಬಗಳಲ್ಲಿ ಆತನು ಈ ಪ್ರಕಾರವಾಗಿ ನಿಲ್ಲುವದು ಭಕ್ತರ ಇಷ್ಟಪ್ರಕಾರವಾಗಿಯೂ, ತನ್ನ ಸಜ್ಜಾಪ್ತಾನುಗುಣವಾಗಿಯೂ, ಮತ್ತು ಪಾಂಚರಾತ್ರಾದಿ ಶಾಸ್ತ್ರಚೋದಿತ ಸಂಸ್ಕಾರಾನುಗುಣವಾಗಿಯೂ ಎಂದರಿಯತಕ್ಕದ್ದು. ಇಲ್ಲ **"ದೇವೋ ವೈಕುಂಠನಾಥಸ್ತು ಅನನ್ತಾಸನಸಂಸ್ಥಿತಃ। ಸೇವ್ಯಶ್ರೀಭೂಮಿ ನೀಳಾಭಿಃಪ್ರಾದುರ್ಭಾವೈಸ್ತಥಾಖಿಲೈಃ। ಬಿಂಬಾಕೃತ್ಯಾತ್ಮನಾ ಬಿಂಬೇ ಸಮಾಗತ್ಯಾವತಿಷ್ಠತಿ"** ಎಂದು ಶ್ರೀಸಾತ್ವತದಲ್ಲಿ ಶ್ರೀವೈಕುಂಠನಾಥನೇ ಬಿಂಬಗಳಲ್ಲಿರುತ್ತಾನೆಂದು ಹೇಳಿರುವದರಿಂದ ತದನುಸಾರವಾಗಿ **ಪರವ್ಯೂಹಾದಿರೂಪಜ್ಗಳ ತಾನೇ** ಎಂದು ಆಚಾರ್ಯರವರು ಪ್ರಯೋಗಿಸಿರುತ್ತಾರೆ. ಇದುದರಿಂದ ರೂಪಗಳು ಮೂರು ವಿಧವೆಂಬ **ಉಕ್ತಿ**ಯೂ ಕೂಡ ಶಾಸ್ತ್ರವಿರುದ್ಧವಾಗುವದಿಲ್ಲವು.

ಹಾರ್ದರೂಪಮ್ ಅಥವಾ ಅನ್ತರ್ಯಾಮಿರೂಪಮ್

ಸರ್ವರುಡೈಯವುಮ್ ಹೃದಯಙ್ಗಳಿಲೇ ಸೂಕ್ಷ್ಮಮಾಯಿರುಪ್ಪ ದೊರು ರೂಪ ವಿಶೇಷತ್ತೈ ಕೊಣ್ಡು ನಿಲ್ಕಿರನಿಲೈ ಅನ್ತರ್ಯಾಮ್ಯವತಾರಮ್. ಇದು ಸರ್ವಾನ್ತರ್ಯಾಮಿಯಾನ ದಿವ್ಯಾತ್ಮಸ್ವರೂಪತ್ತೈಯನು ಸನ್ನಿಕ್ಕ ಇಳಿವಾರ್ಕ್ಕುತ್ತುರ್ಯೈಯಾಕ "ಅಷ್ಟಾಙ್ಗ ಯೋಗ ಸಿದ್ಧಾನಾಂ

ಹಾರ್ದ ಅಥವಾ ಅಂತರ್ಯಾಮಿ ರೂಪವು.

ಸರ್ವರುಡೈಯವುಮ್ – ಸಮಸ್ತ ಜನರ, ಹೃದಯಗಳಲ್ಲಿ, **ಸೂಕ್ಷ್ಮಮಾಯಿರುಪ್ಪದೊರುರೂಪವಿಶೇಷತ್ತೈ** – ಸೂಕ್ಷ್ಮವಾಗಿರುವ ಒಂದು ದಿವ್ಯಮಙ್ಗಳ ವಿಗ್ರಹ ವಿಶೇಷವನ್ನು, **ಕೊಣ್ಡುನಿಲ್ಕಿರನಿಲೈ** – ಹೊಂದಿ ನಿಲ್ಲುವ ದಶೆಯು, ಅನ್ತರ್ಯಾಮ್ಯವತಾರವೆಂದು ಹೇಳಿಸಿಕೊಳ್ಳುತ್ತದೆ. ಇಲ್ಲಿ **ಸರ್ವತ್ತೈಯುಮ್** ಎಂದು ಹೇಳದೆ **ಸರ್ವರುಡೈಯವುಮ್** ಎಂದು ಹೇಳಿರುವದರಿಂದ ಉಪಾಸನೆಗೆ ಯೋಗ್ಯತೆಯಿಲ್ಲವಿರುವ ತಿರ್ಯಗ್ಜಂತುಗಳ ಹೃದಯದಲ್ಲಿ ಈ ರೂಪವಿರುವದಿಲ್ಲವೆಂದೂ, ಉಪಾಸನಾ ಯೋಗ್ಯತೆ ಇರುವ ಮೇನಮನುಷ್ಯರಲ್ಲಿ ಮಾತ್ರವೇ ಈ ಹಾರ್ದಾವತಾರ ಉಂಟೆಂದು ಸಾರಾಸ್ಯವಿಸಿ ವ್ಯಾಖ್ಯಾತೃವು ಅಪ್ಪಣೆ ಕೊಡಿಸಿರುತ್ತಾರೆ. ಆ ರೂಪವು **"ಅಂಗುಷ್ಟಮಾತ್ರೋ ಪುರುಷಃ"** ಎಂದು ಹೇಳಿರುವಹಾಗೆ ಉಪಾಸಕನ ಅಭಿಷ್ಟಸಿನಿಮಾಣವಲ್ಲಿ ಆತನ ಹೃದಯದ ದಹರಾಕಾಶ ಭಾಗದಲ್ಲಿ, **"ವಿಶ್ವಸ್ಯಾಯತನಂ ಮಹತ್"** ಎಂದು ಹೇಳಿರುವ ಹಾಗೆ, ಆ ಕೃಪಾಕರನು ಉಪಾಸಕನ ಅನುಗ್ರಹಾರ್ಥವಾಗಿ ನೆಲೆಯುವನ್ನಾಗಿ ಮಾಡಿಕೊಂಡು ಹಾರ್ದಾವತಾರಿಯಾಗಿ ಪಸಿಸುತ್ತಾನೆಂದು ಪುರುಷಸೂಕ್ತ ಮುಂತಾದವುಗಳಲ್ಲಿ ಹೇಳಿರುತ್ತದೆ ಆದರೆ ಸರ್ವೇಶ್ವರನು ವಿಭುವಾಗಿ ತನ್ನ ದಿವ್ಯಾತ್ಮಸ್ವರೂಪನಮೂಲಕ ಎಲ್ಲನನ್ನೂ, **"ಯಃ ಪೃಥಿವ್ಯಾಂ ತಿಷ್ಠನ್,"** **"ಯ ಆತ್ಮನಿ ತಿಷ್ಠನ್"** ಎಂಬೀ ಶ್ರುತಿಗಳಲ್ಲಿ ಹೇಳಿರುವ ಮೇರಿಗೆ, ವ್ಯಾಪಿಸಿರುವ ವಿಶಿಷ್ಟನೆಂ ಅಂತರ್ಯಾಮಿತ್ವನೆಂದು ಹೇಳುವಾಗ ಇದನ್ನೂ ಸೂಚಿಸುವ ಅಂತರ್ಯಾಮ್ಯವತಾರರೂಪವೆಂದು ಹೇಳಬಹುದೋ ಎಂದರೆ ಅದಕ್ಕೆ ಮುಂದಿನ ವಾಕ್ಯದಿಂದ ಸಮಾಧಾನವನ್ನು ಹೇಳುತ್ತಾರೆ. **ಇದು** ಎಂದರೆ ಈ ಹಾರ್ದಾವತಾರವು, **ಸರ್ವಾಂತರ್ಯಾಮಿಯಾನ** – **"ಅಂತರ್ಬಹಿಶ್ಚತತ್ಸರ್ವಂ ವ್ಯಾಪ್ಯನಾರಾಯಣಸ್ಥಿತಃ"** ಎಂದು ಹೇಳಿರುವ ಹಾಗೆ ಸಮಸ್ತ ಚಿದಚಿತ್ತುಗಳನ್ನೂ ವ್ಯಾಪಿಸಿರುವ ದಿವ್ಯಾತ್ಮಸ್ವರೂಪವನ್ನು, **ಅನುಸನ್ಧಿಕ್ಕ** – ಅನುಸಂಧಾನ ಮಾಡುವದಕ್ಕಾಗಿ, **ಇಳಿವಾರ್ಕ್ಕು** – ಉದಾಸೀನತೆಯಿಂದ ನಿರಿಹಸ್ಥನಂತೆ ತೋರಿ ಆತ್ಮೇ ಪಡೆ ಸೇರು

ಹೃದ್ಯಾಗ ನಿರತಾತ್ಮನಾಂ । ಯೋಗೀನಾ ಮಧಿಕಾರ ಸ್ಸ್ಯಾದೇ ಕಸ್ಮಿ ಕ್ಹೃದಯೇಶಯೇ" ಇತ್ಯಾದಿಗಳಿಲೆ ಶೊಲ್ಲುಗೈಯಾಲೆ ಅನ್ತರ್ಯಾಮಿ ರೂಪ ಮೆನ್ರು ಶೊಲ್ಲಪ್ಪಟ್ಟದು.

ವವರಿಗೆ, **ತುರೈಯಾಗ** –ನದಿಯನ್ನು ದಾಟುವ ಮಾರ್ಗವಾಗಿ, **"ಅಷ್ಟಾಙ್ಗಯೋಗಸಿದ್ಧಾನಾಂ" ಇತ್ಯಾದಿಗಳಿಲೆ**– ಈ ಶ್ಲೋಕವೇ ಮೊದಲಾದವುಗಳಲ್ಲಿ, **ಶೊಲ್ಲುಗೈಯಾಲೇ** – ಹೇಳಿರುವದರಿಂದ, **ಅನ್ತರ್ಯಾಮಿರೂಪಮೆನ್ರು ಶೊಲ್ಲಪ್ಪಟ್ಟದು**–ಅನ್ತರ್ಯಾಮಿಯಾದ ದಿವ್ಯಮಙ್ಗಳವಿಗ್ರಹವೆಂದು ಹೇಳಲ್ಪಟ್ಟಿತು. ಈ ಶ್ಲೋಕಾಭಿಪ್ರಾಯವೇನೆಂದರೆ:— (ಶ್ರೀ ಸಾತ್ವತ ಸಂಹಿತೆ 277-8) **"ಅಷ್ಟಾಙ್ಗಯೋಗಸಿದ್ಧಾನಾಂ** – ಯಮ ನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧಿಗಳೆಂಬ ಅಷ್ಟಾಙ್ಗಗಳಿಂದ ಯುಕ್ತವಾದ ಉಪಾಸನೆಯಲ್ಲಿ ಸಿದ್ಧಿ ಪೊಂದಿದವರಾಗಿಯೂ, **ಹೃದ್ಯಾಗನಿರತಾತ್ಮನಾಂ** – 'ಹೃದ್ಯಾಗ'ವೆಂದರೆ ಹೃದಯದಲ್ಲಿರುವವನನ್ನು ಕುರಿತ ಯಾಗವು, ಪೂಜಾರೂಪವಾದ ಹಾರ್ದಾವತಾರಿಯ ಕುರಿತ ಉಪಾಸನೆಯು; ಅಂತಹ ಉಪಾಸನೆಯಲ್ಲಿ, **ನಿರತಾತ್ಮನಾಂ** – ಇಲ್ಲಿ ಆತ್ಮವೆಂದರೆ ಮನಸ್ಸು, ಆಸಕ್ತಿಯುಳ್ಳ ಮನಸ್ಸುಳ್ಳವರಾಗಿಯೂ ಇರುವ, **ಯೋಗಿನಾಂ**–ಉಪಾಸಕರಿಗೆ, **ಏಕಸ್ಮಿನ್** – ವ್ಯೂಹಾವತಾರದ ಹಾಗೆ ಮೂರೂ ನಾಲ್ಕೂ ಅಲ್ಲದೆ ಒಂದೇ ಯಾಗಿರುವ, **ಹೃದಯೇಶಯೇ** – ಹೃದಯಾಯತನದಲ್ಲಿ ಶಯಿಸಿರುವ ಪರಮಾತ್ಮನಲ್ಲಿ **ಎಂದರೆ** ಆತನ ಉಪಾಸನೆಯಲ್ಲಿ ಎಂಬ ಭಾವವು, **ಅಧಿಕಾರಸ್ಸ್ಯಾತ್** – ಅಧಿಕಾರವುಂಟಾಗುತ್ತದೆ" ಎಂಬುವದು ಶ್ಲೋಕಾರ್ಥವು. ಸರ್ವಾಂತರ್ಯಾಮಿಯಾಗಿರುವ ಸರ್ವೇಶ್ವರನು ಈ ಉಪಾಸನಾಧಿಕಾರಿಯಲ್ಲೂ ಅಂತರ್ಯಾಮಿಯಾಗಿರುವವನಾಗಿ ಆ ಯೋಗಿಯ ಅನುಗ್ರಹಾರ್ಥವಾಗಿ ಆತನ ಹೃದಯದಲ್ಲೇ ಒಂದು ರೂಪವನ್ನು ಧರಿಸುವದರಿಂದ ಇದಕ್ಕೆ **ಅನ್ತರ್ಯಾಮಿರೂಪ**ವೆಂದಾಗಲಿ, ಹೃದಯದಲ್ಲಿರುವದರಿಂದ **ಹಾರ್ದರೂಪ**ವೆಂದಾಗಲಿ ಹೆಸರು. ಸರ್ವೇಶ್ವರನು ಈ ಉಪಾಸನಾಧಿಕಾರಿಯಲ್ಲೂ ಅಂತರ್ಯಾಮಿಯಾಗಿರುವದು ಎರಡು ವಿಧವಾಗಿ ಎಂದು ತಿಳಿಯುವದು:—(1) ಸ್ವರೂಪತಃ, ಸ್ವರೂಪಮೂಲಕವಾಗಿ ಸರ್ವವನ್ನು ವ್ಯಾಪಿಸಿರುವನು; **"ತದನುಪ್ರವಿಶ್ಯ"** ಎಂದು ಶ್ರುತಿಯಲ್ಲಿ ಹೇಳಿರುವ ಹಾಗೆ ಸಮಸ್ತ ಚಿದಚಿತ್ತುಗಳನ್ನೂ ವ್ಯಾಪಿಸಿರುವನು. ಹೀಗೆಯೇ ಇನ್ನೊಂದು ಕಡೆಯಲ್ಲಿ **"ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣ ಸ್ಥಿತಃ"** ಎಂದು ಹೇಳಲ್ಪಟ್ಟಿರುತ್ತದೆ. (2) ರೂಪತಃ, ಮನುಷ್ಯರ ಹೃದಯದಲ್ಲೂ, ಪ್ರತಿಷ್ಠಿತಗಳಾದ ರಜತ ಶಿಲಾ ಮೊದಲಾದ ವಿಗ್ರಹಗಳಲ್ಲೂ ಇರುವನು.

ಸರ್ವಾಂತರ್ಯಾಮಿಯಾಗಿರುವ ಸರ್ವೇಶ್ವರನು ಈ ಉಪಾಸನಾಧಿಕಾರಿಯಲ್ಲೂ

ಸ್ವರೂಪತಃ ಅಂತರ್ಯಾಮಿಯಾಗಿರುವವನಾಗಿ, ಈ ಯೋಗಿಯ ಅನುಗ್ರಹಾರ್ಥವಾಗಿ ಅತನ ಹೃದಯದಲ್ಲೇ ರೂಪತಃ ದಿವ್ಯಮಙ್ಗಳ ವಿಗ್ರಹವನ್ನು ಹೊಂದುವದರಿಂದ ಇದಕ್ಕೆ **ಅಂತರ್ಯಾಮಿರೂಪ** ವೆಂದೂ **ಹಾರ್ದರೂಪ**ವೆಂದೂ ಪೆಸರು.

ಇಳಿವಾರ್ಕ್ಕುತುರೈಯಾಗ ಎಂದು ಪ್ರಯೋಗಿಸಿರುವದರಿಂದ, ಒಂದು ಅಗಾಧವಾದ ನದಿಯಲ್ಲಿಕೆದು ಹೋಗುವವರಿಗೆ ನದಿಯನ್ನು ಹಾಯುವ ಸ್ಥಳ ಹೇಗೆ ಒಂದೋ, ಹಾಗೆಯೇ ಮೋಕ್ಷಾರ್ಥಿಗಳಾದ ಉಪಾಸಕರಿಗೆ ಹೃದಯವಾಸಿಯಾಗಿರುವ ಅಙ್ಗುಷ್ಠಪ್ರಮಿತಿಯುಳ್ಳ ಪರಮಾತ್ಮನ ಉಪಾಸನವೇ ಮುಖ್ಯವಾದ ಮಾರ್ಗವು. ಈಗಿನ ಕೆಲವು ಸಮಾಜದವರು ವಿಗ್ರಹಾರಾಧನೆಯನ್ನು ನಿರಾಕರಿಸಿ, ಪರಮಾತ್ಮನ ಉಪಾಸನೆಯನ್ನು ಮಾಡಬೇಕೆಂದು ಹೇಳುತ್ತಾರೆ. ಪರಬ್ರಹ್ಮ ಸಾಕ್ಷಾತ್ಕಾರವಾಗಬೇಕಾದರೆ, ರೂಪವಿಲ್ಲದೆ ಸಾಕ್ಷಾತ್ಕಾರ ಹೇಗಾಗುತ್ತದೆ. ಇಂತಹ ಅನಿಪುಣಾಭಿಪ್ರಾಯವುಳ್ಳವರಿಗೆ, ಹೇಗೆ ಉಪಾಸನಮಾಡಬೇಕೆಂಬುವದೇ ತಿಳಿಯದು. ಶ್ರುತಿಗಳಲ್ಲಿ ಹೇಳಿರುವ ಸರ್ವವಿಧ ಉಪಾಸನೆಗಳಲ್ಲೂ ಪರಮಾತ್ಮನ ಒಂದು ವಿಧ ರೂಪವನ್ನು ಕುರಿತೇ ಹೇಳಿರುತ್ತದೆ. ಶಿಲಾ ಮೊದಲಾದ ವಿಗ್ರಹವಿಶೇಷವು ಕೂಡ ಅಂತಹ ಉಪಾಸನೆಗಳಿಗೆ ಪ್ರಥಮತಃ ಸಹಕಾರಿಯಾಗಿ ಪರಿಣಮಿಸುತ್ತದೆ. ಆದುದರಿಂದ ಉಪಾಸನೆಗೆ ಭಗವದ್ರೂಪವೂ ಆವಶ್ಯಕವು. ಧ್ರುವನು ವನಕ್ಕೆ ಉಪಾಸನೆಗೆ ಹೋಗುತ್ತಿದ್ದ ಕಾಲದಲ್ಲ ನಾರದರು ಅತನನ್ನು ಕಂಡು ಪರಮ ಕೃಪೆಯಿಂದ ಪರಮಾತ್ಮನ ರೂಪವನ್ನು ಶಂಖಚಕ್ರಗದಾದಿ ದಿವ್ಯಾಯುಧ ದಿವ್ಯಾಭರಣಯುಕ್ತನಾಗಿ ಪರ್ಶಿಸಿ, ಆರೀತಿಯಲ್ಲಿ ಧ್ಯಾನಿಸತಕ್ತದ್ದೆಂದು ಉಪದೇಶಿಸಿದರು. ಕಪಿಲರು ತಮ್ಮ ತಾಯಿಯಾದ ದೇವಹೂತಿಗೂ ಮಾಡಿದ ಉಪದೇಶದಲ್ಲೂ ಧ್ಯಾನಕ್ರಮವು ತದ್ರೂಪವಾಮದೇ. ಆದರೆ "**ನಿರಾಕಾರೋ ನಿರಙ್ಗಶ್ಚ ಸ್ಮರ್ತವ್ಯೋ ಬ್ರಹ್ಮಲಕ್ಷಣಃ**" ಎಂಬಿವೇ ಮೊದಲಾದವುಗಳಿಂದ, ಆಕಾರವಿಲ್ಲದ, ಅಙ್ಗಗಳಿಲ್ಲದ ಪರಬ್ರಹ್ಮಸ್ವರೂಪದ ಸಮಾಧಿಯನ್ನು ಪ್ರಮಾಣವಾಗಿ ಹೇಳದೆಯಲ್ಲಾ ಎಂಬಾಕ್ಷೇಪ ತಂದರೆ, ಆ ವಾಕ್ಯದ ಮುಂದೆಯೇ **ತತ್ಪ್ರಾಪ್ತ್ಯುಪಾಯೋ ಸಾಕಾರಂ ಸಂಸ್ಮರೇತ್** ಎಂದು ಹೇಳಿರುವದರಿಂದ, ಪರಮಾತ್ಮನ ದಿವ್ಯಮಙ್ಗಳ ವಿಗ್ರಹೋಪಾಸನೆಯೇ **ತುರೈ** ಎಂದು ಇಲ್ಲಿ ಹೇಳಲ್ಪಟ್ಟಿರುತ್ತದೆ.

ಆದುದರಿಂದ ಉಪಾಸನೆಗೆ ಭಗವದ್ರೂಪವು ಅತ್ಯಾವಶ್ಯಕವು. ಮೂವತ್ತೆರಡು ವಿಧ ಬ್ರಹ್ಮವಿದ್ಯೆಗಳಲ್ಲೂ ಉಪಾಸನಕ್ಕೆ ಭಗವದ್ರೂಪಗಳು ವಿಧಿಸಲ್ಪಟ್ಟಿವೆ. ಭಗವದ್ರೂಪವಿಲ್ಲದೆ ಭಗವಂತನ ಉಪಾಸನೆಯೂ ಸಾಕ್ಷಾತ್ಕಾರವೂ ಹೇಗೋ ತಿಳಿಯದು. ಹೃದಯಾಂತರ್ನಿರ್ವರ್ತಿಯಾದ ಭಗವಂತನ ರೂಪವು ಇಲ್ಲಿ ಉಪಾಸ್ಯವೆಂದು ಹೇಳಲ್ಪಟ್ಟಿದೆ. ಈ ಶ್ಲೋಕದಲ್ಲಿ **ಏಕಸ್ಮಿನ್ ಹೃದಯೇಶಯೇ** ಎಂದು

ಭಗವದವತಾರ ರಹಸ್ಯಂ

ಇಪ್ಪಡಿ ಯವತರಕ್ಕರ ರೂಪಜ್ಗಳಿಲ್ ವಗೈಗಳಿಲ್ಲಾಮ್ ಶುದ್ಧ ಸತ್ವದ್ರವ್ಯಮಯಜ್ಗಳಾಯುಮ್ ಕರ್ಮತತ್ಫಲಜ್ಗಳೋಡು ತುವಕ್ಕರ ವರು ಗೈಯಾಲೇ. ಶುದ್ಧಸೃಷ್ಟಿಎನ್ರು, ಪೇರ್ ಪೆತ್ತಿರುಕ್ಕುಮ್. ಇವ್ವವತಾರ

ಪೇಳುವವರಿಂದ ಈ ಹೃದಯಪದ್ಮಾಕಾಶದಲ್ಲಿರುವ ಪರಮಾತ್ಮನನ್ನು ಏಕಮೂರ್ತಿಯಾಗಿ ಧ್ಯಾಪಿಸತಕ್ಕದ್ದು. ಶ್ರೀಸಾತ್ವತಾದಿಗಳಲ್ಲಿ ಚಾತುರ್ವ್ಯೂಹಾದ್ಯುಪಾಸನ ವಿಷಯವೂ ಹೇಳಿರುತ್ತದೆ.

ಭಗವಂತನ ಅವತಾರಗಳ ರಹಸ್ಯವು

ವ್ಯೂಹ ವಿಭವ ಪಾರ್ಶ್ವ ಅರ್ಚ್ಯಾವತಾರ ರೂಪಗಳ ದ್ರವ್ಯವು ಎಂಥಾದ್ದೆಂಬುವದು ನೊದಲು ಚರ್ಚಿಸಲ್ಪಡುವದು. **ಇಪ್ಪಡಿ**-ಈ ಮೇಲೆ ಉಪಪಾದಿಸಲ್ಪಟ್ಟ ರೀತಿಯಲ್ಲಿ, ಅವತರಿಸುವ **ರೂಪಜ್ಗಳಿಲ್ ವಗೈಗಳಿಲ್ಲಾಂ**- ದಿವ್ಯಮಜ್ಗಳ ವಿಗ್ರಹಗಳಲ್ಲಿ ತೋರುವ ಪ್ರಕಾರಗಳೆಲ್ಲಾ, **ಶುದ್ಧಸತ್ವದ್ರವ್ಯಮಯಜ್ಗಳಾಯುಮ್**-ಶುದ್ಧಸತ್ವದ್ರವ್ಯರೂಪವಾಗಿ, **ಕರ್ಮತತ್ಫಲಜ್ಗಳೋಡುಂ**-ಕರ್ಮವುತ್ತು ಅದರ ಫಲಗಳಾದ ಸುಖದುಃಖಾನುಭವಗಳೊಂದಿಗೆ, **ತುವಕ್ಕರ**-ಸಂಬಂಧವಿಲ್ಲದ ಹಾಗೆ, **ವೆರುಗ್ಗೈಯಾಲೇ**-ಉಂಟಾಗುವದರಿಂದ, ಅಥವಾ ಬರುವದರಿಂದ, **ಶುದ್ಧಸೃಷ್ಟಿ** ಎಂಬವಾಗಿ, **ಪೇರ್ ಪೆತ್ತಿರುಕ್ಕುಮ್**-ಹೆಸರನ್ನು ಹೊಂದಿರುತ್ತವೆ. ಪರಬ್ರಹ್ಮ ದಿವ್ಯಾತ್ಮ ಸ್ವರೂಪದ್ರವ್ಯವೂ ಮತ್ತು ಅವತಾರ ರೂಪಗಳ ದ್ರವ್ಯವೂ ಒಂದೇ ಭಿನ್ನವಾದವೇ ಎಂಬ ಚರ್ಚೆಯಲ್ಲಿ ಎರಡೂ ಒಂದೇ ಎಂದು ಹೇಳಿದುದಾದರೆ, ದಿವ್ಯಾತ್ಮ ಸ್ವರೂಪಕ್ಕೂ ಅವತಾರ ರೂಪಗಳ ಹಾಗೆ ಪರಿಣಾಮಗಳನ್ನು ಹೇಳಬೇಕಾಗಿ ಬಂದು ನಿರ್ವಿಕಾರ ಶ್ರುತಿಗಳಿಗೆ ವಿರೋಧವುಂಟಾಗುತ್ತದೆ. ಭಿನ್ನದ್ರವ್ಯವೆಂದರೆ, ಶ್ರೀ ಲಕ್ಷ್ಮೀತಂತ್ರಾದಿಗಳಲ್ಲಿ ಈ ಅವತಾರರೂಪಗಳನ್ನು ಹೊಂದುವದನ್ನು ಶುದ್ಧಸೃಷ್ಟಿಯೆಂದು ಹೇಳುವ ವಚನಕ್ಕೆ ವಿರುದ್ಧವಾದುದಾಗುವದು. ಶುದ್ಧವಾದ ದಿವ್ಯಾತ್ಮಸ್ವರೂಪವೇ ನಾನಾವಿಧ ವಿಗ್ರಹ ರೂಪವಾದ ಸೃಷ್ಟಿಯನ್ನು ಹೊಂದುತ್ತದೆಂದು ಹೇಳಿದರೆ, ಆಗೀಗ ಇದನ್ನು **ಶುದ್ಧಸೃಷ್ಟಿ** ಎಂದು ಹೇಳಬಹುದು. ಆದುದರಿಂದ ದಿವ್ಯಾವತಾರ ದಿವ್ಯಮಜ್ಗಳ ವಿಗ್ರಹಗಳೆಲ್ಲಾ ಶುದ್ಧಸತ್ವರೂಪವಾದುದೆಂದು ಇಲ್ಲಿ ಹೇಳಿರುತ್ತಾರೆ. ಚತುರ್ಮುಖ ನೊದಲಾದ ಲೀಲಾವಿಭೂತಿಗೆ ಸೇರಿದ ಸರ್ವಸೃಷ್ಟಿಯೂ, **"ಆವಿರಂಚಾದನುಜ್ಗಳಮ್"** ಎಂದರೆ ಚತುರ್ಮುಖಬ್ರಹ್ಮನ

ಜ್ಞಗಳೆಲ್ಲಾಮ್ ಸತ್ಯಜ್ಞಗಳೆನ್ನುವಮ್, ಇವಗಳಲ್ ಈಶ್ವರನುಕ್ಕು ಜ್ಞಾನಾದಿ ಸಜಾತ್ಯೋಚಮಿಲ್ಲೈ ಯೆನ್ನುವಮ್, ಈ ವಿಗ್ರಹಜ್ಞಗಳ್ ಶುದ್ಧಸತ್ವಮಯ ಜ್ಞಗಳೆನ್ನುವಮ್, ಇವಗಳುಕ್ಕು ಈಶ್ವರೇಚ್ಛಾ ಮಾತ್ರಮೇ ಕಾರಣಮೆನ್ನುವಮ್, ಧರ್ಮರಕ್ಷಣಂಪಣ್ಣ ವೇಣ್ಡುವಮ್ ಕಾಲಮೇ ಕಾಲಮೆನ್ನುವಮ್, ಸಾಧುಪರಿತ್ರಾಣಾದಿಗಳೇ ಪ್ರಯೋಜನಜ್ಞಗಳೆನ್ನುವಮ್, ಇವ್ವರ್ಥಂ ತೆಳಿನ್ದು

ಮೊದಲುಗೊಂಡು ಸಕಲ ಲೀಲಾ ವಿಭೂತಿಯ ಸೃಷ್ಟಿಯೂ ಅಮಜ್ಞಳವಾದುದೆಂದು ಶ್ರೀಭಾಗವತದಲ್ಲಿ ಹೇಳಿರುವ ಹಾಗೆ **ಅಶುದ್ಧಸೃಷ್ಟಿಯು**. ಇಲ್ಲಿ ಹೇಯಭಾವ ಸೂಕತ್ವವಿರುವದರಿಂದ **ಅಶುದ್ಧಸೃಷ್ಟಿ** ಎಂಬ ಹೆಸರನ್ನು ಹೊಂದಿರುತ್ತದೆ. ಅಶುದ್ಧಭಾವವು ತ್ರಿಗುಣದ್ರವ್ಯಾತ್ಮಕವಾದ ಪ್ರಕೃತಿಸಂಬಂಧಮೂಲಕವಾದುದು. ಅಂತಹ ಅಶುದ್ಧಸೃಷ್ಟಿಯನ್ನು ಸರ್ವೇಶ್ವರನು ಮಾಡಬಹುದೋ ಎಂದರೆ ಜೀವಾತ್ಮರ ಕರ್ಮಾಧೀನವಾಗಿ ಮಾಡಿರುವದರಿಂದ ಸರ್ವೇಶ್ವರನಲ್ಲಿ ಯಾವ ದೋಷವೂ ಇಲ್ಲವು. ಆದರೆ ಈ ರೂಪವೂ ಕೂಡ ಪರಿಣಾಮಾದಿಗಳಿಗೆ ವಶವಾಗಿರುವದರಿಂದಲೇ ಇದಕ್ಕೆ **ಸೃಷ್ಟಿ** ಎಂಬ ಹೆಸರು. ಆದರೆ ಲೀಲಾವಿಭೂತಿಯಲ್ಲವತರಿಸಿರುವಾಗ, ಪ್ರಕೃತಿಸಂಬಂಧ, ಕರ್ಮತತ್ಫಲಾದಿಗಳಲ್ಲಿ ಅನ್ವಯಗಳಿಲ್ಲವೋ? ರಾಮಕೃಷ್ಣಾದ್ಯವತಾರಗಳಲ್ಲಿ ಸುಖದುಃಖಾನುಭವಗಳನ್ನು ಹೇಳಿದೆಯಲ್ಲಾ? ಎಂದರೆ ಕರ್ಮತತ್ಫಲಾದಿಗಳೊಂದೂ ಇಲ್ಲವೆಂದೂ, ಸುಖದುಃಖಾನುಭವಗಳು ಕೇವಲ ವಿಡಂಬನವೆಂದೂ, **"ವಿಧಿರ್ನೂನಮಸಂಹಾರ್ಯಃ ಪ್ರಾಣಿನಾಂ ಪ್ಲವಗೋತ್ತಮ। ಸೌಮಿತ್ರಿಂ ಮಾಂಚ ರಾಮಂಚ ವ್ಯಸನೈಃ ಪಶ್ಯಮೋಹಿತಾ"** (ರಾಮಾ. ಸುಂದ.) ಇತ್ಯಾದಿ ವ್ಯಾಕಗಳೆಲ್ಲಾ ಲೋಕನಟನೆಗೋಸ್ಕರ ಆಡಿದ ಮಾತೇ ವಿನಾ ಬೇರೆಯಲ್ಲವು. ಆದುದರಿಂದ **ಕರ್ಮತತ್ಫಲಜ್ಞಗಳೋಡು ತುವಕ್ಕರ** ಎಂದು ಪ್ರಯೋಗಿಸಿರುತ್ತಾರೆ.

ಇವ್ವವತಾರಜ್ಞಗಳೆಲ್ಲಾಮ್ ಸತ್ಯಜ್ಞಗಳೆನ್ನುವಮ್– ಈ ಅವತಾರಗಳೆಲ್ಲಾ ಏನ್ದ್ರಜಾಲಿಕದ ಹಾಗೆ ಮಿಥ್ಯೆಯಲ್ಲವೆ, ಸತ್ಯವಾದುವೆಂದೂ, **ಇವಗಳಿಲ್** – ಈ ಅವತಾರಗಳಲ್ಲಿ, **ಈಶ್ವರನುಕ್ಕು ಜ್ಞಾನಸಜಾತ್ಯೋಚಮಿಲ್ಲೈ ಎನ್ನುವಮ್** – ಈಶ್ವರನಿಗೆ ಸ್ವಲ್ಪವೂ ಜ್ಞಾನಸಜಾತ್ಯೋಚವೇ ಇಲ್ಲವೆ, ಸರ್ವಜ್ಞನಾಗಿಯೇ ಇರುವನೆಂದೂ. **ಇವ್ವಿಗ್ರಹಜ್ಞಗಳ್** – ಈ ಅವತಾರಗಳಲ್ಲಿ ಧರಿಸುವ ಸರ್ವೇಶ್ವರನ ಶರೀರಗಳು, **ಶುದ್ಧಸತ್ವರೂಪವಾದವುಗಳೆಂದೂ**, **ಇವತ್ತಿರ್ಕ್ಕು** – ಹೀಗೆ ಅವತಾರ ಶರೀರಗಳನ್ನು ಧರಿಸುವದಕ್ಕೆ **ಈಶ್ವರೇಚ್ಛಾಮಾತ್ರಮೇ ಕಾರಣಮೆನ್ನುವಮ್**–ಸರ್ವೇಶ್ವರನ ಸ್ವಸಂಕಲ್ಪವೇ ಕಾರಣವೆಂದೂ, **ಧರ್ಮರಕ್ಷಣಂ ಪಣ್ಣವೇಣ್ಡುವಮ್ ಕಾಲಮೇ ಕಾಲಮೆನ್ನುವಮ್**–ಧರ್ಮರಕ್ಷಣೆಯನ್ನು ಮಾಡಬೇಕಾದ ಕಾಲವೇ ಕಾಲವೆಂದೂ,

ಅನುಸನ್ಧಿಪ್ಪಾರ್ಕ್ಕು ಸ್ವಾಧಿಕಾರಾನುಗುಣಸಮಾಹಿತೋಪಾಯಪೂರ್ತ್ತಿಯಾಲೆ, ಜನ್ಮಾನ್ತರ ಮನುಭವಿಯಾದೇ ಮುಕ್ತರಾಗಲಾಮ್ ಎನ್ರುಮ್ "ಬಹೂನಿಮೇ ವ್ಯತೀತಾನಿ" ಎನ್ರು ತುಡಙ್ಗಿ ಅಞ್ಜು ಶ್ಲೋಕತ್ತಾಲೆ ಗೀತಾಚಾರ್ಯ್ಯ ಅರುಳಿಚ್ಚೆಯ್ದಾರ್.

ಸಾಧುಪರಿತ್ರಾಣಾದಿಗಳೇ ಪ್ರಯೋಜನಙ್ಗಳೆನ್ರುಮ್–ಸಾಧುಗಳಾದ ಮಹಾ ಭಾಗವತರೂ ಋಷಿಗಳೂ ಮೊದಲಾದ ಪ್ರಪನ್ನರ ರಕ್ಷಣ ಮೊದಲಾದಿಗಳೇ ಪ್ರಯೋಜನಗಳೆಂದೂ, ಇಲ್ಲಿ ಆದಿಪದದಿಂದ **"ವಿನಾಶಾಯಚ ದುಷ್ಕೃತಾಂ"** ಎಂದು ಹೇಳಿರುವ ಹಾಗೆ ಯಾದೃಚ್ಛಿಕವಾಗಿ ದುಷ್ಟನಿಗ್ರಹಾದಿಗಳು ಹೇಳಲ್ಪಟ್ಟವು. **ಇವ್ವರ್ಥಂ**-ಈಗ ಮೇಲೆ ಹೇಳಿದ ಅವತಾರರಹಸ್ಯಾರ್ಥವನ್ನು, **ತೆಳಿನ್ದು**-ಶಾಸ್ತ್ರಮುಖೇನವೂ ಗುರುಮುಖೇನವೂ ಉಪದೇಶಮೊಂದಿ ಜ್ಞಾನವಾ ಆಗಿ, **ಅನುಸನ್ಧಿಪ್ಪಾರ್ಕ್ಕು**–ಸ್ಮರಣ ಮನನಾದಿಗಳ ಮೂಲಕ ಚಿಂತನಮಾಡುವವರಿಗೆ, **ಸ್ವಾಧಿಕಾರಾನುಗುಣ**-ತನ್ನ ವರ್ಣಾಶ್ರಮಗಳಿಗೆ ಅನುಗುಣವಾಗಿ, **ಸಮಾಹಿತ**-ಆಚರಿಸಲ್ಪಟ್ಟ, **ಉಪಾಯಪೂರ್ತ್ತಿಯಾಲೆ**-ಭಕ್ತಿಪ್ರಪತ್ತಿರೂಪ ಉಪಾಯಗಳನ್ನು ಸಾಂಗವಾಗಿ ಅನುಷ್ಠಿಸುವದರಿಂದ, **ಜನ್ಮಾನ್ತರಮನುಭವಿಯ್ಕಾದೇ** – ಬೇರೆ ಜನ್ಮವನ್ನು ಹೊಂದಿ ಅನುಭವಿಸದೇ, **ಮುಕ್ತರಾಗಲಾಂ** – ಮುಕ್ತರಾಗಬಹುದು, **ಎನ್ರು** – ಎಂದು, **ಬಹೂನಿ ಮೇವ್ಯತೀತಾನಿ" ಎನ್ರುತುಡಙ್ಗಿ** – ಎಂದು ಪ್ರಾರಂಭಿಸಿ, **ಅಞ್ಜು ಶ್ಲೋಕತ್ತಾಲೆ**–ಐದು ಶ್ಲೋಕಗಳಿಂದ **ಗೀತಾಚಾರ್ಯ್ಯ** – ಭಗವದ್ಗೀತಾ ಉಪದೇಶಕನಾದ ಶ್ರೀಕೃಷ್ಣನು, **ಅರುಳಚ್ಚೆಯ್ದಾರ್** – ಕೃಪೆಮಾಡಿ ಉಪದೇಶಿಸಿದನು.

ಈ ವಾಕ್ಯದಿಂದ ಅವತಾರ ರಹಸ್ಯ ವಿಷಯವೆಲ್ಲಾ ಸೂಕ್ಷ್ಮವಾಗಿ ಸಙ್ಗ್ರಹಿಸಲ್ಪಟ್ಟಿತು. ಗೀತೆಯಲ್ಲಿ ಈ ವಿಷಯವೇ **"ಬಹೂನಿಮೇವ್ಯತೀತ ನಿ"** (ಗೀತಾ, 4-5-9) ಎಂದು ಆರಂಭಿಸಿ ಐದು ಶ್ಲೋಕಗಳ ಮೂಲಕ ಉಪಪಾದಿಸಲ್ಪಟ್ಟಿರುತ್ತದೆ. ಈ ಅವತಾರಗಳೆಲ್ಲಾ ಮಿಥ್ಯೆಯಲ್ಲದೆ ಸತ್ಯವಾದವೆಂದೂ, ಈ ಕರ್ಮಭೂಮಿಯಲ್ಲಿ ಸರ್ವೇಶ್ವರನು ಜನಿಸಿದರೂ, ನಮ್ಮಗಳ ಹಾಗೆ ಕರ್ಮವಶ್ಯನಲ್ಲದುದರಿಂದ ಅತನಿಗೆ ಜ್ಞಾನಸಙ್ಕೋಚವಿಲ್ಲದೇ,ಎಗಲೂ ಸರ್ವಜ್ಞತೆಯುಳ್ಳವನೆಂದೂ,ಅವತಾರಕಾಲಗಳಲ್ಲಿನ ದಿವ್ಯಮಙ್ಗಳ ವಿಗ್ರಹಗಳು ಪ್ರಕೃತಿಸಂಬಂಧವಿಲ್ಲದೆ ಶುದ್ಧ **ಸತ್ವ**ರೂಪವಾದವುಗಳೆಂದೂ, ಹಾಗೆ ಅವತರಿಸುವದಕ್ಕೆ ಅತನ ಸಙ್ಕಲ್ಪವೇ ಕಾರಣವೆಂದೂ, ನಮ್ಮ ಹಾಗೆ ಕರ್ಮಗಳು ಕಾರಣವಲ್ಲವೆಂದೂ, ಧರ್ಮವನ್ನು ಕಾಪಾಡತಕ್ಕ ಕಾಲವೇ ಅವತಾರ ಕಾಲವೆಂದೂ, ಈ ಅವತಾರಗಳಿಗೆ ಸಾಧುಪರಿತ್ರಾಣವೇ ಮೊದಲಾದಿಗಳೇ ಪ್ರಯೋಜನವೆಂದೂ ಹೇಳಲ್ಪಟ್ಟು, ಹೀಗೆ ಈ ಅವತಾರ ರಹಸ್ಯಗಳನ್ನನುಸಂಧಾನಮಾಡುವವ

ನಿಗೆ ಅವರವರ ಅಧಿಕಾರಾನುಗುಣವಾಗಿ ಭಕ್ತಿಮಾರ್ಗದಲ್ಲಾಗಲಿ ಪ್ರಪತ್ತಿಮಾರ್ಗದಲ್ಲಾಗಲಿ ಪ್ರವೃತ್ತಿಯುಂಟಾಗಿ, ಅದು ಪೂರ್ಣತೆಯನ್ನು ಹೊಂದಿ ಪುನರ್ಜನ್ಮವಿಲ್ಲದೆ ಮುಕ್ತಿಹೊಂದುವರೆಂಬುವದು ಈ ವಾಕ್ಯದ ತಾತ್ಪರ್ಯವು.

ಅವತಾರ ರಹಸ್ಯಗಳನ್ನು ಪಪಾದಿಸಿರುವ ಗೀತೆಯ ಐದು ಶ್ಲೋಕಗಳು ಯಾವುವೆಂದರೆ:—

೧. ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವ ಚಾರ್ಜುನ।
ತಾನ್ಯಹಂ ವೇದ ಸರ್ವಾಣಿ ನತ್ವಂ ವೇತ್ಥ ಪರಂತಪ॥

ಓ ಶತ್ರುಗಳಿಗೆ ತಾಪವನ್ನುಂಟುಮಾಡುವ ಅರ್ಜುನನೇ, ನಿನಗೆ ಅನೇಕ ಜನ್ಮಗಳು ಕಳೆದು ಹೋಗಿರುವ ಹಾಗೆ, ನನಗೂ ಅನೇಕ ಜನ್ಮಗಳು ಕಳೆದು ಹೋದವು. ಜೀವಾತ್ಮನ ಜನ್ಮಗಳು ಹೇಗೆ ಸತ್ಯವೋ, ನನ್ನ ಜನ್ಮಗಳೂ ಹಾಗೆಯೇ ಸತ್ಯವಾದವು. **ತಾನ್ಯಹಂ ವೇದ ಸರ್ವಾಣಿ** – ಆ ಎಲ್ಲಾ ನನ್ನ ಜನ್ಮಗಳನ್ನೂ ನಾನು ತಿಳಿದಿರುವೆನು. **ತಾನಿ** ಎಂಬುವದು ಇಬ್ಬರ ಜನ್ಮಗಳಿಗೂ ಅನ್ವಯಿಸಿ, ನಿನ್ನ ಜನ್ಮಗಳನ್ನೂ ಕೂಡ ನಾನು ತಿಳಿದಿರುವೆನು; **ನತ್ವಂ ವೇತ್ಥ** – ನೀನು ನಿನ್ನದನ್ನೇ ತಿಳಿಯಲಾರೆ, ನನ್ನ ಜನ್ಮಗಳನ್ನು ಹೇಗೆ ತಿಳಿಯುವೆ. ಇದು ಏಕೆಂದರೆ ನಾನು ಸರ್ವಜ್ಞನು, ಆ ಅವತಾರಾವಸ್ಥೆಯಲ್ಲೂ ಸರ್ವಜ್ಞನೇ, ನೀನಾದರೋ ಪ್ರಕೃತಿಸಂಬಂಧದಿಂದ ಜ್ಞಾನಸಙ್ಕೋಚವುಳ್ಳವನು.

೨. ಅಜೋಪಿಸನ್ನವ್ಯಯಾತ್ಮಾ ಭೂತಾನಾಮೀಶ್ವರೋಪಿಸನ್।
ಪ್ರಕೃತಿಂ ಸ್ವಾಮಧಿಷ್ಠಾಯ ಸಮ್ಭವಾಮ್ಯಾತ್ಮಮಾಯಯಾ ॥

ಅಜೋಪಿಸನ್ – ಉತ್ಪತ್ತಿರಹಿತನಾಗಿದ್ದರೂ, **ಅವ್ಯಯಾತ್ಮಾಪಿಸನ್**– ನಾಶರಹಿತನಾಗಿದ್ದರೂ, **ಭೂತಾನಾಮೀಶ್ವರೋಪಿ ಸನ್** – ಸರ್ವ ಭೂತಗಳಿಗೂ ಸ್ವಾಮಿಯಾಗಿದ್ದರೂ, **ಆತ್ಮಮಾಯಯಾ**– ಸ್ವಸಙ್ಕಲ್ಪದಿಂದಲೇ, ಇಲ್ಲಿ ಮಾಯಾಶಬ್ದವು ಸಙ್ಕಲ್ಪಪರವಾದುದು, **ಪ್ರಕೃತಿಂ ಸ್ವಾಮಧಿಷ್ಠಾಯ** – ನನ್ನ ಸ್ವಂತ ಸ್ವಭಾವದಿಂದ ಕೂಡಿದವನಾಗಿ, **ಸಂಭವಾಮಿ**–ಅವತರಿಸುವೆನು. ಇಲ್ಲಿ **ಆತ್ಮಮಾಯಯಾ** ಎಂದು ಹೇಳಿರುವದರಿಂದ ಅವತಾರಗಳಿಗೆ ಈಶ್ವರೇಚ್ಛೆಯೇ ಕಾರಣವೆಂದುಪದೇಶಿಸಲ್ಪಟ್ಟಿತು; ನಮಗಿರುವ ಹಾಗೆ ಕರ್ಮವು ಕಾರಣವಲ್ಲವೆಂಬ ಭಾವವು. **ಪ್ರಕೃತಿಂ ಸ್ವಾಂ ಅಧಿಷ್ಠಾಯ** – ಎಂದು ಹೇಳಿರುವದರಿಂದ, ಹೇಯಪ್ರತ್ಯನೀಕತ್ವ, ಕಲ್ಯಾಣಗುಣಾಕರತ್ವಾದಿ ಸ್ವಭಾವಗಳೂ ಹಾಗೆಯೇ ತನ್ನ ದಿವ್ಯ ಮಙ್ಗಳ ವಿಗ್ರಹದ ಅಪ್ರಾಕೃತ ಶುದ್ಧ ಸತ್ವಮಯ ಭಾವವೂ ಹೇಳಲ್ಪಟ್ಟಿತು.

೩. **ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ।**
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ॥

ಈ ಶ್ಲೋಕದಿಂದ ಭಗವದವತಾರಕಾಲವು ಉಪದೇಶಿಸಲ್ಪಡುತ್ತದೆ:— **ಯದಾಯದಾಹಿ** – ಯಾವಾಗ ಯಾವಾಗಲಾದರೆ, **ಧರ್ಮಸ್ಯ ಗ್ಲಾನಿರ್ಭವತಿ** – ಧರ್ಮಕ್ಕೆ ನ್ಯೂನತೆಯುಂಟಾಗುತ್ತದೋ, ಧರ್ಮಹಾನಿಯಾಗುತ್ತದೋ, ಮತ್ತು **ಅಧರ್ಮಸ್ಯ ಅಭ್ಯುತ್ಥಾನಂ ಭವತಿ** – ಅಧರ್ಮಕ್ಕೆ ಅಭಿವೃದ್ಧಿಯುಂಟಾಗುತ್ತದೋ, **ತದಾತದಾ** – ಆಗಆಗೆಲ್ಲಾ ಅವತಾರಮಾಡುವೆನು. ಆದುದರಿಂದಲೇ **"ಧರ್ಮರಕ್ಷಣಂ ಪಣ್ಣವೇಣ್ದುಮ್ ಕಾಲಮೇ ಕಾಲಮ್"** ಎಂದು ಮೂಲದಲ್ಲಿ ಹೇಳಲ್ಪಟ್ಟಿತು.

೪. **ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಂ।**
ಧರ್ಮಸಂಸ್ಥಾಪನಾರ್ಥಾಯ ಸಮ್ಭವಾಮಿ ಯುಗೇ ಯುಗೇ॥

ಪರಿತ್ರಾಣಾಯ ಸಾಧೂನಾಂ – ಸಾಧುಸಜ್ಜನರನ್ನು ದುಷ್ಟರ ಬಾಧೆಯಿಂದ ರಕ್ಷಿಸುವದಕ್ಕಾಗಿಯೂ, **ವಿನಾಶಾಯಚ ದುಷ್ಕೃತಾಂ** – ದುಷ್ಟರನ್ನು ನಾಶಮಾಡುವದಕ್ಕಾಗಿಯೂ, ಧರ್ಮಸ್ಥಾಪನೆಗಾಗಿಯೂ, ಪ್ರತಿಯುಗದಲ್ಲೂ ಅವತರಿಸುವೆನು. ಇಲ್ಲಿ ಸಾಧುಪರಿತ್ರಾಣವು ಪ್ರಥಮತಃ ಬೋಧಿತವಾಗಿರುವದರಿಂದ ಅದೇ ಮುಖ್ಯೋದ್ದೇಶ್ಯವು. ಇದೇ ಅವತಾರದ ಮುಖ್ಯ ಪ್ರಯೋಜನವೆಂದು ಸೂಚಿಸುವದಕ್ಕಾಗಿಯೇ **"ಸಾಧು ಪರಿತ್ರಾಣಾದಿಗಳೇ ಪ್ರಯೋಜನಙ್ಗಳೆನ್ರುಮ್"** ಎಂದು ಮೇಲೆ ಹೇಳಿರುತ್ತದೆ. ಇಲ್ಲಿ ಆದಿಪದದಿಂದ ತೋರಿಬರುವ ನಿಕ್ಕೆರಡಾದ ದುಷ್ಟನಿಗ್ರಹ, ಧರ್ಮಸಂಸ್ಥಾಪನೆಗಳು ಯಾವೃಚ್ಛಿಕವಾಗಿ ನಡೆಯುತ್ತವೆ ಎಂದು ತಿಳಿಯತಕ್ಕದ್ದು.

೯. **ಜನ್ಮ ಕರ್ಮಚ ಮೇ ದಿವ್ಯ ಮೇವಂ ಯೋ ವೇತ್ತಿ ತತ್ವತಃ।**
ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ ಮಾಮೇತಿ ಸೋಽರ್ಜುನ॥

ಯಾವನಾದರೆ ನನ್ನ **ಜನ್ಮಕರ್ಮಚ** – ಅವತಾರವನ್ನೂ ಚೇಷ್ಟಿತಗಳನ್ನೂ ಅಪ್ರಾಕೃತವಾದುದೆಂದೂ, ಅಮೋಘವಾದುದೆಂದೂ, ಹೀಗೆ ಯಥಾರ್ಥವಾಗಿ ತಿಳಿಯುವನೋ, ಅವನು, **ತ್ಯಕ್ತ್ವಾ ದೇಹಂ**–ಈ ಪ್ರಾಕೃತದೇಹವನ್ನು ಬಿಟ್ಟು ಎಂದರೆ ಬೇರೆ ಅಪ್ರಾಕೃತವಾದ ದಿವ್ಯಮಙ್ಗಳವಿಗ್ರಹವನ್ನು ಧರಿಸಿ ಎಂಬಭಿಪ್ರಾಯವು, **ಪುನರ್ಜನ್ಮನೈತಿ**– ಪುನಃ ಜನ್ಮವನ್ನು ಹೊಂದುವದಿಲ್ಲವು, **ಮಾಮೇತಿ**– ಉಪಾಯಾನುಷ್ಠಾನವನ್ನು ಮಾಡಿ ನನ್ನನ್ನು ಹೊಂದುವನು. ಈ ಶ್ಲೋಕಾಭಿಪ್ರಾಯವನ್ನೇ, **"ಇವ್ವರ್ಥಂ ತೆಳಿನ್ದು ಅನುಸನ್ಧಿಪ್ಪಾರ್ಕ್ಕು ಏಕಜನ್ಮತ್ತಿಲೇ ಸ್ವಾಧಿಕಾ**

ರಾನುಗುಣಸಮೀಹಿತೋಪಾಯ ಪೂರ್ತಿಯಿಲೆ ಜನ್ಮಾನ್ತರಮನುಭವಿಯಾದೆ ಮುಕ್ತರಾಗಲಾಂ" ಎಂಬವಾಗಿ ಉಪಪಾದಿಸುತ್ತಾರೆ, ಇಲ್ಲಿ **ಸ್ವಾಧಿಕಾರಾನುಗುಣ**ವೆಂದು ಹೇಳಿರುವದರಿಂದ ಶಕ್ತನಿಗೆ ಉಪಾಸನೆಯೂ, ಅಶಕ್ತನಿಗೆ ಪ್ರಪತ್ತಿಯೂ ವಿಧಿಸಲ್ಪಟ್ಟಿತೆಂದು ಭಾವಿಸತಕ್ಕದ್ದು. ಸರ್ವೇಶ್ವರನಾದ ಶ್ರೀಕೃಷ್ಣನು ಅರ್ಜುನನಿಗೆ ಪ್ರಥಮತಃ ಉಪಾಸನಾರೂಪವಾದ ಭಕ್ತಿಮಾರ್ಗವನ್ನುಪದೇಶಿಸಿದನು. ಅದಕ್ಕೆ ತಾನು ಅಶಕ್ತನೆಂದು ಭಾವಿಸಿ ಶೋಕಿಸಲು, ಕರುಣಾಲವಾಲನು "**ಸರ್ವಧರ್ಮಾ**" ಎಂಬ ಶ್ಲೋಕದ ಮೂಲಕ ಪ್ರಪತ್ತಿಮಾರ್ಗವನ್ನು ಜೋಧಿಸಿದನು. ಆದುದರಿಂದಲೇ **ಅಧಿಕಾರಾನುಗುಣವಾಗಿ** ಎಂಬ ಪ್ರಯೋಗವು. ಇಲ್ಲಿ ಭಕ್ತಿಮಾರ್ಗದಿಂದ ಯೋಗಾನುಷ್ಠಾನವು ಎಲ್ಲಿ ಹೇಳಿರುತ್ತದೆ ಎಂದರೆ, "**ಯೋ ಮೇತ್ತಿ ತತ್ವತಃ**" ಎಂಬುವದರಿಂದಲೇ ಸೂಚಿತವಾಗಿರುತ್ತದೆ. **ಮೇತ್ತಿ** ಎಂಬ ಕ್ರಿಯಾಪದದಲ್ಲಿ ತೋರುವ ವೇದನವು ಉಪಾಸನದ್ವಾರ ಪರಬ್ರಹ್ಮಸಾಕ್ಷಾತ್ಕಾರವನ್ನು ಜೋಧಿಸುತ್ತದೆ. ಹೀಗೆ ಈ ಐದು ಶ್ಲೋಕಗಳೂ ಅವತಾರ ರಹಸ್ಯವನ್ನು ಜೋಧಿಸುತ್ತವೆಯೆಂಬ ಭಾವವು.

ಈಗ ಹೇಳಲ್ಪಟ್ಟಿದುದೇನೆಂದರೆ:—

1. ಸರ್ವೇಶ್ವರನ ಅವತಾರಗಳು ಸತ್ಯವಾದವು, ಮಿಥ್ಯೆಯಲ್ಲವು. ರಜ್ಜು ಸರ್ಪರೂಪವಾದ ಮಿಥ್ಯೆಗೂ ಕೂಡ ಒಂದು ರಜ್ಜುರೂಪ ಅಧಿಷ್ಠಾನವು ಆವಶ್ಯಕವಾದುದರಿಂದ ಮಿಥ್ಯೆಯಾಗುವುದಿಲ್ಲ. ಸ್ವಾಮಿಯ ಅವತಾರವೆಂಬದಾಗಿ ಎಲ್ಲರಿಗೂ ಗೋಚರವಾಗುವದಿಲ್ಲವು. ಅನೇಕರು ಜ್ಞಾನ ಸಙ್ಕೋಚವುಳ್ಳವರಾದುದರಿಂದಲೇ "**ಅವಜಾನಂತಿ ಮಾಂ ಮೂಢಾಃ ಮಾನುಷೀಂ ತನುಮಾಶ್ರಿತಂ**" (ಗೀ. ೨. ೧೧.) ಎಂದು ಹೇಳಿರುವದರಿಂದ ಮಾನುಷಾವತಾರಿಯಾದ ತನ್ನನ್ನು ಮನುಷ್ಯನೆಂದೇ ಭಾವಿಸುವರು. ಇದನ್ನು ಶುಕಮಹರ್ಷಿಯು ಭಾಗವತದಲ್ಲಿ ಉಪಪಾದಿಸಿರುತ್ತಾರೆ.—

ನುಲ್ಲಾನಾನುಶನಿರ್ನೃಣಾಂ ನರವರಸ್ತ್ರೀಣಾಂ ಸ್ಮರೋ ಮೂರ್ತಿಮಾ। ನ್ಗೋಪಾನಾಂ ಸ್ವಜನೋಽಸತಾಂ ಕ್ಷಿತಿಭುಜಾಂ ಶಾಸ್ತಾ ಸ್ವಪಿತ್ರೋಃ ಶಿಶುಃ ॥ ಮೃತ್ಯುರ್ಭೋಜಪತೇ ರ್ವಿರಾಡವಿದುಷಾಂ ತತ್ವಂಪರಂ ಯೋಗಿನಾಂ। ವೃಷ್ಣೀನಾಂ ಪರದೇವತೇತಿ ವಿದಿತೋ ರಙ್ಗಂಗತ ಸ್ಸಾಗ್ರಜಃ ॥

ಶ್ರೀಕೃಷ್ಣನು ತನ್ನ ಅಣ್ಣನಾದ ಬಲರಾಮನೊಂದಿಗೆ ಕಂಸನ ಆಸ್ಥಾನದ ಮುಂದೆ ನಡೆಯುತ್ತಿದ್ದ ಮಲ್ಲಯುದ್ಧರಂಗಸ್ಥಳಕ್ಕೆ ಘನುಕಿಪವನ್ನು ಕಂಡು, ಈ ಮೂರ್ತಿಯು ತಿಳಿದ ಸೆಲೆವಿನ ಜ್ಞಾನಸಙ್ಕೋಚ ವಿಕಾಸಾನುಗುಣವಾಗಿ ಪ್ರಕಾಶಿ

ಸಿತು ಹೇಗೆಂದರೆ:—"ಮಲ್ಲರಿಗೆ ವಜ್ರಾಯುಧನಾಗಿಯೂ, ಇತರ ಜನಗಳಿಗೆ ನರ ಶ್ರೇಷ್ಠನಾಗಿಯೂ, ಸ್ತ್ರೀಗಳಿಗೆ ಮೂರ್ತಿಮತ್ತಾದ ಮನ್ಮಥನಾಗಿಯೂ, ಗೋಪರಿಗೆ ಸ್ವಜನನಾಗಿಯೂ, ದುಷ್ಟರಾಜರಿಗೆ ಶಿಕ್ಷಕನಾಗಿಯೂ, ತನ್ನ ತಾಯಿತಂದೆಗಳಿಗೆ ಮಗನಾಗಿಯೂ, ಕಂಸನಿಗೆ ಮೃತ್ಯುರೂಪನಾಗಿಯೂ, ಅಕಾರವಾಚ್ಯನಾದ ಶ್ರೀ ಮಹಾವಿಷ್ಣುವಿನ ಮಹತ್ತನ್ನು ತಿಳಿದವರಿಗೆ ವಿರಾಟ್ಪುರುಷನಾಗಿಯೂ, ಉಪಾಸಕರಿಗೆ ಶ್ರೇಷ್ಠ ಧ್ಯೇಯವಸ್ತುವಾಗಿಯೂ, ವೃಷ್ಣಿಗಳಿಗೆ ಪರದೇವತೆಯಾಗಿಯೂ ಕಾಣಿಸಿಕೊಂಡನು" ಎಂದು ಹೇಳಿರುವ ರೀತಿಯಲ್ಲಿ ತೋರಿಸಿಕೊಳ್ಳುವನು. ಆದರೂ ಅವತಾರ ಸತ್ಯತೆಗೇನೂ ಇದು ವಿರೋಧವಲ್ಲವು. ಇನ್ನು ಮಿಥ್ಯಾ ಎಂದರೆ ಶೂನ್ಯವೆಂಬ ಭಾವವಾದರೆ ಅದು ಸುತರಾಂ ಕೂಡದು. ದ್ರವ್ಯವು ಅವಿನಾಶಿಯಾದುದರಿಂದ ಅದಕ್ಕೆ ಅಂತಹ ಮಿಥ್ಯಾತ್ವವಿಲ್ಲವು.

೨. ಅತನ ದೇಹವು ಶುದ್ಧ ಸತ್ವಮಯವಾದುದು. ಮಾನುಷ ಯೋನಿಯಲ್ಲಿ ಜನಿಸಿದ್ದರೂ, ತನ್ನ ನೈಜ ಸ್ವಭಾವವನ್ನು ಬಿಡದಿರುವದರಿಂದ ಅಪ್ರಾಕೃತವಾದ ದ್ರವ್ಯವಾಗಿರುತ್ತದೆ. ಆದರೆ ಶುದ್ಧಸತ್ವವು ಸ್ವಯಂ ಪ್ರಕಾಶವಾದುದು. ಹಾಗೆ ಏಕೆ ತೋರುವದಿಲ್ಲವೆಂದರೆ, ನಮ್ಮ ಕರ್ಮ ಪ್ರತಿಬಂಧಕದಿಂದ ಹಾಗೆ ತೋರುವದಿಲ್ಲವೆಂದು ಅರಿಯುತಕ್ಕದ್ದು. ಆದರೆ ಜ್ಞಾನಸಜ್ಜೋಚವಿಲ್ಲದ ಮಹನೀಯರಿಗೆ ಆ ದಿವ್ಯಮಙ್ಗಳವಿಗ್ರಹವು ತೇಜೋಮಯವಾಗಿಯೇ ಪ್ರಕಾಶಿಸುತ್ತದೆ. ವಿದುರ ಉದ್ಧವಾದಿಗಳಿಗೂ, ಲಕ್ಷ್ಮಣನಿಗೂ ಸಹ ಶ್ರೀರಾಮಕೃಷ್ಣರು ಪರತತ್ವವಾಗಿಯೇ ಪ್ರಕಾಶಿಸಿದರು.

ಅಹಂ ತಾವನ್ಮಹಾರಾಜೇ ಪಿತೃತ್ವಂ ನೋಪಲಕ್ಷಯೇ ।
ಭ್ರಾತಾ ಭರ್ತಾಚ ಬಂಧುಶ್ಚ ಪಿತಾಚ ಮಮ ರಾಘವಃ ॥

"ನಮ್ಮ ತಂದೆಯಾದ ದಶರಥ ಮಹಾರಾಜರಲ್ಲಿ ಪಿತೃಭಾವವನ್ನು ನಾನು ಕಾಣಲಿಲ್ಲವು. ಅಣ್ಣನೂ ರಕ್ಷಕನೂ ತಂದೆಯೂ ಸರ್ವ ವಿಧ ಬಂಧುವೂ ಸಹ ನನಗೆ ಶ್ರೀರಾಮನೇ" ಎಂಬ ಮತ್ತು

ನದೇವ ಲೋಕಾಕ್ರಮಣಂ ನಾಮರತ್ವಮಹಂ ವೃಣೇ ।
ಐಶ್ವರ್ಯಂ ವಾಪಿ ಲೋಕಾನಾಂ ಕಾಮಯೇ ನ ತ್ವಯಾ ವಿನಾ॥

"ಓ ಶ್ರೀರಾಮನೇ ನಿನ್ನನ್ನು ಬಿಟ್ಟು ನನಗೆ ಸ್ವರ್ಗಲೋಕಾದ್ಯುಪಭೋಗವಾಗಲಿ, ಸರ್ವಲೋಕಗಳ ಐಶ್ವರ್ಯವನ್ನಾಗಲಿ ನಾನು ಅಪೇಕ್ಷಿಸುವದಿಲ್ಲ" ಎಂಬಿವೇ ಮೊದಲಾದ ಶ್ರೀರಾಮನಂ ಕುರಿತ ಲಕ್ಷ್ಮಣೋಕ್ತಿಯೂ.

"ದಿಷ್ಟ್ಯಾ ಜನಾರ್ದನ ಭವಾನಿಹನಃ ಪ್ರತೀತೋ ಯೋಗೇಶ್ವರೈರಪಿ ದುರಾಪಗತಿಸ್ಸುರೇಶೈಃ। ಛಿನ್ಧ್ಯಾಶು ನ ಸ್ಸ್ನತ ಕಳತ್ರಧನಾಪ್ತ ಗೇಹದೇಹಾದಿ ಮೋಹರಶನಾಂ ಭವದೀಯ ಮಾಯಾಂ"

(ಭಾಗ, 10. 48. 28.)

ಎಂದರೆ "ಸರ್ವಾಂತರ್ಯಾಮಿಯಾದ ಜನಾರ್ದನನೇ, ಚತುರ್ಮುಖಾದಿಗಳಿಂದಲೂ ಸನಕಾದಿಯೋಗೀಶ್ವರರಿಂದಲೂ, ತಿಳಿಯಲಶಕ್ಯವಾದ ಯಾಥಾತ್ಮ್ಯವುಳ್ಳ ಅಂತಹ ನೀನು, ಈ ಮನುಷ್ಯಲೋಕದಲ್ಲಿ ಕೇವಲ ಅಜ್ಞರಾದ ನಮಗೆ ಚಾಕ್ಷುಷಪ್ರತ್ಯಕ್ಷಕ್ಕೆ ಗೋಚರನಾದವನಾಗಿರುತ್ತೀಯೇ. ನಮ್ಮಗಳ ಸುಕೃತ ನಿಶೇಷವು ಇಂತಹ ಆನಂದವನ್ನು ನಮ್ಮಗಳಿಗ ಉಂಟುಮಾಡಿರುತ್ತದೆ. ನಿನ್ನನ್ನು ನೋಡುವ ಸುಕೃತವೇ ಸಾಲದು, ಮುಂದೆ ಪ್ರಾರ್ಥಿಸುವ ಅಭೀಷ್ಟವನ್ನೂ ಕೊಡತಕ್ಕದ್ದು, ಏನೆಂದರೆ:— ನಿನ್ನ ಮಾಯಾ ಕಾರ್ಯಭೂತವಾದ, ಮಕ್ಕಳು, ಹೆಂಡತಿ, ಧನ, ಬಂಧುವರ್ಗ, ಮನೆ, ದೇಹ ಮೊದಲಾದಿಗಳಲ್ಲಿರುವ ಆಶೆ ಎಂಬ ನಾಲಿಗೆಯನ್ನು ಶೀಘ್ರವಾಗಿ ಕತ್ತರಿಸಿ ಬಿಡು, ಎಂದರೆ ಅವುಗಳಲ್ಲಿ ಅರುಚಿಯನ್ನು ಹೋಗಲಾಡಿಸು, ಇದೀಗ ನನ್ನ ಪ್ರಾರ್ಥನೆಯು" ಎಂಬ ಶ್ರೀಕೃಷ್ಣನನ್ನು ಕುರಿತ ಅಕ್ರೂರೋಕ್ತಿಯೂ, ಸಹ ಇದಕ್ಕೆ ನಿದರ್ಶನವು. ನಮ್ಮ ದೇಹವಾದರೋ ತ್ರಿಗುಣಾತ್ಮಕವಾಗಿ ಹೇಯವಾದುದು. ಅಸೃಕ್, ಮಲ, ಮೂತ್ರನೇ ಮೊದಲಾದವುಗಳ ಸಂಬಂಧವುಳ್ಳದ್ದು, ಸುಖದುಃಖೋಪಭೋಗಗಳಿಗೆ ಅಧೀನವಾದುದು. ಆತನದಾದರೋ ಅಪ್ರಾಕೃತವಾದುದು.

3. ಆತನ ಜನ್ಮವು ಆತನ ಸಙ್ಕಲ್ಪಾಧೀನವು. ನಮ್ಮ ಜನ್ಮವಾದರೋ ನಮ್ಮ ಸಙ್ಕಲ್ಪಾಧೀನವಲ್ಲದೆ ಕರ್ಮಾಧೀನವಾದುದು, ನಿತ್ಯಮುಕ್ತರುಗಳಿಗೆ, ಕರ್ಮ ವಶ್ಯತೆಯಿಲ್ಲದುದರಿಂದ ಜನ್ಮವು ಸ್ವಸಙ್ಕಲ್ಪಾಧೀನವಾದುದು. ಅವರುಗಳ ಅಂಶ ಭೂತರಾದ ಆಳ್ವಾರ್ ಆಚಾರ್ಯರುಗಳ ಜನ್ಮವೂ ಕೂಡ ಹಾಗೆಯೇ ಸ್ವಸಙ್ಕಲ್ಪಾಯತ್ತ ವಾದುದಾಗಿಯೂ ಇರಬಹುದು, ಅಥವಾ ಪರಬ್ರಹ್ಮ ಪ್ರೇರಣೆಯಿಂದ ಎತ್ತಿದ ಜನ್ಮವಾದರೂ ಆಗಬಹುದು. ಅವತಾರಕಾಲದಲ್ಲಿ ಪರಮಾತ್ಮನ (ಮತ್ತು ಆಳ್ವಾರ್, ಆಚಾರ್ಯರುಗಳ) ಚೇಷ್ಟಿತಗಳು ದಿವ್ಯವಾದವುಗಳಾಗಿ ಸ್ವಸಙ್ಕಲ್ಪಾಯತ್ತ ವಾದವು. ನಮ್ಮಗಳ ಚೇಷ್ಟಿತಗಳಾದರೋ ಪ್ರಾರಬ್ಧಕರ್ಮವಾಸನಾಧೀನವಾದುವು.

4. ಅವತಾರಕ್ಕೆ ಕಾಲವು ಧರ್ಮರಕ್ಷಣ ಕಾಲವು. ಶಾಸ್ತ್ರಾನುಗುಣವ್ಯಾಪಾರವೇ ಧರ್ಮವು. ಅದೇ ಆತನ ಆಜ್ಞೆಯು. ಇಂತಹ ಶಾಸ್ತ್ರರೂಪ ಆಜ್ಞೆಯನ್ನು ಮೀರುವದೇ ಅಧರ್ಮವು. ಅಧರ್ಮವು ಯಾವಾಗ ಧರ್ಮವನ್ನು ನುಂಗುತ್ತದೋ ಆ ಕಾಲವೇ ಸ್ವಾಮಿಯು ಅವತಾರಕ್ಕೆ ಕಾಲವು. ಹಾಗೆಯೇ ಮಹರ್ಷಿಗಳು **"ಅಧರ್ಮೋ ಗ್ರಸತೇ ಧರ್ಮಂ"** ಅಧರ್ಮವು ಧರ್ಮವನ್ನು ಯಾವಾಗ ನುಂಗಿಬಿಡುತ್ತದೋ ಅದೇ ಕಾಲವೆಂಬವಾಗಿ ತಿಳಿಸಿರುತ್ತಾರೆ. ಈ ಕಲಿಕಾಲವಲ್ಲಿ ವರ್ಣಾಶ್ರಮ ಧರ್ಮ

ಯುಕ್ತರಲ್ಲಿ ಇತರರು ನಿಷ್ಕಾರಣವಾಗಿ ದ್ವೇಷಿಸುವದೂ, ಇದಕ್ಕಾಗಿ ಪರಸ್ಪರ ಕಲಹಗಳೂ, ಭಗವದ್ಭಾಗವತರಲ್ಲಿ ಭಕ್ತಿಶೂನ್ಯತೆಯೂ ಅಸೂಯೆಯೂ, ಲೋಕಹಿತೈಷಿಗಳ ಹಿಂಸೆಯೂ ಇವುಗಳೆಲ್ಲಾ ಹೆಚ್ಚಾಗುತ್ತಾ ಬರುತ್ತದೆಂದೂ, ಇಂತಹ ಧರ್ಮಗ್ಲಾನಿಯನ್ನು ತಪ್ಪಿಸಿ ಧರ್ಮಸ್ಥಾಪನೆಗಾಗಿ ಸರ್ವೇಶ್ವರನು ಕಲ್ಕ್ಯವತಾರವನ್ನು ಕೈಗೊಳ್ಳುವನೆಂಬ ಋಷಿಗಳಿಂದ ಪ್ರೋಕ್ತವಾದ ವಚನವು ಈಗಿನ ದುಸ್ಥಿತಿಗಳನ್ನೂ ನೋಡಿದರೆ ಸತ್ಯವಾದುದೇ. ನಮಗೆ ಜನ್ಮಕಾಲವಾದರೋ ಕರ್ಮವು ಫಲಕೊಡುವ ಕಾಲವು.

೧. ಅವತಾರದ ಮುಖ್ಯ ಪ್ರಯೋಜನವು ಸಾಧುಪರಿತ್ರಾಣವು. ಇದು ದುಷ್ಟನಿಗ್ರಹ, ಧರ್ಮಸಂಸ್ಥಾಪನೆಗಳಿಲ್ಲದೆ ಆಗದ ಪ್ರಯುಕ್ತ ಈ ಸಾಧು ಪರಿತ್ರಾಣದೊಂದಿಗೆ ಇವುಗಳೂ ಜರುಗುತ್ತವೆ. **"ಯೋಮದ್ಭಕ್ತಸ್ಸಮೇಪ್ರಿಯಃ"** ಎಂದು ಹೇಳಿರುವದರಿಂದ, ಅಂಥಾವರಿಗೆ ಪ್ರಾಪ್ತವಾಗುವ ಸಙ್ಕಟಗಳನ್ನು ಎಂದಿಗೂ ಸಹಿಸನು.

ಗೋವಿನ್ದೇತಿ ಯದಾಕ್ರನ್ದತ್ಕೃಷ್ಣಾ ಮಾಂದೂರವಾಸಿನಂ।
ಋಣಂ ಪ್ರವೃದ್ಧಮಿವಮೇ ಹೃದಯಾನ್ನಾಪ ಸರ್ಪತಿ॥

ದ್ರೌಪದಿಗೆ ಉಂಟಾದ ಮಾನಹಾನಿಯು ನನ್ನ ಹೃದಯವನ್ನು ಬಾಧಿಸುತ್ತಾ, ಅದನ್ನು ಬಿಟ್ಟು ಹೋಗಲೇ ಇಲ್ಲವೆಂದು ಶ್ರೀಕೃಷ್ಣಪರಮಾತ್ಮನು ತಾನೇ ಹೇಳಿಕೊಂಡಿರುತ್ತಾನೆ. ಮಹರ್ಷಿಗಳಿಗೆ ಕೊಟ್ಟ ರಕ್ಷಣಾರೂಪವಾದ ಅಭಯಪ್ರದಾನವು, ರಾವಣಾದಿ ರಾಕ್ಷಸರ ನಾಶವಿಲ್ಲದೆ ಲಭಿಸದು. ಹಾಗೆಯೆ ದ್ರೌಪದೀ ಪಾಂಡವರ ರಕ್ಷಣೆಯು ಬಳಿಕಾದ ದುರ್ಯೋಧನ, ದುಶ್ಶಾಸನರ ನಾಶವಿಲ್ಲದೆ ಉಂಟಾಗದು. ಆದುದರಿಂದ ಮೇಲೆ ಹೇಳಿದ ಮೂರು ಪ್ರಯೋಜನಗಳಲ್ಲೂ ಸಾಧುಪರಿತ್ರಾಣವೇ ಅತನಿಗೆ ಮುಖ್ಯವು. ಆದುದರಿಂದ ಮಿಕ್ಕೆರಡುಗಳನ್ನು ಹೇಳದೆ **ಆದಿ** ಪದದಿಂದ ಸಙ್ಗ್ರಹಿಸಿಬಿಟ್ಟರು. ನಮ್ಮ ಜನ್ಮಪ್ರಯೋಜನವಾದರೋ, ಪ್ರಾರಬ್ಧಕರ್ಮಕ್ಷಯ,ತತ್ಫಲಗಳಾದ ಸುಖದುಃಖೋಪಭೋಗ, ಸುಕೃತವಿದ್ವಲ್ಲೋಕೋಪಾಯಾನುಷ್ಠಾನ, ಪರಬ್ರಹ್ಮಪ್ರಾಪ್ತಿಗಳು.

ಈ ಮೇಲೆ ವಿಸ್ತರಿಸಿದ ಐದು ಅವತಾರ ರಹಸ್ಯಾಭಿಪ್ರಾಯಗಳೆಲ್ಲಾ

ಅವತಾರಸ್ಯ ಸತ್ಯತ್ವ ಮಜಹತ್ಸ್ವಸ್ವಭಾವತಾ।
ಶುದ್ಧಸತ್ವಮಯತ್ವಂಚ ಸ್ವೇಚ್ಛಾಮಾತ್ರ ನಿದಾನತಾ।
ಧರ್ಮಗ್ಲಾನೌ ಸಮುದಯ ಸ್ಸಾಧು ಸಂರಕ್ಷಣಾರ್ಥತಾ।
ಇತಿ ಜನ್ಮರಹಸ್ಯಂ ಯೋ ವೇತ್ತಿ ನಾಸ್ಯ ಪುನರ್ಭವಃ॥

ಎಂಬೀ ಎರಡು ಶ್ಲೋಕಗಳಲ್ಲಿ ಸಙ್ಗ್ರಹಿಸಲ್ಪಟ್ಟಿವೆ.

ಇದು ಸ್ವತನ್ತ್ರಪ್ರಪತ್ತಿನಿಷ್ಠನುಕ್ಕು ಶರಣ್ಯಗುಣ ವಿಶೇಷಜ್ಞಾನವು ಋತ್ತಾಲೆ ಉಪಾಯಾನುಷ್ಠಾನಕ್ಷಣತ್ತಿಲೇ ಮಹಾವಿಶ್ವಾಸಾದಿಗಳೈ ಸ್ಥಿರೀಕರಿತ್ತುಪಕಾರಕಮಾಮ್.

ಇವ್ವರ್ಥಜ್ಞಳೈ ತೆಳಿನ್ದ ಅನುಸನ್ಧಿಪ್ಪಾರ್ಕ್ಕು ಎಂದು ಹೇಳಿರುವದು **"ಏವಂಯೋ ವೇತ್ತಿ ತತ್ವತಃ"** ಎಂಬುವ ಗೀತಾವಾಕ್ಯ ವ್ಯಾಖ್ಯಾನವು. **ವೇತ್ತಿ** ಎಂಬ ಕ್ರಿಯಾಪದವಲ್ಲ ತೋರುವ **ವೇದನವು** ಉಪಾಸನ ದ್ವಾರಾ ಪರಬ್ರಹ್ಮಸಾಕ್ಷಾತ್ಕಾರವನ್ನು ಬೋಧಿಸುತ್ತದೆ ಎಂದರಿಯತಕ್ಕದ್ದು. ಈ ಅವತಾರರಹಸ್ಯಗಳ ಸ್ಮರಣೆಯು ಹೀಗೆ ಯಥಾರ್ಥವಾಗಿ ತಿಳಿಯುವದು, ಉಪಾಸಕನಿಗೆ ಯೋಗಪೂರ್ತಿಯನ್ನುಂಟುಮಾಡಿ ಮೋಕ್ಷಪ್ರಾಪ್ತಿಗೆ ಉಪಕಾರವಾಗುತ್ತದೆಂಬ ಭಾವವು. ಉಪಾಸಕನಿಗೆ ಹೀಗೆ ಈ ಚಿನ್ತನವು ಉಪಕಾರಕವಾದರೆ, ಸ್ವತನ್ತ್ರ ಪ್ರಪತ್ತಿನಿಷ್ಠನಿಗೆ ಹೇಗೆ ಉಪಕಾರಕವಾಗುತ್ತದೆಂಬುವದನ್ನು ಮುಂದಿನ ವಾಕ್ಯದಿಂದುಪದೇಶಿಸುತ್ತಾರೆ.

ಇದು- ಈ ಅವತಾರರಹಸ್ಯಚಿನ್ತನೆಯು, **ಸ್ವತನ್ತ್ರಪ್ರಪತ್ತಿನಿಷ್ಠನುಕ್ಕು**- ಪ್ರಪತ್ತಿಯನ್ನು ಭಕ್ತಿಯೋಗಕ್ಕೆ ಅಙ್ಗವಾಗಿ ಆಚರಿಸದೆ, ಸ್ವತನ್ತ್ರವಾಗಿ ಉಪಯೋಗಿಸಿದ ಭರನ್ಯಾಸಮಾಡುವ ಲಘೂಪಾಯ ನಿಷ್ಠನಿಗೆ, **ಶರಣ್ಯಗುಣವಿಶೇಷಜ್ಞಾನ ಮುಋತ್ತಾಲೆ**-ಸರ್ವರಕ್ಷಕನಾದ ಸರ್ವೇಶ್ವರನ ಗುಣವಿಶೇಷಗಳಾದ ಸೌಲಭ್ಯ ಸೌಶೀಲ್ಯ ವಾತ್ಸಲ್ಯ ಸತ್ಯಕಾಮತ್ವ ಸತ್ಯಸಙ್ಕಲ್ಪತ್ವ ಕಾರುಣ್ಯ ಮೊದಲಾದವುಗಳ ತಿಳುವಳಿಕೆಯು ಮೂಲಕ, **ಉಪಾಯಾನುಷ್ಠಾನಕ್ಷಣತ್ತಿಲೇ** – ಪ್ರಪದನಾನುಷ್ಠಾನಮಾಡುವ ಅಲ್ಪಕಾಲದಲ್ಲೇ, **ಮಹಾವಿಶ್ವಾಸಾದಿಗಳೈ** – ಮಹಾವಿಶ್ವಾಸ ಮೊದಲಾದ ಪ್ರಪದನೋಪಾಯ ಪರಿಕರಗಳನ್ನು **ಸ್ಥಿರೀಕರಿತ್ತು**-ದೃಢಪಡಿಸಿ, **ಉಪಕಾರಕಮಾಂ**- ಮೋಕ್ಷಪ್ರಾಪ್ತಿಗೆ ಸಹಾಯವಾಗುತ್ತದೆ. ದೀರ್ಘಕಾಲಮಾಡತಕ್ಕ ಉಪಾಸನಾಪೂರ್ತಿಗೇನೋ ಈ ಅವತಾರ ರಹಸ್ಯಚಿನ್ತನವು ಸಹಕಾರಿಯಾಗಬಹುದು. ಕ್ಷಣಕಾಲ ಅಮಿಷಿಸತಕ್ಕ ಸ್ವತನ್ತ್ರಪ್ರಪತ್ತಿನಿಷ್ಠನ ವಿಷಯದಲ್ಲಿ ಹೇಗೆ ಉಪಕಾರಕವೆಂದರೆ, ಈ ಅವತಾರಕಾಲಗಳಲ್ಲಿ ಸರ್ವೇಶ್ವರನು ತನ್ನ ವಿವ್ಯಾದ್ಭುತ ಚೇಷ್ಟಿತಗಳಿಂದ ವ್ಯಕ್ತಪಡಿಸಿದ ಸೌಲಭ್ಯ, ಸೌಶೀಲ್ಯ, ಸಾಮರ್ಥ್ಯ, ಕಾರುಣ್ಯಾದಿ ಕಲ್ಯಾಣಗುಣಗಳ ಮುಖ್ಯ ಪರಿಣಾಗತ ರಕ್ಷಾಪಾಲನ, ಸಾಧುಪರಿತ್ರಾಣಾದಿ ಸಙ್ಕಲ್ಪಗಳ ಪ್ರಭಾವದಿಂದ ಈ ಪ್ರಪದನಾನುಷ್ಠಾನಮಾಡುವ ಕ್ಷಣಕಾಲದಲ್ಲೇ ಮಹಾವಿಶ್ವಾಸಾದಿ ಅಙ್ಗಗಳನ್ನೆಲ್ಲಾ ಸ್ಥಿರೀಕರಿಸಿ, ಪ್ರಪದನಾನುಷ್ಠಾನವು ಪಾಪ್ತವಾಗಿ ನೆರವೇರುವ ಹಾಗೆ ಮಾಡಿ ಮೋಕ್ಷಪ್ರಾಪ್ತಿಗೆ ಸಹಕಾರಿಯಾಗುತ್ತದೆ. ಪ್ರಪದನಾನುಷ್ಠಾನಕಾಲದಲ್ಲಿ ಆದು ಅಙ್ಗಗಳೂ ಇವ್ವಿಧದಿಂದೇ ಪ್ರಪದನವು ಫಲಿಸುತ್ತದೆಂದು

ಮುಂದೆ ಹೇಳುತ್ತಾರೆ ಆದುದರಿಂದಲೇ ಇಲ್ಲಿ ಪ್ರಪದನಮಾಡುವ ಅಲ್ಪಕಾಲದಲ್ಲೇ ಐದು ಅಜ್ಞಗಳೂ ಸ್ಥಿರವಾಗಿರಬೇಕಾದಪ್ರಯುಕ್ತ **ಪ್ರಪದನಾನುಷ್ಠಾನಕ್ಷಣತ್ತಿಲ್**- ಎಂಬ ಪ್ರಯೋಗವು. **ಮಹಾವಿಶ್ವಾಸಾದಿಗಳೈ ಸ್ಥಿರೀಕರಿತ್ತು** ಎಂಬಲ್ಲಿ ಈ ಮೇಲಿನಭಿಪ್ರಾಯವನ್ನು ತಾನೇ ಇಲ್ಲಿಯೂ ವ್ಯಕ್ತಪಡಿಸಿರುತ್ತಾರೆ. ಉಪಾಯಾನುಷ್ಠಾನಕಾಲದಲ್ಲಿ ಮಹಾವಿಶ್ವಾಸಾದಿ ಅಜ್ಞಗಳು ಸ್ಥಿರವಾಗಿಲ್ಲದೆ ಹೋದರೆ, ಪ್ರಪದನವು ಸಿದ್ಧಿಸದು. ಜನ್ಮಾನ್ತರಕೂಡ ಪ್ರಾಪ್ತವಾಗಬಹುದು. ಆದುದರಿಂದ ಈ ಮಹಾವಿಶ್ವಾಸವೇ ಮೊದಲಾದ ಅಜ್ಞಗಳನ್ನು ದೃಢಪಡಿಸಿ ಮೋಕ್ಷಪ್ರಾಪ್ತಿಯನ್ನು ನಿಸ್ಸಂಶಯವನ್ನಾಗಿ ಮಾಡಲು ಈ ಅವತಾರ ರಹಸ್ಯಚಿನ್ತನವು ಆವಶ್ಯಕವೆಂಬ ಭಾವವು. ಹೀಗೆ ಈ ವಿಭವಾವತಾರ ರಹಸ್ಯದ ಅನುಸಂಧಾನವು ಭಕ್ತಿಪ್ರಪತ್ತಿನಿಷ್ಠರಿಬ್ಬರಿಗೂ ಉಪಾಯಪೂರ್ತಿಗೆ ಸಹಕಾರಿ ಎಂದು ಹೇಳುವದಕ್ಕಾಗಿಯೇ **"ಏಕಜನ್ಮತ್ತಿಲೆ ಸ್ವಾಧಿಕಾರಾನುಗುಣ ಸಮೀಹಿತೋಪಾಯ ಪೂರ್ತಿಯಾಲೇ ಜನ್ಮಾನ್ತರಮನುಭವಿಯಾದೆ ಮುಕ್ತರಾಗಲಾಂ"** ಎಂದು ಮೊದಲು ಸಜ್ಜ್ಞಹವಾಗಿ ಹೇಳಿ, ಅದನ್ನೇ ಹೀಗೆ ಉಪಪಾದನೆಮಾಡಿ, ವಿಸ್ತರಿಸಿ ಹೇಳಿರುತ್ತಾರೆ.

ಅರ್ಚಾವತಾರವು ಮೋಕ್ಷಪ್ರಾಪ್ತಿಗೆ ಸಹಕಾರಿಯು.

ಮುಂದೆ ಅರ್ಚಾವತಾರವು ಹೇಗೆ ಮೋಕ್ಷಪ್ರಾಪ್ತ್ಯುಪಕಾರಕವೆಂಬುವದನ್ನು ಉಪದೇಶಿಸುತ್ತಾರೆ. ಈಗಿನ ಕಾಲದಲ್ಲಿ ಪಾಶ್ಚಾತ್ಯರು ವಿಗ್ರಹಾರಾಧನೆಯನ್ನು ನಿಂದಿಸುವದರಿಂದ, ಅವರನ್ನು ನಮ್ಮಹಿಂದೂ ಜನರಲ್ಲೇ ಕೆಲವರೂ ಸಹ ಅನುಸರಿಸಿ, ವಿಗ್ರಹಾರಾಧನೆಯು ಕಾರ್ಯಕಾರಿಯಲ್ಲವೆಂದು ಹೇಳಿ ತ್ಯಜಿಸಿರುತ್ತಾರೆ. ಇದು ಶಾಸ್ತ್ರಪರಿಜ್ಞಾನ ಶೂನ್ಯತೆಯು ನಿಬ್ಬಂಧನೆಯಾಗಿರುತ್ತದೆ. ಪ್ರತ್ಯಕ್ಷಾನುಮಾನ ಪ್ರಮಾಣಗಳಿಗೆ ಗೋಚರವಲ್ಲದ ವಿಷಯದಲ್ಲಿ ಶಾಬ್ದವೇ ಪ್ರಮಾಣವೆಂಬ ವಿಷಯವನ್ನೂ ಇವರು ಅರಿತವರಲ್ಲವು. ಇನ್ನೂ ಕೆಲವರು ಶಾಬ್ದಪ್ರಮಾಣವನ್ನು ಅಂಗೀಕರಿಸಿಯೂ ವೇದದಲ್ಲಿ ಅರ್ಚಾವತಾರ ಪೂಜೆಯು ವಿಧಿಸಲ್ಪಟ್ಟಿದ್ದರೂ ವಿಧಿಸಲ್ಪಡಲಿಲ್ಲವೆಂದು ವಾದಿಸುವರು. ಆದರೆ ಸಂಧ್ಯಾವಂದನಾ ಕರ್ಮವನ್ನು ಶ್ಲಾಘಿಸಿ ಅದನ್ನು ಒಪ್ಪಿಕೊಳ್ಳುತ್ತಾರೆ. ಸಂಧ್ಯಾವಂದನದಲ್ಲೇ **" ಸತ್ಯಾಯ ಹವ್ಯಂ ಘೃತವದ್ವಿಧೇಮ"** ಎಂದು ಘೃತಮಿಶ್ರವಾದ ಅನ್ನರೂಪ ಹವಿಸ್ಸನ್ನು ಆತನಿಗೆ ಸಮರ್ಪಿಸತಕ್ಕದ್ದೆಂದು,ಪ್ರತಿದಿನವೂ ಉಚ್ಚರಿಸುತ್ತಾ ಅದರಭಿಪ್ರಾಯವನ್ನು ತಿಳಿಯದವರಾಗಿದ್ದಾರೆ.ಹೀಗೆ ವೇದದಲ್ಲಿ ಕೆಲವು ಕಡೆಗಳಲ್ಲಿ ಅರ್ಚಾವತಾರಪೂಜೆಯು ವಿಧಿಸಲ್ಪಟ್ಟಿರುತ್ತದೆ. ಶ್ರೀವ್ಯಾಸಮಹರ್ಷಿಯನ್ನು, ಉಪನಿಷತ್ತು ಕೂಡ **"ಸಹೋವಾಚವ್ಯಾಸಃ ಪಾರಾ**

ತರ್ಕಃ" ಎಂದು ಪ್ರಶಂಸಿಸಿ ಹೇಳಿರುವದರಿಂದಲೂ, ಅವರು ಸರ್ವಶಾಸ್ತ್ರಗಳನ್ನೂ ಆಲೋಚನಮಾಡಿ ಪುನಃಪುನಃ ವಿಚಾರಮಾಡಿ ನಿಷ್ಕರ್ಷಾರ್ಥವನ್ನು ಬೋಧಿಸುವದರಿಂದ ಅವರ ಉಪದೇಶಕ್ಕಿಂತ ಆಪ್ತವಾಕ್ಯವಿರಲಾರದು. ಅವರು ಹೇಳಿರುವದೇನೆಂದರೆ :—

ನಿಷ್ಪೀಡ್ಯ ಸ್ನಾನವಸ್ತ್ರಂವೈ ದ್ವಿರಾಚಮ್ಯಾರ್ಚಯೇದ್ಧರಿಂ।
ನ ವಿಷ್ಣ್ವಾರಾಧನಾತ್ಪುಣ್ಯಂ ವಿದ್ಯತೇ ಕರ್ಮವೈದಿಕಂ।
ತಸ್ಮಾದನಾದಿ ಮಧ್ಯಾನ್ತಂ ನಿತ್ಯ ಮಾರಾಧಯೇದ್ಧರಿಂ॥

ಎಂದು ವಿಷ್ಣ್ವಾರಾಧನವು ನಿತ್ಯವೂ ಮಾಡತಕ್ಕದ್ದೆಂದು ವಿಧಿಸಿದರು. ಹಾಗೆ ವಿಷ್ಣ್ವಾರಾಧನ ಮಾಡದಿದ್ದರೆ ಪ್ರತ್ಯವಾಯವೂ ಉಂಟು ಎಂದು,

ಯೋ ಮೋಹಾದಥವಾಲಸ್ಯಾದಕೃತ್ವಾವಿಷ್ಣುಪೂಜನಂ।
ಭುಜ್ಜೀತ ಸಯಾತಿ ನರಕಾ ಸೂಕರೇಷ್ವಭಿಜಾಯತೇ॥

ಎಂಬುವದರ ಮೂಲಕ ಹೇಳಿರುತ್ತಾರೆ. ಹಾಗೆಯೇ ಅವರು ರಚಿಸಿದ ಭಾಗವತದಲ್ಲಿ "**ಗೃಹಂ ಸ್ಮಶಾನಂ ತವ ಬಿಂಬನರ್ಜಿತಂ**" ಎಂದು ಗೃಹಾರಾಧನೆಗೆ ಪಾದ್ಮ ಪುರಾಣದಲ್ಲಿ ಹೇಳಿರುವ ಹಾಗೆ ಸಾಲಿಗ್ರಾಮವೂ ಅಲ್ಲದೆ ಅರ್ಚ್ಚಾವಿಗ್ರಹವೂ ಅವಶ್ಯಕವೆಂಬುವದು ತೋರಿಬರುತ್ತದೆ. ಶ್ರೀ ರುದ್ರಭಗವಾರವರು ಪ್ರಚೇತಸರುಗಳಿಗೆ ಮಾಡಿದ ರುದ್ರಗೀತಾಖ್ಯ ಉಪದೇಶದಲ್ಲೂ ಇನ್ನೂ ಅನೇಕ ಮಹರ್ಷಿಗಳ ಉಪದೇಶದಲ್ಲೂ ಸಹ ಮೊದಲು ದಿವ್ಯಾತ್ಮಸ್ವರೂಪ ಮಹಿಮೆಯು ಹೇಳಲ್ಪಟ್ಟು ಅಂತಹ ಪರಮಾತ್ಮನ ಧ್ಯಾನಕ್ಕೆ ಅತನ ದಿವ್ಯಮಙ್ಗಳ ವಿಗ್ರಹವು ಆವಶ್ಯಕವೆಂದು ಹೇಳಿ, ಅವನನ್ನು ಶಂಖಚಕ್ರಾದಿಚಿನ್ಹೆಗಳಿಂದಲೂ ದಿವ್ಯಾಭರಣ ವನಮಾಲಾ ವೈಜಯನ್ತಿ ಕೌಸ್ತುಭಾದಿಗಳಿಂದ ಯುಕ್ತನಾಗಿಯೂ, ದಿವ್ಯಾಯುಧೋಪೇತನಾಗಿಯೂ, ಪೀತಾಂಬರಧಾರಿಯಾಗಿಯೂ, ಪ್ರಸನ್ನವದನಕಮಲಾಯತೇಕ್ಷಣಾದಿ ಸರ್ವಲಾವಣ್ಯಯುಕ್ತನಾಗಿಯೂ, ವಕ್ಷಸ್ಥಳದಲ್ಲಿ ಲಕ್ಷ್ಮೀಯುಕ್ತನಾಗಿಯೂ ಇರುವ ಹಾಗೆ ಭಾವಿಸತಕ್ಕದ್ದೆಂದು ಹೇಳಿರುತ್ತಾರೆ. ಈ ರೀತಿಯಲ್ಲೇ ದಿವ್ಯ ಬಿಂಬಾಕೃತಿಯೂ ಇರತಕ್ಕದ್ದೆಂದು ಶ್ರೀ ಪರಾಶರರು ವಿಷ್ಣು ಪುರಾಣದಲ್ಲಿ ಹೇಳಿರುತ್ತಾರೆ. ಹೀಗೆ ದಿವ್ಯಾಯುಧ ದಿವ್ಯಾಭರಣಾದಿಗಳನ್ನು ಸದಾ ಹೊಂದಿರುವವು, ಸರ್ವೇಶ್ವರನು ಸದಾ ಚಿದಚಿತ್ತುಗಳಿಂದಿಗೆ ವಿಶಿಷ್ಟವಾದ ಅವಸ್ಥೆಯನ್ನು ಬೋಧಿಸುತ್ತದೆ. ಹೀಗೆ ಅರ್ಚ್ಚಾರೂಪವು ಧ್ಯಾನಕ್ಕೆ ಸಾಧನವಾಗಿ "**ಪ್ರಾಣಿನಾಂ ಶ್ರೇಯಸೇ**" (ವಿ. ಪು. 1. 22) ಪ್ರಾಣಿಗಳ ಪರಮಶ್ರೇಯಸ್ಸಿಗೂ ಕಾರಣಭೂತವಾಗುತ್ತದೆ: ಇಂತಹ ರೂಪದ ಪೂಜೆಯು ಹೇಗೆ ಮಾಡಬೇಕೆಂಬುವದು ನಮಗೆ ಪಾಂಚರಾತ್ರಾಗಮದಲ್ಲೂ, ಪಾದ್ಮಪುರಾಣದಲ್ಲೂ ವಿಶದವಾಗಿ ಷೋಡಶೋಪಚಾರ ಮೂಲಕ ನಡಿಸತಕ್ಕದ್ದೆಂದು ಹೇಳಲ್ಪಟ್ಟ

ಅರ್ಚಾವತಾರಸ್ಯ ಮೋಕ್ಷ ಪ್ರದತ್ವೇ ವರ್ಣನಮ್

ಇಹ ಪ್ಪಡಿಯೇ ಅರ್ಚಾವತಾರಮುಮ್ ಮಿ (ಇ) ರುಕ್ಕರ ಮೋಕ್ಷ ತ್ತೈ ತ್ತರು ಮೆನ್ರು ಮಿಡತ್ತೈ ತ 'ಸುರೂಪಾಂ ಪ್ರತಿಮಾಂ ವಿಷ್ಣೋಃ ಪ್ರ ಸನ್ನ ವದನೇಕ್ಷಣಾಂ । ಕೃತ್ವಾತ್ಮನಃ ಪ್ರೀತಿಕರೀಂ ಸುವರ್ಣ ರಜತಾ ದಿಭಿಃ ॥ ತಾಮರ್ಚಯೇ ತ್ತಾಂ ಪ್ರಣಮೇತ್ ತ್ತಾಂ ಯಜೇತ್ತಾಂ ವಿಚಿ

ರುತ್ತದೆ. ಹಾಗೆಯೇ ನಮ್ಮ ಆಚಾರ್ಯಾದಿಗಳು ವಿಧಿಸಿರುತ್ತಾರೆ. ಗೃಹಾರಾಧನ ಕ್ರಮವು ಶ್ರೀಭಾಷ್ಯಕಾರರು ಬರೆದ ನಿತ್ಯವೆಂಬ ಗ್ರಂಥದಲ್ಲೂ ಶ್ರೀಗೋಪಾಲದೇಶಿಕ ರವರ ಅಷ್ಟಕವೆಂಬ ಗ್ರಂಥದಲ್ಲೂ ಉಪದೇಶಿಸಲ್ಪಟ್ಟಿರುತ್ತದೆ. ಆದುದರಿಂದ ಅರ್ಚಾ ವತಾರದಲ್ಲೂ ತತ್ಸೇವಾವಿ ಅರ್ಚನೆಗಳಲ್ಲೂ ಅಸ್ತಿಕಬುದ್ಧಿಯುಂಟಾಗಿ ಸರ್ವ ಶ್ರೇಯ ಸ್ಸನ್ನೂ ಸಂಪಾದಿಸಿಕೊಳ್ಳಲಿ ಎಂಬ ಉದಾರ ಬುದ್ಧಿಯಿಂದ, ಶ್ರೀಶೌನಕೋಕ್ತಿ ಪ್ರಮಾಣಮೂಲಕ, ಹೇಗೆ ಅರ್ಚಾವತಾರವು ಸಾಧಕವೆಂಬುವದನ್ನು ತೋರ್ಪಡಿ ಸುತ್ತಾರೆ.

ಇಪ್ಪಡಿಯೇ – ಈ ಪ್ರಕಾರ ವಿಧವಾದ ರೂಪಗಳ ರಹಸ್ಯಚಿಂತನವು ಹೇಗೆ ಮೋಕ್ಷಪ್ರಾಪಕವೋ, ಹಾಗೆಯೇ ಎಂಬರ್ಥವು; **ಅರ್ಚಾವತಾರವೂ** ಕೂಡ, **ಮಿರು ಕ್ಕರ** – ಪ್ರಯಾಸವಿಲ್ಲದೆ, ಅನಾಯಾಸವಾಗಿ ಎಂದರೆ ಶ್ರಮರೂಪವಾದ ಉಪಾಸನೆ ಮಾಡಬೇಕು ಎಂಬ ನಿಯಮವಿಲ್ಲದೆ, **ಮೋಕ್ಷತ್ತೈ ತರುಮೆನ್ರು** – ಮೋಕ್ಷವ ನ್ನು ಕೊಡುವದೆಂಬ ಸಂದರ್ಭದಲ್ಲಿ, **'ಸುರೂಪಾಂ ಪ್ರತಿಮಾಂ'** ಎಂಬ ವಿಷ್ಣು ಧರ್ಮ (13-16) ಪ್ರಮಾಣಮೂಲಕ, **ಶ್ರೀಶೌನಕಭಗವಾ ಅರುಳಚ್ಚೆಯ್ವಾ ನ್** – ಮಹಾಪೂರ್ವರಾದ ಶ್ರೀಶೌನಕ ಮಹರ್ಷಿಗಳು ಕೃಪಯಾ ಅಪ್ಪಣೆ ಕೊಡಿಸಿ ರುತ್ತಾರೆ. ಈ ಶ್ಲೋಕಾರ್ಥವೇನೆಂದರೆ:—**ಸುರೂಪಾಂ** – ಸುಂದರವಾದ ರೂಪ ದಿಂದಲೂ ಲಾವಣ್ಯದಿಂದಲೂ ಕೂಡಿರುವ, **ಪ್ರಸನ್ನವದನೇಕ್ಷಣಾಂ** – ಆಶ್ರಿತ ರಿಗೆ ಅನುಗ್ರಹವಾಡುವ ಹಾಗೆ ತೋರುವ ಮುಗುಳುನಗೆಯಿಂದ ಯುಕ್ತವಾದ ವದನ, ವಿಕಸಿತ ಕಮಲದಳಾದಿಯಲ್ಲಿರುವ ದಿವ್ಯ ಕಣ್ಣುಗಳೂ ಉಳ್ಳ, **ಆತ್ಮನಃ ಪ್ರೀತಿಕರೀಂ**- ತನಗೆ ತುಂಬಾ ಪ್ರೀತಿಕರವಾದ, **ವಿಷ್ಣೋಃ ಪ್ರತಿಮಾಂ** –ಸರ್ವ ವ್ಯಾಪಿಯಾದ ಶ್ರೀಮನ್ನಾರಾಯಣನ ವಿಗ್ರಹವನ್ನು, **ಸುವರ್ಣರಜತಾದಿಭಿಃ**–ಚಿನ್ನ ಬೆಳ್ಳಿ, ಮೊದಲಾದವುಗಳೆಂದು ಹೇಳಿರುವದರಿಂದ, ತಾಮ್ರ, ಪಂಚಲೋಹ, ಶಿಲಾ, ದಾರು (ಮರ) ಮೊದಲಾವನುಗಳೂ ಹೇಳಲ್ಪಟ್ಟವು,ಇವುಗಳಿಂದ, **ಕೃತ್ವಾ**–ಮಾಡಿ, ಎಂದರೆ ವಿಧಿಪ್ರಕಾರವಾಗಿ, ಪಾಂಚರಾತ್ರಾವಿಗಳಲ್ಲಿ ಹೇಗೆ ಹೇಳಿದೆಯೋ ಹಾಗೆ

ನ್ತಯೇತ್। ವಿಶತ್ಯಸಾಸ್ತ ದೋಷಸ್ತು ತಾಮೇವ ಬ್ರಹ್ಮರೂಪಿಣೀಂ"
ಎನ್ನು, ಶ್ರೀ ಶೌನಕಭಗವಾನರುಳಿಚ್ಚೆಯ್ ದಾನ್.

ಪ್ರತಿಷ್ಠಾಕ್ರಮಪೂರ್ವಕವಾಗಿ ಮಾಡಿ, **ತಾಂ ಅರ್ಚ್ಯಯೇತ್** – ಆ ನಿಗ್ರಹವನ್ನು ಪೂಜಿಸತಕ್ಕದ್ದು, ಭಗವದಾರಾಧನ ಕ್ರಮರೀತ್ಯಾ ಆರಾಧಿಸತಕ್ಕದ್ದು, **ತಾಂ ಪ್ರಣಮೇತ್**–ಆ ವಿಗ್ರಹಕ್ಕೇನೆ ಸಾಷ್ಟಾಂಗ ನಮಸ್ಕಾರಮಾಡತಕ್ಕದ್ದು, **ತಾಂ ಯಜೇತ್**– ಅದನ್ನು ಕುರಿತು ಐಹಿಕ ಶ್ರೇಯಸ್ಸಿನಲ್ಲಿ ಅಭಿಲಾಷೆಯುಳ್ಳವನು ಯಾಗಾದಿಗಳನ್ನು ಮಾಡತಕ್ಕದ್ದು, ಅಥವಾ ರಥೋತ್ಸವಾಜ್ಯರೂಪಯಾಗವನ್ನು ಮಾಡತಕ್ಕದ್ದು ಅಥವಾ ಯಾಗರೂಪ ನಾನಾವಿಧೋತ್ಸವಾದಿಗಳನ್ನು ನಡಿಸತಕ್ಕದ್ದು, **ತಾಂ ವಿಚಿನ್ತಯೇತ್** – ಮೋಕ್ಷಾರ್ಥಿಗಳು ಅದನ್ನೇ ಧ್ಯಾನಿಸತಕ್ಕದ್ದು. ಹಾಗೆ ಅರ್ಚನ ಪ್ರಣಾಮಾದಿ ಕೈಙ್ಕರ್ಯಗಳನ್ನೆಸಗುವದರಿಂದಾಗುವ ಪ್ರಯೋಜನವೇನೆಂದರೆ ಹೇಳಲ್ಪಡುತ್ತದೆ. **ಅಪಾಸ್ತದೋಷಸ್ತು** – ಹೋಗಲ್ಪಟ್ಟ ದೋಷವುಳ್ಳವನಾದರೋ ಅಥವಾ ನಿತ್ಯಕರ್ಮಾನುಷ್ಠಾನಗಳಿಂದ ಸಂಚಿತಪಾಪಗಳೆಲ್ಲಾ ನಾಶಹೊಂದಿ ಆಗಾಮಿ ಪಾಪಗಳ ಲೇಪನಸಿಲ್ಲದವನಾದರೋ, **ತಾಮೇವ ಬ್ರಹ್ಮರೂಪಿಣೀಂ** – ಅಂತರ್ಯಾಮಿಯಾಗಿ ಆ ಪ್ರತಿಮೆಯನ್ನೆಲ್ಲಾ ವ್ಯಾಪಿಸಿರುವ ಆ ರೂಪದಲ್ಲೇ ಇರುವ ಪರಬ್ರಹ್ಮವನ್ನೇ, **ವಿಶತಿ** – ಪ್ರವೇಶಿಸುವನು ಎಂದರೆ ಹೊಂದುವನು, ಅಥವಾ **ಬ್ರಹ್ಮರೂಪಿಣೀಂ** – ಪರಬ್ರಹ್ಮರೂಪದಲ್ಲಿರುವ, **ತಾಮೇವ** – ಶಂಖ ಚಕ್ರಾದಿಗಳುಳ್ಳ ಆ ರೂಪವನ್ನೇ, ಎಂದರೆ ಅದಕ್ಕೆ ಸಮವಾದ ಅಪ್ರಾಕೃತ ದಿವ್ಯಮಙ್ಗಳ ವಿಗ್ರಹರೂಪವನ್ನೇ, **ವಿಶತಿ** – ಪ್ರವೇಶಿಸುವನು, ಎಂದರೆ ಪ್ರಾಕೃತರೂಪವು ಕಳೆದುಹೋಗಿ ದಿವ್ಯಮಙ್ಗಳವಿಗ್ರಹವನ್ನು, ಈ ಅಣುರೂಪನಾದ ಆತ್ಮನು ಪ್ರವೇಶಿಸುವನು, ಎಂದೂ ಅರ್ಥಹೇಳಬಹುದು. ಮೋಕ್ಷಕ್ಕೆ ಎರಡು ಮಾರ್ಗಗಳು ಧ್ಯಾನ ಒಂದು; ಪ್ರಪದನ ಒಂದು ಧ್ಯಾನಕ್ಕೆ ದಿವ್ಯಮಙ್ಗಳವಿಗ್ರಹಯುಕ್ತ ಒಂದು ಧ್ಯೇಯವು ಪ್ರಥಮ ಸೋಪಾನ ರೀತ್ಯಾ ಆವಶ್ಯಕವು. ಆ ಧ್ಯೇಯವಸ್ತುವು ದಿವ್ಯಮಙ್ಗಳವಿಗ್ರಹಯುಕ್ತವಾಗಿ ನಾನಾರೂಪ ಒಂದು ಪ್ರತಿಮಾರೂಪದಲ್ಲಿ ಶಂಖ ಚಕ್ರಾದಿ ಆಯುಧಗಳಿಂದಲೂ ತುಲಸೀ ವನಮಾಲಾದಿಗಳಿಂದಲೂ, ವಕ್ಷಸ್ಥಳದಲ್ಲಿ ಲಕ್ಷ್ಮೀ, ಕೌಸ್ತುಭಮಣಿಗಳಿಂದಲೂ, ಶ್ರೀವತ್ಸ ಚಿಹ್ನೆಯಿಂದಲೂ, ಪ್ರಸನ್ನವದನೇಕ್ಷಣಗಳಿಂದಲೂ, ಚಾರುಲಾವಣ್ಯದಿಂದಲೂ, ಯುಕ್ತವಾದುದಾಗಿ ರಚಿಸಲ್ಪಟ್ಟು, ಪಾಂಚರಾತ್ರಾದಿ ಮಂತ್ರಗಳಿಂದ ಸಂಸ್ಕಾರಹೊಂದಿ ಪ್ರತಿಷ್ಠಿತವಾದರೆ, ಆಗ ಪ್ರತಿಮೆಯು ಹೇಗಿದೆಯೋ ಹಾಗೆಯೇ ಪರತತ್ವವು **ತಾಂ**ಯಾ ಸೂಕ್ಷ್ಮರೂಪದಲ್ಲಿ. ಆ ಪ್ರತಿಮೆಗೆ ಭಾರವನ್ನು ಹೆತ್ತಸದೆ, ಅದರ ದ್ರವ್ಯವನ್ನು ಕೊಬಸಡಿಸದೆ ನೀವುಸ್ತೀರ ಬೆರತ ತೆರವಿ,

ಆ ಪ್ರತಿಮೆಯ ದ್ರವ್ಯವನ್ನೆಲ್ಲಾ ಆಕ್ರಮಿಸುತ್ತದೆಂಬುವದು ಈ ಪ್ರಮಾಣಾಭಿಪ್ರಾಯವು. ಹಾಗೆ ಪ್ರತಿಷ್ಠಿತ ವಿಗ್ರಹದಲ್ಲಿ ನೆಲೆಗೊಂಡ ದಿವ್ಯಸುಂದರ ವಿಗ್ರಹ ರೂಪದಲ್ಲಿರುವ ಶ್ರೀಮನ್ನಾರಾಯಣನ ಎದುರಿಗೆ ಕೂತು **" ಚೇಲಾಜಿನ ಕುಶೋತ್ತರಂ "** (ಗೀ. 6, 11) ವೆಂದು ಹೇಳಿರುವಹಾಗೆ ಆಸನವನ್ನು ನಿರ್ಮಿಸಿಕೊಂಡು ಧ್ಯಾನಮಾಡುವದರಿಂದ ದೇಹವು ಪರವಶವಾಗಿ ಸಮಾಧಿಯನ್ನನುಭವಿಸುವದರಿಂದ ಮೋಕ್ಷಪ್ರಾಪ್ತಿಗೆ ಕಾರಣಭೂತವಾಗುತ್ತವೆ. ಹಾಗೆಯೇ ಸ್ವತಂತ್ರ ಪ್ರಪತ್ತಿನಿಷ್ಠನೂ ಕೂಡ ಮೇಲೆ ಹೇಳಿದ ಹಾಗೆ ಭಾವಿಸಿ ಸೇವಿಸುವದೂ, ಪ್ರಣಾಮಾದಿಗಳನ್ನು ಮಾಡುವದೂ, ಮೂಲಮಸ್ತ್ರಾದಿ ಜಪಾನುಷ್ಠಾನ ಮಾಡುವದೂ, ಸ್ತೋತ್ರಪಾಠಪಠನ ದ್ರಾವಿಡ ಪ್ರಬಂಧಕೈಙ್ಕರ್ಯ,ಸಹಸ್ರನಾಮ ಅಷ್ಟೋತ್ತರನಾಮ ಸಙ್ಕೀರ್ತನ, ದೀಪಾರೋಪಣ, ವಾಲವ್ಯಜನ ಚಾಮರಾದಿ ಸಮರ್ಪಣ, ಪುಷ್ಪಮಾಲಾ ಸಮರ್ಪಣಾದಿ ಕೈಙ್ಕರ್ಯಗಳ ಮೂಲಕ, ಮೋಕ್ಷಪ್ರಾಪ್ತಿಯನ್ನು ಮುಮುಕ್ಷುವು ಸ್ಥಿರಪಡಿಸಿಕೊಳ್ಳಬಹುದೆಂಬ ಭಾವವು. ಇಲ್ಲಿ ' **ವಿಷ್ಣೋಃ ಪ್ರತಿಮಾಂ** " ಎಂದು ಹೇಳಿರುವದರಿಂದ ಪ್ರಪನ್ನನಿಗೆ ಆರ್ಚನ, ಪ್ರಣಾಮ, ಚಿನ್ತನಾದಿಗಳಿಗೆ ಮೋಕ್ಷಪ್ರದನಾದ ವಿಷ್ಣುವಿನ ಮತ್ತು ತತ್ಸಂಬಂಧವುಳ್ಳ ಅವತಾರಗಳ ಪ್ರತಿಮೆಯೇ ಸರ್ವವಿಧ ಕೈಙ್ಕರ್ಯವನ್ನೆಸಗಲು ಯೋಗ್ಯವೇ ವಿನಾ, ಮೋಕ್ಷಪ್ರದರಲ್ಲದ ಅನ್ಯದೇವತೆಗಳಾದ ಬ್ರಹ್ಮರುದ್ರಾದಿಗಳ ಪ್ರತಿಮೆಯು ಮುಮುಕ್ಷುವಿಗೆ ಸೇವಾ ಯೋಗ್ಯವಲ್ಲವೆಂದು ವಿಧಿಸಲ್ಪಟ್ಟಿತು. **ಬ್ರಹ್ಮರೂಪಿಣೀಂ** ಎಂದು ಹೇಳಿರುವದರಿಂದ ಪರರೂಪವು ಬಿಂಬಾಕೃತಿಯನ್ನು ಆಕ್ರಮಿಸುತ್ತದೆಂಬ ವಿಷಯವು ಬೋಧಿಸಲ್ಪಟ್ಟಿತು. ಹೀಗೆ ಪರಸ್ವರೂಪದ ಪ್ರವೇಶವಿರುವದರಿಂದಲೇ ಇದು ತುಂಬಾ ಮಾಹಾತ್ಮ್ಯಯುಳ್ಳದ್ದಾಗಿ ದೃಗ್ಗೋಚರವಾಗಿ ತನ್ನ ಸೌಲಭ್ಯಸೌಶೀಲ್ಯವಂ ಪ್ರಕಟಿಸುವದರಿಂದ ನಮಸ್ಕಾರಾರ್ಚನಾದಿ ಸರ್ವವಿಧಪೂಜಾ ಕ್ರಮಗಳಿಗೆ ತುಂಬಾ ಅನುಕೂಲವಾದ ದಿವ್ಯಮಙ್ಗಳ ವಿಗ್ರಹವೆಂದರಿಯತಕ್ಕದ್ದು. ಬಿಂಬವೇನೋ ಚಿನ್ನ, ಬೆಳ್ಳಿ, ತಾಮ್ರ ಕಲ್ಲುಮಣ್ಣುವಾದುದೇ. ಆಗಮ ಪ್ರಕ್ರಿಯೆಯಿಂದ ಪರಸ್ವರೂಪವು ಆಕ್ರಮಿಸುತ್ತದೆಂಬ ಪ್ರಮಾಣವಿರುವದರಿಂದ ಸರ್ವೇಶ್ವರನು ಹಾಗೆಯೇ ಸೇವೆಯನ್ನಿತ್ತು, ಸೇವೆಮಾಡುವವನ ಮನೋರಥಗಳ ಪೂರ್ತಿಯನ್ನುಂಟುಮಾಡುವನು ಎಂಬುವದು ಮುಖ್ಯ ತಾತ್ಪರ್ಯವು. ಶುದ್ಧಸತ್ವದ್ರವ್ಯವು ಪ್ರತ್ಯಕ್ಷಕ್ಕೆ ಗೋಚರವಾದ ಸುವರ್ಣರಜತ ಲೋಹ ಶಿಲಾದಿ ವಿಗ್ರಹಗಳಲ್ಲಿ ಕಾಣಬರುವದಿಲ್ಲವು. ಬದ್ಧರಿಗೆ ಶುದ್ಧಸತ್ವದ್ರವ್ಯವು ಅಗೋಚರವೆಂದು ಹಿಂದೆಯೇ ಹೇಳಲ್ಪಟ್ಟಿರುತ್ತವೆ. ಹೀಗಿರುವಲ್ಲಿ ಇಂತಹ ಪ್ರತಿಮೆಗೆ ಶುಭಾಶ್ರಯತ್ವವು ಹೇಗೆ ಕೂಡುತ್ತದೆಂಬಾಕ್ಷೇಪಕ್ಕೆ ಸಮಾಧಾನಾರ್ಥವಾಗಿ " **ವಿಶತಿ ತಾಮೇವ ಬ್ರಹ್ಮರೂಪಿಣೀಂ** " ಎಂದು ಹೇಳಿರುವದರಿಂದ ಇಲ್ಲಿಯೂ ಶುಭಾಶ್ರಯತ್ವವು ಕೂಡುತ್ತದೆಂಬಭಾವವು.

ಆಳ್ವಾರುಗಳು ಮಿವ್ವವತಾರ ರಹಸ್ಯತ್ತೈಯುಮ್, ಮರ್ಚಾವತಾರ ವೈಲಕ್ಷಣ್ಯತ್ತೈಯುಮ್, ಪ್ರಚುರವಾಕ ವನುಸನ್ಧಿತ್ತು ಇದಕ್ಕು ಪ್ಪೇ ರಣಿಯಾಗ ಪ್ಪರತ್ವ ತ್ತೈ ಕಣ್ಡು ಪೋನ್ವಾರ್‌ಗಳ್.

ಹೀಗೆ ಅರ್ಚಾವತಾರ ವೈಲಕ್ಷಣ್ಯವನ್ನು ಹೊಗಳುವ ಪ್ರಮಾಣಗಳೇನೋ ಇವೆ. ಜ್ಞಾನಸಿಧಿಗಳಾದ ನಮ್ಮ ಆಳ್ವಾರಾಚಾರ್ಯರುಗಳ ನಿಷ್ಠೆಯು ಹೇಗೆ? ಈ ಅರ್ಚಾವತಾರ ವಿಷಯದಲ್ಲಿ ಅವರುಗಳ ಅಭಿಪ್ರಾಯ ಪ್ರವೃತ್ತಿಗಳು ಹೇಗೆ? ಎಂಬ ಪ್ರಶ್ನೆಗೆ ಮುಂದಿನ ವಾಕ್ಯದಿಂದ ಉತ್ತರವನ್ನು ಹೇಳುತ್ತಾರೆ.

ಆಳ್ವಾರುಗಳೂ ಈ ಅವತಾರ ರಹಸ್ಯವನ್ನೂ ಮತ್ತು ಅರ್ಚಾವತಾರದ ವಿಲಕ್ಷಣ ಸ್ವರೂಪವನ್ನೂ, **ಪ್ರಚುರವಾಕ** – ಹೆಚ್ಚಾಗಿ, ಹೇಗೆಂದರೆ ಆಶ್ರಯಣ ಮತ್ತು ಭೋಗವಿಷಯವನ್ನುಳ್ಳದ್ದಾಗಿ, **ಅನುಸನ್ಧಿತ್ತು** – ಚಿನ್ತಿಸಿ, **ಇದರ್ಕು ಪೇರ ಣಿಯಾಗ** – ಇದಕ್ಕೆ ಮೂಲಬಲವಾದ ಎಂದರೆ ಮೂಲಕಾರಣವಾದ, ಮುಂದಿನ ಸೈನ್ಯವನ್ನು ರಕ್ಷಿಸುತ್ತಾ ಹಿಂದೆ ಹೋಗುವ ಅಧಿಕವಾದ ಮೂಲಬಲಕ್ಕೆ **ಪೇರಣಿ** ಎಂದು ಹೆಸರು. **ಪರತ್ವತ್ತೈ** – ಪರರೂಪವಿಶಿಷ್ಟವಾದುದು ಪರವು, ಅದರ ಭಾವವು ಪರತ್ವವು, ಪರರೂಪವಿಶಿಷ್ಟವಾದ ಭಾವವನ್ನು ಎಂಬರ್ಥವು, **ಕಣ್ಡುಪೋ ನ್ವಾರ್‌ಗಳ್**–ಕಣ್ಣು ಹೋದರು; ಕಣ್ಡುಹೋದರು ಎಂದು ಹೇಳಿರುವದರಿಂದ, ಈ ಅರ್ಚಾವತಾರ ಅನುಸಂಧಾನವೇ ಪರರೂಪಾನುಸಂಧಾನವೆಂದೇ ಅವರು ಭಾವಿಸಿದರೆಂಬಭಿಪ್ರಾಯವು. ಅಂತಹ ಭಾವನೆಗೆ ಮುಖ್ಯಕಾರಣವೇನೆಂದರೆ, ಈ ರೂಪದಲ್ಲಿ ಪರರೂಪನು ತನ್ನ ಸೌಲಭ್ಯಾತಿಶಯವನ್ನು ಪ್ರಕಟಿಸುತ್ತಾ **ಎಲ್ಲರಿಗೂ** ವೈಗ್ರೋಚರನಾಗಿರುವದರಿಂದ ಈ ರೂಪವು ಪರರೂಪಕ್ಕಿಂತ ವೈಲಕ್ಷಣ್ಯವೆಂಬ ಭಾವವು.

ಈಗ ಮೇಲೆ ವಿವರಿಸಲ್ಪಟ್ಟ ಭಗವಂತನ ಐದು ವಿಧರೂಪಗಳನ್ನೂ ಶ್ರೀ ಪಾರ್ತ್ಥಸಾರಥಿಯವರು ಪರತ್ವಾದಿ ಪಂಚಕಸ್ತುತಿಯೆಂಬ ಸ್ತೋತ್ರದಿಂದ ಸ್ತುತಿಸಿರುತ್ತಾರೆ ನಿತ್ಯವೂ ಪಠನಮಾಡಲು ಯೋಗ್ಯವಾದ ಸ್ತೋತ್ರವು.

ಈ ಪರವ್ಯೂಹಾದಿ ರೂಪಗಳಿಂದ ಪರಮಾತ್ಮನ **ಸ್ಥಿತಿಯು** ಹೇಳಲ್ಪಟ್ಟಿತು. ಮುಂದಿನ ವಾಕ್ಯದಲ್ಲಿ "**ಇಪ್ಪಡಿ ಯಿರುಕ್ಕಿರ**" ನೆಂದು ಪ್ರಯೋಗವಿರುವದರಿಂದ, **ಇರುಕ್ಕೈ** ಎಂಬುನಮ್ಮ **ಸ್ಥಿತಿಯನ್ನು** ಜೋಧಿಸುತ್ತದೆ. ಹೀಗೆ ಈಶ್ವರನ **ಸ್ಥಿತಿಯನ್ನು** ಪರೀಕ್ಷಿಸಿ, ಮುಂದೆ ಈಶ್ವರನ ಪ್ರವೃತ್ತಿಗಳನ್ನು ಜೋಧಿಸುತ್ತಾರೆ.

ಈಶ್ವರಸ್ಯ ಪ್ರವೃತ್ತಯಃ

ಇಪ್ಪಡಿ ಯಿರುಕ್ಕಿರ ವೀಶ್ವರ್ ತನ್ನಾನಂದತ್ತುಕ್ಕು ಪರೀವಾಹ ಮಾಕ ಪ್ಪಣ್ಣುಮ್ ವ್ಯಾಪಾರಜ್ಗಳ್ ಜಗತ್ಸೃಷ್ಟಿಸ್ಥಿತಿ ಸಂಹಾರಮೋಕ್ಷ ಪ್ರದತ್ವಾದಿಗಳ್.

ಸರ್ವೇಶ್ವರನ ಪ್ರವೃತ್ತಿಭೇದಗಳು.

ಇಪ್ಪಡಿ ಇರುಕ್ಕಿರ – ಇಂತಹ ಪರತಾಪಾದಿ ಸ್ಥಿತಿಗಳನ್ನವಲಂಬಿಸಿರುವ, **ಈಶ್ವರ್** – ಸರ್ವನಿಯಾಮಕನಾದ ಸರ್ವೇಶ್ವರನು, **ತನ್ನಾನಂದತ್ತುಕ್ಕು**–ತನ್ನ ಸ್ವರೂಪಗುಣಗಳಾಗಿರುವ ಪರಿಪೂರ್ಣಾನಂದಕ್ಕೆ, **ಪರೀವಾಹಮಾಕ** – ಪ್ರವಾಹ ರೂಪವಲ್ಲೆ, **ಪಣ್ಣುಮ್ ವ್ಯಾಪಾರಜ್ಗಳ್** – ಮಾಡುವ ವ್ಯಾಪಾರಗಳು ಯಾವು ವೆಂದರೆ:—ಜಗತ್ತಿನ ಸೃಷ್ಟಿ ಸ್ಥಿತಿಲಯಗಳು ಮತ್ತು **ಮೋಕ್ಷಪ್ರದತ್ವಾದಿಗಳ್** – ಚೇತನನಿಗೆ ಕೃಪೆಗೈಯುವ ಮೋಕ್ಷವನ್ನು ಕೊಡುವವೇ ಮೊದಲಾದವುಗಳು : ಇಲ್ಲಿ ಆದಿಪದದಿಂದ ಅಂತರ್ಯಾಮಿತ್ವ, ನಿಯಮನ, ಚೇತನೋಪಾಯತ್ವಾದಿಗಳು ಸೂಚಿಸಲ್ಪಟ್ಟವು. ಸರ್ವೇಶ್ವರನು ಪರಿಪೂರ್ಣ ಕಾಮನಾಗಿರುವದರಿಂದ, ಆತನಿಗೆ ಪರಿಪೂರ್ಣಾನಂದವು ಉಂಟು. **"ರಸಹ್ಯೇವ ಏವ" "ಆನನ್ದೋಬ್ರಹ್ಮ"** ಇತ್ಯಾದಿ ಶ್ರುತಿವಾಕ್ಯಗಳುಂಟು. ಆದರೆ ಜಗತ್ಸೃಷ್ಟ್ಯಾದಿ ವ್ಯಾಪಾರಗಳಿಂದ ಆತನಿಗೆ ಪ್ರಯೋಜನವೇನು ಎಂಬುವದು **ಯುಕ್ತವಾದ** ಪ್ರಶ್ನೆಯು. ಅದಕ್ಕೆ ಉತ್ತರವಾಗಿ ಬ್ರಹ್ಮಸೂತ್ರದಲ್ಲಿ '**ಲೋಕವತ್ತು ಲೀಲಾಕೈವಲ್ಯಂ**' ಎಂದರೆ ಪರಿಪೂರ್ಣಕಾಮನಿಗೆ ತೋರುವ ರಾಜನಿಗೆ ಲೀಲೆಯಲ್ಲಿ ಹೇಗೆ ಆನಂದವೋ ಹಾಗೆಯೇ ವಾಸ್ತವವಾಗಿ ಪರಿಪೂರ್ಣಕಾಮನಾದ ಈಶ್ವರನಿಗೇನೇ ಲೀಲಾರೂಪ ಆನಂದವೂ ಅದಕ್ಕಾಗಿ ಜಗತ್ಸೃಷ್ಟಿ ನಿಯಮನ, ಪಾಲನ, ಪ್ರಳಯ, ಚೇತನೋಪಾಯತ್ವೋಪೇಯತ್ವಾದಿಗಳಲ್ಲಿ ಪ್ರವೃತ್ತಿಯೂ ಸ್ವಸಮಂಜಸವಾಗಿ ಕೂಡುತ್ತದೆಂಬಭಿಪ್ರಾಯವು. **ಜಗತ್ತಿನಸ್ಥಿತಿ** ಎಂಬುವದರಿಂದ ಜಗದ್ರಕ್ಷಣವು ಹೇಳಲ್ಪಟ್ಟಿತು. ಪರಿಪೂರ್ಣಕಾಮನಿಗೆ ಇನ್ನೊಂದುರೂಪ ಆನಂದವೂ ಉಂಟು. ಅದು ಭೋಗರೂಪವಾದುದು. ಆದುದರಿಂದ ಸರ್ವೇಶ್ವರನ ಆನಂದವು ಲೀಲಾಭೋಗ ರೂಪವಾದವುಗಳು. ಇದಕ್ಕಾಗಿ ಲೀಲಾವಿಭೂತಿ ಮತ್ತು ಭೋಗವಿಭೂತಿಯಾದ ನಿತ್ಯವಿಭೂತಿಗಳನ್ನು ಹೊಂದಿರುವದರಿಂದ ಉಭಯ ವಿಭೂತಿ ನಾಯಕನೆಂದು ಹೇಳಿಸಿಕೊಳ್ಳುವನು. ಈ ಭೋಗರೂಪ ಪ್ರವೃತ್ತಿಯೆಲ್ಲಾ, **ಮೋಕ್ಷಪ್ರದತ್ವಾದಿಗಳ್** ಎಂಬ ಪ್ರಯೋಗದಲ್ಲೇ ಅಂತರ್ಗತವು. ಹಾಗೆಯೇ ಜೀವನಿಗೆ ಉಪಾಯವಾಗಿರುವಭಾವವು, ಜಗತ್ತಿನಸ್ಥಿತಿ ಎಂದು ಜಗತ್ಪಾಲನವನ್ನು ಕುರಿತು ಹೇಳಿಕೆಯಲ್ಲೇ ಅಂತರ್ಗತವು. ಇವರಲ್ಲೇ ಅನ

ತಾರಗಳಲ್ಲಿ ಮಾಡುವ ಸಮಸ್ತ ವ್ಯಾಪಾರಗಳೂ ಆತನ ದಿವ್ಯಾದ್ಭುತ ಚೇಷ್ಟಿತ ಗಳೂ ತಿಳಿಸಲ್ಪಟ್ಟವು. ಜಗತ್ತಿನ **ಸಂಹಾರ** ಅಥವಾ ಪ್ರಳಯವೆಂದರೆ ನಾಶವ ಲ್ಲವು. ಜಗತ್ತು ಪ್ರಳಯದಲ್ಲಿ ಶೂನ್ಯವಾಗುತ್ತದೆಂದು ತಿಳಿಯಕೂಡದು. ಯಾವು ದೂ ಇದಿಲ್ಲೋ ಅದು ನಾಶವಾಗುವದಿಲ್ಲವು. ಸಂದರ್ಭಾನುಸಾರ ಅವಸ್ಥೆಗಳು ಬದ ಲಾಯಿಸಬಹುದು. ಜಗತ್ಸೃಷ್ಟಿಯಲ್ಲಿ, ಬಹು ಸೂಕ್ಷ್ಮಾವಸ್ಥೆಯಲ್ಲಿ ಈಶ್ವರನೊಂ ದಿಗೆ ಸೇರಿದ ಚಿದಚಿತ್ತುಗಳು ಸ್ಥೂಲಭಾವಗಳನ್ನು ಹೊಂದಿ ಜೀರೆಜೀರೆ ರೂಪ ಹೆಸ ರುಗಳನ್ನು ಹೊಂದುತ್ತವೆ. ಇದೇ ಸೃಷ್ಟಿಯು. ಜಗತ್ತಿನ ಪ್ರಳಯ ಅಥವಾ ಲಯ, ಅಥವಾ ಸಂಹಾರದಲ್ಲಿ ಈ ಸ್ಥೂಲರೂಪದಲ್ಲಿ ಈಶ್ವರನೊಂದಿಗೆ ಸೇರಿರುವ ಚಿದಚಿತ್ತು, ಬಹು ಸೂಕ್ಷ್ಮಾವಸ್ಥೆಯನ್ನು ಹೊಂದಿ ಆಗಲೂ ಸರ್ವೇಶ್ವರನೊಂದಿಗೇ ಸೇರಿರುತ್ತವೆ. ಇವುಗಳಿಗೆಲ್ಲಾ ಕಾರಣವು ಸರ್ವೇಶ್ವರ ಸಙ್ಕಲ್ಪವು. **"ಅಥ ನಾ ರಾಯಣೋ ಕಾಮಯತ ಪ್ರಜಾಸ್ಸೃಜೇಯೇತಿ"** ಎಂಬ ಶ್ರುತಿಯಿಂದ ಇದು ವ್ಯಕ್ತವು.

ಹೀಗೆ ಚೇತನಾಚೇತನ ಈಶ್ವರತತ್ವಗಳ ಸ್ವರೂಪ ಸ್ಥಿತಿಪ್ರವೃತ್ತಿಗಳಲ್ಲಿರುವ ಪರಸ್ಪರ ವ್ಯತ್ಯಾಸಗಳನ್ನೆಲ್ಲಾ ಬಹು ವಿಶದವಾಗಿ **ಉ**ಪದೇಶಿಸಿದರು. ಆದರೆ ಹಿಂದೆ ಅರ್ಥಪಂಚಕಾಧಿಕಾರದಲ್ಲಿ ಸರ್ವೇಶ್ವರನು **"ಸರ್ವಪ್ರಕಾರತ್ತಾಲುಮ್ ಸರ್ವಾ ವಸ್ಥೈಯಿಲುಮ್, ಸಹಧರ್ಮಚಾರಣಿಯಾನ ಪೆರಿಯ ಪಿರಾಟ್ಟಿಯಾ ರೋಡು ಪಿರವಿಲ್ಲಾದಮುಳನಲವಾನ ಅನನ್ತ ಜ್ಞಾನಾನಂದೈಕ ಸ್ವ ರೂಪ"** ಎಂದು ಸಪ್ರಮಾಣವಾಗಿ ತೋರಿಸಿದ ಬಳಿಕ, ಈಗ ಲಕ್ಷ್ಮ್ಯ ಸ್ವರೂಪ ಸ್ಥಿತಿ ಪ್ರವೃತ್ತಿ ಕಥನವು ಅತ್ಯಾವಶ್ಯಕವು. ಹಾಗೆ ತಿಳಿಸದೇ ಬಿಟ್ಟರೆ, ಈಶ್ವರನಿ ಗೇನೆ ಜಗತ್ಸೃಷ್ಟಿ ಸ್ಥಿತಿ ಲಯಗಳಲ್ಲೂ ಚೇತನೋಪಾಯತ್ವೋಪೇಯತ್ವಗಳಲ್ಲೂ ಅನ್ವಯವುಂಟೆಂದು ಹೇಳಿ, ಸಿಲ್ಲಸಿಬಿಟ್ಟರೆ, ಲಕ್ಷ್ಮಿಗೆ ಅವುಗಳಲ್ಲಿ ಅನ್ವಯವಿಲ್ಲವೆಂಬ ಶಂಕಾ ಉಂಟಾದೀತು. ಆದುದರಿಂದ ಈ ತತ್ವತ್ರಯದ ಸ್ವರೂಪಸ್ಥಿತಿಪ್ರವೃತ್ತಿ ಗಳ ಕಥನವು ಪೂರ್ಣತೆಯನ್ನು ಹೊಂದಬೇಕಾದರೆ, ಲಕ್ಷ್ಮ್ಯ ಸ್ವರೂಪ ಸ್ಥಿತಿ ಪ್ರವೃತ್ತಿ ಕಥನವು ಅತ್ಯಾವಶ್ಯಕವು. ಆದುದರಿಂದ ಮುಂದೆ ಪರತತ್ವವಾದ ನಾರಾ ಯಣನಿಗೆ ಜೀವ ಸ್ವರೂಪ ಸ್ಥಿತಿ ಪ್ರವೃತ್ತಿಗಳು ಹೇಳಲ್ಪಟ್ಟವೋ ಅವೆಲ್ಲವೂ ಲೋಕನಾಥವಲ್ಲಿಯಾದ ಲೋಕೈಕೇಶ್ವರಿಗೂ ಕೂಡ ಉಂಟೆಂದು ಭಾವಿಸತಕ್ಕ ದ್ದೆಂದೂ, ಸರ್ವೇಶ್ವರನ ಸ್ವರೂಪಸ್ಥಿತಿಪ್ರವೃತ್ತಿಗಳು ಚೇತನಾಚೇತನವರ್ಗಗಳಿಗಿಲ್ಲ ವೆಂದು ವ್ಯಾವರ್ತಿಸಿ ಹೇಳಲ್ಪಟ್ಟಿತೇ ವಿನಾ, ಈಶ್ವರಕೋಟಿಗೆ ಸೇರಿದ ಲಕ್ಷ್ಮ್ಯಾದಿ ವಿಷ ಯವನ್ನು ವ್ಯಾವರ್ತಿಸಿ ಹೇಳಲ್ಪಡಲಿಲ್ಲವೆಂದೂ, ಸಪ್ರಮಾಣವಾಗಿಯೂ, ಆಳ್ವಾರಾಚಾ ರ್ಯರುಗಳಭಿಪ್ರಾಯಾನುಸಾರವಾಗಿಯೂ ಸ್ಥಾಪಿಸುತ್ತೇವೆ.

ಲಕ್ಷ್ಮೀ ಸ್ವರೂಪಸ್ಥಿತಿ ಪ್ರವೃತ್ತಿ ನಿರೂಪಣಮ್.

ಇವ್ವೀಶ್ವರರ್ [1] "ನಿತ್ಯೈ ವೈಷಾ ಜಗನ್ಮಾತಾ ವಿಷ್ಣೋ ಶ್ರೀರನಪಾಯಿನೀ" **ಇತ್ಯಾದಿಗಳಿರ್ ಪಡಿಯೇ ಸರ್ವಾವಸ್ಥೈ ಯಿಲುಮ್ ಸಪತ್ನೀಕನಾಯ್ ಕೊಣ್ಡೇ ಯಿರುಕ್ಕ ಮೆನ್ರು ಮಿಡತ್ತೈ** [2] "ತತ್ತ್ವೇನಯಃ" [3] "ಮಾತಾಪಿತಾ" **ಎಜ್ಗಿರ ಶ್ಲೋಕಜ್ಗಳಿಲೇ ಉಪಕಾರ ವಿಶೇಷತ್ತಾಲೆ ಸಾದರಮಾಗ ವಿಶೇಷಿತ್ತು ಚ್ಚೊಲ್ಲಪ್ಪಟ್ಟ ಪರಾಶರ ಪರಾಜ್ಮುಶ ಪ್ರಬನ್ಧಜ್ಗಳಿಲೆ ತೆಳಿನ್ದುಕೊಳ್ವದು.**

ಇವ್ವೀಶ್ವರರ್ – ಇಂತಹ ವಿಲಕ್ಷಣರೂಪವಾದ ಸ್ಥಿತಿಪ್ರವೃತ್ತಿಗಳುಳ್ಳ ಸರ್ವೇಶ್ವರನು, "**ಏಷಾ** – ಈ, **ಶ್ರೀಃ** – ಲಕ್ಷ್ಮಿಯು, **ನಿತ್ಯಾ**–ನಿತ್ಯಳು, **ಜಗನ್ಮಾತಾ**–ಜಗತ್ತಿಗೆಲ್ಲಾ ತಾಯಿಯು, **ವಿಷ್ಣೋಃ** – ಜಗದ್ವ್ಯಾಪಿಯಾದ ಸರ್ವೇಶ್ವರನಿಗೆ, **ಅನಪಾಯಿನೀ** – ಸರ್ವಕಾಲದಲ್ಲೂ ಸರ್ವಾವಸ್ಥೆಯಲ್ಲೂ ಎಡಬಿಡದೆ ಇರುವ ಪತ್ನಿಯು," **ಇತ್ಯಾದಿಗಳಿರ್ ಪಡಿಯೇ** – ಎಂಬಿವೇ ಮೊದಲಾದ ಪ್ರಮಾಣಗಳಲ್ಲಿ ಹೇಳಿರುವ ಹಾಗೆ, **ಸರ್ವಾವಸ್ಥೈಯಿಲುಮ್** – ಪರವ್ಯೂಹ ವಿಭವ ಹಾರ್ದ ಅರ್ಚಾವತಾರ ರೂಪಗಳನ್ನು ಕೈಕೊಳ್ಳುವಾಗಲೂ, ಜಗತ್ಸೃಷ್ಟಿ, ಅನುಪ್ರವೇಶ, ನಾಮರೂಪಕರಣ, ವ್ಯಾಪನಾ, ಧರಣ, ನಿಯಮನ, ಪಾಲನ, ಸಂಹಾರಾದಿ ಸಕಲ ವ್ಯಾಪಾರಗಳಲ್ಲೂ,ಚೇತನನಿಗೆ ಉಪಾಯೋಪಾಯಾವಸ್ಥೆಗಳಲ್ಲೂ,ಹೀಗೆ ಸಮಸ್ತಾವಸ್ಥೆಗಳಲ್ಲೂ **ಸಪತ್ನೀಕನಾಯ್ ಕೊಣ್ಡೇ** – ಪತ್ನೀವಿಶಿಷ್ಟನಾಗಿಯೇ, **ಇರುಕ್ಕು ಮೆನ್ರುಮಿಡತ್ತೈ** – ಇರುತ್ತಾನೆಂಬುವ ಸಂದರ್ಭವನ್ನು **"ತತ್ತ್ವೇನಯಃ"** ಎಂಬ ಮತ್ತು **'ಮಾತಾ ಪಿತಾ"** ಎಂಬ ಶ್ಲೋಕಗಳಲ್ಲಿ, **ಉಪಕಾರವಿಶೇಷತ್ತಾಲೆ** – ಅವುಗಳು ತತ್ವಾರ್ಥಗಳನ್ನು ವಿಶದವಾಗಿಯೂ ಯಥಾರ್ಥವಾಗಿಯೂ ತಿಳಿಸಿದ ಉಪಕಾರ ವಿಶೇಷದಿಂದ, **ಸಾದರ ಮಾಗ ವಿಶೇಷಿತ್ತು ಚ್ಚೊಲ್ಲಪ್ಪಟ್ಟ** – ತುಂಬಾ ಭಕ್ತಿ ವಿಶ್ವಾಸಗಳಿಂದ ಹೆಚ್ಚಾಗಿ ಸ್ತೋತ್ರರೂಪದಲ್ಲಿ ಹೇಳಲ್ಪಟ್ಟ, **ಪರಾಶರ ಪರಾಜ್ಮುಶ** – ಪರಮಜ್ಞಾನನಿಧಿಗಳಾದ ಪರಾಶರರ ಮತ್ತು ನಮ್ಮಾಳ್ವಾರವರ, **ಪ್ರಬನ್ಧಜ್ಗಳಿಲೆ** – ಕಾವ್ಯಗಳಾದ ಶ್ರೀವಿಷ್ಣುಪುರಾಣ ಮತ್ತು ತಿರುವಾಯ್‌ಮೊಳಿಗಳಲ್ಲಿ, **ತೆಳಿನ್ದುಕೊಳ್ವದು** – ತಿಳಿದುಕೊಳ್ಳುವದು. ಶ್ರೀ ಲಕ್ಷ್ಮೀತತ್ವದ ಯಾಥಾತ್ಮ್ಯವನ್ನು ತಿಳಿಯಬೇಕಾದರೆ ಶ್ರೀಪರಾಶರರು ಬರೆದ ಶ್ರೀವಿಷ್ಣುಪುರಾಣದಿಂದಲೂ, ನಮ್ಮಾ

---

(1) ವಿ. ಪು. ೧. ೮. ೧೭. (2) ಆಳವಂದಾರ್ ಸ್ತೋತ್ರ, ೪.

(3) ಆಳವಂದಾರ್ ಸ್ತೋತ್ರ, 5.

ಳ್ವಾರವರು ರಚಿಸಿದ ತಿರುವಾಯ್‌ಮೊಳಿಯಿಂದಲೂ ತಿಳಿಯಬಹುದೆಂಬ ತಾತ್ಪರ್ಯವು. ಇವರುಗಳಭಿಪ್ರಾಯಗಳನ್ನನುಸರಿಸಿಯೇ ತಮ್ಮ ಅಭಿಪ್ರಾಯವು **ಎಂಬ** ಭಾವವು. ಪರಮಾಚ್ಛಾಸಿಗಳಭಿಪ್ರಾಯಾನುಸಾರವಾದ ಸಿದ್ಧಾನ್ತವಾದುದರಿಂದ ಎಲ್ಲರಿಗೂ ತುಂಬಾ ಗ್ರಾಹ್ಯವಾದುದೆಂಬುವದು ಮುಖ್ಯ ತಾತ್ಪರ್ಯವು. ಇಲ್ಲಿ **"ತತ್ವೇನಯಃ"** ಎಂಬ ಶ್ಲೋಕದಿಂದ ಶ್ರೀವ್ಯಾಸಮಹರ್ಷಿಯ ತಂದೆಗಳಾದ ಶ್ರೀಪರಾಶರರೂ, **ಮಾತಾಪಿತಾ** ಎಂಬ ಶ್ಲೋಕದಿಂದ ಇತರ ಅಪಸಿದ್ಧಾನ್ತಿಗಳಿಗೆ ಆಬ್ಜುಶ ಪ್ರಾಯರಾದುದರಿಂದ ಪರಾಙ್ಕುಶರೆಂಬ ನಾಮಧೇಯವನ್ನು ಹೊಂದಿದ ನಮ್ಮಾಳ್ವಾರವರೂ, ಶ್ರೀ ಭಾಷ್ಯಕಾರರಿಗೆ ಆಚಾರ್ಯರಾದ ಶ್ರೀಯಾಮುನಾರ್ಯರವರಿಂದ ಸ್ತುತಿಸಲ್ಪಟ್ಟಿರುತ್ತಾರೆ. ಇವರುಗಳು ತತ್ವವನ್ನು ಯಥಾರ್ಥವಾಗಿ ಅರಿತು, ವಿಶಿಷ್ಟಾದ್ವೈತ ಸಿದ್ಧಾನ್ತವನ್ನೂ, ತತ್ವತ್ರಯಾರ್ಥ ಪಞ್ಚಕಾದಿ ಅಭಿಪ್ರಾಯಗಳನ್ನೂ, ಲಕ್ಷ್ಮೀತತ್ವನಿರ್ಣಯ ಮುಂತಾದವುಗಳನ್ನೂ, ಶ್ರುತಿಸ್ಮೃತ್ಯನುಸಾರ ಉಪದೇಶಮಾಡಿರುವುದರಿಂದ ವಿಶೇಷೋಪಕಾರ ಮಾಡಿರುತ್ತಾರೆ. ಇದೂ ಅಲ್ಲದೆ ಈ ಪರಾಶರ ಪರಾಙ್ಕುಶರುಗಳಿಂದ ನಿರ್ಣಯಿಸಲ್ಪಟ್ಟ ತತ್ಪಾರ್ಥಗಳೇ ನಮ್ಮ ಮತೋದ್ಧಾರಕರಾದ ಶ್ರೀಭಾಷ್ಯಕಾರರ ಪ್ರಾಚಾರ್ಯರಾದ ಶ್ರೀಯಾಮುನೇಯರಿಗೂ ಗ್ರಾಹ್ಯವಾದುದುದರಿಂದ ನಮಗೂ ಪರಮಗ್ರಾಹ್ಯವಾದುದೆಂಬಭಿಪ್ರಾಯವನ್ನು ಸೂಚಿಸುತ್ತಾರೆ; ಹೀಗೆ ತತ್ವಯಾಥಾರ್ಥ್ಯವನ್ನು ಇವರುಗಳಿಬ್ಬರೂ ನಿರ್ಣಯಿಸಿದುದರಿಂದ ಶ್ರೀಯಾಮುನೇಯರು ಬಹಳ **ಸಾದರ**ವಾಗಿ ತುಂಬಾಭಕ್ತಿವಿಶ್ವಾಸಗಳಿಂದ ಸ್ತೋತ್ರಮಾಡಿರುತ್ತಾರೆ.

ಈ ಶ್ಲೋಕಗಳೂ ಅವುಗಳ ತಾತ್ಪರ್ಯವೂ ಏನೆಂದರೆ:—

"ತತ್ವೇನ ಯಶ್ಚಿದ ಚಿದೀಶ್ವರ ತತ್ಸ್ವಭಾವ ಭೋಗಾಪವರ್ಗ
ತದುಪಾಯ ಗತೀರುದಾರಃ । ಸಂದರ್ಶಯನ್ನಿರಮಿಮೀತ
ಪುರಾಣರತ್ನಂ ತಸ್ಮೈ ನಮೋ ಮುನಿವರಾಯ ಪರಾಶರಾಯ॥"

"ಪುರಾಣಗಳಲ್ಲಿಲ್ಲಾ ಸರ್ವಶ್ರೇಷ್ಠವಾದುದರಿಂದ ಪುರಾಣರತ್ನವೆನಿಸಿದ ಶ್ರೀವಿಷ್ಣುಪುರಾಣವನ್ನು ನಿರ್ಮಿಸಿದ ಶ್ರೀಪರಾಶರ ಮಹರ್ಷಿಗಳನ್ನು ನಮಿಸುತ್ತೇನೆ. ಏಕೆಂದರೆ:— ಅಜ್ಞಾನಾಂಧಕಾರದಲ್ಲಿ ಪುನಃ ಪುನಃ ಹೇಯವಾದ ಸಂಸಾರದಲ್ಲೇ ಮುಳುಗಿರುವುದು ತಪ್ಪಿಸಿ ಪರಿಶುದ್ಧಾನಂದವನ್ನು ಹೊಂದಲಿ ಎಂಬ ಉದಾರ ಸ್ವಭಾವದಿಂದ ಸರ್ವತತ್ವವನ್ನು ಯಥಾರ್ಥವಾಗಿ ತಿಳಿಸುವದಕ್ಕಾಗಿ ಗ್ರಂಥನಿರ್ಮಾಣಮಾಡಿದುದರಿಂದ ಅದಕ್ಕಾಗಿ ನಮಸ್ಕಾರವು. ಏನೇನು ಅವರ ಗ್ರಂಥದಲ್ಲಿ ಯಥಾವತ್ತಾಗಿ ತಿಳಿಸಿದ್ದಾರೆಂದರೆ:— ಚಿತ್ತು, ಅಚಿತ್ತು, ಈಶ್ವರರುಗಳ ಸ್ವರೂಪವನ್ನೂ, ಅವರುಗಳ ಸ್ವಭಾವವನ್ನೂ, ಚೇತನನು ಹೊಂದಬಹುದಾದ ಸ್ವರ್ಗ ಕೈವಲ್ಯ ಇಹಲೋಕಾದಿಭೋಗಗಳನ್ನೂ,

ವೈಕುಂಠಲೋಕಾನಂದವನ್ನೂ, ಅವುಗಳನ್ನು ಹೊಂದುವ ಉಪಾಯಗಳನ್ನೂ, ಈ ಜೀವನನು ಹೋಗುವ ಮಾರ್ಗಗಳನ್ನೂ ಅಥವಾ ಸಾತ್ವಿಕರಾಜಸ ತಾಮಸಗತಿಗಳನ್ನೂ ಎಲ್ಲವನ್ನೂ ನಮಗೆ ತಿಳಿಸುವದಕ್ಕಾಗಿ ರಚಿಸಿರುತ್ತಾರೆ. ಅಂತಹ ಮಹನೀಯರಿಗೆ ನಮಸ್ಕಾರವು. ಇಲ್ಲಿ ಪ್ರಕೃತ, ಈಶ್ವರ ಸ್ವರೂಪವನ್ನು ಹೇಳುವಾಗ, ಲಕ್ಷ್ಮೀವಿಶಿಷ್ಟತೆಯನ್ನೇ ಬಹು ಸ್ವಾರಸ್ಯವಾಗಿ ಉಪಪಾದನೆಮಾಡಿರುತ್ತಾರೆ. ಪರಾಶರರು ತಮ್ಮ ಶಿಷ್ಯರಾದ ಮೈತ್ರೇಯರಿಗೆ ಲಕ್ಷ್ಮೀವಿಷಯವನ್ನು ಹೇಳುವಾಗ ಎರಡು ಅವತಾರಗಳಲ್ಲೂ ಅಕೆಯು ಸರ್ವೇಶ್ವರನೊಂದಿಗೇ ಇದ್ದಳೆಂದು ಹೇಳಿದರು. ಅದಕ್ಕೆ ಶಿಷ್ಯರು ಅದು ಹೇಗೆ ಎಂದು ಕೇಳಿದುದಕ್ಕೆ, ಆಗ ಅವರು ವಿಶೇಷವಾಗಿ ಉಪಪಾದನೆಮಾಡಿ, ಲಕ್ಷ್ಮಿಯು ಯಾವಾಗಲೂ ಸರ್ವೇಶ್ವರನೊಂದಿಗೇನೇ ಸೇರಿರುವ ಭಾವನೆಯನ್ನು ಸಮರ್ಥನೆ ಮಾಡುವದಕ್ಕಾಗಿ ಸರ್ವೇಶ್ವರನ ಪ್ರತಿಯೊಂದು ಅವತಾರದಲ್ಲೂ ಲಕ್ಷ್ಮಿಯೂ ಅವತರಿಸಿ ಸರ್ವೇಶ್ವರನಿಗೆ ಅನುರೂಪವಾದ ದಿವ್ಯಮಂಗಳ ವಿಗ್ರಹವನ್ನು ಎತ್ತುವಳೆಂದು ಹೇಳಿದರು. ಇಷ್ಟು ಮಾತ್ರವೇ, ಪ್ರಶ್ನೆಗೆ ಎಷ್ಟು ಜೀಕೋ ಅಷ್ಟು ಮಾತ್ರ, ಹೇಳಿಬಿಟ್ಟರೆ, ಎಲ್ಲಿ ತಪ್ಪಾವ ಅಭಿಪ್ರಾಯ ಉಳ್ಳವರಾಗತ್ತಾರೋ ಎಂದು ಭಾವಿಸಿ,

"ಯಥಾ ಸರ್ವಗತೋ ವಿಷ್ಣು ಸ್ತಥೈವೇಯಂ ದ್ವಿಜೋತ್ತಮ"

ಎಂದು ಹೇಳಿ, ಈಶ್ವರನ ಹಾಗೆಯೇ ಈಕೆಯೂ ಎಲ್ಲವನ್ನೂ ವ್ಯಾಪಿಸಿರುವದರಿಂದ ವಿಷ್ಣುವಿನ ಹಾಗೆಯೇ ವಿಭುವೆಂದೂ, ಲೋಕಕ್ಕೆಲ್ಲಾ ಈಶ್ವರಳೆಂದೂ ಸ್ಥಾಪಿಸಿ, ಇತರರು ಹೇಳುವ ಹಾಗೆ ಈಕೆಯು ಅಣುವಲ್ಲವೆಂದೂ, ಅದುದರಿಂದ ಜೀವಕೋಟಿಗೆ ಸೇರಿದವಳಲ್ಲವೆಂದೂ ಸ್ಥಾಪಿಸಿರುತ್ತಾರೆ. ಈ ಸ್ವರೂಪವಲ್ಲಯೂ ಕೂಡ ಲಕ್ಷ್ಮಿಯು ವಿಭುವೆಂಬಂಶವು ಚೆನ್ನಾಗಿ ತಮ್ಮ ಶಿಷ್ಯರಿಗೆ ವಿದಿತವಾಗಲಿ ಎಂದು ಇನ್ನೊಂದು ಸಲ **"ತ್ವಯೈತದ್ವಿಷ್ಣುನಾಚಾಂಬ ಜಗದ್ವ್ಯಾಪ್ತಂ ಚರಾಚರಂ"** ಎಂದು ಸ್ವರೂಪತಃ ವ್ಯಾಪ್ತಿಯೇಕಿರುತ್ತಾರೆ. ಹೀಗೆ ಸರ್ವೇಶ್ವರನೊಂದಿಗೆಲಕ್ಷ್ಮಿಗೆ ಸ್ವರೂಪರೂಪವಿಭವೈಶ್ವರ್ಯಗಳಲ್ಲೂ ನಿತ್ಯಯೋಗವನ್ನು ಬಹು ಸ್ವಾರಸ್ಯವಾಗಿ ಉಪಪಾದಿಸಿರುತ್ತಾರೆ. ಈ ವಿಷಯದಲ್ಲಿ ಹೆಚ್ಚು ವಿಷಯ ತಿಳಿಯಬೇಕೆಂಬಷೇಕ್ಷೆಯಿರುವವರು ದಾಸನು ಪ್ರಕಟಿಸಿರುವ ತ್ರೀವೇದಿಕ ಸೂಕ್ತಿಯಾದ **ಶ್ರೀ ಸ್ತುತಿ** ಯನ್ನು ಪರಾಂಬರಿಸಬಹುದು

ಮಾತಾಪಿತಾಯುವತಯ ಸ್ತನಯಾ ವಿಭೂತಿ ।
ಸರ್ವಂ ಯದೇವ ನಿಯಮೇನ ಮದನ್ವಯಾನಾಂ ।
ಆದ್ಯಸ್ಯ ನಃ ಕುಲಪತೇ ರ್ವಕುಳಾಭಿರಾಮಂ ।
ಶ್ರೀಮತ್ತದಂಘ್ರಿಯುಗಳಂ ಪ್ರಣಮಾಮಿ ಮೂರ್ಧ್ನಾ ॥

(ಆಳ. ೫೫)

ಶ್ರೀ ಪರಾಶರರು ಸ್ವಲ್ಪ ಕ್ಲಿಷ್ಟವಾದ ಸಂಸ್ಕೃತ ಭಾಷೆಯಲ್ಲಿ ಬರೆದರು. ಶ್ರೀ ನಮ್ಮಾಳ್ವಾರುರಾದರೋ ದ್ರಾವಿಡ ಭಾಷೆಯಲ್ಲಿ ಗಾನದಿಂದ ಆಹ್ಲಾದಕರವಾಗಿ, ಸರ್ವ ಜನಮನೋರಂಜಕವಾಗಿ ಶ್ರುತಿಗಳ ತತ್ವಾರ್ಥಗಳನ್ನು ಉಪದೇಶಮಾಡಿದ ಮಹತ್ತಾದ ಉಪಕಾರಸ್ಮರಣರೂಪವಾಗಿ ಸ್ತೋತ್ರಮಾಡುತ್ತಾರೆ:—

ನಮಗೆ ಆದಿಯಾಗಿ ಪ್ರಥಮಾಚಾರ್ಯರಾಗಿ, ನಮಗೆ ಕುಲಪತಿ, ಗೋತ್ರರ್ಷಿಗ ಳಾದ, ಶ್ರೀ ಪರಾಙ್ಕುಶಮುನಿ ಎಂದರೆ ನಮ್ಮಾಳ್ವಾರವರ ಪಾದದ್ವಂದವನ್ನು ಶಿರಸಾ ನಮಿಸುವೆನು. ಆ ಪಾದದ್ವಂದವು ಎಂಥಾದ್ದೆಂದರೆ ವಕುಳಾಭರಣವಾದುದು, ವಕುಳಪುಷ್ಪದ ಸುವಾಸನೆಯಿಂದ ಮನೋಹರವಾದುದು. ಇವರಿಗೆ ವಕುಳಪುಷ್ಪ ದಲ್ಲಿ ತುಂಬಾ ಪ್ರೀತಿಯೆಂದು ಭಕ್ತರಿಂದ ಅಲ್ಲಿ ಅರ್ಪಿಸಲ್ಪಡುವದರಿಂದ ಎಂದ ರಿಯಬಹುದು. ಇವರು ವಾಸವಾಗಿದ್ದ ಕುರಿಕಾಪುರಿಯಲ್ಲಿ ಬಿಜಮಾಡಿಸಿರುವ ಆದಿನಾಥನಿಗೆ ವಕುಳಪುಷ್ಪದಲ್ಲಿ ತುಂಬಾ ಪ್ರೀತಿಯು. ಇವರ ಪಾದವನ್ನಾಶ್ರಯಿಸಿದ ವರಿಗೆ ಆದಿದೇವನ ಸಾನ್ನಿಧ್ಯವು ಸತ್ಯವಾದುದರಿಂದ, ತಲೆಯನ್ನು ಇವರ ಪಾದದಲ್ಲಿ, ಯಾವಾಗ ಇಟ್ಟರೋ, ಆವಾಗಲೇ ಸರ್ವೇಶ್ವರಸಾನ್ನಿಧ್ಯವು ಸತ್ಯವೆಂದು ಆ ಆದಿನಾ ಥನ ಹತ್ತಿರ ವ್ಯಾಪಿಸಿರುವ ವಕುಳ ಪುಷ್ಪದ ಸುಗಂಧದ ಮನೋಹರತ್ವವು ಒಡನೆ ತೋರಿಬರುತ್ತದೆಂಬ ಭಾವವು. ಇನ್ನೂ ಎಂತಹ ಪಾದಯುಗ್ಮವೆಂದರೆ, ತಮ್ಮ ವಂಶೀಯರಾದ ನಾಥಮುನಿ ಪ್ರಭೃತಿಗಳು ಆ ಪಾದಯುಗ್ಮವನ್ನೇ ತಾಯಿಯ ಹಾಗೆ ರಕ್ಷಕನೆಂದೂ, ತಂದೆಯ ಹಾಗೆ ಹಿತಮಾರ್ಗ ಪ್ರವರ್ತಕವೆಂದೂ, ಯುವತಿಗಳ ಹಾಗೆ ಸರ್ವಭೋಗಾನಂದದಾಯಕವೆಂದೂ, ಮಕ್ಕಳಹಾಗೆ ತುಂಬಾ ಪ್ರೀತಿವಿಶ್ವಾಸ ದಾಯಕವೆಂದೂ, ಐಶ್ವರ್ಯದ ಹಾಗೆ ವೈಭವವನ್ನುಂಟುಮಾಡತಕ್ಕದ್ದೆಂದೂ ಭಾವಿಸಿ ಸಂಪಾದ್ಯ ಆದುವರಿಂದ ಆ ಪಾದದ್ವಂದಕ್ಕೆ ನಮಸ್ಕಾರವು. ನಮ್ಮಾಳ್ವಾರವರೂ ಕೂಡ ತತ್ವತ್ರಯಗಳ ಸ್ವರೂಪಸ್ಥಿತಿಪ್ರವೃತ್ತಿಗಳ ಯಾಥಾರ್ಥ್ಯವನ್ನು ಪಪಾದನೆ ಮಾಡಿದುದೂ ಅಲ್ಲದೆ ಲಕ್ಷ್ಮಿಯ ಸ್ವರೂಪರೂಪಗುಣವಿಭವಾದಿಗಳನ್ನು ಚನ್ನಾಗಿ ಉಪಪಾದಿಸಿ, ಶ್ರೀ ಆಳವಂದಾರ್ವರು "**ಗಾಢೋಪಗೂಢಾನಿತೇ**" ಎಂದು ಹೇಳ ರುವ ಹಾಗೆ ಸರ್ವಾವಸ್ಥೆಯಲ್ಲೂ ಸರ್ವೇಶ್ವರನೊಂದಿಗೆ ನಿತ್ಯಯೋಗವನ್ನು ತೋರಿರುತ್ತಾರೆ. ಶ್ರೀಸಿಗವಾನ್ಸ್ತೋ ದೇಶಿಕರವರೇ ಮುಂದೆ ಸಪ್ರಮಾಣವಾಗಿ ಚರ್ಚಿಸುವದ ರಿಂದ ಎಲ್ಲಿ ಹೇಳಿದ್ದಾರೆಂಬುದನ್ನು ತೋರಿಸಲಿಲ್ಲವು. ನಮ್ಮಾಳ್ವಾರವರ ತಿರುವಾಯಿ ಮೋಳಿಯನ್ನು ಎಚ್ಚರೂ ಅಧ್ಯಯನ ಮಾಡಿರುತ್ತಾರೆಂದು ಭಾವಿಸಿ ಬಹುಶಃ ತೋರಿಸಲಿಲ್ಲ ವೆಂದಾದರೂ ಆಗಬಹುದು. ಪ್ರತಿಯೊಂದು ಪತ್ತಿನಲ್ಲೂ ತ್ರಿಯುಃಪತಿತ್ವಭಾವನೆಯನ್ನು ಉಪದೇಶಿಸಿರುತ್ತಾರೆ. ಪ್ರಕೃತ '**ಅಕಿಲಕಿಲ್ಲೇ**ೇ' (6. 6. 10) '**ಮಾಧವನೆನ್ರೇ**' (10. 5. 7.) '**ಇಂಬಲತ್ತೋಡಿನಡನ್ದು**' (6. 9. 3.) ಎಂಬೀ ಮೂರು ಪಾಸುರ ಗಳ ಅರ್ಥನಿರ್ವಹಣದಿಂದಲೇ ಸರ್ವವೂ ವಿದಿತವಾಗಬಹುದು.

'**ಶ್ರೀರ್ಮನಾರಾಯಣೋ ನಃಪತಿಃ**' ಎಂದು ಹೇಳಿರುವ ಹಾಗೆ ಪರ ತತ್ವಕ್ಕೆ ಲಕ್ಷ್ಮೀನಾರಾಯಣರಿಬ್ಬರೂ ಸೇರಿ '**ದ್ವೌಚಸದೈಕಶೇಷೀ**' ಉಭಯ ವಿಭೂತಿಗೂ ಇಬ್ಬರೂ ಸೇರಿಯೇ ಒಂದು ಶೇಷಿ ಭಾವವೆಂದು ಯಾವಾಗ ಏರ್ಪಟ್ಟಿತೋ, ಆಗ ಇವರಿಬ್ಬರಿಗೂ ನಿತ್ಯಯೋಗವೆಂಬುವದು ಸರ್ವಾವಸ್ಥೆಯಲ್ಲೂ ಉಂಟೆಂಬುವದು ಸ್ಥಾಪಿಸಲ್ಪಡುವದರಿಂದ **ಸರ್ವಾವಸ್ಥೆಯಿಲುಮ್ ಸಪತ್ನೀಕನಾಯೇ** ಎಂದು ಪ್ರಯೋಗಿಸಿರುತ್ತಾರೆ. ಈ ನಿತ್ಯಯೋಗದಿಂದ ಲೀಲಾವಿಭೂತಿಯ ಸೃಷ್ಟಿ, ಸ್ಥಿತಿ, ವ್ಯಾಪನೆ, ಧರಣ, ತದಾತ್ಮತ್ವ, ನಿಯಮನ, ಲಯ, ಚೇತನೋಪಾಯತ್ವ, ಮೋಕ್ಷಪ್ರದತ್ವ, ಉಪೇಯತ್ವಾದಿ ಸಮಸ್ತ ವ್ಯಾಪಾರಗಳಲ್ಲೂ ಲಕ್ಷ್ಮಿಗೂ ಅನ್ವಯ ಉಂಟೆಂದು ಹೇಳಿದಂತಾಯಿತು. ಆದರೆ ಕೆಲವರು ಕೆಲವು ವ್ಯಾಪಾರಗಳಲ್ಲಿ ಮಾತ್ರ ಅನ್ವಯ ಉಂಟೆಂದೂ, ಇನ್ನು ಕೆಲವುಗಳಾದ ಜಗತ್ಸೃಷ್ಟಿಸ್ಥಿತಿಲಯಾದಿಗಳೂ, ಜಗದ್ವ್ಯಾಪ್ತಿ, ಚೇತನೋಪಾಯತ್ವ, ಮೋಕ್ಷಪ್ರದತ್ವಾದಿಗಳು ಇವುಗಳಲ್ಲಿ ಲೋಕೈಕೇಶ್ವರಿಯಾದ ಶ್ರೀಮಹಾಲಕ್ಷ್ಮಿಗೆ ಸಂಬಂಧವಿಲ್ಲವೆಂದು ಹೇಳುವರು. ಇದು ಶಾಸ್ತ್ರಸಮ್ಮತವಲ್ಲದ ವಾದವಾದುದರಿಂದ ಮುಂದಿನ ಸ್ಥಿರೀಕರಣಭಾಗದಲ್ಲಿ ಸಪ್ರಮಾಣವಾಗಿ ಚರ್ಚಿಸಿ ಶಾಸ್ತ್ರಸಮ್ಮತವಲ್ಲವೆಂಬುವದನ್ನು ವ್ಯಕ್ತಪಡಿಸುತ್ತಾರೆ.

ಆದರೆ **ಸಪತ್ನೀಕನಾಯ್** ಎಂದು ಹೇಳಿರುವದರಿಂದ ಲಕ್ಷ್ಮಿಯು ಸುಮ್ಮನೆ ಹತ್ತಿರ ಇರುವಳು, ಸರ್ವೇಶ್ವರನೇ ಸರ್ವವ್ಯಾಪಾರಗಳನ್ನೂ ನಡಿಸುವನು ಎಂಬಭಿಪ್ರಾಯವಲ್ಲವು, ಏಕೆಂದರೆ ಪ್ರಮಾಣಗಳು ಹಾಗೆ ಹೇಳಲಿಲ್ಲವು.

"ಲಕ್ಷ್ಮ್ಯಾ ಸಹ ಹೃಷೀಕೇಶೋ ದೇವ್ಯಾ ಕಾರುಣ್ಯರೂಪಯಾ।
ರಕ್ಷಕಸ್ಸರ್ವಸಿದ್ಧಾನ್ತೇ ವೇದಾನ್ತೇಷು ಚ ಗೀಯತೇ ॥"

ಎಂಬ ಲಕ್ಷ್ಮೀತಂತ್ರವಾಕ್ಯದಲ್ಲಿ **ಲಕ್ಷ್ಮ್ಯಾ ಸಹ** ಎಂಬಲ್ಲಿ ಅಪ್ರಧಾನ ತೃತೀಯೆಯಲ್ಲವು ಲಕ್ಷ್ಮಿಗೂ ರಕ್ಷಣದಲ್ಲಿ ಅನ್ವಯ ಉಂಟೆಂದು ಬೋಧಿಸುವದಕ್ಕಾಗಿಯೇ **ದೇವ್ಯಾಕಾರುಣ್ಯರೂಪಯಾ** ಎಂಬ ವಿಶೇಷಣಗಳು. ಜಗತ್ತಿಗೆ ಶೇಷಿಭಾವವು ಸರ್ವೇಶ್ವರನೊಬ್ಬನಿಗೇ ಅಲ್ಲವು. ಲಕ್ಷ್ಮಿಗೂ ಉಂಟೆಂದು "**ಅಸ್ಯಾಮುಮಚ ಶೇಷಂಹಿವಿಭೂತಿರುಭಯಾತ್ಮಕಾ**" ಎಂದು ಉಭಯ ವಿಭೂತಿ ನಿಯಮನಾದಿಗಳಲ್ಲಿ ಇಬ್ಬರಿಗೂ ಅನ್ವಯ ಉಂಟೆಂದೂ, ಹಾಗೆಯೇ ಸ್ವರೂಪತಃ ವ್ಯಾಪ್ತಿ ಮೊದಲಾದವುಗಳೂ ಉಂಟೆಂದೂ ಶ್ರೀ ವಿಷ್ವಕ್ಸೇನ ಸಂಹಿತೆಯಲ್ಲಿ ಸರ್ವೇಶ್ವರನೇ ಹೇಳಿರುತ್ತಾನೆ.

ಲಕ್ಷ್ಮಿಯು ಸರ್ವೇಶ್ವರನ ಪಕ್ಕದಲ್ಲಿ ಸರ್ವಾವಸ್ಥೆಯಲ್ಲೂ ಸುಮ್ಮನೆ ಇಲ್ಲದಿದ್ದರೂ ಅನುಮೋದನ, ಪ್ರೇರಣೆ, ಪುರುಷಕಾರತ್ವಾದಿ ವ್ಯಾಪಾರಗಳುಂಟೆಂದು ಹೇಳುವರು. ಅಥವಾ ಸರ್ವೇಶ್ವರನು ದಿವ್ಯರೂಪಗಳನ್ನೆತ್ತುವಾಗ ಮಾತ್ರ ನಿತ್ಯಯೋಗವೇ ವಿನಾ ಸ್ವರೂಪತಃ ನಿತ್ಯಯೋಗವಿಲ್ಲವೆಂದು ಹೇಳುವರು. ಈ ಅಭಿಪ್ರಾಯಗಳೆಲ್ಲಾ ಶ್ರೀ

ಲಕ್ಷ್ಮೀನಾರಾಯಣಯೋಃ ವ್ಯಾಪಾರಾದಿ ಭೇದಕಥನಮ್

ಇವ್ವಿಡತ್ತಿಲ್ ದಣ್ಡಧರತ್ವಮುಮ್, ಪುರುಷಕಾರತ್ವಾದಿಗಳುಮ್, ಎಮ್ಬೆರುಮಾನುಕ್ಕುಮ್ ಪಿರಾಟ್ಟಿಕ್ಕುಮ್, ಕೂರಾಗ ವಿಭಜಿತ್ತ ವ್ಯಾಪಾರಙ್ಗಳ್.

ಪರಾಶರರ ಉಕ್ತಿಗಳಾದ "**ಯಥಾಸರ್ವಗತೋ ವಿಷ್ಣುಸ್ತಥೈವೇಯಂ ದ್ವಿಜೋತ್ತಮ**" "**ತ್ವಯಾಚ ವಿಷ್ಣುನಾಚಾಂಬ ಜಗದ್ವ್ಯಾಪ್ತಂ ಚರಾಚರಂ**" ಇತ್ಯಾದಿಗಳಿಂದ, ಸಮಂಜಸವಲ್ಲವೆಂಬುವದು ವ್ಯಕ್ತಪಡುತ್ತದೆ.

ಆದರೆ ಗುಣವಿಭೂತಿ ವ್ಯಾಪಾರಗಳಲ್ಲಿ ನಾರಾಯಣನಿಗೂ ಲಕ್ಷ್ಮಿಗೂ ವ್ಯತ್ಯಾಸವುಂಟೆಂದು ಶಾಸ್ತ್ರವು ಬೋಧಿಸುತ್ತದಲ್ಲಾ, ಸರ್ವಾವಸ್ಥೆಯಲ್ಲೂ ನಿತ್ಯಯೋಗ ಹೇಳಿದ ಅಭಿಪ್ರಾಯಕ್ಕೆ ವಿರೋಧವಲ್ಲವೇ? ಸರ್ವೇಶ್ವರನಿಗೂ ಲಕ್ಷ್ಮಿಗೂ ಹೀಗೆ ವ್ಯತ್ಯಾಸ ಹೇಳಿದರೆ ಸರ್ವೇಶ್ವರನ ಈಶ್ವರಭಾವಕ್ಕೂ ಕೂಡ ಹಾನಿಯುಂಟಾಗುವದಿಲ್ಲವೇ? ಪರಿಚ್ಛಿನ್ನಗುಣವಿಭೂತಿ ವ್ಯಾಪಾರಗಳನ್ನು ನಾರಾಯಣನಿಗಾಗಲಿ ಲಕ್ಷ್ಮಿಗಾಗಲಿ ಹೇಳಬಹುದೋ? ಇತ್ಯಾದಿ ಶಙ್ಕೆಗಳ ನಿವಾರಣಾರ್ಥವಾಗಿ ಮುಂದಿನ ವಾಕ್ಯವನ್ನು ಹೇಳುತ್ತಾರೆ. ಎಲ್ಲಾ ಗುಣ ಎಲ್ಲಾ ವಿಭೂತಿ ಎಲ್ಲಾ ವ್ಯಾಪಾರಗಳಲ್ಲೂ ಇಬ್ಬರಿಗೂ ಅನ್ವಯವಿದ್ದರೂ ತಾವಾಗಿಯೇ ಗುಣ ವಿಭೂತಿ ವ್ಯಾಪಾರಗಳನ್ನು ವಿಭಾಗಮಾಡಿಕೊಂಡಿರುತ್ತಾರೆಂದು ಹೇಳುತ್ತಾರೆ:—

ಲಕ್ಷ್ಮೀನಾರಾಯಣರಿಗಿರುವ ವ್ಯಾಪಾರಾದಿಗಳಲ್ಲಿರುವ ಭೇದವು.

ಇವ್ವಿಡತ್ತಿಲ್ – ಈ ಸಂದರ್ಭದಲ್ಲಿ, ಎಂದರೆ ಲಕ್ಷ್ಮಿಗೆ ಈಶ್ವರನೊಂದಿಗೆ ನಿತ್ಯಯೋಗವನ್ನು ಹೇಳಿ, ಅಕೆಗೆ ಸರ್ವೇಶ್ವರನೊಂದಿಗೆ **ಜಗತ್ಸೃಷ್ಟಿ**, ನಿಯಮನ, ವ್ಯಾಪ್ತಿ, ರಕ್ಷಣೆ ಮೊದಲಾದವುಗಳಲ್ಲೂ ಚೇತನನಿಗೆ ಉಪಾಯತ್ವ, ಮೋಕ್ಷಪ್ರದತ್ವ ಉಪೇಯತ್ವಾದಿಗಳಲ್ಲೂ ಅನ್ವಯವುಂಟೆಂದು ಹೇಳುವ ಸಂದರ್ಭದಲ್ಲಿ, **ದಂಡಧರತ್ವಾದಿಗಳುಮ್** – ತಪ್ಪುಮಾಡಿದವರನ್ನು ಶಿಕ್ಷಿಸುವುದೇ ಮೊದಲಾದವುಗಳಲ್ಲೂ, ಇಲ್ಲಿ ಆದಿ ಶಬ್ದದಿಂದ **ಯುವತ್ವಾದೌ** ಎಂಬ ಮುಂದೆ ಉದಾಹರಿಸಿರುವ ಶ್ಲೋಕದಲ್ಲಿ ಹೇಳಲ್ಪಟ್ಟಿರುವ ಅಪರಸಪತಾಶತ್ಸಮನ ಸ್ಥಿರತ್ವ ಮೊದಲಾದವುಗಳು ಹೇಳಲ್ಪಟ್ಟವು. **ಪುರುಷಕಾರತ್ವಾದಿಗಳುಮ್**– ಪುರುಷಕಾರತ್ವವೇ ಮೊದಲಾದವುಗಳು, ಇಲ್ಲಿ **ಆದಿ**ಪದದಿಂದ ಸ್ನಿಗ್ಧಿಮ ಪತಿಪಾರ್ಶ್ವ ಕರುಣಾಕ್ಷಮಾ ಮೊದಲಾದವುಗಳು ಹೇಳಲ್ಪಟ್ಟವು. **ಎಂಬೆರುಮಾನಕ್ಕುಮ್ ಪಿರಾಟ್ಟಿಕ್ಕುಮ್**– ಸರ್ವೇಶ್ವರನೂ ಲೋಕಮಾತೆಯೂ ಸಹ ಕ್ರಮವಾಗಿ ಎಂದರೆ ದಂಡಧರತ್ವಾದಿಗಳನ್ನು ಸರ್ವೇಶ್ವ

ರನೂ, ಪುರುಷಕಾರತ್ವಾದಿಗಳನ್ನು ಲಕ್ಷ್ಮ್ಯಾಯೂ, **ಕೂರಾಗವಿಭಜಿತ್ತ** – ತಾವಾಗಿಯೇ ವಿಭಾಗವಮಾಡಿಕೊಂಡ, **ವ್ಯಾಪಾರಜ್ಗಳ್** – ವ್ಯಾಪಾರಗಳಾಗಿವೆ. ಯಾವ ಸಂದರ್ಭದಲ್ಲಿ ವಿಭಾಗವೆಂದರೆ, ಎಲ್ಲವೂ ಇಬ್ಬರಿಗೂ ಸೇರಿದ ಪಕ್ಷದಲ್ಲೇ, ವಿಭಾಗಕ್ಕೆ ಕಾರಣವು. ಹಾಗೆ ಈ ವ್ಯಾಪಾರಗಳೆಲ್ಲಾ ಇಬ್ಬರಿಗೂ ಸೇರಿದುದೇ ಎಂಬ ಭಾವವು ಸ್ಫುಟವಾಗಿ ತೋರುವದಕ್ಕಾಗಿಯೇ ಶ್ರೀಮದಾಚಾರ್ಯರವರು **ವಿಭಜಿತ್ತ** ಎಂದು ಪ್ರಯೋಗಿಸಿರುತ್ತಾರೆ. ಇಬ್ಬರೂ ಸೇರಿವ್ಯಾಪಾರಗಳನ್ನು ವಿಭಾಗಮಾಡಿಕೊಳ್ಳುವಾಗ ತಪ್ಪುಮಾಡಿದವರನ್ನು ಶಾಸ್ತಾವಾಗಿ ಶಿಕ್ಷಿಸುವ ವ್ಯಾಪಾರವೇ ಮೊದಲಾದವುಗಳನ್ನು ಶೇಷನು ಇಟ್ಟುಕೊಂಡನು; ಭಕ್ತಾನುಗ್ರಹರೂಪಕಾರ್ಯಗಳನ್ನು **"ನಿತ್ಯಮಜ್ಞಾತನಿಗ್ರಹಳಾಗಿ ಅನುಗ್ರಹಮಯಳಾದ"** ಲಕ್ಷ್ಮ್ಯಾಯು ಇಟ್ಟುಕೊಂಡಳೆಂಬ ಭಾವವು. ಇದರಿಂದ ಕೃಪಾ ಮೊದಲಾದ ಗುಣಗಳ ಮೂಲಕ, ಭಕ್ತಾನುಗ್ರಹಮಾಡಿ ರಕ್ಷಿಸುವ ವ್ಯಾಪಾರ ಸ್ವಾಮಿಗಿಲ್ಲವೆಂದೂ, ಲಕ್ಷ್ಮ್ಯಾಗೆ ತಪ್ಪುಮಾಡಿದವರನ್ನು ಶಿಕ್ಷಿಸುವ ಯೋಗ್ಯತೆಯು ಇಲ್ಲವೆಂದೂ, ಭಾವಿಸಕೂಡದು. ಎರಡು ವಿಧ ವ್ಯಾಪಾರಗಳಲ್ಲೂ ಇಬ್ಬರಿಗೂ ಶಕ್ತಿಯುಂಟು. ಆದರೆಸರ್ವೇಶ್ವರನು ತನಗೆ ಯೋಗ್ಯವಾದ ವ್ಯಾಪಾರಗಳನ್ನೂ, ಶ್ರೀಯು ತನಗೆ ಯೋಗ್ಯವಾದ ವ್ಯಾಪಾರಗಳನ್ನೂ, ವಹಿಸಿಕೊಂಡಿರುತ್ತಾರೆಂಬ ಭಾವವು. ಲೋಕದಲ್ಲಿ ರಾಜನೂ ರಾಜಪತ್ನಿಯೂ ಸಹ ತಮ್ಮತಮ್ಮಗಳಿಗೆ ಯೋಗ್ಯವಾದ **ಉ**ಡುಪು, ಆಭರಣ, ಆಧಿಪತ್ಯ, ವ್ಯಾಪಾರಗಳನ್ನು ಹೇಗೆ ವಿಭಾಗಿಸಿಕೊಂಡಿರುತ್ತಾರೋ ಹಾಗೆಯೇ ಎಂದು ಭಾವಿಸತಕ್ಕದ್ದು: ರಾಜಪತ್ನಿಗೆ ರಾಜ್ಯಾಡಳಿತದಲ್ಲಿ ಅನ್ವಯವನ್ನು ಕಾಣಲಿಲ್ಲವಲ್ಲಾ ಎಂದರೆ, ಅನೇಕ ಸಂದರ್ಭಗಳಲ್ಲಿ ರಾಜಪತ್ನಿಯು ರೀಜಂಟಾಗಿ ಆಧಿಪತ್ಯವನ್ನು ವಹಿಸಿರುವದನ್ನು ಕಂಡಿರುವೆವು ಎಂದು ಸಮಾಧಾನವನ್ನು ಹೇಳುವೆವು.

ಸರ್ವೇಶ್ವರನೂ ತುಂಬಾ ಅನುಗ್ರಹಮಯನೆಂಬುವದಕ್ಕೆ ಅನೇಕ ನಿದರ್ಶನಗಳುಂಟು.

ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ।
ದೋಷೋಯದ್ಯಪಿ ತಸ್ಯಸ್ಯಾತ್ಸತಾಮೇತದಗರ್ಹಿತಂ ॥

(ರಾ. ಯುದ್ಧ. 18. 3.)

ತಾನು ಸರ್ವರಕ್ಷಕನೆಂದು ನಂಬಿ ಬಂದ ಶರಣಾಗತನಾದ ಭಕ್ತನನ್ನು, ಎಂದಿಗೂ ಬಿಡುವದಿಲ್ಲವೆಂದೂ, ಒಂದು ವೇಳೆ ಆತನು ತುಂಬಾ ದೋಷಿಯಾಗಿದ್ದರೂ, ಅಂಥಾವನನ್ನು ಕೂಡ ರಕ್ಷಿಸುವದೇನೂ ಸತ್ಪುರುಷರಿಗೆ ವಿಂದಿತವಾದುದಲ್ಲವೆಂದೂ, **ಯದಿ ವಾ ರಾವಣಸ್ವಯಂ** ಎಂದರೆ ಒಂದು ವೇಳೆ ದುರುಳ ರಾವಣನೇಯಾಗಲಿ ಶರಣಾಗತನಾದರೆ, ಆತನಿಗೂ ಕೂಡ ಅಭಯವನ್ನೀಯುವನೆಂದು ಹೇಳಿದ ಕೃಪಾಸಾಗರನು ಇಕ್ಷ್ವಾಕುಕುಲನಾಥನು. ಇನ್ನೊಂದು ಸಂದರ್ಭದಲ್ಲಿ,

ಗೋವಿನ್ದೇತಿ ಯದಾಕ್ರನ್ದತ್ಕೃಷ್ಣಾ ಮಾಂ ದೂರವಾಸಿನಂ।
ಋಣಂ ಪ್ರವೃದ್ಧಮಿವ ಮಾಂ ಹೃದಯಾನ್ನಾಪಸರ್ಪತಿ॥

ಕೃಷ್ಣಾಸಾಗರನಾದ ಶ್ರೀಕೃಷ್ಣನು ತನ್ನ ಭಕ್ತೆಯಾದ ದ್ರೌಪದಿಗೆ ಉಂಟಾದ ಮಾನ ಭಂಗವಂ ಕುರಿತು ಹೇಳಿಕೊಂಡಿರುತ್ತಾನೆ. ಯಾವಾಗ ದ್ರೌಪದಿಯು ತನಗೆ ಪ್ರಾಪ್ತವಾದ ಸಙ್ಕಟವನ್ನು ಸಹಿಸಲಾರದೆ **"ಗೋವಿನ್ದನೇ ಕಾಪಾಡು ಕಾಪಾಡು"** ಎಂದು ಆರ್ತಧ್ವನಿಯಿಂದ ಕೂಗಿಕೊಂಡಳೋ, ಆ ಕೂಗು ತುಂಬಾ ಪ್ರಬಲವಾದ ಋಣಭಾವನೆಯು ಹಾಗೆ ನನ್ನ ಹೃದಯವನ್ನು ಭೇದಿಸಿದುದು ಇನ್ನೂ ಬಿಟ್ಟು ಹೋಗಲೇ ಇಲ್ಲವು ಎಂದು ಹೇಳಿ ಶ್ರೀಕೃಷ್ಣನು ದುರುಳ ದುಶ್ಶಾಸನಾದಿಗಳ ವಧೆಗೆ ಎಷ್ಟು ತಂತ್ರಜ್ಞೇಕೋ ಅಷ್ಟನ್ನೂ ನಡಿಸಿದನು.

ಹಾಗೆಯೇ ಲಕ್ಷ್ಮಿಗೂ ಕೂಡ ದಂಡಧರತ್ವ ಶಕ್ತಿಯುಂಟೆಂಬುವದು ಸೀತಾ ವಾಕ್ಯದಿಂದಲೇ ವ್ಯಕ್ತಪಡುತ್ತದೆ. ಹೇಗೆಂದರೆ:—

"ಅಸಂದೇಶಾತ್ತು ರಾಮಸ್ಯ ತಪಸಶ್ಚಾನುಪಾಲನಾತ್।
ನತ್ವಾಂ ಕುರ್ಯಾ ದಶಗ್ರೀವ ಭಸ್ಮ ಭಸ್ಮಾರ್ಹ ತೇಜಸಾ॥"

ಓ ದುರುಳ ದಶಗ್ರೀವನೇ, ನೀನು ನಿನ್ನ ನೀಚಕೃತ್ಯದಿಂದ ಭಸ್ಮಮಾಡಲ್ಪಡಲು ಅರ್ಹನು, ನನಗೆ ನಿನ್ನನ್ನು ಭಸ್ಮಮಾಡಲು ಶಕ್ತಿಯೂ ಉಂಟು. ಆದರೂ ಪತಿ ಪಾಪಿ ಇಚ್ಛಿದುದರಿಂದಲೂ, ನನ್ನ ತಪೋಬಲವನ್ನು ಕಾಪಾಡಿಕ್ಕೊಳ್ಳಬೇಕಾಗಿರುವ ದರಿಂದಲೂ, ನನ್ನ ಪಾತಿವ್ರತ್ಯಾದಿ ತೇಜಸ್ಸಿನಿಂದ ನಿನ್ನನ್ನು ಭಸ್ಮಮಾಡುವದಿಲ್ಲವು. ಎಂದು ಸೀತೆಯು ಹೇಳಿಕೊಂಡಿರುತ್ತಾಳೆ.

ಹೀಗೆ ಎರಡು ವಿಧ ವ್ಯಾಪಾರಗಳಲ್ಲೂ ಇಬ್ಬರಿಗೂ ಶಕ್ತಿಯಿದ್ದರೂ, ಅವರವರಿಗೆ ಯೋಗ್ಯವಾದ ವ್ಯಾಪಾರಗಳನ್ನೂ ಇಬ್ಬರೂ ಸೇರಿ ವಿಭಾಗಮಾಡಿಕ್ಕೊಂಡಿರುತ್ತಾರೆಂಬ ಭಾವವು. ಹಾಗೆಯೇ ಶ್ರೀ ಪರಾಶರರೂ ವಿಷ್ಣುಪುರಾಣದ ಪ್ರಥಮಾಂಶದ ಅಷ್ಟಮಾಧ್ಯಾಯದಲ್ಲಿ **"ಋರ್ಷೋವಿಷ್ಣುರಿಯಂವಾಣೀ"** ಎಂದು ಪ್ರಾರಂಭಿಸಿ

"ದೇವತಿರ್ಯಙ್ನರಾದಿಷು ಪುನ್ನಾಮಾ ಭಗವಾನ್ ಹರಿಃ।
ಸ್ತ್ರೀನಾಮ್ನೀ ತ್ರೀಶ್ವರೀ ವಿದ್ಯೇಯಾ ನಾನಯೋರ್ವಿದ್ಯತೇ ಪರಂ॥"

ಎಂದು ಮುಗಿಸಿ, ವಿಷ್ಣು ವಿಭಾಗವನ್ನು ಹೇಳುವದೂ ಕೂಡ ಅವರವರುಗಳಿಗಿರುವ ಅಧಿಕಾರಾತಿಶಯವನ್ನು ಹೊಂದಿಸುವದಕ್ಕಾಗಿಯೇ ವಿನಾ, ಅರ್ಥ ವಿಷ್ಣು ಹಿಡ್ಡಾ ವಿಷ್ಣುವಿಗೆ ಸೇರಿದುದು, ಇನ್ನೊಬ್ಬರು ಲಕ್ಷ್ಮಿಗೆ ಸೇರಿದುದು, ಎಂಬ ತ್ಥವಲ್ಲವು. ಏಕೆಂದರೆ, ಮೊದಿನ ಸಿದ್ಧಾನ್ತರೂಪವಾದ,

"ನಿತ್ಯಾ ವೈಷಾ ಜಗನ್ಮಾತಾ ವಿಷ್ಣೋಶ್ಶ್ರೀ ರನಪಾಯಿನೀ।
ಯಥಾ ಸರ್ವಗತೋ ವಿಷ್ಣುಸ್ತಥೈವೇಯಂ ದ್ವಿಜೋತ್ತಮ॥"

ಎಂದು ವಿಷ್ಣುವಿನ ಸರ್ವಗತತ್ವಸ್ವರೂಪ, ಕಲ್ಯಾಣಗುಣ, ದಿವ್ಯಮಙ್ಗಳವಿಗ್ರಹ, ವಿಭೂತಿ, ಐಶ್ವರ್ಯಾದಿಗಳನ್ನು ಅತಿದೇಶಮಾಡಿ ಲಕ್ಷ್ಮ್ಯಾಯಲ್ಲೂ ಉಂಟೆಂದು ಹೇಳಿದ ಪ್ರತಿಜ್ಞಾವಾಕ್ಯಕ್ಕೆ ವಿರೋಧವಾಗುತ್ತದೆ. ಇವೆಲ್ಲವೂ ಇಬ್ಬರಿಗೂ ಸೇರಿದುದಾದರೂ ಅವರವರುಗಳು ಸ್ವತಃ ಮಾಡಿಕ್ಕೊಂಡಿರುವ ವಿಭಾಗವೆಂದರಿಯತಕ್ಕದ್ದು.

ಹೀಗೆ ವ್ಯಾಪಾರಗಳನ್ನು ಈ ಲೋಕದಂಪತಿಗಳು ವಿಭಾಗಮಾಡಿಕ್ಕೊಂಡಿರುವದು ನೋಡಿದರೆ, ಅವರವರುಗಳಿಗೆ ಶಕ್ತಿ ಎಷ್ಟರಮಟ್ಟಿಗೋ ಅದಕ್ಕನುಸಾರವಾಗಿ ವಿಭಾಗವೆಂದು ಸರ್ವಾತ್ಮನಾ ಭಾವಿಸಬಾರದು. ಇಂತಹ ಅಭಿಪ್ರಾಯವು ತಮ್ಮ ಪ್ರಿಯ ಶಿಷ್ಯರಾದ ಮೈತ್ರೇಯರಿಗೆ ಎಲ್ಲಾದರೋ ಉಂಟಾದೀತೋ ಎಂಬದಾಗಿಯೇ, ಪರಮಜ್ಞಾನಿಗಳಾದ ಶ್ರೀಪರಾಶರ ಮಹರ್ಷಿಗಳು, ಸ್ವರೂಪ ರೂಪ ಗುಣ ವಿಭವೈಶ್ವರ್ಯಾದಿಗಳಲ್ಲೆಲ್ಲಾ ಲಕ್ಷ್ಮ್ಯಾಯು ವಿಷ್ಣುವಿನ ಹಾಗೆಯೇ ಎಂದು ಹೇಳುವದಕ್ಕಾಗಿಯೇ ಮೇಲೆ ಹೇಳಿದ **"ಯಥಾಸರ್ವಗತೋ ವಿಷ್ಣುಸ್ತಥೈವೇಯಂ ದ್ವಿಜೋತ್ತಮ"** ಎಂಬ ವಾಕ್ಯದಿಂದ ಸರ್ವವ್ಯಾಪಿಯಾದ ವಿಷ್ಣುವಿನ ಸ್ವರೂಪರೂಪಗುಣ ವಿಭವೈಶ್ವರ್ಯಾದಿಗಳನ್ನು ಪ್ರಥಮತಃ ಉಪದೇಶಿಸಿದನಂತರ ಅವುಗಳನ್ನೇ ಲಕ್ಷ್ಮ್ಯಾಯಲ್ಲೂ ಅತಿದೇಶಮಾಡಿ ಬೋಧಿಸಿದರು. ಇಲ್ಲಿ ಸರ್ವಗತತ್ವವೆಂದರೆ ವ್ಯಾಪಿ ಮೊದಲಾದ ಧರ್ಮಗಳು ಶ್ರೀಮನ್ನಾರಾಯಣನಲ್ಲಿ **ಉಪದಿಶ್ಯ**ವಾದವು. ಅನನ್ತರ ಅವುಗಳನ್ನೇ ಲಕ್ಷ್ಮ್ಯಾಯಲ್ಲೂ **ಅತಿದೇಶ**ಮಾಡಿ ಇಟ್ಟುಕೊಳ್ಳಬೇಕೆಂದು ಹೇಳಿದರು. ಒಂದು ಧರ್ಮವು ಸಾಕ್ಷಾತ್ತಾಗಿ ಹೇಳಲ್ಪಟ್ಟರೆ **ಉಪದಿಶ್ಯ**ಧರ್ಮವೆನಿಸುತ್ತದೆ. ಅದಕ್ಕೆ ಹೇಗೋ ಇನ್ನೊಂದಕ್ಕೂ ಹಾಗೆಯೇ ಎಂದು ಹೇಳಲ್ಪಡುವದು **ಅತಿದಿಶ್ಯ**ಧರ್ಮವೆನಿಸುತ್ತದೆ. ಇಲ್ಲಿ **ಉಪದಿಶ್ಯ**ಧರ್ಮಕ್ಕಾಧಾರನು ವಿಷ್ಣುವು; ಅತಿದಿಶ್ಯಧರ್ಮಕ್ಕಾಧಾರಳು ಲಕ್ಷ್ಮ್ಯಾಯು. ಆದರೆ ಪೂರ್ವಮೀಮಾಂಸೆಯ ಸೂತ್ರದಲ್ಲಿ ಉಪದಿಶ್ಯಧರ್ಮಾಧಾರಕ್ಕೂ ಅತಿದಿಶ್ಯಧರ್ಮಾಧಾರಕ್ಕೂ ವ್ಯತ್ಯಾಸ ಉಂಟೆಂಬುವದು ಸ್ವತಸ್ಸಿದ್ಧವೆಂದು ಹೇಳಲ್ಪಟ್ಟಿರುತ್ತದೆ. ಆ ನ್ಯಾಯದ ಪ್ರಕಾರ ಈಶ್ವರನಿಗೂ ಅತನಿಗೆ ಸ್ವತಃ ದಾಸಭೂತಳಾದ ಲಕ್ಷ್ಮ್ಯಾಗೂ ಸ್ವಲ್ಪ ವೈಲಕ್ಷಣ್ಯ ಉಂಟೆಂಬುವದು ಅರ್ಥಾತ್ ದ್ಯೋತಿತವಾಗುತ್ತದೆ. [1]**"ಈಶ್ವರೀಗ್ಂ ಸರ್ವಭೂ**

---

(1) ಲಕ್ಷ್ಮ್ಯಾಯು ಸರ್ವಭೂತಗಳಿಗೂ ಈಶ್ವರಳು; ಇದರಿಂದ ವ್ಯಾಪನ, ಭರಣ, ಸ್ವಾಮ್ಯತ್ವಾದಿಗಳು ಉಪದೇಶಿಸಲ್ಪಟ್ಟವು.

ತಾನಾಂ' 'ಅಸ್ಯೇಶಾನಾ ಜಗತೋ ವಿಷ್ಣುಪತ್ನೀ' ಇತ್ಯಾದಿಗಳಿಂದ ಈಶ್ವರತ್ವವೂ, [೨] **'ಶ್ರದ್ಧಯಾ ದೇವೋ ದೇವತ್ವಮಶ್ನುತೇ'** [೩] **'ಆನಿತವಾದಗ್ಂ ಸ್ವಧಯಾ ತದೇಕಂ'** ಇತ್ಯಾದಿಗಳಿಂದ ಜಗತ್ಸೃಷ್ಟಿ ಸ್ಥಿತಿ ಲಯಗಳಲ್ಲನ್ವಯವೂ, [೪] **"ಶ್ರದ್ಧಾ ಪ್ರತಿಷ್ಠಾ ಲೋಕಸ್ಯ ದೇವೀ"** ಎಂಬುವದರಿಂದ ಲೋಕದ ವಿಭವಾದಿಗಳಲ್ಲಿ ಅನ್ವಯವೂ, [೫] **'ಕಾಮುವತ್ ಸಾನೃತಂ ದುಹಾನಾ'** [೬] **"ಸಾ ನೋ ಲೋಕಮಮೃತಂ ದದಾತು" "ನಿಮುಕ್ತಿ ಫಲದಾಯಿನೀ"** ಇತ್ಯಾದಿಗಳಿಂದ ಮೋಕ್ಷಪ್ರದತ್ವವೂ, ಲಕ್ಷ್ಮಿಗೆ ಉಂಟೆಂದು ಸಾಕ್ಷಾತ್ತಾಗಿಯೇ **ಉಪದಿಶ್ಯ ಧರ್ಮ**ಗಳಾಗಿಯೇ ಅಲ್ಲಲ್ಲಿ ಶ್ರುತಿಸ್ಮೃತಿಗಳಲ್ಲಿ ಹೇಳಲ್ಪಟ್ಟಿವೆ. ವಿಷ್ವಕ್ಸೇನ ಸಂಹಿತೆಯಲ್ಲಿ, **"ಯಥಾ ಮಯಾ ಜಗದ್ವ್ಯಾಪ್ತಂ ಸ್ವರೂಪೇಣ ಸ್ವಭಾವತಃ। ತಯಾ ವ್ಯಾಪ್ತ ಮಿದಂ ಸರ್ವಂ ನಿಯನ್ತ್ರೀ ಚ ತಥೇಶ್ವರೀ॥"** ಎಂಬ ವಾಕ್ಯದಿಂದ ಜಗದ್ವ್ಯಾಪ್ತಿ, ನಿಯನ್ತೃತ್ವ, ಈಶ್ವರೀಭಾವ, ಇವುಗಳು **ಅತಿದೇಶ**ಮಾಡಿ ಹೇಳಲ್ಪಟ್ಟಿರುತ್ತವೆ. ಹೀಗೆ ಕೆಲವು ಕಡೆ **ಉಪದೇಶವೂ,** ಕೆಲವು ಕಡೆ **ಅತಿದೇಶವೂ** ತೋರಿಬರುವದರಿಂದ ಅತಿದೇಶ ಹೇಳಿರುವ ವ್ಯಾಜದಿಂದ ವೈಷಮ್ಯವನ್ನು ಕಲ್ಪಿಸಿದರೆ ಪರಸ್ಪರ ಪ್ರಮಾಣ ವಿರೋಧ ಉಂಟಾಗುವದರಿಂದ, **ತದ್ಧರ್ಮಧರ್ಮಿ**

---

(೨) **ಶ್ರದ್ಧಯಾ**–ಲಕ್ಷ್ಮ್ಯಾಯೊಂದಿಗೆ, **ದೇವಃ**– ಲೀಲಾಸಕ್ತನಾದ ವಿಷ್ಣುವು, **ದೇವತ್ವಂ**-ಲೀಲಾರಸವನ್ನು, **ಅಶ್ನುತೇ** – ಅನುಭವಿಸುತ್ತಾನೆ. ಇದರಿಂದ ಜಗತ್ಸೃಷ್ಟಿ, ಸ್ಥಿತಿ, ಪಾಲನ, ನಿಯಮನ, ಲಯಾದಿಗಳಲ್ಲಿ ಅನ್ವಯವು ಹೇಳಲ್ಪಟ್ಟಿತು.

(೩) ನಮ್ಮಹಾಗೆ ವಾಯುವಿನ ಅವಶ್ಯಕತೆ ಇಲ್ಲದೆ ಪರಮಾತ್ಮನು ಸೃಷ್ಟಿಗೆ ಪೂರ್ವವಾಗಿ ಲಯದಲ್ಲಿ, ಲಕ್ಷ್ಮ್ಯಾಯೊಂದಿಗೂ ಚಿದಚಿತ್ತೊಂದಿಗೂ ಏಕೀಭವಿಸಿದ್ದನು. ಇದರಿಂದಲೂ ಜಗತ್ತಿನ ಲಯ, ಸೃಷ್ಟಿ ಮೊದಲಾದವುಗಳಲ್ಲಿ ಅನ್ವಯವು ಬೋಧಿಸಲ್ಪಟ್ಟಿತು. ಈ ವಿಷ್ಣುಪತ್ನಿಯು ಜಗತ್ತಿಗೆ ಈಶ್ವರಳು. ಇದರಿಂದಲೂ ಮೇಲಿನ ಧರ್ಮಗಳುಸಪೇತಿಸಲ್ಪಟ್ಟವು.

(೪) ಶ್ರದ್ಧಾ, ಲಕ್ಷ್ಮ್ಯಾಯು ಲೋಕಕ್ಕೆ ಸ್ಥಿತಿಕಾರಣಳಾಗಿ ವಿಭವವನ್ನುಂಟು ಮಾಡುವವಳು, ಲೀಲಾಭೋಗವನ್ನನುಭವಿಸುವವಳು. ಇದರಿಂದ ಜಗತ್ಸೃಷ್ಟಿ, ಸ್ಥಿತಿ ಲಯಗಳಲ್ಲೂ ವಿಭವದಲ್ಲೂ ಅನ್ವಯವು ಉಪದೇಶಿಸಲ್ಪಟ್ಟವು.

(೫) ಈ ಲಕ್ಷ್ಮ್ಯಾಯು ಅಪೇಕ್ಷಾನುಸಾರವಾಗಿ ಮೋಕ್ಷವನ್ನು ಅಥವಾ ನಿರತಿಶಯಾನಂದವನ್ನು ಕರೆಯುವವಳು; ಮೋಕ್ಷಪ್ರದತ್ವವು ಹೇಳಲ್ಪಟ್ಟಿತು.

(೬) ಈ ಲಕ್ಷ್ಮ್ಯಾಯು ಪತಿಗೆ ನಿಕುಂಠಲೋಕವನ್ನು ಕೊಡಲಿ.

ಉಪದಿಶ್ಯಮಾನ ಧರ್ಮಾಧಾರತ್ತಿರ್ಕ್ಕಾಟ್ಟಿಲ್ ಅತಿದಿಶ್ಯಮಾನ ಧರ್ಮಾಧಾರತ್ತುಕ್ಕು ವಿಶೇಷಮ್ ಸ್ವತಃ ಪ್ರಾಪ್ತಮೆನ್ರು ಉವರರುಳಿಚ್ಚೆಯ್ದದುಕ್ಕುಮ್ ಇಪ್ಪಡಿ ವಿಭಾಗತ್ತಾಲ್ ವನ್ದ ವೈಷಮ್ಯತ್ತಿಲೆ ತಾತ್ಪರ್ಯಂ.

ಣೀ, ಆ ಪರಮಾತ್ಮನ ಧರ್ಮಗಳ ಹಾಗೆ ಧರ್ಮಗಳುಳ್ಳವಳು ಲಕ್ಷ್ಮಿಯು ಎಂದು ಹೇಳುವ ಅತಿದೇಶೋಕ್ತಿಯಿಂದ ಉಂಟಾಗಬಹುದಾದ ವೈಷಮ್ಯಾಭಿಪ್ರಾಯಕ್ಕೆ **"ಉಪದಿಶ್ಯಮಾನ"** ವೆಂದು ಪ್ರಾರಂಭಿಸಿದ ಮುಂದಿನ ವಾಕ್ಯದ ಮೂಲಕ ಸಮಾಧಾನವನ್ನು ಹೇಳುತ್ತಾರೆ.

ಉಪದಿಶ್ಯಮಾನ- ಸಾಕ್ಷಾತ್ತಾಗಿ ಉಪದೇಶಿಸಲ್ಪಟ್ಟ, **ಧರ್ಮಾಧಾರತ್ತಿರ್ಕ್ಕಾಟ್ಟಿಲ್** – ಧರ್ಮಗಳಿಗೆ ಆಶ್ರಯವಾಗುವುದಕ್ಕಿಂತಲೂ ಎಂದರೆ ಇಲ್ಲಿ ವಿಷ್ಣುವಿಗಿಂತಲೂ, **ಅತಿದಿಶ್ಯಮಾನ ಧರ್ಮಾಧಾರತ್ತುಕ್ಕು**-ಅತಿದೇಶವಾಗಿ ಹೇಳಲ್ಪಟ್ಟ ಧರ್ಮಗಳಿಗೆ ಆಶ್ರಯವಾಗುವುದಕ್ಕಿಂತ, ಎಂದರೆ ಲಕ್ಷ್ಮಿಗಿಂತಲೂ, **ವಿಶೇಷಮ್** – ವೈಲಕ್ಷಣ್ಯವು ಎಂದರೆ ವ್ಯತ್ಯಾಸವು, **ಸ್ವತಃ ಪ್ರಾಪ್ತಮೆನ್ರು** –ಸ್ವತಃ ಉಂಟಾಗತಕ್ಕದ್ದೇ ಎಂಬುದಾಗಿ **ಉವರರ್** – ಪ್ರಾಚೀನರಾದವರು ಎಂದರೆ ಪೂರ್ವಮೀಮಾಂಸಕರು, **ಅರುಳಿಚ್ಚೆಯ್ದದಕ್ಕುಮ್** – ಕೃಪೆಗೈದು ಹೇಳಿದುದಕ್ಕೂ, **ಇಪ್ಪಡಿ ವಿಭಾಗತ್ತಾಲ್** – ಹೀಗೆ ಮೇಲೆ ಉಪಪಾದಿಸಿದ ರೀತಿಯಲ್ಲಿ ವ್ಯಾಪಾರ, (ಗುಣ, ವಿಭೂತಿ ಮೊದಲಾದವು)ಗಳಲ್ಲಿರುವ, **ವಿಭಾಗತ್ತಾಲೆ** – ವಿಭಾಗದಿಂದ, **ವನ್ದವೈಷಮ್ಯತ್ತಿಲೆ** – ಉಂಟಾದ ವ್ಯತ್ಯಾಸದಲ್ಲಿ, **ತಾತ್ಪರ್ಯಂ** – ಅಭಿಪ್ರಾಯವು. ಮೀಮಾಂಸಕರ ಅಭಿಪ್ರಾಯಾನುಸಾರ ಉಪದಿಶ್ಯ ಅತಿದಿಶ್ಯ ಧರ್ಮಾಧಾರಗಳಿಗೆ ಪರಸ್ಪರ ವ್ಯತ್ಯಾಸವಿರಬೇಕು. ಇಲ್ಲೀಗ ವೈಲಕ್ಷಣ್ಯವೆಂದರೆ, ಇಬ್ಬರೂ ಸ್ವರೂಪರೂಪ ಗುಣ ವಿಭವೈಶ್ವರ್ಯಾದಿಗಳಲ್ಲಿ ಸಮಭಾವವಿದ್ದರೂ, ಇಬ್ಬರೂ ಸೇರಿ ತಾವಾಗಿಯೇ ಮಾಡಿಕೊಂಡ ವ್ಯಾಪಾರಾದಿಗಳಲ್ಲಿ ವಿಭಾಗಗಳು. **"ಜಾಯಾಪತ್ಯೋರ್ನ ವಿಭಾಗಃ" "ಗಂಡ ಹೆಂಡರ ವಿಷಯದಲ್ಲಿ ವಿಭಾಗವೆಂದಿಗೂ ಇಲ್ಲ"**ವೆಂಬ ನ್ಯಾಯವು ಸರಿಯಾದುದಾಗಿ ಲೋಕಪ್ರಸಿದ್ಧವಾದರೂ, ಪತ್ನಿಯಾದವಳು ತನಗೆ ಅನುರೂಪವಾದ ವಸ್ತ್ರಾಭರಣವ್ಯಾಪಾರಗಳನ್ನೂ, ಪತಿಯಾದವನು ತನಗನುರೂಪವಾದ ವಸ್ತ್ರಾಭರಣವ್ಯಾಪಾರಗಳನ್ನೂ, ಅವಲಂಬಿಸುವುದು ಸರ್ವಸಮ್ಮತವಾದ ವಿಷಯವು. ಇಲ್ಲಿ ವ್ಯಾಪಾರದಲ್ಲಿ ಮಾತ್ರ ವಿಭಾಗವನ್ನು ಶ್ರೀಮದಾಚಾರ್ಯರವರು ಉಪಪಾದಿಸಿರುವುದು ಸ್ವರೂಪರೂಪ ಗುಣ ವಿಭವಾದಿಗಳಿಗೂ ಉಪಲಕ್ಷಣವು. ಪತ್ನಿಯು ಪತಿಗೆ ವಿಧೇಯಳಾಗಿರುವುದು ಪಾತಿವ್ರತ್ಯಕ್ಕೆ ಮೂಲಕಾರಣವಾದುದರಿಂದ ಲಕ್ಷ್ಮಿಯು ನಾರಾಯಣನಿಗೆ ಶೇಷಳಾಗಿಯೂ, ನಾರಾಯಣನು ಶೇಷಿಯಾಗಿಯೂ ಇರುವ ಭಾಗಗಳನ್ನು ವಿಭಾಗ

ಇದು "ಯುವತ್ವಾದೌ ತುಲ್ಯೇಪಿ" ಎಜ್ಜರ ಶ್ಲೋಕತ್ತಿಲೆ ನಿರ್ಣೀತಮ್.

ಮಾಡಿಕೊಂಡಿರುತ್ತಾರೆ. ಹಾಗೆಯೇ ಆಕೆಯೂ ಅನುಗ್ರಹೋಚಿತವಾದ ಗುಣಗಳನ್ನೂ ಆತನೂ ಶಾಸ್ತಾವಾಗಿರಲನುಕೂಲವಾದ ಗುಣಗಳನ್ನೂ ವಿಭಾಗಿಸಿಕೊಂಡಿರುತ್ತಾರೆ. ಅವತಾರಗಳಲ್ಲಿ ಪುಂರೂಪನನ್ನು ನಾರಾಯಣನೂ, ಸ್ತ್ರೀರೂಪವನ್ನು ಲಕ್ಷ್ಮಿಯೂ ವಿಭಾಗಿಸಿಕೊಂಡಿರುತ್ತಾರೆ. ಹಾಗೆಯೇ ವಿಭೂತಿಯಲ್ಲು ವಿಭಾಗ ಉಂಟೆಂದು ಮೇಲೆಯೇ ಉಪಪಾದಿಸಲ್ಪಟ್ಟಿರುತ್ತದಷ್ಟೆ. ಇವೆಲ್ಲಾದರಲ್ಲೂ ಇಬ್ಬರಿಗೂ ಸಮವಾದ ಸಾಮರ್ಥ್ಯವಿದ್ದರೂ ತಾವಾಗಿಯೇ ಒಪ್ಪಿ ಸ್ವರೂಪ ರೂಪ ಗುಣ ವಿಭವೈಶ್ವರ್ಯ ವ್ಯಾಪಾರಾದಿಗಳಲ್ಲಿ ವಿಭಾಗಗಳನ್ನು ಮಾಡಿಕೊಂಡಿರುತ್ತಾರೆಂಬುವದು ತಾತ್ಪರ್ಯವು. ಈ ಅಭಿಪ್ರಾಯವು ಶ್ರೀರಙ್ಗನಾಯಕೀ ವರಪ್ರಸಾದದಿಂದವತರಿಸಿದ ಶ್ರೀ ಪರಾಶರಭಟ್ಟಾರ್ಯರಿಂದ ಉಪಪಾದಿಸಲ್ಪಟ್ಟಿರುತ್ತದೆಂದು ಮುಂದೆ ತಿಳಿಸುತ್ತಾರೆ.

ಇದು – ಈ ಅಭಿಪ್ರಾಯವು, ಯಾವುದೆಂದರೆ, ಇಬ್ಬರೂ **ಎಲ್ಲಾದರಲ್ಲೂ** ಸಮವಾಗಿದ್ದರೂ, ಈ ಪರಸ್ಪರ ವ್ಯತ್ಯಾಸವು ಉಭಯಇಚ್ಛಾಧೀನ ಉಂಟಾದುದೆಂಬ ಅಭಿಪ್ರಾಯವು, "**ಯುವತ್ವಾದೌತುಲ್ಯೇಪಿ**" (ಶ್ರೀಗುಣ. ೩೪.) ಎಂಬ ಶ್ರೀಗುಣರತ್ನಕೋಶ ಶ್ಲೋಕದಲ್ಲಿ, **ನಿರ್ಣೀತಮ್** – ನಿರ್ಧರಿಸಲ್ಪಟ್ಟಿರುತ್ತದೆ.

ಯುವತ್ವಾದೌ ತುಲ್ಯೇಪ್ಯಪರವಶತಾ ಶತ್ರುಶಮನ।
ಸ್ಥಿರತ್ವಾದೀಕ್ಷ ಕ್ತಾ ಭಗವತಿಗುಣಾಃ ಪುಂಸ್ತ್ವ ಸುಲಭಾಃ।
ತ್ವಯಿ ಸ್ತ್ರೀತ್ವೈಕಾನ್ತಾ ಮೃದಿನು ಪತಿಪಾರಾರ್ಥ್ಯಕರುಣಾ।
ಕ್ಷಮಾದೀನ್ಯಾಭೋಕ್ತುಂ ಭವತಿ ಯುವಯೋರಾತ್ಮನಿಭಿದಾ॥

ಎಂಬುವದು ಪೂರಾ ಶ್ಲೋಕವು. ಇದರಭಿಪ್ರಾಯವೇನೆಂದರೆ:—

ಯುವತ್ವಾದೌ – ಯೌವನವೇ ಮೊದಲಾದ ಗುಣಗಳಲ್ಲಿ, ಇಲ್ಲಿ **ಆದಿ** ಶಬ್ದದಿಂದ ಸೌಂದರ್ಯ ಲಾವಣ್ಯ ಜ್ಞಾನ ಶಕ್ತ್ಯಾದಿ ಅನೇಕವಾದ ಎಲ್ಲಾ ಕಲ್ಯಾಣಗುಣಗಳೂ ಸೂಚಿಸಲ್ಪಟ್ಟವು, **ತುಲ್ಯೇಪಿ** – ಇಬ್ಬರಿಗೂ ಸಮಾನವಾಗಿದ್ದರೂ ಕೂಡ, ಎಂದರೆ ಕಲ್ಯಾಣಗುಣಾಕರತ್ವದಲ್ಲಿ ಇಬ್ಬರೂ ಸಮಾನರೇ ಎಂಬ ಭಾವವು; **ಪುಂಸ್ತ್ವಸುಲಭಾಃ** – ಪುರುಷ ರೂಪಕ್ಕೆ ಯೋಗ್ಯವಾದ, **ಅಪರವಶತಾ** – ಇನ್ನೊಬ್ಬರಿಗೆ ವಶವಾಗದಿರೋಣವೂ, **ಶತ್ರುಶಮನ** – ಶತ್ರುಗಳನ್ನು ನಿರಸನ ಮಾಡೋಣವೂ, **ಸ್ಥಿರತ್ವ** – ಭಯ ಮೊದಲಾದವುಗಳಿಂದ ಕದಲದಿರೋಣವೂ, **ಆದೀಕ್ಷ**– ಇವೇ ಮೊದಲಾದವುಗಳನ್ನು, ಇದರಿಂದ ಅಪರಾಧಿಗಳ ವಿಷಯದಲ್ಲಿ ಪೆಟ್ಟಾದ

"ಇರೈ ನಿಲೈ ಉಣರ್ವರಿದು" ಎನ್ನು ಆಳ್ವಾರರುಳಿಚ್ಚೆಯ್ದ ನಿಲತ್ತಿಲೆ

ಕೋಪ ಮೊದಲಾದವು ಹೇಳಲ್ಪಟ್ಟಿತು. **ಭಗವತಿ**–ಹೇಯ ಪ್ರತ್ಯನೀಕನಾಗಿಯೂ ಕಲ್ಯಾಣಗುಣಾಕರನಾಗಿಯೂ ಇರುವ ಸರ್ವೇಶ್ವರನಲ್ಲಿ, **ಗುಣಾಕೃತ್ವಾ**–ಇರುವ ಗುಣಗಳನ್ನಾಗಿ ವಿಭಾಗಿಸಿಕೊಂಡು, **ಸ್ತ್ರೀತ್ವೈ ಕಾಂತಾ** – ಸ್ತ್ರೀಧರ್ಮಕ್ಕೆ ಸಹಜವಾದ, **ಮೃದಿಮ** – ಮೃದುತ್ವ, **ಪತಿಪಾರಾರ್ಥ್ಯ** – ಪತಿಗೆ ಪರತಂತ್ರಳಾಗಿರುವಿಕೆ, **ಕರುಣಾ** – ದಯೆ, **ಕ್ಷಮಾದೀ** – ಕ್ಷಮೆ ಮೊದಲಾದವುಗಳನ್ನು, ಇಲ್ಲಿ ವಾತ್ಸಲ್ಯಾದಿಗಳು ಆದಿ ಶಬ್ದದಿಂದ ಹೇಳಲ್ಪಟ್ಟವು, **ಗುಣಾನ್ಯಾಕೃತ್ವಾ** – ನಿನ್ನ ಗುಣಗಳನ್ನಾಗಿಯೂ ವಿಭಾಗಮಾಡಿಕೊಂಡು, **ಯುವಯೋಃ** – ನಿಮ್ಮಿಬ್ಬರ, **ಆತ್ಮನಿ** – ಸ್ವರೂಪದಲ್ಲಿ, **ಭಿದಾ**–ಭೇದವು, **ಭೋಕ್ತುಂ** – ನಿತ್ಯಮುಕ್ತರುಗಳು ನಿಮ್ಮನ್ನನುಭವಿಸಲು, **ಭವತಿ** – ಅನುಕೂಲವಾದುದು ಆಗುತ್ತದೆ. ಹೀಗೆ ನೀವು ಗಳೇ ಮಾಡಿಕೊಂಡ ಇಂತಹ ಭೇದವು ನಿತ್ಯಮುಕ್ತ ಭೋಗ್ಯಭೂತವಾಗಿ ಅನಾದಿಯಾಗಿ ಬಂದಿರುತ್ತದೆಂಬ ಭಾವವು.

ಆದುದರಿಂದ ಲೋಕದಂಪತಿಗಳು ತಮ್ಮಲ್ಲಿರುವ ಭೂಷಣ ವಸ್ತ್ರಾದಿಗಳಲ್ಲೂ, ತಮಗೆ ಏಶ್ವರ್ಯವರ್ಗದ ಅಧಿಕಾರದಲ್ಲೂ, ಅವರುಗಳನ್ನು ಕುರಿತ ವ್ಯಾಪಾರಾದಿಗಳಲ್ಲೂ ಸಮಭಾವವೊಂದಿದ್ದರೂ, ತಮ್ಮ ತಮ್ಮ ಇಷ್ಟಾನುಗುಣವಾಗಿ ಅವುಗಳನ್ನು ವಿಭಾಗಿಸಿಕೊಳ್ಳುವ ಹಾಗೆ, ಲೋಕದಂಪತಿಗಳೂ ಅನಾದಿಯಾಗಿ ಮೇಲೆ ಹೇಳಿದ ರೀತ್ಯಾ ವಿಭಾಗಿಸಿಕೊಂಡಿರುತ್ತಾರೆಂಬುವದು ಮುಖ್ಯ ತಾತ್ಪರ್ಯವು.

ಆದರೆ ಕೆಲವರು ಈ ವ್ಯತ್ಯಾಸಗಳಿರುವದನ್ನೇ ಪ್ರಬಲಪಡಿಸಿ, ಈಶ್ವರ ತತ್ವವನ್ನಂಗೀಕರಿಸಿದವರೆಲ್ಲರೂ ಈಶ್ವರಸೊಬ್ಬನೇ ಎಂದು ಹೇಳುವದರಿಂದ, ಲಕ್ಷ್ಮ್ಯಾಯನ್ನೂ ಈಶ್ವರಕೋಟಿಯಲ್ಲಿ ಸೇರಿಸುವದು ಸರಿಯಲ್ಲವೆಂದೂ, ಆದುದರಿಂದ ಜೀವಕೋಟಿಯಲ್ಲೇ ಸೇರಿಸತಕ್ಕದ್ದೆಂದೂ ಹೇಳಿ, ಹಾಗಲ್ಲವೆ ಈಶ್ವರಕೋಟಿಗೆ ಸೇರಿಸಿದರೆ, ಈಶ್ವರವ್ವಿತ್ವವೂ, ತನ್ಮೂಲಕ ಉಂಟಾಗುವ ಸೃಷ್ಟಿ ಸ್ಥಿತ್ಯಾದಿ ವ್ಯಾಪಾರವ್ಯಾಘಾತವೂ, ಉಪಾಸಕನಿಗೆ ಐಕಾಂತ್ಯ ಹಾನಿಯೂ ಮುಂತಾದ ದೋಷಗಳು ಪ್ರಾಪ್ತವಾಗುತ್ತವೆಂದು ಹೇಳುವರು. ಆದುದರಿಂದ ಅನೇಕ ವಿಧವಾಗಿ ತಾವು ಶಾಸ್ತ್ರ ಪ್ರಮಾಣಬಲದಿಂದ ಲಕ್ಷ್ಮ್ಯಾಯೂ ಕೂಡ ಈಶ್ವರ ಕೋಟಿಗೆ ಸೇರಿದವಳೆಂದು ಉಪಪಾದಿಸಿದರೂ, ಮೇಲಿನ ವಾದಮಾಡುವವರ ಮನಸ್ಸಿಗೆ ಹತ್ತಲಾರದೆಂದು ಭಾವಿಸಿ, ಅಂತಹ ವಾದಮಾಡುವವರಿಗೂ ತಮಗೂ ಇರುವ ವ್ಯತ್ಯಾಸವನ್ನು ಮುಂದಿನ ಮೂರು ವಾಕ್ಯಗಳಿಂದ ತಿಳಿಸುತ್ತಾರೆ.

ಇರೈ – ಸರ್ವೇಶ್ವರನ, **ನಿಲೈ** – ಯಥಾರ್ಥವಾದ ಸ್ಥಿತಿಯು, **ಉಣರ್ ವರಿ**

ಏದೇನುಮೊರು ವೃಥಾ ನಿರ್ಬನ್ಧಮಾಕಾದು.

ದು – ತಿಳಿಯಲಸಾಧ್ಯವು, **ಎನ್ರು** – (ತಿರು. 1. 3. 6.) ಎಂಬದಾಗಿ, **ಆಳ್ವಾರ್ ಅರುಳಿಚ್ಚೆಯ್ದನಿಲತ್ತಿಲೇ** – ನಮ್ಮಾಳ್ವಾರವರು ಕೃಪೆಗೈದು ಅನುಗ್ರಹಿಸಿದ ಸಂದರ್ಭದಲ್ಲ, ಎಂದರೆ ಬಹುಕಾಲ ಸತ್ಸಮ್ಪ್ರದಾಯದೊಂದಿಗೆ ಬಹು ಶಾಸ್ತ್ರ ಶ್ರವಣ ಮನನಾದಿಗಳನ್ನು ಮಾಡಿದವರಿಗಲ್ಲದೆ ಇತರರಿಗೆ ಅಸಾಧ್ಯವೆಂದು ಆಳ್ವಾರವರು ಅಪ್ಪಣೇ ಕೊಡಿಸಿದ ಸಂದರ್ಭದಲ್ಲಿ, **ವೃಥಾನಿರ್ಬಂಧಮಾಕಾದು** – ಯಾವುದಾದರೂ ಒಂದು ತರ್ಕಯುಕ್ತಿಯಿಂದ ನಿರ್ಬಂಧಿಸಿ ಹೇಳುವದು ಅಯುಕ್ತವು. **ವೃಥಾ** ಎಂದು ಹೇಳಿರುವದರಿಂದ ಪ್ರಯೋಜನ ಶೂನ್ಯವಾದ ತರ್ಕವೆಂಬ ಭಾವವು. **ಏದೇನುಮೊರು ನಿರ್ಬಂಧ**ವೆಂದು ಹೇಳಿದುದರಭಿಪ್ರಾಯವೇನೆಂದರೆ:—ವಾದವು ಶಾಸ್ತ್ರಪ್ರಮಾಣಕ್ಕನುಗುಣವಾಗಿರಬೇಕೆಂಬ ನಿಯಮವಿಲ್ಲದೆ ಯಾವುದೋ ಒಂದು ಕಾರಣಮೂಲಕ ವಾದಿಸುವದು ಎಂಬಭಿಪ್ರಾಯವು. ನಮ್ಮಾಳ್ವಾರವರಾದರೋ **ಮಯರ್ವರಮತಿನಲಮರುಳಿನರ್** (ತಿರು. 1. 1. 1.) ಎಂದರೆ ಸಂಶಯ ವಿಪರ್ಯಯಾದಿ ಅಜ್ಞಾನಗಳೊಂದೂ ಇಲ್ಲದೆ, ಭಕ್ತಿರೂಪ ಜ್ಞಾನವನ್ನು ಕೃಪೆಮಾಡಿದ ದಯಾಸಾಗರನ ಪ್ರೇಮಕ್ಕೆ ಪಾತ್ರರಾಗಿರುವದರಿಂದ,ಪರತತ್ವ ಯಾಥಾತ್ಮ್ಯವನ್ನು ವ್ಯಾಸಪರಾಶರಾದಿಗಳ ಹಾಗೆ ತಿಳಿದವರು. **ವೇದಂತಮಿಳ್ ಶೆಯ್ದ** ಎಂದು ಹೇಳಿರುವ ಹಾಗೆ, ವೇದಾರ್ಥಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟು ಅಂತಹ ಶಾಸ್ತ್ರ ಜನ್ಯಜ್ಞಾನ ಮತ್ತು ವಿವೇಕ ಜನ್ಯಜ್ಞಾನದಿಂದ ವಿಮರ್ಶಿಸಿದುದರಿಂದ ಪರತತ್ವ ಯಾಥಾರ್ಥ್ಯವು ಅವರಿಗೆ ತಿಳಿಯಿತು. ಹಾಗಲ್ಲದೆ ಶಾಸ್ತ್ರವನ್ನು ತ್ಯಜಿಸಿದ ಬರೀ ಕುತರ್ಕದಿಂದ ಅಂತಹ ಯಾಥಾರ್ಥ್ಯವು ಸಿದ್ಧಿಸದು. ಅದು ವೃಥಾ ನಿರ್ಬಂಧವೇ ವಿನಾ ಎಂದಿಗೂ ಕಾರ್ಯಕಾರಿಯಾಗದೆಂಬ ಭಾವವು. ಹೀಗೆ ಆಳ್ವಾರವರು ಅಪ್ಪಣೆ ಕೊಡಿಸಿದ

ಉಣರ್ ನ್ದುಣರ್ ನ್ದಿಳಿನ್ದ ಕನ್ರುಯರ್ ನ್ದುರುವಿಯನ್ದ ವಿನ್ನಿಲಮ್ಪೈಯ್ದೈ। ಯುಣರ್ ನ್ದುಣರ್ ನ್ದುಣರಿಲು ಮಿರೈ ನಿಲ್ದೈಯುಣರ್ವರಿತು ಯಿರ್ಗಳ್। ಉಣರ್ ನ್ದುಣರ್ ನ್ದುರೈತ್ತು ರೈತ್ತರಿಯಯ ನರನೆನ್ನು ಮಿವರ್ದೈ। ಯುಣರ್ ನ್ದುಣರ್ ನ್ದುರೈತ್ತು ರೈತ್ತಿರೈ ಞ್ಜಮಿನ್ಮನ ಪಟ್ಟತೊನ್ರೇ ॥

ಎಂಬ ವಾಕ್ಯಾರ್ಥವೇನೆಂದರೆ:-ಯಾವಾಗಲೂ ಜ್ಞಾನಸ್ವರೂಪನೂ ಮತ್ತು ಜ್ಞಾನಗುಣಕನೂ ಆಗಿ, ಎಲ್ಲವನ್ನೂ ವ್ಯಾಪಿಸಿ, ಅಚೇತನಕ್ಕಿಂತಲೂ ವಿಲಕ್ಷಣನಾಗಿರುವ ಜೀವಾತ್ಮನ ಸ್ವರೂಪ ಸ್ವಭಾವಗಳನ್ನು ಪುನಃಪುನಃ ವಿಮರ್ಶಿಸಿ ತಿಳಿದವರೂ

ಚತುರ್ಮುಖ ಬ್ರಹ್ಮ ರುದ್ರರ ಮಧ್ಯವಲ್ಲಿ ಈ ಸರ್ವೇಶ್ವರನು ಯಾರೆಂದು ತಿಳಿಯುವದು ತುಂಬಾ ಕಷ್ಟವು. ಏಕೆಂದರೆ, ಓ ಚೇತನರುಗಳಿರಾ, ಅನೇಕ ಕುಸಿದ್ಧಾಸ್ತಿಗಳು ಬ್ರಹ್ಮವಿಷ್ಣು ಶಿವರುಗಳು ಮೂವರೂ ಒಂದೇ ಯೆಂದೂ, ಮೂವರೂ ಸಮವೆಂದೂ, ಮೂವರಲ್ಲಿ ರುದ್ರನು ಹೆಚ್ಚೆಂದೂ, ಮೂವರಿಗಿಂತಲೂ ಪರತತ್ವವು ಜೀರೆ ಎಂದೂ, ಹೀಗೆಲ್ಲಾ ವಾದಿಸುತ್ತಾ ಭ್ರಾಮಕವನ್ನುಂಟುಮಾಡುವದರಿಂದ ಈ ಮೂವರ ವಿಷಯದಲ್ಲೂ ತುಂಬಾ ಪುನಃಪುನಃ ಆಲೋಚಿಸಿ, ಪುನಃಪುನಃ ಪ್ರಮಾಣಗಳ ಮೂಲಕ ವಿಮರ್ಶಿಸಿ, **"ನಹಿಪಾಲನ ಸಾಮರ್ಥ್ಯಂ ಋತೇ ಸರ್ವೇಶ್ವರಂ ಹರಿಂ"** ಎಂದೂ, **"ಮಧ್ಯೇ ವಿರಂಚಿ ಗಿರಿಶಂ ಪ್ರಥಮಾವತಾರಂ"** ಎಂದೂ, **"ನಾರಾಯಣಂ ಪರಂಬ್ರಹ್ಮ" "ತತ್ವಂನಾರಾಯಣಃ ಪರಃ"** ಎಂದೂ, ಹೀಗೆಲ್ಲಾ ಹೇಳುವದನ್ನೆಲ್ಲಾ ಪುನಃಪುನಃ ವಿಚಾರಮಾಡಿ, ಯಾವುದು ಇಂತಹ ಶಾಸ್ತ್ರಪ್ರಮಾಣಗಳಿಂದ ಪರತತ್ವವೆಂದು ನಿಮಗೆ ತೋರುತ್ತದೋ ಆತನನ್ನು ಧ್ಯಾನಿಸಿ, ಆತನ ಮಂತ್ರವನ್ನು ಜಪಿಸಿ, ಆಶ್ರಯಿಸಿರಿ' ಎಂಬ ಭಾವವು. ಹೀಗೆ ಸ್ವಾಮಿಕೃಪೆಯ ಮೂಲಕ ಬುದ್ಧಿಯೋಗವನ್ನು ಕೊಂದಿದ ಜ್ಞಾನಾಧಿಕರೇ ಪರತತ್ವವನ್ನರಿಯುವದು ಕಷ್ಟವೆಂದು ಹೇಳಿದ ಬಳಿಕ, ಶಾಸ್ತ್ರಗಳನ್ನು ದೂರೀಕೃತಮಾಡಿ ವಾದಮೂಲಕವಾಗಿ ಯೇ ತಿಳಿಯುತ್ತೇನೆಂದು ಹೇಳುವದು ಅಸಾಧುವಾದ ಮಾರ್ಗವು.

ಪ್ರಕೃತ ಸರ್ವೇಶ್ವರನೊಂದಿಗೆ **ತುಲ್ಯಶೀಲವಯೋವೃತ್ತಾಂ ತುಲ್ಯಾಭಿಜನ ಲಕ್ಷಣಾಂ। ರಾಘವೋರ್ಹತಿ ವೈದೇಹೀಂ ತಂಚೇಯ ಮಶಿತೇಕ್ಷಣಾ** ಎಂಬ ಮಹರ್ಷಿ ವಾಕ್ಯಾನುಸಾರ, ಇಬ್ಬರೂ ಸಮಭಾವದೊಂದಿ ಸರ್ವೇಶ್ವರ ಸರ್ವೇಶ್ವರಿಗಳಾಗಿ, ಲೋಕಪಿತಾ ಲೋಕಮಾತಾವಾಗಿ, ನಿತ್ಯಯೋಗವುಳ್ಳವರಾದ ಪ್ರಯುಕ್ತ, ಇಬ್ಬರೂ ಸೇರಿಯೇ ಪರತತ್ವವೆನ್ನುವದಕ್ಕೆ ಅನೇಕ ಪ್ರಮಾಣಗಳಿದ್ದರೂ, ಅತಿದೇಶದಿಂದ ಲಕ್ಷ್ಮಿಯ ಕೆಲವು ಧರ್ಮಗಳು ಬೋಧಿತವಾಗಿರುವದರಿಂದ, ಸರ್ವೇಶ್ವರನ ಹಾಗೆ ಲಕ್ಷ್ಮಿಗೆ ವಿಭುತ್ವವಿಲ್ಲವೆಂದೂ, ಈಶ್ವರಕೋಟಿಗೆ ಸೇರಿದವಳಲ್ಲವೆಂದೂ, ಆಕೆಯು ಅಣುವೆಂದೂ, ಚೇತನನ ವಿಷಯದಲ್ಲಿ ಉಪಾಯತ್ವದಲ್ಲೂ, ಮೋಕ್ಷಪ್ರದತ್ವದಲ್ಲೂ ಅನ್ವಯವಿಲ್ಲವೆಂದೂ, ಈಶ್ವರದ್ವಿತ್ವದಿಂದ ಲೋಕವ್ಯಾಪಾರ ವ್ಯಾಘಾತವೂ, ಏಕಾನ್ತ್ಯಹಾನಿಯೂ, ಈಶ್ವರೈಕತ್ವವನ್ನು ಬೋಧಿಸುವ ಶ್ರುತಿವಿರೋಧವೂ ಉಂಟಾಗುತ್ತದೆಂದು ವಾದಿಸುವದು ಸರಿಯಾದುದಲ್ಲವೆಂಬ ಭಾವವು.

ಆದುದರಿಂದ ತರ್ಕದಿಂದಲೂ, ಯುಕ್ತಿಯಿಂದಲೂ ವಾಸ್ತವವಾದ ವಿಷಯವನ್ನು ಅನ್ಯಥಾ ಮಾಡಬಹುದಾದುದರಿಂದ, ಅಂತಹ ಶಾಸ್ತ್ರವಿರುದ್ಧವಾದ ತರ್ಕವಾದಗಳನ್ನು ತ್ಯಜಿಸಿ, ತಾವು ಶಾಸ್ತ್ರಪ್ರಮಾಣಗಳನ್ನು ಮಾತ್ರವೇ ಅಙ್ಗೀಕರಿಸಿರುವದಾಗಿ ಮುಂದಿನ ವಾಕ್ಯದಿಂದುಪದೇಶಿಸುತ್ತಾರೆ.

"ಕೃಶಾನರ್ಥಂ ಸ್ತುತಃ ಕೇಚಿದ ಕೃಶಾಂ ಸ್ತತ್ರ ಕುರ್ವತೇ" ಎಜ್ಜರ ಪಡಿಯೇ, ತರ್ಕ ಪಾಣಿತ್ಯತ್ತಾಲೆ ನಿನ್ಮೈತ್ತದೆಲ್ಲಾಮ್ ಸಾಧಿಕ್ಕಲಾ ಯಿರುಕ್ಕ ಚೆಯ್ದೇ ಇರೇ ನಾಮ್ ಪ್ರಮಾಣ ಶರಣರಾಯ್ ಪ್ಪೋರುಗಿರದು.

"**ತತಃ**-ಆ ರಾಜಸೂಯ ಸಭೆಯಲ್ಲಿ ನೆರವ ಸಭಿಕರ ಒಲ್ಪ, ಬಹುವಾಗಿ ಮಾತಾಡುವುದು ಮತ್ತು ಪಿತಂಡಾವಾದ ಇವುಗಳ ಮೂಲಕ,(ಇದು ಪ್ರಕರಣದಿಂದ ವ್ಯಕ್ತಪಡುತ್ತದೆ,) **ತತ್ರ** – ಆ ಧರ್ಮರಾಜನ ರಾಜಸೂಯ ಸಭೆಯಲ್ಲಿ, **ಕೃಶಾನರ್ಥಂ** – ಅಲ್ಪಗಣವಾದ ಅರ್ಥಗಳನ್ನು, **ಕೇಚಿತ್** – ಕೆಲವು ಬ್ರಾಹ್ಮಣರು, **ಅಕೃಶಾಂ**–ದೊಡ್ಡವಾವಪ್ರಗಳನ್ನಾಗಿ, **ಕುರ್ವನ್ತಿ**–ಮಾಡುತ್ತಾರೆ, ತಮ್ಮ ಕುಯುಕ್ತಿ ಕುವಾದಗಳ ಮೂಲಕ ಅಲ್ಪವಾದುದನ್ನು ದೊಡ್ಡದಾಗಿರುವ ಹಾಗೆ ತೋರ್ಪಡಿಸುತ್ತಾರೆಂಬ ಭಾವವು. **"ಅಕೃಶಾಂಶ್ಚ ಕೃಶಾಂ ಶ್ಚಕ್ರುರ್ಹೇತುಭಿಶ್ಶಾಸ್ತ್ರನಿಶ್ಚಯೈಃ"** ಎಂಬುದು ಉತ್ತರಾರ್ಧವು. ಹಾಗೆಯೇ ಕೆಲವರು ದೊಡ್ಡವಾದವುಗಳನ್ನು ಅಲ್ಪಗಳಾಗಿ ವಾದದಿಂದ ತೋರಿಸಿದರು ಎಂಬರ್ಥವು. **ಎಜ್ಜರಪಡಿಯೇ** ಎಂದು ಮಹರ್ಷಿಗಳಾದ ವ್ಯಾಸರು ಹೇಳಿರುವ ಹಾಗೆ, **ತರ್ಕಪಾಣ್ಡಿತ್ಯದಿಂದ, ನಿನ್ಮೈತ್ತದೆಲ್ಲಾಂ** – ಮನಸ್ಸಿಗೆ ತೋಚಿದುದನ್ನೆಲ್ಲಾ, ಅವುಗಳು ಶಾಸ್ತ್ರಸಮ್ಮತವಾಗಿ ಯಥಾರ್ಥವಾಗಿಯೇ ಇರಲಿ ಅಥವಾ ಶಾಸ್ತ್ರಸಮ್ಮತವಲ್ಲದೆ ಅಯಥಾರ್ಥವಾಗಿಯೇ ಇರಲಿ ಎಂಬ ಭಾವವು, **ಸಾಧಿಕ್ಕಲಾಯಿರುಕ್ಕ ಚೆಯ್ದೇ ಇರೆ**–ಆದ ಮೂಲಕ ಸಾಧಿಸುವದು ಸಾಧ್ಯವಾಗಿರುವದರಿಂದ, **ನಾಮ್**–ನಾವು, **ಪ್ರಮಾಣಶರಣರಾಗಿ** – ಶಾಸ್ತ್ರಪ್ರಮಾಣಗಳನ್ನೇ ತತ್ವ ಯಾಥಾತ್ಮ್ಯ ನಿರ್ಣಯಕ್ಕೆ ಸಾಧಕವಾಗಿ, **ಪ್ಪೋರುಗಿರದು** – ಹೋಗುವದು. ಬರೀವಾದದ ಬಲದಿಂದಲೇ ಪ್ರತಿಯೊಬ್ಬರೂ ತನ್ನ ಮನಸ್ಸಿಗೆ ತೋಚಿದುದೇ ಸರಿ ಎಂದು ಸಾಧಿಸಬಹುದು ಎಂಬರ್ಥವು. ಕೃಶವಾಗಿರುವದನ್ನು ಅಕೃಶವೆಂದು ಸಾಧಿಸಬಹುದು. ಇನ್ನು ಕೆಲವರು ಅಕೃಶವಾದುದನ್ನು ಕೃಶವೆಂದು ಸಾಧಿಸಬಹುದು. ಮನುಷ್ಯರು ಕೆಲವು ಸಿದ್ಧಾನ್ತಗಳೇ ಅಸ್ತಿತ್ವ, ನಾಸ್ತಿತ್ವ, ಭೇದ ಅಭೇದ, ಪಾರಮಾರ್ಥಿಕ ಅಪಾರಮಾರ್ಥಿಕ ಸ್ಥಿತಿಗಳು ಸಾಧ್ಯವೆಂದು

(1) ಭಾರ. ಸಭಾ. 39. ೫.

(2) **ತತಃ** ಎಂಬುದಕ್ಕೆ ರಾಜಸೂಯ ಯಾಗಾನಂತರದಲ್ಲಿ ಎಂದು ಶ್ರೀ ಮದ್ವಿಷ್ಣುಪುರಿ ನರಹರಿತೀರ್ಥಾಚಾರ್ಯರು ಅರ್ಥ ಬರೆದಿರುತ್ತಾರೆ. ಮೇಲಿನ ಪಾಠಾನ್ತರವಿದ್ದರೆ ಅರ್ಥವು ಸ್ಪಷ್ಟವಾಗಿ ತೋರುತ್ತದೆ.

ಹೇಳುವಾಗ ಒಂದನ್ನೇ ಪರಸ್ಪರ ಭಿನ್ನವಾಗಿ ಹೇಳುವದೇನೂ ಆಶ್ಚರ್ಯವಾದುದಲ್ಲವು. ಇಲ್ಲಿ ನಾಮ್ ಪ್ರಮಾಣಶರಣರು ಎಂಬಲ್ಲಿ **ನಾಮ್** ಎಂಬ ಪದವು ಬಹುಶಃ ಗೌರವಾರ್ಥಕ ಪ್ರಯೋಗವಾಗಿಯಾದರೂ ಆಗಬಹುದು. ಅಥವಾ ತಾವೂ ತಮ್ಮ ಆಚಾರ್ಯಗೋಷ್ಠಿಗೆ ಸೇರಿದ ಸಾಧಮುನಿಗಳ ಮೊದಲುಗೊಂಡು ಸರ್ವರೂ ಎಂಬ ಭಾವದಿಂದಲಾದರೂ ಆಗಬಹುದು. ತಮ್ಮ ಆಚಾರ್ಯಗೋಷ್ಠಿಗೆ ಸೇರಿದವರಿಗೂ ತಮಗೂ ಸಹ ಪ್ರಮಾಣವೇ ಮುಖ್ಯ ಬಲವಾದುದರಿಂದ, ಬರೀ ತರ್ಕ ಮೂಲಕ ಜೀವಾತ್ಮ, ಪರಮಾತ್ಮರಿಗೆ ಐಕ್ಯಹೇಳಲಿಲ್ಲವು ಪ್ರತ್ಯಕ್ಷಕ್ಕೆ ವಿರೋಧವಾಗಿ ಜಗತ್ತಿಗೆ ಮಿಥ್ಯಾತ್ವವನ್ನು ಕಲ್ಪಿಸಲಿಲ್ಲವು. ಪರಮಾತ್ಮನಿಗೆ ಹೇಯಗುಣವನ್ನೂ, ಕರ್ಮೋಪಾಧಿಯನ್ನೂ ಆರೋಪಿಸಲ್ಲಲ್ಲವು. ಲೋಕನಾಥಪತ್ನಿಯನ್ನು ಅವಳ ಸಾಮ್ರಾಜ್ಯಪದವಿಯಿಂದ ಜೀವಕೋಟಿಗೆ ತಳ್ಳಿಬಿಡಲಿಲ್ಲವು ಎಂಬ ಭಾವದಿಂದಲೇ **ನಾಮ್ ಪ್ರಮಾಣಶರಣರಾಗಿ ಪೋರು ರದು** ಎಂದು ಪ್ರಯೋಗಿಸಿರುತ್ತಾರೆ. ನಾವುಗಳು ಬರೀ ತರ್ಕದಲ್ಲಾಯಿಪೆ, ಪ್ರಮಾಣಗಳು ಹೇಗೆ **ಉಪದೇಶಿಸಿದವೋ**, ಹಾಗೆಯೇ ನಂಬಿದೆವು, ಆದುದರಿಂದಲೇ ತತ್ವನಿಶ್ಚಯಕ್ಕೆ ನಮಗೆ ತುಂಬಾ ಸಹಾಯ ದೊರೆಯಿತೆಂಬ ತಾತ್ಪರ್ಯವು. ಬರೀ ತರ್ಕದಿಂದ ತತ್ವ ಯಾಥಾತ್ಮ್ಯ ದೊರೆಯುಲಾರದೆಂಬಂಶವು [1] **"ತರ್ಕಾಪ್ರತಿಷ್ಠಾನಾದಪಿ"** ಎಂಬ ಸೂತ್ರದಲ್ಲಿ ಉಪಪಾದಿತವಾಗಿರುತ್ತದೆ. ಶ್ರೀ ನಿಗಮಾನ್ತದೇಶಿಕರು ಅವರು ರಚಿಸಿದ ಸಙ್ಕಲ್ಪಸೂರ್ಯೋದಯದಲ್ಲಿ **"ತರ್ಕೋನಪ್ರತಿತಿಷ್ಠತಿ"** ಎಂದು ಈ ಅಭಿಪ್ರಾಯವನ್ನೇ ಸೂಚಿಸಿರುತ್ತಾರೆ. ಜ್ಞಾನಭಾಗಕ್ಕೆ ತರ್ಕವು ಉಪಯುಕ್ತವಾದುದಲ್ಲವೇ? ತರ್ಕವನ್ನು ಹಾಗೆ ನಂಬಿಸಬಹುದೋ? ಎಂದರೆ, ತರ್ಕವೇನೋ ಆವಶ್ಯಕವು. ಆದರೆ ಅಪ್ರತ್ಯಕ್ಷವಾದ ಪರಬ್ರಹ್ಮತತ್ವದ ಯಾಥಾತ್ಮ್ಯನಿರ್ಣಯದಲ್ಲಿ, ಶಾಬ್ದವೇ ಮುಖ್ಯಪ್ರಮಾಣವಾದುದರಿಂದ ಶಾಸ್ತ್ರಪ್ರಮಾಣವನ್ನು ಸಂಪೂರ್ಣವಾಗಿ ನಂಬಿಬಿಟ್ಟು, ಆ ಅಭಿಪ್ರಾಯಗಳನ್ನು ತರ್ಕದ ಮೂಲಕ ಅನುಸನ್ಧಾನಮಾಡಿ ಅದರ ಸಾಮಞ್ಜಸ್ಯವನ್ನು ಗ್ರಹಿಸತಕ್ಕದ್ದು. ಹೀಗೆ ಮಾಡುವದೀಗ ಸತ್ತರ್ಕವು. ಹಾಗೆ ಮಾಡದೆ ಪ್ರಮಾಣಗಳನ್ನು ದೂರೀಕರಿಸಿ, ಅಥವಾ ಪರಸ್ಪರ ವಿರೋಧ ಉಂಟಾದರೂ ಅವುಗಳನ್ನು ಪರಿಗಣಿಸದೆ, ಅಥವಾ ಪರಿಗಣಿಸಲು ಹೊರಟು ಸಾಮಂಜಸ್ಯ ದೊರೆಯದೆ, ಅದಕ್ಕಾಗಿ ಲಾಕ್ಷಣಿಕಾರ್ಥಗಳನ್ನು ಕಲ್ಪಿಸಿ, ಹೀಗೆಲ್ಲಾ ಧರ್ಮತತ್ವಾದಿಗಳನ್ನು ವಾದಗಳ ಮೂಲಕ ತಿಳಿಯುತ್ತೇನೆಂದು ಪ್ರವರ್ತಿಸಿದರೆ, ಯಾಥಾತ್ಮ್ಯವು ದೊರೆಯಲಾರದು. ಹೇಗೆಂದರೆ:—ಬೀದಿಯಲ್ಲಿ ಹೋಗುವಾಗ ಯಾರೋ ಬೀಳಿಸಿಕ್ಕೊಂಡು ಹೋದ ಹೆಚ್ಚಿನ ದ್ರವ್ಯದ ಗಂಟು

---

(1) ಶಾ. ಸೂ. 2. 1. 11.

ಒಬ್ಬನಿಗೆ ಸಿಕ್ಕುತ್ತದೆಯೆಂದು ಭಾವಿಸೋಣ. ಹಣಸಿಕ್ಕಿದವನು ವಾದ ಮೂಲಕ ಅ ಲೋಚಿಸುತ್ತಾನೆ. ನಾನು ಪರ್ವೇಶ್ವರನನ್ನು ಬಹು ಭಯಭಕ್ತಿಗಳ ಮೂಲಕ ಆರಾಧಿ ಸುತ್ತಲಿರುವೆನು. ಇದರಿಂದ ಸಂತುಷ್ಟನಾದ ದೇವರು ನನಗೆ ಕೃಪೆಮಾಡುವದ ಕ್ಕಾಗಿ, ಈ ದ್ರವ್ಯವು ನನಗೆ ಸಿಕ್ಕುವ ಹಾಗೆ ಮಾಡಿರುವನು. ಬೀದಿಯಲ್ಲಿ ಸಹ ಸ್ರಾರು ಜನರು ಹೋಗುತ್ತಿದ್ದರೂ, ಅದು ಯಾರಿಗೂ ಸಿಕ್ಕದೆ ನನಗೇನೇ ಸಿಕ್ಕಿದು ದರಿಂದ ನನಗೆ ಅನುಗ್ರಹಮಾಡಬೇಕೆಂಬ ಸ್ವಾಮಿಸಙ್ಕಲ್ಪವೆಂಬುವದು ಸುವ್ಯಕ್ತವು. ಇಷ್ಟು ದ್ರವ್ಯಕಳಕೊಳ್ಳಬೇಕಾದರೆ ದ್ರವ್ಯ ಕಳಕೊಂಡವನು ಮಹಾಪರಾಧಿಯಾಗಿ ಭಗವನ್ನಿಗ್ರಹಕ್ಕೆ ಪಾತ್ರನಾಗಿರಬೇಕು. ಇಲ್ಲವಿದ್ದರೆ ಇಷ್ಟು ಧನವನ್ನು ಕಳೆದುಕೊ ಳ್ಳುವನೇ? ನಾನು ಭಗವದ್ಭಾಗವತ ಕೈಂಕರ್ಯದಲ್ಲಿ ಆಸಕ್ತನಾಗಿರುವದನ್ನು ತಿಳಿದ ಲ್ಲನೆ, ಅಂತಹ ಭಗವದ್ಭಾಗವತ ಕೈಂಕರ್ಯವನ್ನು ಸಗಲಿ ಎಂಬದಾಗಿ ನನಗೆ ಸಿಕ್ಕುವ ಹಾಗೆ ಪ್ರೇರಣೆ ಮಾಡಿದನು. ಆದುದರಿಂದ ಅಂತಹ ಕೈಙ್ಕರ್ಯಗಳನ್ನೇ ಎಸಗು ವನೆಂದು ಹೇಳಿ ಧನವನ್ನು ಪರಿಗ್ರಹಿಸುವನು. ಈ ತರ್ಕವು ಬಹು ಸ್ವಾರಸ್ಯವಾಗಿ ತೋರಿದರೂ ಶಾಸ್ತ್ರಸಙ್ಕಲ್ಪವನ್ನನುಸರಿಸದ ತರ್ಕವಾದುದರಿಂದ ಕುತರ್ಕವು.

ಈ ಸಂದರ್ಭದಲ್ಲಿ ಇನ್ನೊಂದು ವಿಧವಾಗಿಯೂ ತರ್ಕಮಾಡಬಹುದು. ಹೇಗೆಂ ದರೆ:—ಈಶಾವಾಸ್ಯದ ಪ್ರಥಮ ಶ್ಲೋಕದಲ್ಲಿ, "**ಮಾಗೃಧಃ ಕಸ್ಯಸ್ವಿದ್ಧನಂ**" "**ಇತರರ ದ್ರವ್ಯಕ್ಕೆ ಆಶೆಪಡತಕ್ಕದ್ದಲ್ಲವು**" ಎಂದು ಪರಧನವು ಸಂಪೂರ್ಣ ನಿಷೇಧಿಸಲ್ಪಟ್ಟಿರುತ್ತದೆ. ಆದುದರಿಂದ ಇತರರ ಧನಕ್ಕೆ ನಾನು ಆಶೆಪಡುವದು ಅಧರ್ಮ ವೆಂದು ಶ್ರುತಿಯು ಹೇಳುತ್ತದೆ. ಇದು ಯಾರ ಧನವೋ ತಿಳಿಯದು. ಇದನ್ನು ಕಳೆದುಕೊಂಡವನು ಇದನ್ನು ಗಳಿಸಲು ಎಷ್ಟು ಶ್ರಮಪಟ್ಟನೋ? ಯಾವ ಯಾವ ಫಲಕೆಲಸಗಳನ್ನು ಮಾಡಬೇಕೆಂದು ಉದ್ದೇಶಿಸಿರುವನೋ? ಅದನ್ನು ಕಳೆದುಕೊಂ ಡಿದುದರಿಂದ ಎಷ್ಟು ಕ್ಲೇಶಗಳಿಗೆ ಗುರಿಯಾಗುವನೋ? ನಾನು ಈ ದ್ರವ್ಯಕ್ಕಾಗಿ ಈಷ ದು ಕಷ್ಟಪಟ್ಟೆನಾದುದರಿಂದ ಇದನ್ನು ಸ್ವೀಕರಿಸುವದು ಅಧರ್ಮವಲ್ಲವೇ? ಪರ್ವೇ ಶ್ವರನು ನನ್ನ ಮನೋ ಸ್ಥೈರ್ಯವನ್ನು ಪರೀಕ್ಷಿಸುವದಕ್ಕಾಗಿ ಇಂತಹ ಕೌತುಕ ವನ್ನೇನಾದರೂ ಎಸಗಿರುವನೋ ತಿಳಿಯದು. ಇದನ್ನು ಯಾರು ಕಳೆದುಕೊಂಡ ವಿಷಯವನ್ನು ವಿಚಾರಣಾನಾಮ ಕೊಟ್ಟು ವಿಚಾರಿಸೆನೆಂದು ಸಙ್ಕಲ್ಪಿಸಿ ತದನುಸಾರವಾಗಿ ನಡೆಯುವನು. ಇದು ಶಾಸ್ತ್ರವನ್ನನುಸರಿಸದ ತರ್ಕವಾದುದರಿಂದ ಕುತರ್ಕವು. ವ್ಯಾಸ ಸೂತ್ರಗಳು.

ಆರ್ಷಂ ಧರ್ಮೋಪದೇಶಂ ಚ ವೇದಶಾಸ್ತ್ರಾವಿರೋಧಿನಾ।
ಯಸ್ತರ್ಕೇಣಾನುಸಂಧತ್ತೇ ಸಧರ್ಮಂವೇದ ನೇತರಃ ॥

ಸೂತ್ರವನ್ನು ಮೂಲಕ, ವೇದಶಾಸ್ತ್ರಕ್ಕೆ ವಿರೋಧವಿಲ್ಲದ ಹಾಗೆ ತರ್ಕಮಾಡಬೇಕೆಂ

ದುಪದೇಶಿಸಿರುವದರಿಂದ **ಪ್ರಮಾಣಶರಣರಾಗಿ** ವಿವೇಚನ ಮಾಡುವದು ಯುಕ್ತವೇ ವಿನಾ, ಬರೀ ತರ್ಕಗಳನ್ನು ಮಾಡುವಾಗಲಿ ಅಥವಾ ಒಂದು ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡು ಅದಕ್ಕೆ ಸರಿಯಾಗಿ ಶಾಸ್ತ್ರಪಜ್ಞ್ಞಗಳಿಗೆ ಅಪಾರ್ಥಗಳನ್ನು ಕಲ್ಪಿಸುವದಾಗಲಿ, ಸರಿಯಾದುದಲ್ಲವೆಂಬ ಭಾವವು.

ಮೇಲೆ ತೋರಿಸಿದ ಹಾಗೆ ಪ್ರಮಾಣಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟರುವದಾದರೆ, **"ಈಶ್ವರೀಂ ಸರ್ವಭೂತಾನಾಂ" "ಅಸ್ಯೇಶಾನಾ ಜಗತೋ ವಿಷ್ಣುಪತ್ನೀ"** ಇತ್ಯಾದಿ ಪ್ರಮಾಣಗಳಿಂದ ಲಕ್ಷ್ಮ್ಯಾಯು ಈಶ್ವರತತ್ವಕ್ಕೆ ಸೇರಿದವಳೆಂದೂ, **"ಶ್ರದ್ಧಯಾ ದೇವಿದೇವತ್ವಮಶ್ನುತೇ" "ಶ್ರದ್ಧಾಪ್ರತಿಷ್ಠಾ ಲೋಕಸ್ಯದೇವೀ" "ಕಾಮವತ್ಸಾನೃತಂ ದುಹಾನಾ" "ವಿಶ್ವಸ್ಯ ಭರ್ತ್ರೀಜಗತಃ ಪ್ರತಿಷ್ಠಾ" "ಸಾನೋ ಲೋಕಮನೃತಂ ದದಾತು" "ಈಶಾನಾ ದೇವಿ ಭುವನಸ್ಯಾಧಿಪತ್ನೀ" "ದೇವಜುಷ್ಟಮುದಾರಾಂ"** ಎಂಬಿವೇ ಮೊದಲಾದ ಪ್ರಮಾಣಗಳಿಂದ ಜಗತ್ಸೃಷ್ಟಿ, ಸ್ಥಿತಿ, ಲಯ, ನಿಯಮನಾದಿ ಕಾರ್ಯಗಳನ್ನು ಪತಿಯೊಂದಿಗೆ ಸೇರಿ ನಡಿಸುವಳೆಂದು ತೋರಿಬರುತ್ತದೆ. ಮತ್ತು,

"ತಥಾಲಕ್ಷ್ಮ್ಯಾಸ್ಸ್ವರೂಪಂಚ ಸರ್ವೈಶ್ವರ್ಯಾಣು ಸಮಾಹಿತಃ।
ಗುಣತಶ್ಚ ಸ್ವರೂಪೇಣ ವ್ಯಾಪ್ತಿಸ್ಸಾಧಾರಣೀಮತಾ।
ಯಥಾ ಮಯಾ ಜಗದ್ವ್ಯಾಪ್ತಂ ಸ್ವರೂಪೇಣ ಸ್ವಭಾವತಃ।
ತಯಾ ವ್ಯಾಪ್ತ ಮಿದಂ ಸರ್ವಂ ನಿಯಂತ್ರೀಚ ತಥೇಶ್ವರೀ।
ಯಥಾ ಮಯಾಪಿ ಸಾವ್ಯಾಪ್ತಾ ತಯಾ ವಾಪ್ತೋಽಹ ವಿಶಾರದಃ।
ಮಮ ಲಕ್ಷ್ಮ್ಯಾಶ್ಚ ಸೇನೇಶ ವೈಲಕ್ಷಣ್ಯ ಮಿದಂ ಶೃಣು।
ಮಚ್ಛೇಷ ಭೂತಾ ಸರ್ವೇಷಾ ವಿಶ್ವರೀ ವಲ್ಲಭಾ ಮಮ।
ಅಸ್ಯಾಶ್ಚ ಜಗತಶ್ಚಾಹನೀಶ್ವರೋ ವೇದವಿಶ್ರುತಃ" ॥

ಎಂಬ ವಿಷ್ವಕ್ಸೇನ ಸಂಹಿತಾ ವಾಕ್ಯಪ್ರಮಾಣದಿಂದ ಲಕ್ಷ್ಮಿಗೆ ತನ್ನ ಪತಿಯ ಹಾಗೆ ಸ್ವರೂಪದಿಂದಲೂ ಧರ್ಮಭೂತಜ್ಞಾನದಿಂದಲೂ ಸರ್ವವ್ಯಾಪಕತ್ವವೂ, ಸರ್ವನಿಯಮನತ್ವ, ಸರ್ವೇಶ್ವರೀತ್ವಗಳೂ ಹೇಳಲ್ಪಡುವದರಿಂದ ಈಶ್ವರತತ್ವದಲ್ಲಿ ಅನ್ವಯವೂ, ಮತ್ತು ಸರ್ವೇಶ್ವರನಿಗೆ ಶೇಷಭೂತತ್ವ, ಪತಿಪಾರಾಧ್ಯ ಮೊದಲಾದವುಗಳಿಂದ **ಈಶಿತವ್ಯ** ತತ್ವದಲ್ಲಿ ಅನ್ವಯವೂ, ಹೀಗೆ ಈಶತತ್ವ, ಈಶಿತವ್ಯತತ್ವ ಎರಡರಲ್ಲೂ ಅನ್ವಯವು ಅಸಂಗತವಲ್ಲವೋ ಎಂದರೆ, ಇವರಲ್ಲೀನು ಅಸಂಗತವಾಮದಿಲ್ಲವೆಂದೂ ಪ್ರಮಾಣಗಳು ಹೇಗೆ ಹೇಳಿದೆಯೋ ಹಾಗೆ ತಿಳಿಯುವುದೇ ಸಮ್ಯಸಮಂಜಸವೆಂದು ಹೇಳುತ್ತಾರೆ. ಈ ಸಂದರ್ಭದಲ್ಲಿ ತನ್ನ ಪತಿಯೊಂದಿಗೆ ಲಕ್ಷ್ಮಿಗೆ ಸ್ವರೂಪ ರೂಪಗುಣ ವಿಭವೈಶ್ವರ್ಯಗಳಲ್ಲಿ ಸಮಭಾವವನ್ನು ಹೇಳಿದರೆ ಲಕ್ಷ್ಮ್ಯಾಯೂ ತಾನಾಗಿಯೇ

ಆಗ್ಮೈಯಾಲ್ಲಿ ವೀಶ್ವರ ತತ್ವತ್ತ್ರೈಯುಮ್, ಈಶಿತವ್ಯ ತತ್ವಜ್ಞಳೈಯುಮ್ ಯಥಾಪ್ರಮಾಣ ನ್ತೆಳಿಯಪ್ಪಾ ಪ್ತಂ. ಇವ್ವಿಡತ್ತಿಲ್ ಸರ್ವಜ್ಞನಾಗವುಮ್ ವೇಣ್ಡಾ. ಅತ್ಯನ್ತಾ ನುಪಯುಕ್ತಜ್ಞಳಿರ್ಪ್ಪೋಲೆ ಸ್ವಲ್ಪೋಪಯುಕ್ತಜ್ಞಳಾನ ವುಮ್ ಲಭಿಸನ್ಡಿ ಪಣ್ಣವುಮ್ ವೇಣ್ಡಾ.

ಶೇಷಭಾವವನ್ನೂ ಪತಿಪಾರಾಧ್ಯವನ್ನೂ ವಹಿಸಿ ತಾನೂ ಈಶಿತವ್ಯಳೆಂದು ತೋರಿಸಿಕೊಂಡರೆ ಬಾಧಕವೇನಿರುತ್ತದೆ? ಲೋಕದಲ್ಲೂ ಭಾಗವತೋತ್ತಮರು ಪರಸ್ಪರಸಮರೇ ಆದರೂ, ಪರಸ್ಪರ ಶೇಷಭಾವ ಪ್ರದರ್ಶನವು ಸಮಭಾವಕ್ಕೆ ಹೇಗೆ ಬಾಧಕವು? ಹಾಗೆಯೇ ಇಲ್ಲಿಯೂ ಭಾವಿಸತಕ್ಕದ್ದೆಂದು ಹೇಳಿ ಮುಂದಿನ ವಾಕ್ಯವೆಂಬ ತತ್ವತ್ರಯೋಪದೇಶವನ್ನು ಪೂರೈಸುತ್ತಾರೆ.

ಆಗ್ಮೈಯಾಲ್ – ತತ್ವನಿರ್ಣಯದಲ್ಲಿ ಕೇವಲ ತರ್ಕಮಾತ್ರವೇ ಪ್ರಯೋಜನವಲ್ಲವಾಗಿ ಶ್ರುತ್ಯಾದಿ ಪ್ರಮಾಣಗಳೇ ಪ್ರಾಧಾನ್ಯವಾದವುಗಳಾದುದರಿಂದ, **ಈ ಈಶ್ವರತತ್ವವನ್ನೂ, ಈಶಿತವ್ಯತತ್ವಜ್ಞಳೈಯುಮ್** – ನಿಯಾಮ್ಯವರ್ಗಕ್ಕೆ ಸೇರಿದ ಸಮಸ್ತ ಚೇತನಾ ಚೇತನಗಳನ್ನೂ (ಲಕ್ಷ್ಮಿಯು ಸ್ವತಃ ತನ್ನ ಪತಿಗೆ ಅಧೀನಳಾದುದರಿಂದ, ಆಕೆಯೂ ಸಹ ಈಶಿತನವರ್ಗದಲ್ಲೇ ಸೇರಿದಳಾದುದರಿಂದ ಆಕೆಯೂ ಹೇಳಲ್ಪಟ್ಟಳು) **ಯಥಾಪ್ರಮಾಣಂ ತೆಳಿಯಪ್ರಾಪ್ತಂ**–ಶಾಬ್ದಪ್ರಮಾಣಗಳನ್ನನುಸರಿಸಿ ಏಪೋ ಅವುಗಳ ಸ್ವರೂಪ ಸ್ಥಿತಿ ಪ್ರವೃತ್ತಿಗಳನ್ನರಿಯತಕ್ಕದ್ದು ಉಚಿತವು. **ಇವ್ವಿಡತ್ತಿಲ್** – ಈ ಸಂದರ್ಭದಲ್ಲಿ ಎಂದರೆ ಈಗ ತಿಳಿಯಬೇಕಾಗಿರುವ ವಿಷಯವಲ್ಲಿ, **ಸರ್ವಜ್ಞನಾಕವುಮ್ ವೇಣ್ಡಾ** – ತುಂಬಾ ಜ್ಞಾನಾಧಿಕನಾಗಿ, ಸರ್ವಶಾಸ್ತ್ರಗಳನ್ನು ಅಧಿಕರಿಸಿ, ನ್ಯಾಯಮೀಮಾಂಸಾದಿ ತತ್ವಮುಕ್ತಾ ಕಲಾಪನೇ ಮೊದಲಾದ ಪ್ರೌಢ ಗ್ರಂಥಗಳನ್ನು ಅಧಿಕರಿಸಿ ಪಂಡಿತನಾಗಬೇಕೆಂಬ ಆವಶ್ಯಕತೆಯೂ ಇಲ್ಲವು: ಎಂದರೆ ಈಗ ಉಪದೇಶಿಸುವವನ್ನು ತಿಳಿಯುವದಕ್ಕೆಂದುಮಾಗುವ ಜ್ಞಾನಮಾತ್ರ ಸಾಕು ಎಂಬ ಭಾವವು. ಶಾಸ್ತ್ರ ಪ್ರಮಾಣವಲ್ಲಿ ಮಮತೆಯುಳ್ಳವ್ಯ, ತತ್ವವಿಷಯವಲ್ಲಿ ಈಗ ಹೇಳಲಪಟ್ಟಷ್ಟಾದರೂ ಗ್ರಹಿಸಿದರೆ ಸಾಕೆಂಬ ಭಾವವು. ಅದು ಏಕೆಂದರೆ:—ನಿರತಿಶಯ ಮೋಕ್ಷಸುಖ ಪ್ರಾಪ್ತಿಯುಂಟಾಗಲು ಯಾವ ಜ್ಞಾನವು ಆವಶ್ಯಕವೋ, ಅಷ್ಟುಮಾತ್ರವೇ ಇಲ್ಲಿ ಉಪದೇಶಿತವಾಗಿರುತ್ತದೆಂಬ ಭಾವವು.

ಅತ್ಯನ್ತಾನುಪಯುಕ್ತಜ್ಞಳಿರ್ಪ್ಪೋಲೆ-ತುಂಬಾ ಅನುಪಯೋಗವಾದ ವಿಷಯಗಳಲ್ಲಿ ಹೇಗೆಂದಾ ಹಾಗೆ. **ಸ್ವಲ್ಪೋಪಯುಕ್ತಜ್ಞಾನವುಮ್** – ಸ್ವಲ್ಪ ಪ್ರಯೋಜನವಿರುವಷ್ಟಿಯಾ ಸಾಕು. **ಲಭಿಸನ್ಡಿ ಪಣ್ಣವುಮ್ ವೇಣ್ಡಾ** –

ಅಪರಿಚ್ಛೇದ್ಯಮಾನ ಕಡಲಿಲೇಪಡಕೋಡುವಾರ್ ವಳಿ ಮುದಲಾ ಗ ವೇಣ್ಡುವನ ತೆಳಿಯು ಮಾಪ್ಪೋಲೇ ಇವ್ವಳವು ವಿವೇಕಿಕ್ಕೆ ಅವ ಶ್ಯಾಪೇಕ್ಷಿತಮ್.

ತಿಳಿಯಬೇಕೆಂಬಪೇಕ್ಷೆಮಾಡಿ ಅದಕ್ಕಾಗಿ ಪ್ರಯಾಸಪಡಬೇಕಾಗಿಲ್ಲವು. ತರ್ಕವಾದ ಗಳ ಮೂಲಕ ಇತರ ಸಿದ್ಧಾಸ್ತಿಗಳ ನಿರಸನ, ನ್ಯಾಯಸಿದ್ಧಾಂಜನ ಮೊದಲಾದವು ಗಳಲ್ಲಿ ಉಪಪಾದಿತವಾಗಿರುವ "ನಿರವಯವಾದ ಪ್ರಕೃತಿಸೃಷ್ಟಿಯಲ್ಲಿ ಸಾವಯವು ಹೇಗೆ ಆಯಿತು" ಇವೇ ಮೊದಲಾದ ವಾದಗಳು ಮೋಕ್ಷಾರ್ಥಿಗೆ ಅನುಪಯುಕ್ತವಾ ದವುಗಳು, ಅಂಥಾವುಗಳ ಜ್ಞಾನವು ಬೇಕಾಗಿಲ್ಲವು; ಆರ್ಥಿರಾದ.।ಗತಿಚಿನ್ತನವು ಮೋಕ್ಷಾರ್ಥಿಗೆ ಆವಶ್ಯಕವಾಮದರಿಂದ ಅದು ಮುಂದೆ ಹೇಳಲ್ಪಡುತ್ತದೆ; ಸ್ವಲ್ಪ ಪ್ರಯೋಜನವಾದುದು ಭುವನ ಕೋಶದ ಜ್ಞಾನವು; ಹಾಗಾದರೂ ಸ್ವಲ್ಪೋ ಪಯುಕ್ತವಾದುದರಿಂದ ಅದೂ ಕೂಡ ಮುಖ್ಯವಲ್ಲವು; ಹೀಗೆ ಅನುಪಯುಕ್ತ ಸ್ವ ಲ್ಪೋಪಯುಕ್ತಾಂಶಗಳನ್ನು ತ್ಯಜಿಸಿ, ಜ್ಞಾತವ್ಯಾಂಶಗಳನ್ನಾದರೂ ಶಾಸ್ತ್ರಪ್ರಮಾ ಣಾನುಸಾರ ಯಥಾವತ್ತಾಗಿ ತಿಳಿಯುತಕ್ಕದ್ದಾವಶ್ಯಕವು ಎಂಬ ಭಾವವು. ಈಗ ಬರಿಯುತ್ತಿರುವುದು ತುಂಬಾ ಜ್ಞಾನಾಧಿಕರಿಗಲ್ಲವೆ, ಸಾಧಾರಣ ಜ್ಞಾನವುಳ್ಳ ಮೋ ಕ್ಷಾರ್ಥಿಗಾಗಿಯೇ ಎಂಬ ಭಾವವೂ ತೋರಿಬರುತ್ತದೆ. ಈಗ ಹೇಳಿರುವ ಭಾಗವೂ ಮುಂದೆ ಹೇಳುವ ಭಾಗವೂ ಸಹ ಹೇಗೆ ಉಪಾದೇಯವು, ನಿಃಕ್ಷವೆಲ್ಲಾ ಅನಾವಶ್ಯ ಕವು ಎಂಬುವದನ್ನು ಮುಂದೆ ದೃಷ್ಟಾಂತಮೂಲಕ ತೋರ್ಪಡಿಸುತ್ತಾರೆ.

ಅಪರಿಚ್ಛೇದ್ಯಮಾನ-ಅಪಾರವಾದ, **ಕಡಲಿಲ್**-ಸಮುದ್ರದಲ್ಲಿ, **ಪಡಕೋಡುವಾರ್** -ಹಡಗು ನಡಿಸುವರು ಎಂದರೆ ನಾವಿಕರು, **ವಳಿನೊದಲಾಕ** - ಹೇಗೆ ತೊಗಬೇಕೋ ಆ ಮಾರ್ಗ ಮುಂತಾದವುಗಳನ್ನು,**ಮೊದಲಾಕ** ಎಂದು ಹೇಳಿದುದ ರಿಂದ, ಇನ್ನಾವ ಮಾರ್ಗಗಳನ್ನವಲಂಬಿಸಿದರೆ ತೊಂದರೆಗಳುಂಟು ಎಂಬಿನೇ ಮೊದ ಲಾದವುಗಳನ್ನುಳ್ಳ, **ವೇಣ್ಡುವನ ತಿಳಿಯುಮಾಪ್ಪೋಲೆ**-ಮುಖ್ಯವಾಗಿ ಅಪೇಕ್ಷಿ ತಾಂಶವನ್ನು ತಿಳಿಯುವ ಹಾಗೆ, **ಇವ್ವಳವು** - ಇಷ್ಟು ಮಾತ್ರವೇ, **ವಿವೇಕಿಕ್ಕೆ ಅವಶ್ಯಾಪೇಕ್ಷಿತಮ್** - ವಿವೇಕಿಗೆ ಮುಖ್ಯವಾಗಿ ಅಪೇಕ್ಷಿತವಾದ ವಿಷಯವು; ಸಮುದ್ರವು ಅಪಾರವಾದುದರಿಂದ ಅಲ್ಲಿ ತಿಳಿಯತಕ್ಕ ಭಾಗಗಳನೇಕವಿನೆ; ಯಾವೆ ವಿಧ ಮೀನುಗಳೂ, ರತ್ನಗಳೂ, ವಿವಿಧವಾದ ಶಂಖ, ಕಪ್ಪೇಚಿಪ್ಪು ಮೊದಲಾವವು ಗಳೂ, ಸಮುದ್ರದ ಆಳವೆಷ್ಟು, ಇನೇ ಮೊದಲಾದ ತನಗೆ ಅನಾವಶ್ಯಕವಾದ ಅನೇಕ ವಿಷಯಗಳಿವೆ. ತನಗೆ ಮುಖ್ಯವಾಗಿ ತಿಳಿಯಬೇಕಾದಂಶವು ನಡಿಸುವ ಕ್ರಮ, ಸಮುದ್ರದಲ್ಲಿ ಯಾವ ಮಾರ್ಗದಲ್ಲಿ ಹೋದರೆ ತಾನು ಉದ್ದೇಶಿಸಿರುವ ಸ್ಥಳಕ್ಕೆ ಹೋ

ಇದು ಪ್ರತಿಷ್ಠಿತವಾಗಲಿಕ್ಕಾಗಿ ಇವುಗಳಿಂದ ವಿವರಿಸಲ್ಪಟ್ಟ ಎಣ್ಣುಕಿರದು.

ಗಳಿಸುವುದು, ಯಾವ ಮಾರ್ಗವನ್ನು ಅವಲಂಬಿಸಿದರೆ ತೊಂದರೆಯುಂಟು, ಇತ್ಯಾದಿಗಳು. ಅಷ್ಟು ಮಟ್ಟಿಗೆ ತಿಳಿದುಕೊಂಡರೆ, ಹೇಗೆ ಪರಿಣಾಮವೋ, ಹಾಗೆಯೇ ಶಾಸ್ತ್ರಗಳಲ್ಲಿ ಮತವಗಾಹವಾಗಿ ಅನೇಕ ವಿಷಯಗಳಿವೆ, ಅವೆಲ್ಲಾ ಅನುಪಯುಕ್ತವಾದವುಗಳು. ಎಷ್ಟು ಮಟ್ಟಿಗೆ ತಿಳಿದುಕೊಂಡರೆ ಈ ಸಂಸಾರವೆಂಬ ಹಾಳುಭಾವಿಯಲ್ಲಿ ಪುನಃಪುನಃ ಬೀಳದೆ, ಪರಮಾತ್ಮನ ಸ್ವರೂಪ ತಿಳಿದು, ಯಾವ ಉಪಾಯ ಮೂಲಕ ತನ್ನ ಸದ್ಗತಿಯನ್ನು ಸಂಪಾದಿಸಿಕೊಳ್ಳಬೇಕೋ ಅಷ್ಟು ಮಟ್ಟಿಗಾದರೂ ಜ್ಞಾನ ಸಂಪಾದಿಸಿಕೊಳ್ಳತಕ್ಕದ್ದು. ಅದಕ್ಕಾಗಿಯೇ ಈ ತತ್ವತ್ರಯಾಧಿಕಾರ ಮೊದಲಾದವನ್ನು ತಾವು ಬರೆದಿರುವುದು ಎಂದು ಹೇಳುತ್ತಾರೆ. ಚೇತನರು ಎಷ್ಟು ಮಟ್ಟಿಗೆ ಬೇಕೋ ಅಷ್ಟಾದರೂ ಜ್ಞಾನಸಂಪಾದಿಸಿಕೊಂಡು **ಉಜ್ಜೀವಿಸಲಿ** ಎಂದು ಉದಾರಭಾವದಿಂದ ಕೃಪೆಗೈದ ವಿಷಯವೆಂಬುವದು ದ್ಯೋತಿತವು. ಅಂತಹ ಕೃಪೆ, **ಉದಾರಭಾವಗಳನ್ನೂ** ಕೂಡ ಚೇತನನು ಉಪಯೋಗಿಸಿಕೊಳ್ಳದೇ ಹೋದರೆ **ಕರ್ಮವು** ಬಲವತ್ತರವಾದುದೆಂದೇ ತಿಳಿಯತಕ್ಕದ್ದು. ಅದರೆ ಅನೇಕ ಪ್ರೌಢ ಗ್ರಂಥಗಳು, ಆತ್ಮಸಿದ್ಧಿ, ತತ್ವರತ್ನಾಕರ ಮೊದಲಾದವುಗಳ ಅವಲೋಕನವು ಏಕೆ? ಅದೂ ಅಲ್ಲದೆ ಶ್ರೀಮದಾಚಾರ್ಯರವರೇ ನ್ಯಾಯಸಿದ್ಧಾಂಜನ ಮೊದಲಾದ ಅನೇಕ ಪ್ರೌಢ ಗ್ರಂಥಗಳನ್ನು ರಚಿಸಿರುತ್ತಾರೆ: ಅವುಗಳೆಲ್ಲಾ ಏಕಾದರೆ ನಿರರ್ಥಕವಾದವುಗಳೇ? ಎಂದರೆ ಅದಕ್ಕೆ ಸಮಾಧಾನವನ್ನು ಮುಂದಿನ ವಾಕ್ಯದಿಂದ ಹೇಳುತ್ತಾರೆ:

ಇದು – ಎಂದರೆ ಇಲ್ಲಿ ಮುಖ್ಯವಾಗಿ ಸಂಗ್ರಹವಾಗಿ ಹೇಳಿದ ತತ್ವತ್ರಯಾದಿಗಳ ಜ್ಞಾನವು, **ಪ್ರತಿಷ್ಠಿತವಾಗಲಿಕ್ಕಾಗಿ** – ಚೆನ್ನಾಗಿ ಮನಸ್ಸಿನಲ್ಲಿ ಸ್ಥಿರವಾಗಿ ನಿಂತು ಇತರ ಅಪಸಿದ್ಧಾಂತಗಳ ಪೂರ್ವಪಕ್ಷಾದಿಗಳೆಲ್ಲಾ ನಿರಸ್ತವಾಗಿ ಯಾಥಾರ್ಥ್ಯ ಜ್ಞಾನವು ಸುಪ್ರತಿಷ್ಠಿತವಾಗುವದಕ್ಕಾಗಿ, **ಇವತ್ತಿನ್** – ಈ ಮೇಲೆ ಹೇಳಿದ ವಿಷಯಗಳು, **ವಿರಿವುಗಳ್** – ವಿವರಣ ರೂಪವಾಗಿ ವಿಸ್ತಾರವಾಗಿ ಉಪಪಾದನೆ ಮಾಡಲ್ಪಟ್ಟಿರುವ ಪ್ರಬಂಧಗಳು, **ಎಣ್ಣುಕಿರದು** – ಜೀಕೆಂದಪೇಕ್ಷಿಸುವದು. ಅವುಗಳನ್ನು ಗ್ರಹಿಸುವ ಯೋಗ್ಯತೆ ಇರುವ ಜ್ಞಾನಾಧಿಕರು ಇವುಗಳನ್ನು ಗ್ರಹಿಸಿ ಪರಪಕ್ಷದ ಅಕ್ಷೇಪಣಾದಿಗಳನ್ನು ನಿರಸನಮಾಡುವದಕ್ಕಾಗಿ ಬಹು ವಿಸ್ತರಿಸಿ ಬರೆದಿರುವದು ಎಂದು ಅಪ್ಪಣೆಕೊಡಿಸಿರುತ್ತಾರೆ.

ತತ್ವವಿಭಾಗ ಸಂಖ್ಯಾಭೇದಾಃ

ಇಪ್ಪಡಿ ಮೂನ್ರು ತತ್ವಜ್ಞಳಾಕ ವಕುತ್ತು ಚಿನ್ತಿತ್ತಾರ್ ಪೋಲೇ ಸರ್ವವಿಶಿಷ್ಟ ವೇಷತ್ತಾಲೇ ಯಿಶ್ವರ ನೇಕತತ್ವಮಾಕ ವನುಸನ್ಧಿಕ್ಕ ಪಾರ್ಕುಮ್, ಈಶೇಶಿತವ್ಯಜ್ಞಳ್, ಆತ್ಮಾನಾತ್ಮಾಕ್ಕಳ್, ಉಪಾಯೋಪೇಯಜ್ಞಳ್, ಎನ್ರಾರ್ ಪೋಲೆ ಇರಣ್ಡಾರ್ಥವುಜ್ಞಾತವ್ಯಮಾಕ ವಕುಪ್ಪಾರ್ಕ್ಕುಮ್, ರಕ್ಷ್ಯಂ ರಕ್ಷಕ ಹೇಯ ಮುಪಾದೇಯ ಮೆನ್ರಿವ್ವುಡ್ಡಿಗಳಿಲೇ ಅರ್ಥಚತುಷ್ಟಯಮುಂ ಜ್ಞಾತವ್ಯಮಾಕ ಸಂಗ್ರಹಿಪ್ಪಾರ್ಕ್ಕುಮ್, ಮುನ್ಬು ಶೊನ್ನ ಪಡಿಯೇ ಅರ್ಥಪಞ್ಚಕಮುಂ ಷಡರ್ಥಜ್ಞಳೆನ್ರು ವಿವೇಕಿಪ್ಪಾರ್ಕ್ಕುಮ್, ರಹಸ್ಯ ಶಾಸ್ತ್ರಜ್ಞಳಿರ್ ಪಡಿಯೇ ಸಪ್ತಪದಾರ್ಥಚಿನ್ತಾ

ಇಪ್ಪಡಿ – ಹೀಗೆ, **ಮೂನ್ರುತತ್ವಜ್ಞಳಾಕ** – ಮೂರು ತತ್ವಗಳೆಂದು, **ವಕುತ್ತು** – ವಿಭಾಗಿಸಿ, **ಚಿನ್ತಿತ್ತಾರ್ ಪೋಲೇ** – ವಿವೇಚನೆ ಮಾಡಿದವರ ಹಾಗೆ, **ಸರ್ವ ವಿಶಿಷ್ಟವೇಷತ್ತಾಲೆ** – ಸಮಸ್ತ ವಿಶಿಷ್ಟಗಳೊಂದಿಗೆ ಸೇರಿದ ಪ್ರಕಾರವಿಂದ, **ಈಶ್ವರನ್** – ಈಶ್ವರನು, **ಏಕತತ್ವ ಮಾಕವನು ಸನ್ಧಿಕ್ಕ ಪಾರ್ಕ್ಕುಮ್** – ಒಂದೇ ತತ್ವವೆಂದು ತಿಳಿದುಕೊಂಡಿರುವವರಿಗೂ, **ಈಶೇಶಿತವ್ಯಜ್ಞಳ್** – ನಿಯಾಮಕನಾದ ಸರ್ವೇಶ್ವರನೂ, ನಿಯಾಮ್ಯವರ್ಗಗಳಾದ ಚೇತನಾಚೇತನರೆಂದೂ, ಮತ್ತು **ಆತ್ಮಾನಾತ್ಮಾಕಳ್** – ಜೀವಾತ್ಮರೂ, ಅನಾತ್ಮಗಳಾದ ದೇಹವೂ ಮತ್ತು ಸಕಲಭೋಗ್ಯವಸ್ತುವೂ, ಮತ್ತೂ **ಉಪಾಯೋಪೇಯಜ್ಞಳ್** – ಉಪಾಯೋಪೇಯಗಳು, **ಎನ್ರಾರ್ ಪೋಲೆ** – ಎಂದು ಹೇಳುವ ಹಾಗೆ, **ಇರಣ್ಡಾರ್ಥಂಜ್ಞಾತವ್ಯಮಾಕ** – ಎರಡು ವಿಷಯಗಳು ತಿಳಿಯತಕ್ಕವುಗಳೆಂದು, **ವಕುಪ್ಪಾರ್ಕ್ಕುಂ** – ವಿಭಾಗಿಸುವವರಿಗೂ ಕೂಡ, ಮತ್ತು **ರಕ್ಷ್ಯಂ** – ರಕ್ಷಿಸಲು ಯೋಗ್ಯನಾದ ಬದ್ಧಚೇತನನು, **ರಕ್ಷಕ** – ರಕ್ಷಿಸಲು ಸಮರ್ಥನಾದ ಸರ್ವೇಶ್ವರನು, **ಹೇಯಂ** – ಧರ್ಮಾರ್ಥಕಾಮಗಳಾದ ತುಚ್ಛವಾದ, ಅಸ್ಥಿರವಾದ ಐಹಿಕ ಪುರುಷಾರ್ಥವು **ಉಪಾದೇಯ** – ನಿರತಿಶಯವಾಗಿ ನಿತ್ಯವಾಗಿರುವದರಿಂದ ಯೋಗ್ಯವಾದ ಮೋಕ್ಷ ಸುಖವು, ಹೀಗೆ **ಅರ್ಥಚತುಷ್ಟಯಂ** – ಹೀಗೆ ನಾಲ್ಕು ವಿಷಯಗಳು, **ಜ್ಞಾತವ್ಯಮಾಕ** – ತಿಳಿಯಲು ಯೋಗ್ಯವಾದುದಾಗಿ, **ಸಂಗ್ರಹಿಪ್ಪಾರ್ಕ್ಕುಮ್** – ಸಂಗ್ರಹಿಸುವವರಿಗೂ, **ಮುನ್ಬುಶೊನ್ನ ಪಡಿಯೇ** – ಮೊದಲು ಹೇಳಿದ ಹಾಗೆ, **ಅರ್ಥಪಞ್ಚಕ ಷಡರ್ಥಜ್ಞಳೆನ್ರು** – ತಿಳಿಯತಕ್ಕವು, ಐದು ವಿಷಯಗಳು ಮತ್ತು ಆರು ವಿಷಯಗಳೆಂದು, **ವಿವೇಕಿಪ್ಪಾರ್ಕ್ಕುಮ್** – ವಿವೇಚನೆ ಮಾಡುವವರಿಗೂ, ಮತ್ತು

ದಿಗಳ್ ಪಣ್ಣುವಾರ್ಕ್ಕುಮ್, ಅವ್ವೋ ಜ್ಞಾನಾನುಷ್ಠಾನ ಪ್ರತಿಷ್ಠಾ ರೂಪಜ್ಞಾನ ಪ್ರಯೋಜನ ವಿಶೇಷಜ್ಞಳ್ ಕಣ್ಡುಕೊಳ್ವದು.

ರಹಸ್ಯಶಾಸ್ತ್ರಜ್ಞಳಿರ್ಪಡಿಯೇ – ರಹಸ್ಯಾಮ್ನಾಯ ಭಗವಚ್ಛಾಸ್ತ್ರಗಳಲ್ಲಿ ಹೇಳಿರುವ ಹಾಗೆ, **ಸಪ್ತಪದಾರ್ಥಚಿನ್ತಾದಿಗಳ್ ಪಣ್ಣುವಾರ್ಕ್ಕುಮ್** – ಪ್ರಕೃತಿ,ಕಾಲ, ಜೀವ, ಈಶ್ವರ, ನಿತ್ಯವಿಭೂತಿ, ಧರ್ಮಭೂತಜ್ಞಾನ, ಅದ್ರವ್ಯಗಳೆಂದು ಏಳು ವಿಧ ಪದಾರ್ಥಗಳೆಂದು ಯೋಚಿಸುವರುಗಳಿಗೂ, ಹೀಗೆ ಮುಖ್ಯವಾಗಿ ತಿಳಿಯತಕ್ಕವು ಒಂಬೆಂದೂ, ಎರಡೆಂದೂ, ನಾಲ್ಕೆಂದೂ, ಏಳೆಂದೂ ಹೀಗೆ ಬಗೆಬಗೆಯಾಗಿ ವಿಭಾಗಿಸಿ ಹೇಳುವವರಿಗೆಲ್ಲಾ, **ಅವ್ವೋಜ್ಞಾನಾನುಷ್ಠಾನ ಪ್ರತಿಷ್ಠಾರೂಪಜ್ಞಾನ** – ಮೇಲೆ ಹೇಳಿದ ಅಯಾಯಾ ವಿಭಾಗದ ಜ್ಞಾನ ಮನನಗಳಿಂದ ಸ್ಥಿರವಾಗಿ **ತೋರುವ,ವಿಶೇಷಪ್ರಯೋಜನಜ್ಞಳ್**–ಫಲವಿಶೇಷಗಳು ದೊರೆಯುತ್ತವೆಂದು,**ಕಣ್ಡುಕೊಳ್ವದು**–ತಿಳಿದುಕೊಳ್ಳುವದು.ಹೀಗೆ ಒಂದೇ ತಿಳಿಯತಕ್ಕದ್ದು, ಎರಡೇ,ಮೂರೇ ತಿಳಿಯತಕ್ಕದ್ದು, ಹಾಗೆಯೇ ನಾಲ್ಕೇ, ಐದೇ, ಆರೇ, ಏಳೇ ತಿಳಿಯತಕ್ಕದ್ದು ಎಂದು ಹೇಳುವವರ ಅಭಿಪ್ರಾಯದಲ್ಲಿ ಏನಾದರೂ ವಿರೋಧ **ಉಂಟೋ** ಎಂದರೆ, ಹಾಗೆನೂ ಇಲ್ಲವೆಂದೂ, ಹಾಗೆ ಬೇರೆಬೇರೆಯಾಗಿ ಹೇಳುವಾಗ ಕೆಲವು ಮುಖ್ಯವಾಗಿ ತಿಳಿಯಬೇಕಾದ ಅಂಶಗಳನ್ನು ಮನಸ್ಸಿನಲ್ಲಿಟ್ಟು ಹಾಗೆಲ್ಲಾ ಹೇಳಿರುತ್ತಾರೆಂದೂ, ಹಾಗೆ ಬೇರೆಬೇರೆಯಾಗಿ ಹೇಳುವವರಿಗೆ ಬೇರೆಬೇರೆ ಫಲಗಳನ್ನುದ್ದೇಶಿಸಿ ಹಾಗೆ ಹೇಳಿರುತ್ತಾರೆಂದು ತಿಳಿಸುತ್ತಾರೆ. ಅಂತಹ ಫಲಗಳು ಯಾವುವೆಂದರೆ:—

1. ಚಿದಚಿದ್ವಿಶಿಷ್ಟನಾದ ಈಶ್ವರನೆಂಬ ಏಕತತ್ವಜ್ಞಾನದಿಂದ, ಜೀವನಕರ್ತೃತ್ವ ಭೋಕ್ತೃತ್ವಾದಿಗಳು ತನಗೇ ಎಂಬ ಭ್ರಮೆಯ ನಿವೃತ್ತಿಯು.

2. ಈಶಶೇಷತೈಕ ಎಂಬೀ ಎರಡರ ಜ್ಞಾನದಿಂದ, ಕರ್ತೃತ್ವ, ಭೋಕ್ತೃತ್ವಗಳು ತನಗೆಸೇ ಅಧೀನವಾದವೆಂಬ ಭ್ರಮೆಯ ನಿವೃತ್ತಿಯು.

   ಅಹಮಾತ್ಮ ಏವೇಕ ಜ್ಞಾನದಿಂದ ಅನಾತ್ಮವಾದ ದೇಹದಲ್ಲಿ ಆತ್ಮನೆಂಬ ಭ್ರಮ ನಿವಾರಣವು.

   ಉಪಾಯೋಪೇಯತ್ವ ಜ್ಞಾನದಿಂದ ದುಷ್ಕರವಾದ ಉಪಾಸನ ರೂಪ ಸಾಧನಾನುಷ್ಠಾನವನ್ನು ತ್ಯಜಿಸಿ ಲಘೂಪಾಯವಾದ ಶರಣಾಗತಿಯನ್ನು ತಪಲಂಬಿಸೋಣವು.

3. ರಕ್ಷ್ಯ ರಕ್ಷಕ ಭೋಗ್ಯೋಪಾದೇಯಗಳ ಜ್ಞಾನದಿಂದ, ವೈರಾಗ್ಯ, ಭಕ್ತಿ, ಲಘೂಪಾಯ ಸ್ವೀಕಾರ ಮೊದಲಾದವುಗಳು.

ಶಾಸ್ತ್ರಜ್ಞಾನಂ ಬಹುಕ್ಲೇಶಂ ಬುದ್ಧೇ ಶ್ಚಲನ ಕಾರಣಂ ।
ಉಪದೇಶಾ ದ್ಧರಿಂ ಬುದ್ಧಾ ವಿರಮೇ ತ್ಸರ್ವ ಕರ್ಮಸು ॥

1. ಅರ್ಥಪಞ್ಚಕಜ್ಞಾನದಿಂದ- ಸಂಸಾರದಲ್ಲಿ ಜಿಹಾಸೆ, ಉಪಾಯವರಣ, ಪ್ರಾಪ್ತಿ ವಿರೋಧಿತ್ಯಾಗ ಮುಂತಾದವು.
2. ಪುರುಷಾರ್ಥಗಳ ಜ್ಞಾನದಿಂದಲೂ ಮೇಲೆ ಹೇಳಿದ ಪ್ರಯೋಜನಗಳೇ ಉಂಟಾಗುತ್ತವೆ.
3. ತತ್ವತ್ರಯ ಜ್ಞಾನದಿಂದ, ದೇಹಾತ್ಮಭ್ರಾಂತಿ, ಸ್ವತಂತ್ರಾತ್ಮಭ್ರಾಂತಿ ಜೀವ ಪರಮಾತ್ಮೈಕ್ಯಭ್ರಾಂತಿಗಳ ನಿವೃತ್ತಿಯು.

ಹೀಗೆ ಆಯಾಯಾ ವಿಭಾಗಜ್ಞಾನಗಳಿಂದ ಈ ಮೇಲೆ ಹೇಳಿದ ಫಲಗಳು ಸುಪ್ರತಿಷ್ಠಿತಗಳಾಗಿ ಉಂಟಾಗುತ್ತವೆ ಎಂಬ ಭಾವವು.

ಯಾವಾಗ ಶಾಸ್ತ್ರಪ್ರಮಾಣಗಳನ್ನೆಲ್ಲಾ ಅವಲೋಕಿಸಿ ವಾದಮೂಲಕ ತತ್ವಾರ್ಥನಿರ್ಣಯಕ್ಕೆ ಯೋಗ್ಯತೆಯಿಲ್ಲವೋ, ಆಗ ಪ್ರಮಾಣಶರಣರಾಗಿರುವವರನ್ನು ಆಶ್ರಯಿಸಿ ಅವರನ್ನು ನಂಬಿ ಅವರಿಂದ **ಉಪದೇಶ**ವನ್ನು ಹೊಂದಿ ಕೃತಕೃತ್ಯನಾಗುವದು ಉತ್ತಮವೇ ವಿನಾ, ಶಾಸ್ತ್ರ ಜ್ಞಾನಹೊಂದುವನೆಂದು ಹೋಗುವದು ಬಹು ಕ್ಲೇಶಾವಹವೆಂಬುವದನ್ನು ಸಪ್ರಮಾಣವಾಗಿ ತೋರಿಸುತ್ತಾರೆ.

ಶಾಸ್ತ್ರಜ್ಞಾನಂ – ಶಾಸ್ತ್ರಗಳನ್ನು ಸರಿಯಾಗಿ ತಿಳಿಯೋಣವು, **ಬಹುಕ್ಲೇಶಂ** – ಮನಸ್ಸನ್ನು ಸ್ಥಿಮಿತದಲ್ಲಿಟ್ಟು ಅಭ್ಯಾಸದಿಂದ ಉಂಟಾಗತಕ್ಕದಾದುದರಿಂದ ಬಹು ಕಷ್ಟತರವಾದುದು, **ಬುದ್ಧೇಶ್ಚಲನಕಾರಣಂ** – ಬುದ್ಧಿಯು ವಿಕಲ್ಪಿಸಲು ಕಾರಣವಾಗುತ್ತದೆ, ಎಂದರೆ ಶಾಸ್ತ್ರಪ್ರಮಾಣಗಳಿಗೆ ನಿಷ್ಕರ್ಷವಾದ ಸರ್ವಸಮ್ಮತವಾದ ಅರ್ಥಗಳು ತಿಳಿಯದೆ, ಮನಸ್ಸಿಗೆ ತೋರಿದ ಹಾಗೆ ಅರ್ಥ ಹೇಳುವದರಿಂದುಂಟಾದ ಪರಸ್ಪರ ವಿರೋಧದಿಂದ ಬುದ್ಧಿ ಭ್ರಾಮಕ ಉಂಟಾಗುತ್ತದೆಂಬ ಭಾವವು. ಆದುದರಿಂದ **ಉಪದೇಶಾತ್**–ಸದ್ಗುರುವಿನ ಉಪದೇಶದಿಂದ, **ಹರಿಂ ಬುಧ್ವಾ** – ಪರತತ್ವವಾದ ಶ್ರೀ ಮಹಾವಿಷ್ಣುವನ್ನು ತಿಳಿದವನಾಗಿ, **ಸರ್ವಕರ್ಮಸು**–ಗುರುವಿನಿಂದ ಅನುಷ್ಠೇಯವೆಂದು ಹೇಳಿದ ಕರ್ಮಗಳು ವಿನಾ ಕಷ್ಟತರವಾದ ಶಾಸ್ತ್ರಾಭ್ಯಾಸ ಕರ್ಮಗಳು ಮತ್ತುಮಿಕ್ಕ ಸಮಸ್ತ ಕರ್ಮಗಳಲ್ಲಿಯೂ **ವಿರಮೇತ್** – ವಿರಾಮವನ್ನು ಹೊಂದತಕ್ಕದ್ದು ಎಂದರೆ ಸರ್ವಧರ್ಮಾನ್ ಪರಿತ್ಯಜ್ಯ ಎಂದು ಹೇಳಿರುವಹಾಗೆ ತ್ಯಜಿಸತಕ್ಕವು ಎಂಬ ತಾತ್ಪರ್ಯವು. ಹಾಗಾದರೆ ಶಾಸ್ತ್ರಾಭ್ಯಾಸವು ಬೇಡಲೇಬೇಡವೆಎಂದರೆ ಪುರುಷಾಯುಸ್ಸು ನಂಬತಕ್ಕದ್ದಲ್ಲವಾಗಿ ದೇಹವು ತುಂಬ ಅಸ್ಥಿರವಾದುದ

ಎನ್ನಿರದು ಉಪಯುಕ್ತ ತನುಮಾನ ಸಾರಾಂಶತ್ತೈ ಕ್ಕಡುಗ ಶ್ರವ ಣಮ್ ಪಣ್ಣಿ ಕೃಷಿಪಣ್ಣಾದೇ ಉಣ್ಣ ವಿರಕುಡೈಯವನ್ ಕೃಷಿಚಿ ನ್ತೈಯೈ ವಿಡುಮಾ ಪ್ರೋಲೇ ವಿರಿವು ಕರ್ಕೈಕ್ಕಡಾನ ಶಾಸ್ತ್ರಾಭ್ಯಾ ಸಾದಿ ಕರ್ಮಜ್ಞಳಿ ಲುಪರಿತನಾಯ್ಕ್ಕಡುಗ ಮೋಕ್ಷೋ ಪಾಯತ್ತಿಲೆ ಮೂಳ ಪ್ರಾಪ್ತಮುನ್ರಪಡಿ.

ರಿಂದ ಈಗ ಪ್ರಾಪ್ತವಾಗಿರುವ ಜನ್ಮದಲ್ಲಿ ಈ ಸುಸಮಯವನ್ನು ಕಳದುಕೊಳ್ಳತಕ್ಕ ದ್ದಲ್ಲವು. ಅದುವರಿಂದ ತುಂಬಾ ಸಾರವಾದುದಾಗಿ ಅವಶ್ಯಕವಾದ ವಿಷಯಗಳನ್ನು ಗುರುಮುಖೇನ ಗ್ರಹಿಸಿ ಮೋಕ್ಷಪ್ರಾಪ್ತಿಗೆ ಶೀಘ್ರವಾಗಿ ಅನುಕೂಲಮಾಡಿಕೊಳ್ಳು ವದು ಆವಶ್ಯಕವು, ಇದೂ ಅಲ್ಲದೆ ಒಂದುವೇಳೆ ಶಾಸ್ತ್ರಾಭ್ಯಾಸದಲ್ಲಿ ಪ್ರವರ್ತನಾ ದರೂ ಗುರುಮುಖವಾಗಿ ಉಪದೇಶವಿಲ್ಲದೇ ಹೋದರೆ, ಆ ಶಾಸ್ತ್ರಾಭ್ಯಾಸವು ಸಂಸ್ಕಾ ರವಿಲ್ಲದುದಾಗಿ ವಿಪರೀತ ಫಲವನ್ನೂ ಕೊಡಬಹುದು. ಶ್ರೀಮದಾಚಾರ್ಯರವರ ಅಭಿ ಪ್ರಾಯವು ಶಾಸ್ತ್ರಾಭ್ಯಾಸವನ್ನು ಪೂರಾ ನಿಷೇಧಿಸಿ ಹೇಳಿದುದಲ್ಲವು, **ವಿರಮೇತ್ ಸರ್ವಕರ್ಮಭ್ಯಃ** ಎಂದು ಹೇಳಿದುದರಭಿಪ್ರಾಯವೇನೆಂಬುನದನ್ನು ಮುಂದಿನ ವಾಕ್ಯಗಳಂದ ತಿಳಿಯಪಡಿಸುತ್ತಾರೆ. ಶಾಸ್ತ್ರಾಭ್ಯಾಸವು ಬಹು ಕಷ್ಟಸಾಧ್ಯವಾದುದು, ಬುದ್ಧಿವಿಕಲ್ಪವನ್ನುಂಟುಮಾಡುವಂಥಾದ್ದು, ಮನಸ್ಸನ್ನು ಸ್ಥಿರಪಡಿಸಿಟ್ಟುಕೊಂಡು ತುಂಬಾ ಅವಶ್ಯ ಮನನ ಜಿಜ್ಞಾಸಾದಿಗಳಿಂದ ಲಭಿಸತಕ್ಕದ್ದಾಗಿರುವದು. ಬಹು ಕಾಲವಿಳಂಬದಿಂದ ಪ್ರಾಪ್ತವಾಗುವ ಶಾಸ್ತ್ರಜ್ಞಾನವೇನು, ಅದಕ್ಕಾಗಿ ಬೇಕಾದ ಸಹ ಕಾರಿಯಾದ ಕರ್ಮಗಳೇನು, ಇವೆಲ್ಲವನ್ನೂ ತ್ಯಜಿಸಿ, ಗುರುಗಳನ್ನು ಆಶ್ರಯಿಸಿ, ಸಾರ ಭಾಗವನ್ನು ಮಾತ್ರ ಪ್ರಾರ್ಥಿಸಿ ತಿಳಿದು ಕೃತಕೃತ್ಯನಾಗತಕ್ಕದ್ದೆಂಬಭಿಪ್ರಾಯವು.

ಎನ್ನಿರದು – " ಶಾಸ್ತ್ರಜ್ಞಾನ " ವೆಂಬ ಶ್ಲೋಕದಲ್ಲಿ ಹೇಳಿರುವದು, **ಉಪಯುಕ್ತ ತನುಮಾನ** – ಅತ್ಯಂತ ಉಪಯೋಗಕರವಾದ, **ಸಾರಾಂಶತ್ತೈ** – ಸಾರವಾದ ಭಾಗವನ್ನು, **ಕಡುಗ** – ಅತಿಶೀಘ್ರವಾಗಿ, **ಶ್ರವಣಂಪಣ್ಣಿ** – ಗುರು ವಿನ ಮೂಲಕ ಕೇಳಿ ತಿಳಿದು, **ಕೃಷಿಪಣ್ಣಾದೇ** – ಕೃಷಿಯನ್ನು ಮಾಡದೇನೇ, **ಉಣ್ಣವಿರಕುಡೈಯವನ್** – ಜೀವನೋಪಾಯವನ್ನು ಹೊಂದಿರುವವನು, **ಕೃಷಿ ಚಿನ್ತೈಯೈ** – ಕೃಷಿಯನ್ನು ಮಾಡಬೇಕೆಂಬ ಚಿನ್ತೆಯನ್ನು, **ವಿಡುಮಾಪ್ರೋಲೆ** – ಬಿಡುವಪಾಗೆ, **ವಿರುವು ಕರ್ಕೈಕ್ಕುಮ್**–ವಿಸ್ತಾರವಾಗಿ ಅಭ್ಯಾಸಮಾಡುವ ಪಕ್ಷೆ, **ಈಡಾನ** – ಯೋಗ್ಯವಾದ, **ಶಾಸ್ತ್ರಾಭ್ಯಾಸಾದಿಕರ್ಮಜ್ಞಳಿಲ್** – ಶಾಸ್ತ್ರ ಗಳ ಜ್ಞಾನಸಂಪಾದನೆ ಮೊದಲಾದ ಕರ್ಮಗಳಲ್ಲಿ, **ಉಪರಿತನಾಯ್** – ವಿಶ್ರಾಂ ತಿಯನ್ನು ಹೊಂದಿದವನಾಗಿ,ನಿವೃತ್ತನಾಗಿ, **ಕಡುಗ**–ಶೀಘ್ರವಾಗಿ, **ಮೋಕ್ಷೋಪಾ**

ಯದಲ್ಲಿ, ಮೂಳ ಪ್ರಾಪ್ತಂ – ಪ್ರವೇಶಿಸುವದು ಯುಕ್ತವು, **ಎನ್ನಪಡಿ** – ಎಂಬ ಹಾಗೆ, ಎಂದರೆ, ಎಂಬಭಿಪ್ರಾಯವು.

ಈ ಶಾಸ್ತ್ರಜ್ಞಾನವೆಂಬ ಶ್ಲೋಕದಿಂದ ಹೇಳಲ್ಪಟ್ಟಿದುದೇನೆಂದರೆ :—ಎಲ್ಲರೂ ಕಷ್ಟಪಟ್ಟು ಕೃಷಿ ಮಾಡಿ, ಫಲ ಬೆಳೆದು, ಅದನ್ನು ಊಟಮಾಡಬೇಕಾದುದಿಲ್ಲವು. ಕೆಲವರು ಕೃಷಿ ಮಾಡಿ, ಫಲ ಬೆಳೆದಿಟ್ಟಿದಾರೆ. ತಾನೇ ಕೃಷಿಮಾಡಿಯೇ ಜೀವನ ಮಾಡಬೇಕಾದ ನಿರ್ಬಂಧವಿಲ್ಲದವನು ಹೇಗೆ ಇತರರು ಬೆಳೆದ ಫಲದಿಂದ ಜೀವನ ನಡಿಸಿಕೊಳ್ಳುತ್ತಾನೆಯೋ, ಹಾಗೆಯೇ ಬಹು ಕ್ಲೇಶಪಟ್ಟು ಶಾಸ್ತ್ರಾಭ್ಯಾಸವನ್ನು ಮಾಡಿಯೇ ತೀರಬೇಕೆಂಬುವದಿಲ್ಲವು. ಸರ್ವೇಶ್ವರನು ತನ್ನ ನಿರ್ಹೇತುಕ ಕೃಪಾ ಮೂಲಕ ಶಾಸ್ತ್ರಜ್ಞಾನದಲ್ಲಿ ಪ್ರವೀಣತೆಯುಳ್ಳ ಮಹಾಜ್ಞಾನಸಿಧಿಗಳಾದ ಆಚಾರ್ಯರುಗಳು ಎಲ್ಲಾ ಕಾಲದಲ್ಲೂ ಈ ಪೃಥಿವಿಯನ್ನಲಂಕರಿಸುವಹಾಗೆ ಮಾಡಿರುತ್ತಾನೆ.

"ಜನಸ್ಯ ಕೃಷ್ಣಾದ್ವಿಮುಖಸ್ಯ ದೈವಾದ ಧರ್ಮಶೀಲಸ್ಯ ಸುದುಃಖಿತಸ್ಯ ।
ಅನುಗ್ರಹಾ ಯೇಹ ಚರನ್ತಿ ನೂನಂ ಭೂತಾನಿ ಭವ್ಯಾನಿ ಜನಾರ್ದನಸ್ಯ॥"

ಎಂದು ಭಾಗವತದಲ್ಲಿ ಈ ಅಭಿಪ್ರಾಯವೇ ಉಪಪಾದಿಸಲ್ಪಟ್ಟಿರುತ್ತದೆ.

ದೇವಭಾಗವತ ವಿಮುಖರಾಗಿ, ಅಧರ್ಮಪರರಾಗಿ, ಅದರಿಂದ ತುಂಬಾ ದುಃಖ ಭಾಗಿಗಳಾಗಿರುವ ಜನರ ಅನುಗ್ರಹಕ್ಕಾಗಿಯೇ ಕೃಪಾಸಾಗರನು ಎಲ್ಲಾ ಕಾಲದಲ್ಲೂ ಮಹಾಜ್ಞಾನಿಗಳು ಈ ಭೂಲೋಕವನ್ನು ಅಲಂಕರಿಸಿ ಚರಿಸುತ್ತಿರುವಹಾಗೆಮಾಡಿರುತ್ತಾನೆಂದು ಹೇಳಲ್ಪಟ್ಟಿರುತ್ತದೆ ಅಂಥಾವರು ಯಾರೆಂದು ಚನ್ನಾಗಿ ಪರಿಶೀಲಿಸಿ, ಅವರನ್ನಾಶ್ರಯಿಸಿ,ಎಷ್ಟುಮಾತ್ರ ಅವಶ್ಯಕವೋ ಅಷ್ಟನ್ನಾದರೂ ಅವರಿಂದಶೀಘ್ರವಾಗಿಸಂಗ್ರಹಿಸಿಕೊಂಡು, ಉಪಾಯಾನುಷ್ಠಾನಮಾಡಿ, ಮೋಕ್ಷಸಾಮ್ರಾಜ್ಯವನ್ನು ಹೊಂದುವ,ಅನುಕೂಲಮಾಡಿಕೊಳ್ಳತಕ್ಕದ್ದೆಂಬಭಿಪ್ರಾಯವು.ಶಾಸ್ತ್ರಾಭ್ಯಾಸಕ್ಕೆ ಯೋಗ್ಯತೆ, ಕಾಲ, ಅನುಕೂಲಾದಿಗಳಿವೆರೆ ಅಗತ್ಯ ಆಗಬಹುದು. ಏಕೆಂದರೆ ಅನೇಕ ಪ್ರಮಾಣಗಳು ಶಾಸ್ತ್ರಜ್ಞಾನಾವಶ್ಯಕತೆಯನ್ನೇ ಬೋಧಿಸುತ್ತವೆ.

" ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯ ವ್ಯವಸ್ಥಿತೌ " (ಗೀ. 16. 24.) ಇದು ಕರ್ತವ್ಯವು, ಇದು ಅಲ್ಲನೆಂಬ ವ್ಯವಸ್ಥೆಯಲ್ಲಿ ನಿನಗೆ ಶಾಸ್ತ್ರವೇ ಪ್ರಮಾಣವು ; **" ಶ್ರುತಿ ಸ್ಮೃತಿ ರ್ಮಮೈವಾಜ್ಞಾ "** (ವಿ. ತ. 6. 31) ಶ್ರುತಿಸ್ಮೃತಿಗಳೆಲ್ಲಾ ನನ್ನ ಆಜ್ಞೆಯನ್ನೇ ಹೇಳುತ್ತವೆ ; **" ವಿನಾಶಾಸ್ತ್ರೇಣ ಯೋ ಬ್ರೂಯಾತ್ತಮಾಹುರ್ಬ್ರಹ್ಮ ಘಾತಕಂ "** " ಶಾಸ್ತ್ರಜ್ಞಾನವಿಲ್ಲದೆ ಯಾವನು ಹೇಳುತ್ತಾನೋ ಅವನನ್ನು ಬ್ರಹ್ಮಘಾತಕನೆಂದು ಹೇಳುವರು ": ಇತ್ಯಾದಿ ಪ್ರಮಾಣಗಳಿರುವದರಿಂದ ಶಾಸ್ತ್ರಜ್ಞಾನವು ಇಲ್ಲಿ ನಿಂದಿತವಾಗಲಿಲ್ಲವು.

ಉಪಯುಕ್ತೇಷು ವೈಶದ್ಯಂ ತ್ರಿವರ್ಗ ನಿರಪೇಕ್ಷತಾ ।
ಕರಣ ತ್ರಯ ಸಾರುಪ್ಯ ಮಿತಿ ಸೌಖ್ಯ ರಸಾಯನಂ ॥೨॥

ಅಪಿತು, **ಬಹುತ್ವಾದಿಹ ಶಾಸ್ತ್ರಾಣಾಂ ಜ್ಞಾನತತ್ವಂ ಸುದುರ್ಲಭಂ** " ಶಾಸ್ತ್ರಗಳು ಒಹಳವಾಗಿರುವದರಿಂದ ಯಥಾರ್ಥವಾದ ಜ್ಞಾನವು ಯಾವುದೆಂದು ಕಂಡುಹಿಡಿಯುವದು ದುಸ್ತರವಾದುದರಿಂದಲೂ ", " **ಅಲ್ಪಶ್ಚಕಾಲೋ ಬಹವಶ್ಚವಿಘ್ನಃ** " ಕಾಲವು ಅತ್ಯಲ್ಪವಾಗಿ ವಿಘ್ನಗಳು ಬಹುವಾದುದರಿಂದಲೂ, ಆಚಾರೋಪದೇಶದಿಂದ ಎಷ್ಟು ಪ್ರಕೃತವೋ ಅಷ್ಟುಮಾತ್ರ ಶೀಘ್ರವಾಗಿ ತಿಳಿದು, ಉಪಾಯಾನುಷ್ಠಾನವಾತಿ, ಕೃತಕೃತ್ಯನಾಗಿ ಹೆಚ್ಚುಕಾಲಕ್ಕೆ ಅವಕಾಶವಿದ್ದರೆ ಶಾಸ್ತ್ರಾಭ್ಯಾಸದಲ್ಲಿ ಪ್ರವರ್ತಿಸಬಹುದೆಂಬ ಭಾವವು.

ಇದು ಶ್ರೀ ನಿಗಮಾಂತದೇಶಿಕರು ಅನುಗ್ರಹಿಸಿದ ಕಾರಿಕೆಯು. ಹಿಂದಿನ ವಾಕ್ಯದಲ್ಲಿಉಪಯುಕ್ತವಾದ ಸಾರತಮ ಶಾಸ್ತ್ರಜ್ಞಾನವು ಪ್ರತಿಯೊಬ್ಬನಿಗೂ ಅತ್ಯಾವಶ್ಯಕವೆಂದು ಹಿಂದೆ ಹೇಳಿದುದನ್ನೇ ಒಂದು ಕಾರಿಕಾರೂಪದಲ್ಲಿ ಅನುಗ್ರಹಿಸುತ್ತಾರೆ. ಇದು ಮೋಕ್ಷಸುಖಕ್ಕೆ ಅತ್ಯಾವಶ್ಯಕವಲ್ಲದೆ, ಐಹಿಕ ವಿಷಯದಲ್ಲಿ ವೈರಾಗ್ಯ ಮತ್ತು ಮನೋವಾಕ್ಕಾಯಗಳ ಪಾರಿಶುದ್ಧ್ಯವೂ ಇರಬೇಕೆಂದುಪದೇಶಿಸುತ್ತಾರೆ ಮೋಕ್ಷಸುಖನಿಷ್ಪಾದಿಸುವ ಸಿದ್ಧೌಷಧರೂಪ ರಸಾಯನವು ಮೂರನ್ನು ಒಳಗೊಂಡಿರಬೇಕು.ಅವು ಯಾವುವೆಂದರೆ :—

(1) **ಉಪಯುಕ್ತೇಷು ವೈಶದ್ಯಂ** – ಮುಖ್ಯವಾದ ವಿಷಯಗಳೆಲ್ಲಾದರೂ ವಿಶದವಾದ ನಿಸ್ಸಂಶಯವಾದ ಜ್ಞಾನವು. ಹಿಂದೆ ಶಾಸ್ತ್ರಜ್ಞಾನವು ಬಹು ಕ್ಲೇಶಾವಹವೆಂದು ಹೇಳಲ್ಪಟ್ಟಿದುದರಿಂದ ಸರ್ವಶಾಸ್ತ್ರಜ್ಞಾನವನ್ನೂ ತ್ಯಜಿಸಬಹುದೋ ಎಂಬಂತೆ ಉಪಯುಕ್ತವಾದ ಭಾಗವನ್ನು ತ್ಯಜಿಸತಕ್ಕದ್ದೂ ಅಲ್ಲವು, ಅಲ್ಲದೆ ಅಂತಹ ಭಾಗವನ್ನು ಚೆನ್ನಾಗಿ ವಿಶದವಾಗಿ, ಉಪದೇಶಮೂಲಕ ಸಙ್ಗ್ರಹಿಸತಕ್ಕದ್ದೆಂಬ ಭಾವವು ಪ್ರಧಾನ, ಪ್ರತಿತಸ್ತ್ರ, ಅರ್ಥಸಂಚಕ, ತತ್ವತ್ರಯ ಮೊದಲಾಗಿ ಶ್ರೀಮದ್ರಹಸ್ಯತ್ರಯಸಾರದಲ್ಲಿ ಈಗ ತಾವು ಉಪದೇಶಿಸುವಾಂಶವೆಲ್ಲಾ, ಉಪಯುಕ್ತ ಶಾಸ್ತ್ರಭಾಗವೇ. ಇದುವರಿಂದ ಅದರ ವಿಶದ ಜ್ಞಾನವನ್ನು ಸಂಪಾದಿಸತಕ್ಕದ್ದೆಂಬ ಫಲಾಪೇಕ್ಷೆಯೂ ಇದರಿಂದ ತೋರಿಬರುತ್ತದೆ. ಆಪ್ತರಿಂದ ಉಪದೇಶಮೂಲಕವಾಗಿಯೂ, ಪುನಃಪುನಃ ಪಠನ ಶ್ರವಣ, ಮನನಾದಿಗಳಿಂದ ಅದರ ವಿಶದವಾದ ಜ್ಞಾನವನ್ನು ಹೊಂದತಕ್ಕದ್ದು. ಆದರೆ ಫಲಾರ್ಥಕಾಮಗಳು ಮೋಕ್ಷದಹಾಗೆ ಫಲಾಪೇಕ್ಷೆಗಳಾಗಿರುವಾಗ ಅವುಗಳನ್ನು ಹೊಂದುವ ಜ್ಞಾನವು ಏಕಪ್ರಯೋ ಎಂದರೆ

ಬುಭುಕ್ಷುವಿಗೆ ಅವು ಬೇಕೇ ವಿನಾ, ಮುಮುಕ್ಷುವಿಗೆ ಅವು ಅಲ್ಪಾಸ್ಥಿರವಾದವು ಗಳಾದುದರಿಂದ ತ್ಯಾಜ್ಯಗಳೆಂದು ಮುಂದೆ ಹೇಳುತ್ತಾರೆ.

(2) **ತ್ರಿವರ್ಗ ನಿರಪೇಕ್ಷತಾ** – ತ್ರಿವರ್ಗಗಳು ಧರ್ಮಾರ್ಥಕಾಮಗಳು. ಇವೆಲ್ಲಾ ತುಂಬಾ ತುಚ್ಛವಾದುದರಿಂದ, ಅವುಗಳಲ್ಲಿ, ಅಪೇಕ್ಷೆ ಇಲ್ಲದಿರೋಣವು. **ಪರಮಾತ್ಮನಿಯೋರಕ್ತಃ ವಿರಕ್ತೋ ಽಪರಮಾತ್ಮನಿ**- ಪರಮಾತ್ಮನಲ್ಲಿ ಸಕ್ತವಾದ ಮನಸ್ಸುಳ್ಳವರಿಗೆ ಬೇರೆಯಾದ ಐಹಿಕ ವಿಷಯಗಳಲ್ಲಿ ವೈರಾಗ್ಯ ಉಂಟಾಗಬೇಕು. ಹಾಗಲ್ಲದೇ ಸಜ್ಜ ಉಂಟಾದರೆ, ಆದರಿಂದ ಕ್ರೋಧಾದಿ ಬುದ್ಧಿನಾಶಗಳುಂಟಾಗಿ ಆತ್ಮನು ನಷ್ಟನಾಗುವನು. ಪುನಃಪುನಃ ಸಂಸಾರದಲ್ಲೇ ನೆರಳುವನು. ಆದರೆ ಕೆಲವರು ಹೊರಗೆ ಮಾತ್ರ ವೈರಾಗ್ಯಪ್ರದರ್ಶನಮಾಡಿ ಅಂತಃ ಐಹಿಕಾಸಕ್ತಿಯುಳ್ಳವರಾಗಿರುತ್ತಾರೆ. ಹಾಗಿರಬಹುದೋ ಎಂದರೆ, ಹಾಗೆ ಕೂಡದೆಂದು ಮುಂದೆ ಹೇಳುತ್ತಾರೆ.

(3) **ಕರಣತ್ರಯಸಾರೂಪ್ಯಂ**–ಕರಣತ್ರಯವಾದ ಮನಸ್ಸು, ವಾಕ್ಕು, ಕಾಯ ಈ ಮೂರರಲ್ಲೂ ಸಮಭಾವವು, **"ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ದುರಾತ್ಮನಾಂ"** ಎಂದು ಹೇಳಿರುವ ಹಾಗೆ ಮನಸ್ಸಿನಲ್ಲೇ ಒಂದು, ಬಾಯಲ್ಲೇ ಒಂದು, ಕಾರ್ಯತಃ ಒಂದು, ಹೀಗೆ ದುರಾತ್ಮರಿಗೆ ಎಲ್ಲಾ ಭಿನ್ನಭಿನ್ನವಾಗಿರುವದು ಎಂದು ಹೇಳಿದ ಹಾಗೆ ಇರಕೂಡದು. **"ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ಮಹಾತ್ಮನಾಂ"** ಎಂದು ಹೇಳಿರುವಹಾಗೆ ಮನಸ್ಸು ವಾಕ್ಕು, ಕರ್ಮಗಳೆಲ್ಲಾ ಏಕೀಭವಿಸಿರಬೇಕು. **" ಯನ್ಮನಸಾ ಧ್ಯಾಯತೇ, ತದ್ವಾಚಾವದತಿ, ತತ್ಕರ್ಮಣಾಕರೋತಿ "** " ಮಹಾತ್ಮನು ಯಾವುದನ್ನು ಮನಸ್ಸಿನಿಂದ ಧ್ಯಾನಿಸುವನೋ, ಅದನ್ನೇ ಬಾಯಿಂದಲೂ ಆಡುವನು, ಅದನ್ನೇ ಕಾರ್ಯತಃ ಮಾಡುವನು " ಎಂಬಹಾಗೆ ಮನೋವಾಕ್ಕಾಯಗಳೂ ಏಕರೂಪದಲ್ಲಿರತಕ್ಕದ್ದು.

ಹೀಗೆ ಒಬ್ಬನಲ್ಲೇ ಈ ಮೂರು ಇದ್ದುದಾದರೆ ಈ ಮೂರೂ ಸೇರಿ **ಸೌಖ್ಯರಸಾಯನ**ವಾಗುತ್ತದೆ. ಈ ಮೂರೂ ಸೇರಿದ ಸಿದ್ಧೌಷಧದಿಂದಲೇ ನಿರತಿಶಯ ಮೋಕ್ಷಾನಂದರೂಪ ಸುಖಾವಾಪ್ತಿಯು ಎಂಬ ಭಾವವು.

ಮುಂದಿನ ಪಾಶುರದ ಅವತಾರಿಕೆಯು.

ತತ್ತ್ರಯದ ನಿಷ್ಕರ್ಷಜ್ಞಾನವು ಉಪಯುಕ್ತಾಂಶವಾದುದರಿಂದ ಅತ್ಯಾವಶ್ಯಕವೆಂದು ಉಪಪಾದಿಸಲ್ಪಟ್ಟಿತು. ಆ ಅಭಿಪ್ರಾಯವನ್ನೇ ಪುನಃ ಇಲ್ಲಿ ಸಙ್ಗ್ರಹಿಸಿ, ಅಂತಹ ಜ್ಞಾನ ವೈಶದ್ಯವನ್ನು ಉಪದೇಶಿಸಿದವರು ತಮ್ಮ ಆಚಾರ್ಯರೇ ಮೊದಲಾದ ಪೂರ್ವಾಚಾರ್ಯರೆಂದು ಹೇಳಿ ಅವರನ್ನು ಶ್ಲಾಘಿಸುತ್ತಾರೆ.

ತೇರ ವಿಯನ್ಬಿನರ್ ಶಿತ್ತು ಮಶಿತ್ತು ಮಿರೈಯು ಮೆನ
ವೇರು ಪಡುಮ್ ವಿಯನ್ರತ್ತುವ ಮೂನ್ರುಮ್ ವಿನೈಯುಡಮ್ಬಿಲ್।
ಕೂರುಪಡುಜಕ್ಕೂಡು ಮೋಹವುಮುಮ್ ತಾನಿರೈಯಾಜ್ಞುರಿಪ್ಪುಮ್
ಮಾರ ನಿನೈನ್ದರುಳಾಲ್ ಮರೈನೂಲ್ ತನ್ಪವಾದಿಯರೇ ॥

ಮರೈನೂಲ್ – ವೇದಾನ್ತಶಾಸ್ತ್ರವನ್ನು, **ತಂದ** – ಕೊಟ್ಟ ಎಂದರೆ ಕೃಪಯಾ ಉಪದೇಶಿಸಿದ, **ವಾದಿಯರೇ** – ನಮ್ಮ ಆಚಾರ್ಯರಾದ ವಾದಿ ಹಂ ಸಾಂಬುವಾಹತವರು, ಅಥವಾ **ಆದಿಯರೇ ಎಂ**ದು ಪದ ಮಾಡಿದರೆ, ನಮ್ಮ ಪೂರ್ವಾಚಾರ್ಯರುಗಳು, **ವಿನೈಯುಡಮ್ಬಿಲ್** – ಪಾಪದಿಂದುಂಟಾದ **ಈ** ದೇಹ ದಲ್ಲಿ, **ಕೂರಪಡುಮ್** – ಆಯಾಯಾ, ದೇಹಗಳ ಒಂದೊಂದು ಭಾಗದಲ್ಲಿ ಉಂಟಾಗುವ, **ಕೊಡು** – ಕ್ರೂರವಾದ ಎಂದರೆ ಮೋಕ್ಷಪ್ರತಿಬಂಧಕವಾಗಿ ದುಃ ಖಾನುಭವರೂಪವಾದ, **ಮೋಹಮುಮ್** – ದೇಹವೇ ಆತ್ಮಾ ಎಂಬ ಭ್ರಮ ವನ್ನೂ **ತಾ** – ತಾನೇ, **ಇರೈ** – ಸ್ವಾಮಿಯು, **ಯಾ** – ಆಗಿರುವೆನು ಎಂಬ, **ಕುರಿಪ್ಪುಂ** – ಜ್ಞಾನವನ್ನು, ಎಂದರೆ ತಾನೇ ಸ್ವತಂತ್ರನೆಂಬ ಭ್ರಮವನ್ನೂ, ಮತ್ತು ತಾನೇ ಪರಬ್ರಹ್ಮನೆಂಬ ಭ್ರಮವನ್ನೂ, ಅಥವಾ ತನಗೆ ಬೇರೆ ಸ್ವಾಮಿಯೇ ಇಲ್ಲವೆಂಬ ಭ್ರಮವನ್ನೂ, **ಮಾರನಿನೈನ್ದು** – ಹೋಗಲಾಡಿಸಬೇಕೆಂದು ಸಂಕ ಲ್ಪಿಸಿದವರಾಗಿ, **ಶಿತ್ತುಮಶಿತ್ತುಮ್** – ಚಿತ್ತು ಮತ್ತು ಅಚಿತ್ತು, ಮತ್ತು **ಇರೈ ಯುಮ್** – ಈಶ್ವರನು, **ಎನ** – ಎಂಬವಾಗಿ, **ವೇರಪಡುಮ್** – ಬೇರೆಬೇರೆ ಸ್ವರೂಪಗಳನ್ನು ಹೊಂದಿರುವ, **ವಿಯಂ**- ಆಶ್ಚರ್ಯಕರವಾದ **ತತ್ತುವಮ್ ಮೂ ನ್ರುಮ್** - ಮೂರು ತತ್ವಗಳನ್ನು, ಆಶ್ಚರ್ಯವೇಕೆಂದರೆ, ಮೂರೂ ವಿಚಿತ್ರಸ್ವರೂಪ ಸ್ವಭಾವಗಳುಳ್ಳವಾದ ಪ್ರಯುಕ್ತ ಆಶ್ಚರ್ಯವು : ಅಥವಾ ಉದ್ದಿನಕಾಳು, ಗುಲಗಂಜಿ, ಒಳ್ಳೇ ಮುತ್ತು ಮೂರೂ ಸೇರಿದ್ದರೆ,ಅವುಗಳ ಸ್ವರೂಪ ಸ್ವಭಾವಗಳು ಸುವ್ಯಕ್ತವಾ ಗಿದ್ದರೂ ಅಂತವುಗಳ ವಿಷಯದಲ್ಲೂ ಭ್ರಮೆ ತಪ್ಪದಿರುವದರಿಂದ ಆಶ್ಚರ್ಯಕರವಾ ದವು ಎಂಬ ಭಾವವಾದರೂ ಆಗಬಹುದು, **ತೇರ**–ಸರ್ವಭ್ರಮಗಳೂ ತೀರೋಣ ವೇಗೋ ಹಾಗೆ; **“ ಏಕಮೇವಾದ್ವಿತೀಯಮ್ ” “ ನೇಹನಾನಾಸ್ತಿಕಿ ಞ್ಚನ ” “ಯತ್ರತ್ವಸ್ಯ ಸರ್ವಮಾತ್ಮೈವಾಭೂತ ” “ ಬ್ರಹ್ಮವೇದ ಬ್ರಹ್ಮೈವಭವತಿ” “ಅಹಂ ಬ್ರಹ್ಮಾಸ್ಮಿ ”** ಎಂಬಿನೇ ನೊಪಲಾದ ಶ್ರುತಿಗ ಳಿಗೂ ಕೂಡ ಇಂತಹ ಭ್ರಮಗಳೊಂದೂ ಬಾರದಹಾಗೆ ಸರ್ವಸಮಜ್ಞಸಾರ್ಥಗಳು ಕ್ಷೀಣ ವೇಗೋ ಹಾಗೆ ಎಂಬ ಭಾವವೂ ತೋರಿಬರುತ್ತದೆ. **ಅರುಳಾಲ್** – ಪರಮ ಕೃಪೆಯಿಂದ, **“ಕೃಪಯಾ ನಿಸ್ಪೃಹೋವದೇತ್ ”** ಆಚಾರ್ಯನು ಶಿಷ್ಯ

ನಿಗೆ ಪರಮಕೃಪೆಯಿಂದ ದೃಷ್ಟ ಮೊದಲಾದವುಗಳ ಆಕಯಿಲ್ಲದೆ ಉಪದೇಶಿಸ ತಕ್ಕದ್ದು ಎಂದು ಹೇಳಿರುವ ಹಾಗೆ ತುಂಬಾ ಪ್ರೀತಿಪುರಸ್ಸರವಾಗಿ, **ಇಯಮಿಶ್ವ ರ್** – ಉಪದೇಶಿಸಿದರು. ಈ ಜೀವನು ತಾನು ಮಾಡಿದ ಕರ್ಮಾನುಭವ ಕ್ಕಾಗಿ ಪುನಃ ಪುನಃ ದೇಹಗಳನ್ನೆತ್ತುವದರಿಂದ ಆ ದೇಹದ ಮೇಲಿನ ಮಮ ತೆಯೂ ಕೂಡ ಪುನಃ ಪುನಃ ಅನುಸರಿಸಿಯೇ ಬರುತ್ತದೆ. ಆದುದರಿಂದ ದೇಹವೇ ಆತ್ಮವೆಂಬ ಭ್ರಮೆಯು ಇವನಿಗೆ ಅಂಟಿದುದಾಗಿ ಇರುತ್ತದೆ. ಅದೂ ಅಲ್ಲದೆ ಸರ್ವೇ ಶ್ವರನು ಕೃಪೆಗೈದ ಕರಣಕಳೇಬರಗಳಂದುಂಟಾದ ಕರ್ಮಫಲಕ್ಕೆ, ತಾನೇ ಕಾರಣ ನೆಂದೂ, ತಾನೇ ಸಾಧಿಸಿದುದೆಂದು ಭಾವಿಸಿ "**ಸಿದ್ಧೋಹಂಬಲವಾ ನ್ಸುಖೀ**" ಎಂದು ಹೇಳುತ್ತಾ ತಾನೇ ಸ್ವತಂತ್ರನೆಂದು ಭ್ರಮಿಸುತ್ತಾನೆ. ತಾನೇ ಸ್ವಾಮಿಯು, ತನಗಿನ್ನಾರೂ ಸ್ವಾಮಿಯಿಲ್ಲವೆಂದೂ ಭ್ರಮಿಸುತ್ತಾನೆ. ಇನ್ನು ಕೆಲವರು ತಾವೇ ಅವಿದ್ಯಾಗೃಹೀತ ಪರಬ್ರಹ್ಮವೆಂದು ಭ್ರಮಿಸುವರು. ಆದರೆ ಅಚಿತ್ತು ಚಿತ್ತು ಈಶ್ವರನೆಂಬ ಮೂರು ತತ್ವಗಳಿವೆ ಎಂದೂ, ಅವು ಮೂರಕ್ಕೂ ಇರುವ ಪರಸ್ಪರ ವೈಲಕ್ಷಣ್ಯವನ್ನು ಚೆನ್ನಾಗಿ ತಿಳಿದರೆ, ಇಂತಹ ಭ್ರಮೆಗಳಿಗೆ ಕಾರ ಣವೇ ಇಲ್ಲವು. ದೇಹವು ಅಜೀವನವು, ಜಡಪದಾರ್ಥವು, ಸ್ಥೂಲವಾದುದು ವಿಕಾರ ಹೊಂದುವಂಥಾದ್ದು, ಅನಿತ್ಯವಾದುದು. ಆದುದರಿಂದ ಅದು ಜ್ಞೈತನ್ಯ ವಿರುವ, ಜ್ಞಾನಸ್ವರೂಪನಾಗಿರುವ, ಅಣು ಸ್ವರೂಪನಾಗಿರುವ, ವಿಕಾರಹೊಂದದೇ ನಿತ್ಯವಾಗಿರುವ ಆತ್ಮ ಹೇಗಾದೀತು ? ದೇಹವೇ ಆತ್ಮನಾಗಿ, ಅದರಲ್ಲಿ ಜ್ಞೈತನ್ಯವಿ ದ್ದರೆ, ಅದರ ಪ್ರತ್ಯವಯದಲ್ಲೂ ಜ್ಞೈತನ್ಯವೇ ಅಥವಾ ದೇಹಸಮುದಾಯದಲ್ಲಿ ಜ್ಞೈತನ್ಯವಿದೆಯೇ ಎಂದು ಪ್ರಶ್ನಿಸಿದರೆ, ಪ್ರತ್ಯವಯವದಲ್ಲೂ ಉಂಟೆಂದು ಹೇಳಿದರೆ, ಆಗ ಪ್ರತ್ಯವಯವಗಳಲ್ಲೂ ಅಭಿಪ್ರಾಯಗಳುಂಟಾಗಿ ಪರಸ್ಪರ ವಿರುದ್ಧ ಅಭಿಪ್ರಾಯ ಗಳುಂಟಾಗಬೇಕಾಗಿತ್ತು. ಆದರೆ ಹಾಗಿಲ್ಲವು. ಇದೂ ಅಲ್ಲದೆ **ನನ್ನ ದೇಹ** ವೆಂಬ ಪ್ರತೀತಿಯಿರುವದರಿಂದ ತಾನೇ ಬೇರೆ, ಆತ್ಮನೇ ಬೇರೆ ಎಂಬುವದು ಸಿದ್ಧ ವಾದುದರಿಂದ ದೇಹಾವಯವಗಳೂ ಸಮುದಾಯ ದೇಹವೂ ಸಹ ಆತ್ಮವಲ್ಲವು. ಆದರೆ **ನನ್ನ ಆತ್ಮಾ** ಎಂಬ ಪ್ರಯೋಗವೂ **ನನ್ನ ದೇಹವು** ಎಂಬುವ ಹಾಗೆ, ಇದೆಯಲ್ಲಾ, ಆದುದರಿಂದ ಆತ್ಮಾದೇಹವೂ ಎರಡೂ ಒಂದೇ ಎಂದರೆ **ನನ್ನ ಆತ್ಮಾ** ಎಂಬ ಪ್ರಯೋಗದಲ್ಲಿ, ನನ್ನ ದೇಹದ ಆತ್ಮಾ ಎಂಬಭಿಪ್ರಾಯವು. ಯಾವಾಗ ಎರಡೂ ಎಡಬಿಡದೆ ಇದ್ದು, ಶರೀರಿ ಶರೀರ ಸಂಬಂಧವಿದೆಯೋ ಆಗ ಸಾಮಾನಾಧಿಕರಣ್ಯದಿಂದ ಅದೇ ಇದು, ಇದೇ ಅದು ಎಂದು ಹೇಳುವ ವಾಡಿಕೆ

(1) ಗೀ 16. 14.

ಯುಂಟು. ಆದುದರಿಂದ **ನನ್ನ ಆತ್ಮಾ** ಎಂಬ ಪ್ರಯೋಗವು ಲಾಕ್ಷಣಿಕಾರ್ಥವುಳ್ಳದ್ದು. ನನ್ನ ದೇಹ ಎಂಬಲ್ಲಿ ಹಾಗಲ್ಲವು. ಮುಖ್ಯಾರ್ಥವೇ ಅಲ್ಲಿ ಹೇಳತಕ್ಕದ್ದು.

ಜೀವಾತ್ಮನು ಸ್ವತಃ ತುಂಬಾ ಪರಿಶುದ್ಧನು. ಜ್ಞಾನಾನಂದಸ್ವರೂಪನು. ಆತನು ಬದ್ಧದೆಸೆಯಲ್ಲಿರುವಾಗ ಕರ್ಮಸಂಬಂಧದಿಂದ ಜ್ಞಾನಸಙ್ಕೋಚವುಳ್ಳವನು ಹೇಯ ಗುಣಯುಕ್ತನು, ಅಣುಸ್ವರೂಪನು, ಪರಮಾತ್ಮನಿಗೆ ಸ್ವತಃ ಶೇಷಭೂತನು. **"ದಾಸಭೂತಾಸ್ಸ್ವತಸ್ಸರ್ವೇ"** ಎಂದು ಹೇಳಿರುವ ಹಾಗೆ ದಾಸಭೂತನಾಗಿರುವನಸಿಗೆ ಸರ್ವಸ್ವಾತಂತ್ರ್ಯವು ಹೇಗೆ? ಆದುದರಿಂದ ಸ್ವತಂತ್ರಾತ್ಮಭ್ರಮಕ್ಕೆ ಅವಕಾಶವಿಲ್ಲವು.

ಅಮೂ ಅಲ್ಲದೆ ಇಂತಹ ದುಃಖಭಾಗಿಯಾದ ಜೀವಾತ್ಮನೇ ಪರಮಾತ್ಮನು ಎಂದಿಗೂ ಆಗಬಾರನು. ಪರಮಾತ್ಮನಾದರೋ **"ಸರ್ವಜ್ಞಸ್ಸರ್ವವಿತ್"** ಅಕಲ್ಮಷನು, ಹೇಯಪ್ರತ್ಯನೀಕನು, ಕಲ್ಯಾಣಗುಣಾಕರನು, ವಿಭುವು, ಸರ್ವನಿಯನ್ತಾ ನಿರತಿಶಯಾನಂದ ಸ್ವರೂಪನು. ಹೀಗಿರುವಾಗ ಇಬ್ಬರೂ ಒಂದೇ ಹೇಗೆ ಆಗಬಹುದು. ಗೀತೆಯಲ್ಲಿ **"ಉತ್ತಮ ಪುರುಷಸ್ತ್ವನ್ಯಃ"** ಎಂಬ ವಾಕ್ಯದಲ್ಲಿ ಬದ್ಧಮುಕ್ತರಿಗಿಂತಲೂ ಸರ್ವೇಶ್ವರನು ವಿಲಕ್ಷಣನೆಂದೂ, ಹಾಗೆಯೇ ಶ್ರುತಿಗಳಲ್ಲೂ **"ಭೋಕ್ತಾ ಭೋಗ್ಯಂ ಪ್ರೇರಿತಾರಂಚಮತ್ವಾ"** **"ದ್ವಾಸುಪರ್ಣಾ"** ಎಂಬಿನೇ ಮೊದಲಾದವುಗಳಲ್ಲೂ ಜೀವಾತ್ಮಾ ಪರಮಾತ್ಮಾ ಬೇರೆ ಬೇರೆ ಎಂದು ಹೇಳಿರುತ್ತದೆ.

ಹೀಗೆಲ್ಲಾ ವಿಶದವಾಗಿ ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದ್ದರೂ, ಈ ಭ್ರಮೆಗಳಲ್ಲಾ ಈ ಜೀವನನ್ನು ಬಾಧಿಸುತ್ತಿರುವುದು ಆಶ್ಚರ್ಯವೇ ಸರಿ. ಆದುದರಿಂದಲೇ ನಮ್ಮ ಪೂರ್ವಾಚಾರ್ಯರುಗಳು ಪರಮಕೃಪೆಯಿಂದ ಈ ತತ್ವತ್ರಯದ ಸ್ವರೂಪಸ್ಥಿತಿ ಪ್ರವೃತ್ತಿಗಳನ್ನೆಲ್ಲಾ ಬಹು ವಿಶದವಾಗಿ, ಇಂತಹ ಭ್ರಮೆಗಳೆಲ್ಲಾ ತೀರಿಹೋಗುವಹಾಗೆ ಉಪದೇಶಿಸಿದರಲ್ಲವೇ ಎಂದು ಅನುಗಳನ್ನು ಕೊಂಡಾಡುತ್ತಾರೆ.

ಅವತಾರಿಕೆ–ಮೇಲಿನ ಪಾಶುರದಿಂದ, ದೇಹಾತ್ಮಭ್ರಮೆ, ಸ್ವತನ್ತ್ರಾತ್ಮಭ್ರಮೆ ಮೊದಲಾದ ಭ್ರಮೆ, ವಿಪರೀತ ಭ್ರಮೆ, ಇವೇ ಮೊದಲಾದವುಗಳೆಲ್ಲಾ ತತ್ವತ್ರಯ ಜ್ಞಾನದಿಂದ ತೊಲಗುತ್ತವೆ ಎಂದು ಹೇಳಿದರು. ಈ ಶ್ಲೋಕದಿಂದ, ಈ ತತ್ವತ್ರಯ ನಿರ್ಣಯವು ಇತರ ಅಪಸಿದ್ಧಾನ್ತಗಳಿಗೆ ಪೊರೆಪುಲಿಲ್ಲವಾದುದರಿಂದ, ಕುಯುಕ್ತಿಕುವಾದಗಳ ಮೂಲಕ ಈ ಅಪಸಿದ್ಧಾನ್ತಗಳೆಲ್ಲಾ ತಲೆಯೆತ್ತಿದ್ದವೆಂದೂ, ಈ ಪೂರ್ವಾಚಾರ್ಯರುಗಳ ಪರ್ವಪಸುಂಪಸವಾದ ಉಪದೇಶಗಳಿಂದ ಈ ತತ್ವತ್ರಯ ನಿರ್ಣಯವು ಪುಸ್ಥಾಪಿತವಾದುದರಿಂದ, ಈ ತತ್ವತ್ರಯವು ಸಿದ್ಧಾನ್ತವೆ, ಈ ಅಸಿದ್ಧಾನ್ತಗಳು ಒಪುವನ್ನು ಪೆಱಲಾರದ ಹಾಗೆ ಮಾಡಿತೆಂದೂ, ಉಪದೇಶಿಸುತ್ತಾ

ಆವಾಪೋ ದ್ವಾಪತೇಸ್ನ್ಯಃ ಕತಿಕತಿ ಕವಿಧೀ ಚಿತ್ರವತ್ತತ್ತದರ್ಥೇ ಷ್ವಾನನ್ತ್ಯ ದಸ್ತಿನಾಸ್ತ್ಯೇ ರನವಧಿ ಕುಹನಾಯುಕ್ತಿಕಾನ್ತಾಃ ಕೃತಾ

ಪೂರ್ವಾರ್ಧದಿಂದ ಇತರ ಸಿದ್ಧಾನ್ತಗಳು ಹೇಗೆ ಅಪಸಿದ್ಧಾನ್ತಗಳೆಂದು ಹೇಳಿ ಉತ್ತರಾರ್ಧದಿಂದ ಅವುಗಳೆಲ್ಲಾ ತಮ್ಮ ತತ್ವತ್ರಯ ಸಿದ್ಧಾನ್ತದಿಂದ ನಿರಾಕರಿಸಲ್ಪಡುತ್ತವೆಂದು ಭೋಧಿಸುತ್ತಾರೆ.

ಅರ್ಥ-ತತ್ತದರ್ಥೇಷು-ಆಯಾಯಾ ವಸ್ತುಗಳಲ್ಲಿ,-**ಅಸ್ತಿನಾಸ್ತ್ಯೋಃ** – ಉಂಟು ಇಲ್ಲವೆಂಬುವ ಭಾವಗಳ, **ಆನನ್ತ್ಯಾತ್** – ಬಾಹುಳ್ಯದಿಂದ, **ಆವಾಪೋದ್ವಾಪತಃ** – ಆವಾಪವೆಂದರೆ ಇಲ್ಲದುದನ್ನು ಪರಿಗ್ರಹಿಸೋಣವು, ಉದ್ವಾಪವೆಂದರೆ ಇರುವುದರ ಪರಿತ್ಯಾಗವು, ಇವುಗಳಿಂದ, – **ಅನವಧಿಕುಹನಾಯುಕ್ತಿಕಾನ್ತಾಃ** -ಅವಧಿಯಿಲ್ಲದ ಕುತರ್ಕವಾದಗಳಿಂದ ಮನೋಹರಗಳಾದ **ಕತಿಕತಿಕೃತಾನ್ತಾಃ** – ಹಾಗೆ ಕೆಲವು ಹೀಗೆ ಕೆಲವು ಈ ರೀತಿಯಲ್ಲಿ ಅನೇಕವಾಗಿ ಸಿದ್ಧಾನ್ತಗಳು **ಕವಿಧೀಚಿತ್ರವತ್** – ಕವಿಯಬುದ್ಧಿಯಲ್ಲಿರುವ ಅನೇಕ ವಿಧವಾದ ಸ್ವೀಕಾರ, ಪರಿತ್ಯಾಗ, ಉತ್ಪ್ರೇಕ್ಷೆಗಳಿಂದ ಕೂಡಿದ ವಿಚಿತ್ರವಾದ ವರ್ಣನೆಗಳಹಾಗೆ **ಸ್ಯುಃ** – ಆಗುತ್ತವೆ. ಉತ್ತರಾರ್ಧದಿಂದ ಇಂತಹ ಅಪಸಿದ್ಧಾನ್ತಗಳೆಲ್ಲಾ ಈ ಯಥಾರ್ಥವಾದ ತತ್ವತ್ರಯ ಜ್ಞಾನದಿಂದ ತಲೆಯೆತ್ತಲಾರವೆಂದು ಹೇಳುತ್ತಾರೆ. **ನಿಸ್ಸಮಃ** – ಎಂದರೆ ಸಮಾನವಾದುದೇ ಇಲ್ಲದಿರುವ, ಇದರಿಂದ ಅಧಿಕವಾದುದೂ ಇಲ್ಲವೆಂಬ ಭಾವವಿರುತ್ತದೆಯಾದುದರಿಂದ, ಸರ್ವೋತ್ಕೃಷ್ಟವಾದುದು ಎಂಬರ್ಥವು, ಇಂತಹ, **ತತ್ತ್ವಾಲೋಕಸ್ತು** – ಯಥಾರ್ಥವಾದ ತತ್ವತ್ರಯ ಜ್ಞಾನವಾದರೋ, **ತಾರ್ಕಾ ಸಮಸ್ತಾರ್ಥ** – ಆ ಮೇಲೆ ಹೇಳಿದ ಸಮಸ್ತ ಅಪಸಿದ್ಧಾನ್ತಗಳನ್ನೂ, **ಲೋಪ್ತುಂ** – ಅಡಗಿಸುವದಕ್ಕೆ, ತಾವಾಗಿಯೇ ಅಡಗಿ ಹೋಗುವ ಹಾಗೆ ಮಾಡುವದಕ್ಕೆ ಎಂದರೆ ನಿರಸನಮಾಡುವದಕ್ಕೆ, **ಪ್ರಭವತಿ** – ಸಮರ್ಥವಾದುದಾಗುತ್ತದೆ. ಅದು ಹೇಗೆ ಎನ್ನುವದನ್ನು ಒಂದು ದೃಷ್ಟಾನ್ತಮೂಲಕ ಅರ್ಥಾಂತರ ನ್ಯಾಸಾಲಂಕಾರಮೂಲಕವಾಗಿ ದೃಢಪಡಿಸಿ ಹೇಳುತ್ತಾರೆ. ಮೂರದಲ್ಲಿ ಒಂದು ವಸ್ತುವಿದೆ; ಅದು ಎಂಥಾದ್ದಿಂದು ಗೊತ್ತಾಗದೆ ಸಂಶಯಾಸ್ಪದವಾಗಿರುವಾಗ, **ಪುಂಸ್ತ್ವೇ** – ಅದು ಪುರುಷನು ಎಂಬ ಭಾವವು, **ತತ್ತ್ವೇನದೃಷ್ಟ್ವೇಸತಿ** – ಯಥಾರ್ಥವಾಗಿ ಕಂಡುಬಂದಮೇಲೆ, **ಪುನರಪಿ** – ಪುನಃ ಕೂಡ, **ಸ್ಥಾಣುತಾದಿಃ** – ಅದು ನೋಟುಮರವಾಗಿರಬಹುದು ಇವೇ ಮೊದಲಾದವುಗಳುಳ್ಳ ಭಾವವು, ಇಲ್ಲಿ ಆದಿ ಶಬ್ದದಿಂದ ಶಿಲೆಯೋ, ಕಂಭವೋ, ಎಂಬ ಭಾವಗಳು ಸೂಚಿಸಲ್ಪಟ್ಟವು, **ನಖಲುಸ್ಥಾಣುತಾ** – ಒಂದು ಮುಹೂರ್ತವಾಗಲಿ ಜೀವಿಸಲಾರದಷ್ಟೇ. ನೋಟ ಮರವೇ

ನಾಸ್ತಿ। ತತ್ವಾ ಲೋಕಸ್ತು ಲೋಪುಂ ಪ್ರಭವತಿ ಸಹಸಾ ನಿಸ್ನಮುಸ್ತಾ ಸಮುಸ್ತಾ ಪುಂಸ್ತ್ವೇ ತತ್ವೇನ ದೃಷ್ಟೇ ಪುನರಪಿ ನಖಲು ಪ್ರಾಣಿತಾ ಸ್ಥಾಣುತಾದಿಃ (ಧೀಃ) ॥೧೫॥

ತತ್ತ್ವತ್ರಯಾಧಿಕಾರಃ ಪಂಚಮಃ

ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ

ಮೊವಲಾದವನಾಗಿರುವಭಾವವು ಉಂಟಾಗಲಾರದಷ್ಟೇ ಎಂಬ ಭಾವವು. ದೂರದಲ್ಲಿರುವಾಗ ಮೋಟನುರಪೋ ಎಂಬ ಸಂದೇಹವಿರಬಹುದು. ಹತ್ತಿರ ಬಂದು ಪ್ರತ್ಯಕ್ಷದಲ್ಲಿ ಅವಯವಗಳು ತೋರಿ ಬಂದು, ಪುರುಷನು ಎಂಬ ಯಥಾರ್ಥಜ್ಞಾನ ಉಂಟಾದನಂತರ, ಇದು ಮೋಟನುರ ಮುಂತಾದ ಸಂದೇಹ ಬದುಕಿರಲು ಸಾಧ್ಯವೇ ಎಂಬ ಭಾವವು. ಈ ನಾಲ್ಕನೆ ಪಾದವು ಶ್ಲೇಷಾಲಂಕಾರ ಯುಕ್ತವಾದುದು. ಹೇಗೆಂದರೆ:— **ಪುಂಸ್ತ್ವೇ** – ಪರಮ ಪುರುಷನಾದ ನಾರಾಯಣನೇ, ಪುರುಷ ಸೂಕ್ತದಲ್ಲಿ ಹೇಳಿರುವ ಹಾಗೆ ಪುರುಷಶಬ್ದವಾಚ್ಯನಾದ ಶ್ರಿಯಃ ಪತಿಯು, **ತತ್ವೇನ ದೃಷ್ಟೇ ಸತಿ** – ಆತನೇ, **"ಪರಮುಸ್ವರಾಟ್"** ಎಂದು ಹೇಳಿ ಮುಗಿಸಿದ ಹಾಗೆ, ಪರತತ್ವನೆಂದು ಯಥಾರ್ಥವಾಗಿ ತತ್ವನಿರ್ಣಯವಾದ ಮೇಲೆ, **ಸ್ಥಾಣುತಾದಿಃ** – ರುದ್ರನೇ ಪರತತ್ವವು, ಚತುರ್ಮುಖ ಬ್ರಹ್ಮನೇ ಪರತತ್ವವು ಎಂಬಿವೇ ಮೊದಲಾದ ಭಾವವು, **ನಖಲು ಪ್ರಾಣಿತಾ** - ಎಂದಿಗೂ ಜೀವಿಸಲಾರದಷ್ಟೇ? **ಸ್ಥಾಣುತಾಧೀಃ** ಎಂಬ ಪಾಠಾಂತರವಾದರೆ, ಮೋಟನುರಭಾವವುಳ್ಳ ಬುದ್ಧಿ ಎಂದೂ, ಶ್ಲೇಷಾಲಂಕಾರದಲ್ಲಿ, ರುದ್ರನೇ ಪರತತ್ವನೆಂಬ ಬುದ್ಧಿಯು ಎಂಬರ್ಥವು.

ಈ ಅನೇಕ ಅಸದ್ವಾದಿಗಳೆಲ್ಲಾ ಹೇಗೆ ಉಂಟಾದನೆಂದು ಮೊದಲು ಹೇಳುತ್ತಾರೆ. ಒಬ್ಬನು ಅಸ್ತಿ ಎಂದರೆ, ಇನ್ನೊಬ್ಬನು ತನ್ನ ಪ್ರಾಶಸ್ತ್ಯಕ್ಕಾಗಿ ನಾಸ್ತಿ ಎಂದು ಹೇಳುವನು. ಮತ್ತೊಬ್ಬನಿಗೆ ಅಸ್ತಿ ನಾಸ್ತಿ ಎರಡೂ ಸಮವಾದವು. ಘಟೋಸ್ತಿ ಎಂಬಲ್ಲಿ ಅಸ್ತಿ ಎಂಬುದೇ ಒಂದೇ ಸತ್ಯವೇ ವಿನಾ, ಘಟ ಪಟಾದಿಗಳಲ್ಲವೆಂದು ಶಾಂಕರರು ಹೇಳುವರು. ಸತ್ಯಶೂನ್ಯವಾದುದರಿಂದ ಘಟವು ನಾಸ್ತಿ ಎಂಬುವದೇ ಸರಿ ಎಂದು ಹೇಳುವನು. ಜೈನನಿಗೆ ಅಸ್ತಿನಾಸ್ತಿ ಎರಡೂ ಸಮಂಜಸವೇ. ಹಾಗೆಯೇ ಚಾರ್ವಾಕನಿಗೆ ಪ್ರತ್ಯಕ್ಷವು ಸತ್ಯವು, ಶಾಂಕರನಿಗೆ ಮಿಥ್ಯೆಯು, ಬೌದ್ಧನಿಗೆ ಶೂನ್ಯವು ಶಾಂಕರನಿಗೆ ಜ್ಞಾನವು ಸತ್ಯವು, ಮಾಧ್ವಮಿಕನು ಸ್ವತಂತ್ರವಾಗಿ ಅವಿದ್ಯೆಯು. ಕಾಪಿಲರೂ ಶಾಂಕರರೂ ಚೇತನನಿಗೆ ಕರ್ತೃತ್ವಭೋಕ್ತೃತ್ವಗಳನ್ನಿಡಿಸುವರು, ಅದನ್ನೆ ಪ್ರಕೃತಿಗೆ ಇಟ್ಟೆಂಬುವರು; ಶಾಂಕರರು ಸರಸಾತ

ನಿಗೆ ಅವಿದ್ಯಾಸಂಬಂಧ ಉಂಟೆಂದೂ, ಭಾಸ್ಕರೀಯರು ಉಪಾಧಿಸಂಬಂಧ ಉಂಟೆಂದೂ ಹೇಳುವರು. ಮೀಮಾಂಸಕನು ಕರ್ಮದಿಂದ ಒಂದು ಅಪೂರ್ವವು ಹುಟ್ಟುತ್ತದೆಂಬುವನು. ತಾರ್ಕಿಕನು ಅವಯವಗಳಿಂದ ಒಂದು ಅವಯವಿ ಉತ್ಪನ್ನವಾಗುತ್ತದೆಂಬುವನು. ಹೀಗೆ ಕೆಲವರು ಇಲ್ಲದೇ ಇರುವದರ **ಉತ್ಪತ್ತಿ**ಯನ್ನು ಹೇಳುವರು. ಹೀಗೆ ಅಜ್ಞೀಕರಿಸಬೇಕಾದುದನ್ನು ತಿರಸ್ಕರಿಸಿ, ತಿರಸ್ಕರಿಸಬೇಕಾದುದನ್ನು ಪರಿಗ್ರಹಿಸುವರು. ಆದುದರಿಂದ **ಆವಾಪೋದ್ವಾಪತಃ** ಅಪಸಿದ್ಧಾಂತಗಳ ಅನನ್ತ್ಯವು ಉಂಟಾಗುತ್ತದೆ. ಅದರಲ್ಲಿ ಅಸ್ತಿನಾಸ್ತಿಗಳ ವಾದಗಳಿಂದ ಅಪಸಿದ್ಧಾಂತಗಳ ಪ್ರಭೇದಗಳು ಇನ್ನೂ ಹೆಚ್ಚುತ್ತವೆ. ಇಲ್ಲದಿರುವದನ್ನು ಪರಿಗ್ರಹಿಸುವದಕ್ಕೆ ಉದಾಹರಣೆಗಳಾಗಿ ತಾರ್ಕಿಕನ ಜೀವತತ್ವದ ವಿಭುತ್ವವನ್ನೂ, ಭಾಟ್ಟಪ್ರಾಭಾಕರರ ಅಪೂರ್ವೋತ್ಪತ್ತಿಯನ್ನೂ, ಚಾರ್ವಾಕನ ಜೈತನ್ಯೋತ್ಪತ್ತಿಯನ್ನೂ ಹೇಳಬಹುದು. ಇರುವದರ ಪರಿತ್ಯಾಗಕ್ಕೆ ನಿದರ್ಶನವಾಗಿ,ಬೌದ್ಧಶಾಂಕರರ ಜೀವತತ್ವಪರಿತ್ಯಾಗವನ್ನೂ,ಮಾಧ್ಯಮಿಕನ ಸರ್ವಶೂನ್ಯವಾದವನ್ನೂ, ಹೇಳಬಹುದು. ಕವಿಗಳು ಹೇಗೆ ರಾಮಾಯಣ ಭಾರತಾದಿಗಳ ಕೆಲಭಾಗವನ್ನಿಟ್ಟುಕೊಂಡು, ಕೆಲವು ಭಾಗವನ್ನು ಪರಿತ್ಯಜಿಸಿ,ತಮ್ಮ ಕವಿತಾಶಕ್ತಿಗನುಸಾರವಾಗಿ ಬುದ್ಧಿ ಕುಶಲತೆಯಿಂದ ಉತ್ಪ್ರೇಕ್ಷಾದಿಗಳ ಮೂಲಕ ನಾನಾಬಗೆಯಾದ ನಾಟಕ, ಕಾದಂಬರ್ಯಾದಿ ಕಾವ್ಯಗಳನ್ನು ರಚಿಸಿ ಬೇರೆಬೇರೆ ಗ್ರಂಥಗಳಾಗಿ ತೋರುತ್ತಾರೆಯೋ,ಹಾಗೆಯೇ ಈ ಅಪಸಿದ್ಧಾಸ್ತಿಗಳೂ ತಮ್ಮತಮ್ಮ ಮನಬಂದಂತೆ ಕಲ್ಪನೆ ಪರಿತ್ಯಾಗಗಳ ಮೂಲಕ ನಾನಾಅಪಸಿದ್ಧಾನ್ತಗಳನ್ನು ಕಲ್ಪಿಸಿರುತ್ತಾರೆ. ಯಾವಾಗ ಸಿದ್ಧಾನ್ತವೇ ಸುಳ್ಳೋ,ಆಗ ಅದನ್ನು ವಾದಗಳಿಂದ ಸ್ಥಾಪನೆಮಾಡುವದು ಕಷ್ಟವು. ಅದು ಸಿಲ್ಲಲಾರದ ಪ್ರಯುಕ್ತ ಅದಕ್ಕೆ **ಕೈ**ಕಾಲುಗಳನ್ನು ಸೃಷ್ಟಿಸಬೇಕಾಗುತ್ತದೆ. ನಾನೇ ಪರಮಾತ್ಮನು **ಎಂದು** ಸಿದ್ಧಾನ್ತವಾದರೆ, ನೀನು ಏತಕ್ಕೆ ದುಃಖಭಾಕ್ತಾಗಿರುತ್ತೀ ಎಂದು ಪ್ರಶ್ನಿಸಿದರೆ, ಆಗ ನಾನು ಅವಿದ್ಯಾಗೃಹೀತನಾಗಿರುವದರಿಂದ ದುಃಖಭಾಕ್ತಾಗಿದ್ದೇನೆಂದು ಹೇಳಬೇಕಾಗುತ್ತದೆ. ಪರಮಾತ್ಮನೊಬ್ಬನೇ ಇರುವವನು, ಇನ್ಯಾವದೂ ಇಲ್ಲವು ಎಂದು ಹೇಳಿದರೆ, ಹಾಗಾದರೆ ಈ ಜಗತ್ತೆಲ್ಲಾ ಏನು ಎಂಬ ಪ್ರಶ್ನೆಗೆ, ಅದೆಲ್ಲಾ ಮಿಥ್ಯೆಯು ಎಂದು ಹೇಳಬೇಕಾಗುತ್ತದೆ, ಕಾರಣವೇ ಬೇರೆ ಕಾರ್ಯವೇ ಬೇರೆ ಎಂಬ ಅಪಸಿದ್ಧಾನ್ತವಾದರೆ, ಬೇರೆ ಎಂದು ಹೇಳುವದಕ್ಕೆ ಅನೇಕ ಯುಕ್ತಿ ವಾದಗಳನ್ನು ಕಲ್ಪಿಸಬೇಕಾಗುತ್ತದೆ. ಆದುದರಿಂದ ಅಂತಹ ಅಪಸಿದ್ಧಾನ್ತಗಳೆಲ್ಲಾ **ಅನವಧಿಕುಹನಾಯುಕ್ತಿಕಾಂತಾಃ** ಕುತರ್ಕ ಯುಕ್ತಿಗಳಿಂದ ಕೂಡಿದ ವಾದವು **ಅಪರಿಮಿತವಾಗಿ** ಬೇಕಾಗುತ್ತದೆ. ಆದುದರಿಂದಲೇ **ಅನವಧಿ** ಎಂಬ ಪ್ರಯೋಗವು. ಆಗಲಿ, ಇಂತಹ ತರ್ಕವಾದಗಳಿಂದ ತಮ್ಮ ಸಿದ್ಧಾನ್ತವು ಪ್ರತಿಷ್ಠಿತವಾಗುತ್ತದೆಯೋ ಎಂದರೆ, ಚನ್ನಾಗಿ ಪರ್ಯಾಲೋಚಿಸದೆ, ಶಾಸ್ತ್ರಜ್ಞಾನವಿಲ್ಲದ ಅಪಂಡಿತನಿಗೆ ಇವುಗಳು **ಕಾಂತಾಃ** ತುಂಬಾ ಮನೋಹರವಾದ

ವಾದಗಳಾಗಿಯೇ ತೋರಬಹುದು. ಆದರೆ ಶಾಸ್ತ್ರಪಜ'್ತಯನ್ನನುಸರಿಸಿದ ಬರೀ ತರ್ಕವು, **"ತರ್ಕಾಪ್ರತಿಷ್ಠಾನಾತ್"** ಎಂಬ ಬ್ರಹ್ಮಸೂತ್ರಾನುರೀತ್ಯಾ ಸಿದ್ಧಾನ್ತ ಸಾಧನಾ ವಿಷಯದಲ್ಲಿ ಕಾರ್ಯಕಾರಿಯಾಗುವದಿಲ್ಲವು. ಆದರೆ **ತತ್ವಾಲೋಕಸ್ತು**, ಶಾಸ್ತ್ರಪಜ'್ತಯನ್ನನುಸರಿಸಿರುವ ನಮ್ಮ ವಿಶಿಷ್ಟಾದ್ವೈತ ಸಿದ್ಧಾನ್ತ ಪ್ರಕ್ರಿಯೆಯಾದ ತತ್ವತ್ರಯದ ಯಥಾರ್ಥಜ್ಞಾನವಾದರೋ **ಈ** ಸಮಸ್ತ ಅಪಸಿದ್ಧಾನ್ತಗಳನ್ನೂ ತಲೆ ಎತ್ತದ ಹಾಗೆ ಮಾಡುತ್ತದೆ. ನಾವು ಶ್ರಮಪಟ್ಟು ಅವುಗಳನ್ನು ನಿರಸನಮಾಡಬೇಕೆಂಬ ಆವಶ್ಯಕತೆ ಏನೂ ಇಲ್ಲವು. ತಾನಾಗಿಯೇ ಬೆಳಕಿನ ಸಾನ್ನಿಧ್ಯದಲ್ಲಿ ಅಂಧಕಾರ ತೊಲಗುವ ಹಾಗೆ ಹೊರಟುಹೋಗುತ್ತವೆ ಎಂಬ ಭಾವವು. ತುಂಬಾವಾದ ಪ್ರಕ್ರಿಯೆ ಮೊದಲಾದ ಕಲಾಪಗಳು ಬೇಕಾಗಿಲ್ಲವೆಂಬ ಭಾವದಿಂದ **ಸಹಸಾ** ಎಂದು ಪ್ರಯೋಗಿಸಿರುತ್ತಾರೆ. ಹೀಗೆ ಎಲ್ಲಾ ಅಪಸಿದ್ಧಾಂತಗಳು ತೊಲಗುವ ಹಾಗೆ ಮಾಡಿ ತಾನೊಂದೇ ಶಾಸ್ತ್ರಸಾಮಂಜಸ್ಯದೊಂದಿಗೆ ಯಥಾರ್ಥ ತತ್ವವಾಗಿ ಬೆಳಗುವುದರಿಂದ, ಈ ನಮ್ಮ ಸಿದ್ಧಾನ್ತವು **ನಿಸ್ಸಮಃ**, ಅದಕ್ಕೆ ಸಮಾನವಾದುದೇ ಇಲ್ಲವೆಂದು ಹೇಳುತ್ತಾರೆ. ಯಾವಾಗ ಸಮಾನವಾದುದೇ ಇಲ್ಲವೋ, ಅದರಿಂದ ಅಧಿಕವಾದುದೂ ಇಲ್ಲವೆಂಬುದು ಕೈಮುತಿಕ ನ್ಯಾಯಸಿದ್ಧವು. ಹೀಗೆ ಅನೋಘವಾದ ಸಿದ್ಧಾನ್ತವಾಗಿರುತ್ತದೆ ಎಂಬ ಭಾವವು. ಹೀಗೆ ಸುಲಭವಾಗಿ ಏನೊಂದೂ ವಾದವಿಲ್ಲದೆ ಸರ್ವ ವಿಧ ಶಂಕಾಗಳೆಲ್ಲಾ ತೊಲಗುವುದು ಹೇಗೆ? ಎಂದರೆ ಅರ್ಥಾಂತರ ನ್ಯಾಸರೂಪ ದೃಷ್ಟಾಂತ ಮೂಲಕ ಸಮರ್ಥನೆಮಾಡಿ ಹೇಳುತ್ತಾರೆ. ದೂರದಲ್ಲಿ ಒಂದು ವಸ್ತುವಿದ್ದರೆ ಅದೇನು ಮೋಟು ಮರವೋ, ಶಿಲೆಯೋ, ಕಂಭವೋ, ಇತ್ಯಾದಿ ಅನೇಕ ಸಂಶಯಗಳು ತಲೆದೋರುವವು. ಅದು **ಪುಂಸ್ತ್ವೇತತ್ಪೋನ ದೃಷ್ಟ್ವೇ** ಮನುಷ್ಯನು ಎಂಬುವದು ಶಿರಸ್ಸು ಪಾಣಿ ಕಾಲುಗಳಿಂದ ಯುಕ್ತವಾಗಿರುವದು ಚನ್ನಾಗಿ ಪ್ರತ್ಯಕ್ಷಕ್ಕೆ ಬಂದ ನಂತರ, **ಸ್ಥಾಣುತಾದಿಃ** ಅದು ಮೋಟು ಮರವೋ ಶಿಲೆಯೋ ಕಂಭವೋ ಇತ್ಯಾದ್ಯನೇಕ ಸಂಶಯಗಳು ಒಂದು ಕ್ಷಣವಾಗಲಿ ಜೀವಿಸಿರಲು ಸಾಧ್ಯವಿಲ್ಲವು. ಹಾಗೆಯೇ ತತ್ವತ್ರಯ ಜ್ಞಾನವೇ ಯಥಾರ್ಥವಾದ ಸಿದ್ಧಾನ್ತವೆಂದು ಚನ್ನಾಗಿ ಅವಗಾಹನೆಗೆ ಬಂದ ನಂತರ ಇತರ ಅಪಸಿದ್ಧಾನ್ತಗಳೇನು ಸರಿಯೇ ಎಂಬ ಸಂಶಯವು ಒಂದು ಕ್ಷಣವಾಗಲಿ ಬದುಕಿರಲು ಸಾಧ್ಯವಿಲ್ಲವೆಂಬ ಭಾವವು. ಈ ವಾಕ್ಯದಲ್ಲಿ ಶ್ಲೇಷಾಲಂಕಾರ ಮೂಲಕ ಪರತತ್ವಯಾವುದೆಂಬುವದನ್ನೂ ಉಪದೇಶಿಸುತ್ತಾರೆ. **ಪುಂಸ್ತ್ವೇತತ್ವೇನ ದೃಷ್ಟ್ವೇಸತಿ** – ಪರಬ್ರಹ್ಮನೆಂದು ಹೇಳಿಸಿಕೊಳ್ಳುವನು ಯಾರೆಂಬ ಸಂದೇಹದಲ್ಲಿ, ಪುರುಷಸೂಕ್ತದ ಜ್ಞಾನದಿಂದ ಅಲ್ಲಿ ಹೇಳಿರುವ ಪರಮಪುರುಷನು **"ತತ್ವಂನಾರಾಯಣಃಪರಃ"** ಎಂದು ಹೇಳಿ, ಆತನೇ **ಪರಮಸ್ವರಾಟ್** – ಎಂದು ಮುಗಿಸಿರುವ ರೀತ್ಯಾ ಶ್ರೀಮನ್ನಾರಾಯಣನೇ ಎಂದು ನಿಷ್ಕರ್ಷಜ್ಞಾನ ಉಂಟಾದನಂತರ, **"ಸ್ಥಾಣೂರುದ್ರಉ**

ಮಾಪತಿಃ" ಎಂಬ ನಿಘಂಟಿನ ಪ್ರಕಾರ **ಸ್ಥಾಣುತಾದಿಃ** ಎಂದರೆ ರುದ್ರನೇ ಪರ ತತ್ವವು, ಚತುರ್ಮುಖನೇ ಪರತತ್ವವು ಎಂಬಿವುಗಳನ್ನುಳ್ಳ ಭಾವವು ಒಂದು ಮುಹೂ ರ್ತವಾಗಲಿ, **ನಖಲುಪ್ರಾಣಿತಾ** ಜೀವಿಸಲಾರದೆಂದು ಉಪದೇಶಿಸುತ್ತಾರೆ. ಹೀಗೆ ಅರ್ಥಭಾವವನ್ನು ತೋರ್ಪಡಿಸುವದರಿಂದ, ಮುಂದಿನ ಅಧಿಕಾರವಾದ ಪರದೇವತಾ ಪಾರಮಾರ್ಥ್ಯಾಧಿಕಾರದಲ್ಲಿ, ಪರದೇವತೆಯು ಶಾಸ್ತ್ರಪ್ರಮಾಣಮೂಲಕ ಶ್ರೀಮನ್ನಾ ರಾಯಣನೇ ವಿನಾ ಬ್ರಹ್ಮರುದ್ರೇಂದ್ರಾದಿಗಳು ಯಾರೂ ಅಲ್ಲವೆಂಬ ಉಪಪಾದ ನೆಯು ನಡೆಯುತ್ತದೆಂಬುವದು ಸೂಚಿಸಲ್ಪಟ್ಟಿತು.

ಇಂತು **ಶ್ರೀಮದ್ರಹಸ್ಯತ್ರಯಸಾರದ** ಐದನೆಯ ತತ್ವತ್ರಯಾಧಿಕಾರಕ್ಕೆ

ತಿರುನಾರಾಯಣಪುರಂ ವಿಜಯರಾಘವಶರ್ಮನ

ಆಚಾರ್ಯ ಹೃದಯಾನ್ವೇಷಣೇ

ಎಂಬ ಕನ್ನಡ ಅರ್ಥತಾತ್ಪರ್ಯಗಳು ಸಮಾಪ್ತವಾದವು.

ಶ್ರೀಮತೇ ಶ್ರೀನಿವಾಸಮಹಾದೇಶಿಕಾಯ ನಮಃ